ಮತ್ತು ಇಂಥ ಕಾನೂನಿನ ವಸ್ತು ವಿಷಯವು ಮುಖ್ಯವಾಗಿ ಭಾರತ ಸಂವಿಧಾನದ ಏಳನೇ ಅನುಸೂಚಿಯ ಪಟ್ಟಿ 2ರ 6ನೇ ನಮೂದಿಗೆ ಸಂಬಂಧಿಸಿರುವುದರಿಂದ ;

ಮತ್ತು ಮೇಲೆ ಹೇಳಲಾದ ವಿಷಯವನ್ನು ಸಂಸತ್ತು, ಕಾನೂನಿನ ಮೂಲಕ ಆಯಾ ರಾಜ್ಯಗಳಲ್ಲಿ ನಿಯಂತ್ರಿಸಬೇಕೆಂಬ ಬಗ್ಗೆ ಗೋವಾ, ಮಹಾರಾಷ್ಟ್ರ ಮತ್ತು ಹಿಮಾಚಲ ಪ್ರದೇಶ ರಾಜ್ಯಗಳ ವಿಧಾನ ಮಂಡಲದ ಎಲ್ಲಾ ಸದನಗಳು ಭಾರತ ಸಂವಿಧಾನದ 252ನೇ ಅನುಚ್ಛೇದದ (1)ನೇ ಖಂಡದಡಿ ಹೊರಡಿಸಿದ ನಿರ್ಣಯಕ್ಕೆ ಅನುಸಾರವಾಗಿ, ಮಾನವ ಅಂಗಗಳ ಬದಲಿ ಜೋಡಣೆ ಅಧಿನಿಯಮ, 1994ನ್ನು (1994ರ ಕೇಂದ್ರ ಅಧಿನಿಯಮ 42) ಸಂಸತ್ತು ಅಧಿನಿಯಮತ ಗೊಳಿಸಿರುವುದರಿಂದ ;ಮತ್ತು ರಾಜ್ಯ ವಿಧಾನ ಮಂಡಲವು, ಮೃತ ವ್ಯಕ್ತಿಯ ಕಣ್ಣುಗಳನ್ನು ತೆಗೆಯುವುದಕ್ಕೆ ಉಪಬಂಧ ಕಲ್ಪಿಸುವ ಕರ್ನಾಟಕ ಅಕ್ಷಿಪಟಲ ಜೋಡಣೆ ಅಧಿನಿಯಮ, 1965ನ್ನು (1965ರ ಕರ್ನಾಟಕ ಅಧಿನಿಯಮ ಸಂಖ್ಯೆ 12 ಮತ್ತು ಚಿಕಿತ್ಸೆಯ ಉದ್ದೇಶಗಳಿಗಾಗಿ ಮೃತ ವ್ಯಕ್ತಿಗಳ ಮೂತ್ರ ಪಿಂಡಗಳನ್ನು ತೆಗೆಯುವುದಕ್ಕೆ ಉಪಬಂಧ ಕಲ್ಪಿಸುವ ಕರ್ನಾಟಕ ಬದಲಿ ಮೂತ್ರಪಿಂಡ ಜೋಡಣೆ ಅಧಿನಿಯಮ, 1986ನ್ನು (1986ರ ಕರ್ನಾಟಕ ಅಧಿನಿಯಮ ಸಂಖ್ಯೆ 45) ಹೊರಡಿಸಿರುವುದರಿಂದ ;

ಮತ್ತು ಮೇಲೆ ಹೇಳಲಾದ ಮಾನವ ಅಂಗಗಳ ಬದಲಿ ಜೋಡಣೆ ಅಧಿನಿಯಮ, 1994ನ್ನು ಕರ್ನಾಟಕ ರಾಜ್ಯದಲ್ಲಿ ಅಳವಡಿಸಿಕೊಳ್ಳುವುದು ಅಪೇಕ್ಷಣೀಯವೆಂದು ವಿಧಾನ ಸಭೆಗೆ ಕಂಡು ಬಂದಿರುವುದರಿಂದ,

ಈಗ ಬಾರತ ಸಂವಿಧಾನದ 252ನೇ ಅನುಚ್ಛೇದದ (1)ನೇ ಖಂಡದಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಈ ಸದನವು ಮಾನವ ಅಂಗಗಳ ಬದಲಿ ಜೋಡಣೆ ಅಧಿನಿಯಮ, 1994ನ್ನು ಕರ್ನಾಟಕ ರಾಜ್ಯದಲ್ಲಿ ಅಳವಡಿಸಬೇಕೆಂದು ನಿರ್ಣಯ ಕೈಗೊಂಡಿದೆ.

ಅಧ್ಯಕ್ಷರು : ಮಾನ್ಯ ನಂಜೇಗೌಡರು ಮತ್ತು ಕೆಲವು ಹಿರಿಯ ಸದಸ್ಯರು ನಿಯಮ 69ರಡಿಯಲ್ಲಿ ಒಂದು ಸೂಚನೆಯನ್ನು ಕೊಟ್ಟಿದ್ದಾರೆ. ತಮ್ಮನ್ನು ಕರೆದು ನಾನು ಆಮೇಲೆ ಚರ್ಚೆ ಮಾಡಿ ಯಾವ ವೇಳೆಯನ್ನು ನಿಗದಿ ಮಾಡಬೇಕೆಂದು ಹೇಳುತ್ತೇನೆ. ಈಗ ಮಾನ್ಯ ನಾಗೇಗೌಡರು ಚರ್ಚೆಯನ್ನು ಮುಂದುವರಿಸುವುದು.

4. ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವ ಮುಂದುವರೆದ ಚರ್ಚೆ

+ ಶ್ರೀ ಕೆ.ಎನ್. ನಾಗೇಗೌಡ (ಕಿರುಗಾವಲು) : ಮಾನ್ಯ ಅಧ್ಯಕ್ಷರೇ, 1995ನೇ ಮಾರ್ಚ್ 20ರಂದು ನಮ್ಮ ಎರಡು ವಿಧಾನ ಮಂಡಲಗಳಲ್ಲೂ ರಾಜ್ಯಪಾಲರು ಮಾಡಿದಂಥ ಭಾಷಣದ ಮೇಲೆ ವಂದನೆಯನ್ನು ಸಲ್ಲಿಸತಕ್ಕಂಥ ಪ್ರಸ್ತಾವನೆಯನ್ನು ಈಗಾಗಲೇ ಮಂಡಿಸಿದ್ದೇವೆ. ಇದನ್ನು ಮಾನ್ಯ ಬಸವಣ್ಣಪ್ಪನವರು ಅನುಮೋದಿಸಿದ್ದಾರೆ. ಚರ್ಚೆಯೂ ಸಹ 3-4 ನಿಮಿಷಗಳ ಕಾಲ ಆಯಿತು. ಅದಾದ ನಂತರ, ನಮ್ಮ ರಾಜ್ಯದ ಬಜೆಟ್ ಮೇಲೆ ಚರ್ಚೆಯಾಗಿ, ಉಭಯ ಸದನಗಳೂ ಸಹ ಒಪ್ಪಿ ಅದು ಅಂಗೀಕಾರವಾಯಿತು. ಆದರೆ, ಇವತ್ತಿನ ದಿವಸ, ರಾಜ್ಯಪಾಲರ ಭಾಷಣಕ್ಕೆ, ಮತ್ತು ರಾಜ್ಯಪಾಲರಿಗೆ, ಕೃತಜ್ಞತೆಯನ್ನು, ವಂದನೆಯನ್ನು ಸಲ್ಲಿಸತಕ್ಕಂಥ ಕೆಲಸ ನಮ್ಮ ವಿಧಾನ ಮಂಡಲದ ಕರ್ತವ್ಯದಲ್ಲಿ ಪ್ರಾಮುಖ್ಯವಾದ ಅಂಶವೆಂದು ನಾನಾದರೂ ಭಾವಿಸಿಕೊಂಡಿದ್ದೇನೆ. ಆ ಅಂಶದ ಪ್ರಕಾರ ಈಗಾಗಲೇ ವಿಚಾರವನ್ನು ಪ್ರಸ್ತಾಪ ಮಾಡಲಾಗಿದೆ. ನಮ್ಮ ರಾಜ್ಯಪಾಲರು 4 ವರ್ಷಗಳಿಂದ ಇಲ್ಲಿ ರಾಜ್ಯಪಾಲರಾಗಿ, ಬಹಳ ಸೌಜನ್ಯಶೀಲರಾಗಿ ಕೆಲಸ ಮಾಡುತ್ತಿದ್ದಾರೆಂದು ಹೇಳುವುದಕ್ಕೆ ನನಗೆ ಹೆಮ್ಮೆಯಾಗುತ್ತದೆ. ರಾಜಕೀಯ

ಅನುಭವಸ್ಥರು, ಆಡಳಿತದ ಅನುಭವಸ್ಥರು, ನಮ್ಮ ರಾಷ್ಟ್ರಪ್ರೇಮಿಗಳೂ ಆಗಿರತಕ್ಕಂಥ ನಮ್ಮ ರಾಜ್ಯಪಾಲರು ನಮ್ಮಂಥ ಪ್ರಗತಿಶೀಲ ರಾಜ್ಯದ ರಾಜ್ಯದ ರಾಜ್ಯಪಾಲರಾಗಿ ಕೆಲಸ ಮಾಡತಕ್ಕ ಕಾಲದಲ್ಲಿ ಅವರಿಗೆ ವಂದನೆಯನ್ನು ಸಲ್ಲಿಸುವುದು ಬಹಳ ಮುಖ್ಯ ಮತ್ತು ಅವರು ಅದಕ್ಕೆ ಅರ್ಹರು ಎನ್ನತಕ್ಕಂತಾದ್ದನ್ನು ಹೇಳುತ್ತೇನೆ. ಅವರ ಅನುಭವಕ್ಕೆ ಹೆಚ್ಚು ಪ್ರಾಮುಖ್ಯ ಇದೆ ಎನ್ನತಕ್ಕಂತಾದ್ದು ಮತ್ತು ಅವರ ಅನುಭವವು ಮಂತ್ರಿಮಂಡಲದ ನಿರ್ಣಯವನ್ನೂ ಒಪ್ಪಿದೆ, ಅದನ್ನು ನಾನು ಇಲ್ಲವೆಂದು ಹೇಳುವುದಿಲ್ಲ.

ಒಬ್ಬ ರಾಷ್ಟ್ರಪ್ರೇಮಿ, ಒಬ್ಬ ಸೌಜನ್ಯಶೀಲ ವ್ಯಕ್ತಿತ್ವವುಳ್ಳವರು ಎಂಬುದನ್ನು ನನ್ನ ಅನುಭವ ಮೇಲೆ ಹೇಳಬಹುದು. ಅಂಥಹವರು ನಮ್ಮ ರಾಜ್ಯಪಾಲರಾಗಿ, ಭಾಷಣ ಮಾಡಿದ್ದಕ್ಕೆ, ವಂದನೆಯನ್ನು ಸಲ್ಲಿಸುವುದಕ್ಕೆ ನನಗೆ ಬಹಳ ಸಂತೋಷವಾಗುತ್ತದೆ ಎಂಬುದನ್ನು ಮಾನ್ಯ ಬಂಗಾರಪ್ಪನವರ ಕಿವಿಗೆ ಹೇಳುತ್ತೇನೆ. ಇದಲ್ಲದೆ ಬೇರೆ ರೀತಿಯಲ್ಲ. ಇದೊಂದು ಸಂಪ್ರದಾಯ. 4 ವರ್ಷಗಳ ಕಾಲ ಕೆಲಸ ಮಾಡಿದವರಿಗೆ ಗೌರವವನ್ನು ಸೂಚಿಸತಕ್ಕ ಕಾಲದಲ್ಲಿ, ಅವರ ವ್ಯಕ್ತಿತ್ವವನ್ನು ಒಳ್ಳೆಯ ಮಾತಿನಲ್ಲಿ ಹೇಳುವಂತಾದ್ದು ಸರಿ ಎಂದು ನಾನಾದರೂ ಅಂದುಕೊಂಡಿದ್ದೇನೆ. ಅದಾದ ನಂತರ, ನಾನು ಹಿಂದೆ ಕಾಂಗ್ರೆಸ್ ಪಕ್ಷವನ್ನು ಬಿಟ್ಟು, ಜನತಾ ದಳವನ್ನು ಸೇರಿ, ಚುನಾವಣೆಯಲ್ಲಿ ನಿಂತಾಗ, 3-4 ವಿಚಾರಗಳನ್ನು ಚುನಾವಣಾ ಕಾಲದಲ್ಲಿ ಪ್ರಧಾನವಾಗಿ ಪ್ರಸ್ತಾಪ ಮಾಡಿದ್ದೆವು. ಅದರಲ್ಲಿಯೂ ಕೂಡ, ಚುನಾವಣೆಯಲ್ಲಿ ಜನರ ಮುಂದೆ 3-4 ವಿಚಾರಗಳನ್ನು ಪ್ರಸ್ತಾಪ ಮಾಡಿದ್ದುದರಲ್ಲಿ, ಬಹಳ ಮಹತ್ತರವಾದ ವಿಚಾರಗಳನ್ನು ನಮ್ಮ ಸರ್ಕಾರ ಸಾಧಿಸಿದೆ ಎಂದು ಹೇಳಿದರೆ, ಇಬ್ಬರು ಮಾಜಿ ಮುಖ್ಯಮಂತ್ರಿಗಳೂ ಒಪ್ಪುತ್ತಾರೆಂದು ಭಾವಿಸುತ್ತೇನೆ.

ಅದರಲ್ಲಿಯೂ ಪ್ರಪ್ರಥಮವಾಗಿ ಹುಬ್ಬಳ್ಳಿಯ ಘಟನೆಯನ್ನು ನಿವಾರಿಸಿದರು. 1992ನೇ ಇಸವಿಯಿಂದ ಹುಬ್ಬಳ್ಳಿಯಲ್ಲಿ ರಾಷ್ಟ್ರಧ್ವಜವನ್ನು ಹಾರಿಸಬೇಕೆಂದು ದೊಡ್ಡದಾದ ಕೋಲಾಹಲ ಏನಿತ್ತೋ ಅದಕ್ಕೇ ಅಂತ್ಯವನ್ನು ಹೇಳಿದಂಥ ಕೀರ್ತಿ ನಮ್ಮ ದೇವೇಗೌಡರ ಸರ್ಕಾರಕ್ಕೆ ಬರುತ್ತದೆಂದು ಹೇಳಿದರೆ ತಪ್ಪಾಗಲಾರದು. ಹಿಂದಿನ ಮುಖ್ಯಮಂತ್ರಿಗಳಾದ ಬಂಗಾರಪ್ಪನವರು ಮತ್ತು ಮೊಯ್ಲಿಯವರೂ ಕೂಡ ಇದಕ್ಕೆ ಪ್ರಯತ್ನ ಮಾಡಿದ್ದರು. ಅವರು ಏನೂ ಪ್ರಯತ್ನ ಮಾಡಲಿಲ್ಲವೆನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಿಲ್ಲ. ಆದರೆ, ಅವರ ಅವಧಿಯಲ್ಲಿ ಸಂದರ್ಭ ಕೂಡಿ ಬರಲಿಲ್ಲ. ಇದಕ್ಕೆ ಪೂರಕವಾಗಿ ಹಿಂದೆ ನಿಂತಿದ್ದ ವ್ಯಕ್ತಿಗಳು ಯಾರಿದ್ದರೋ, ಅವರ ಮನಸ್ಸು ಬದಲಾವಣೆಯಾಗಲಿಲ್ಲ. ಅವತ್ತಿನ ದಿವಸ, ಚುನಾರಣೆ ನಡೆಯತಕ್ಕಂಥ ಕಾಲದಲ್ಲಿ ನಮ್ಮ ಪಕ್ಷದ ಅಧ್ಯಕ್ಷರು, ದೇವೇಗೌಡರ ಜೊತೆಯಲ್ಲಿ ಭಾಷಣ ಮಾಡುವ ಸಂದರ್ಭದಲ್ಲಿ, ಎಲ್ಲಾ ಕಡೆ ಪ್ರಧಾನವಾಗಿ 2-3 ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದರೆ, ಜನತಾ ದಳ ಸರ್ಕಾರ ಅಧಿಕಾರಕ್ಕೆ ಬಂದರೆ, ಪ್ರಾಮುಖ್ಯವಾದ 3-4 ವಿಚಾರ ಕಡೆ, ಅತ್ಯಂತ ಶೀಘ್ರವಾಗಿ ಗಮನ ಹರಿಸುತ್ತದೆ ಎನ್ನುವ ಮಾತನ್ನು ಹೇಳಿದರು. ಹುಬ್ಬಳ್ಳಿಯಲ್ಲಿ ರಾಷ್ಟ್ರಧ್ವಜವನ್ನು ಹಾರಿಸತಕ್ಕ ವಿಚಾರ, ಇಡೀ ರಾಷ್ಟ್ರದ ಗಮನ ಸೆಳೆಯತಕ್ಕ ವಿಚಾರವಾಗಿತ್ತು. ಇಡೀ ರಾಷ್ಟ್ರದ ಗಮನ ಸೆಳೆದು, ಅದರಿಂದ ಹೆಚ್ಚು ಅನಾಹುತವಾಗತಕ್ಕಂತಾದ್ದು ಒಂದೇ ಅಲ್ಲ, ಜನರ ಮೇಲೆ, ಅವರು ಅಲ್ಪಸಂಖ್ಯಾತರು ಇರಬಹುದು, ಬಹು ಸಂಖ್ಯಾತರು ಇರಬಹುದು ಅಥವಾ ಯಾವ ವರ್ಗಕ್ಕೇ ಸೇರಿದವರಿರಬಹುದು.

ಆ ವರ್ಗದ ಜನರ ಮೇಲೆ ಅತ್ಯಂತ ಕೆಟ್ಟದಾದ ಪ್ರಭಾವ ಬೀರುತ್ತಿದ್ದರು. ಇದನ್ನು ಹಿಂದಿನ ಸರ್ಕಾರ ಎಷ್ಟೇ ಪ್ರಯತ್ನ ಮಾಡಿದರೂ ಸಹ, ಅವರ ಪ್ರಯತ್ನ ಸಫಲವಾಗಲಿಲ್ಲ. ಆ ಸರ್ಕಾರದಲ್ಲಿಯೂ ಇದರ ಬಗ್ಗೆ ಪ್ರಾಮಾಣಿಕ ಪ್ರಯತ್ನ ನಡೆದಿದೆ, ನಡೆದಿಲ್ಲ ಎಂದು ಹೇಳುವುದಕ್ಕೆ ಹೋಗುವುದಿಲ್ಲ. ಆದರೆ, ಅದು ಅವರಿಂದ

ಸಾಧ್ಯವಾಗಲಿಲ್ಲ. ಜನವರಿ 26ನೇ ತಾರೀಖಿನ ದಿವಸ ಧ್ವಜವನ್ನು ಅಲ್ಲಿ ಹಾರಿಸಿದಾಗ, ನನಗೆ ಬಹಳ ಹೆಮ್ಮೆಯಾಯಿತು. ಜೊತೆಗೆ ನೆಮ್ಮದಿ ಬಂತು. ಸರ್ಕಾರ, ಜನರ ಮುಂದೆ ಏನು ಮಾತು ಹೇಳಿದ್ದರೋ, ಜನರ ಹತ್ತಿರ ಮತ ಕೇಳತಕ್ಕ ಕಾಲದಲ್ಲಿ ಏನು ಹೇಳಿದ್ದರೋ ಅದು ನಡೆಯಿತು. ಈ ದೇಶದಲ್ಲಿ ಎಲ್ಲಾ ಧರ್ಮಗಳೂ, ಎಲ್ಲಾ ಭಾಷೆಯ ಜನರು, ಎಲ್ಲಾ ಜಾತಿಯ ಜನರೂ ಇದ್ದಾರೆ. ಎಲ್ಲರೂ ಸಹ, ರಾಷ್ಟ್ರಪ್ರೇಮದ ಕಡೆ, ಅಥವಾ ರಾಷ್ಟ್ರಧ್ವಜದ ಕೆಳಗಡೆ ಜೀವನ ಮಾಡುವುದಕ್ಕೆ ಹುಬ್ಬಳ್ಳಿಯಲ್ಲಿ ಶಾಂತಿಯನ್ನು ಉಂಟು ಮಾಡಿ, ಜನರು ಒಪ್ಪುವಂತೆ ಮಾಡಿದ್ದು, ಸರ್ಕಾರದ ಮೊಟ್ಟಮೊದಲನೆಯದಾಗಿ ಮಾಡಿದ ಕೆಲಸ. ಈ ವಿಷಯವಾಗಿ ಇಡೀ ಕರ್ನಾಟಕ ಜನರು ಮೆಚ್ಚಿದರು ಎಂದು ಹೇಳಿದರೆ ತಪ್ಪಾಗಲಾರದು. ಬಹುಶಃ ಈ ಒಂದು ಕೆಲಸಕ್ಕೆ ಎಲ್ಲರೂ, ಎಲ್ಲಾ ಪಕ್ಷದವರೂ ಸೇರಿದ್ದಾರೆ. ಇಂತಹ ಒಂದು ಸೂಕ್ಷ್ಮವಾದ ವಿಚಾರವನ್ನು ಸರ್ಕಾರ ಒಂದೇ ಸಾಧನೆ ಮಾಡುವುದಕ್ಕಾಗುವುದಿಲ್ಲ. ಒಬ್ಬ ವ್ಯಕ್ತಿ ಸಾಧನೆ ಮಾಡುವುದ್ಯಕಾಗುವುದಿಲ್ಲ.

ಒಂದು ರಾಜಕೀಯ ಪಕ್ಷ ಬಗೆಹರಿಸುವುದಕ್ಕೆ ಸಾಧ್ಯವಾಗುವುದಿಲ್ಲ. 10 ಕೈಗಳು ಸೇರಿದಾಗ ಮಾತ್ರ ಇಂತಹ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಸಾಧ್ಯ, ಅದು ಸಾಧ್ಯವಾಯಿತು. ಈ ದೃಷ್ಟಿಯಿಂದ ಹುಬ್ಬಳ್ಳಿಯಲ್ಲಿ ರಾಷ್ಟ್ರಧ್ವಜವನ್ನು ಹಾರಿಸತಕ್ಕ ಕೆಲಸ ಏನು ನಡೆಯಿತು, ಅದು ಕರ್ನಾಟಕ ರಾಜ್ಯದ ಸಂಸ್ಕೃತಿಯನ್ನು, ಕರ್ನಾಟಕ ರಾಜ್ಯದ ಪರಂಪರೆಯನ್ನು, ಕರ್ನಾಟಕ ರಾಜ್ಯ ಒಂದು ಸೌಜನ್ಯಶೀಲ ರಾಜ್ಯ ಎಂದು ಭಾರತ ದೇಶದ ಭೂಪಟದಲ್ಲಿ ನೋಡಬಹುದಾಗಿದೆ. ಕರ್ನಾಟಕ ರಾಜ್ಯ ಅತ್ಯಂತ ಶಾಂತಿಯಾದ ರಾಜ್ಯ, ಎಲ್ಲಾ ವರ್ಗದ ಜನರೂ ನೆಮ್ಮದಿಯಿಂದ ಇರುವಂಥ ರಾಜ್ಯ ಮತ್ತು ಎಲ್ಲರೂ ಬದುಕುವಂಥ ರಾಜ್ಯ. ಇಡೀ ಭಾರತ ದೇಶದಲ್ಲಿ ಒಂದು ಸಂಸ್ಕೃತಿಯ ಮೊದಲ ಕಲ್ಪನೆಯ ರಾಜ್ಯ ಕರ್ನಾಟಕ ಎಂದು ಹೆಸರು ಗಳಿಸಿಕೊಂಡಿದೆ. ಆ ಹೆಸರಿಗೆ ಮತ್ತಷ್ಟು ಕಳೆಯನ್ನು ಸೇರಿಸತಕ್ಕ ವಿಚಾರ ಇದು ಎಂದು ಹೇಳಿದರೆ ತಪ್ಪಾಗಲಾರದು. ಈದ್ಗಾ ಮೈದೀನದಲ್ಲಿ ರಾಷ್ಟ್ರಧ್ವಜವನ್ನು ಹಾರಿಸಿದಾಗ, ಕರ್ನಾಟಕದ ಕೀರ್ತಿ, ಭಾರತದ ಭೂಪಟದಲ್ಲಿ ಮೇಲೆ ಏರಿತು. ಇದು ಒಂದು ಸರ್ಕಾರ ಎಂದು ಹೇಳುವುದಕ್ಕಿಂತ, ರಾಜ್ಯದ ಜನರಿಗೆ ಸೇರಿದ ಗೌರವ, ಈ ರಾಜ್ಯದ ಜನರು ನಡೆದುಕೊಂಡ ರೀತಿ, ಇಡೀ ರಾಷ್ಟ್ರದ ಜನರು ಮೆಚ್ಚುವಂತಾದ್ದು ಎಂದು ಹೇಳಿದರೆ ತಪ್ಪಾಗಲಾರದು. ಇದು ಒಂದು ಸರ್ಕಾರಕ್ಕೆ ಸೇರಿದಂಥ ಗೌರವ ಎಂದು ಹೇಳುವುದಕ್ಕಿಂತ, ಕರ್ನಾಟಕದ 5 ಕೋಟಿ ಜನರಿಗೆ ಸೇರಿದಂಥ ವಿಚಾರ. 5 ಕೋ ಜನರಿಗೆ ಸೇರಿದಂಥ ಗೌರವ ಎಂದು ಹೇಳಿ, ನಾನಾದರೂ ಭಾವಿಸಿಕೊಂಡಿದ್ದೇನೆ.

ಈ ಸಾದನೆ ಮಾಡಿದ್ದನ್ನು, ಎಲ್ಲಾ ರಾಜಕೀಯ ಪಕ್ಷಗಳು, ಬೇರೆ ಬೇರೆ ಸಂಘಸಂಸ್ಥೆಗಳು, ರಾಷ್ಟ್ರ ಪ್ರೇಮಿಗಳು ಮತ್ತು ಬೇರೆ ಬೇರೆ ಜನರೂ ಯಾರಿದ್ದಾರೆ, ಅವರೆಲ್ಲರೂ ಮೆಚ್ಚಿದ್ದಾರೆ. ಇದೊಂದು ದೊಡ್ಡ ಸಾಧನೆ, ಮಾನ್ಯ ದೇವೇಗೌಡರ ನಾಯಕತ್ವದಲ್ಲಿ ನಡೆಯಿತು ಎಂದು ಅಂದುಕೊಂಡಿದ್ದೇನೆ. ಇದಕ್ಕೆ ಅನೇಕ ಸ್ನೇಹಿತರು ಸಹಾಯ ಮಾಡಿ ರಾಜ್ಯದ ಗೌರವವನ್ನು ಕಾಪಾಡಿದ್ದಾರೆ. ಅವರಿಗೂ ಕೂಡ ವಂದನೆಯನ್ನು ಸಲ್ಲಿಸಬೇಕೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳಿದರೆ ತಪ್ಪಾಗಲಾರದು. ಅದೇ ರೀತಿ ಕಾನೂನು ವ್ಯವಸ್ಥೆಯೊಳಗೆ, ಕ್ರಮ ಕೈಗೊಳ್ಳಬೇಕು. ಈ ಕಾರ್ಯವನ್ನು ಮಾಡಿ, ಅಷ್ಟಕ್ಕೇ ಬಿಟ್ಟರೆ ಸಂತೋಷಪಡುವುದಿಲ್ಲ. ಕಾನೂನು ವ್ಯವಸ್ಥೆಯಲ್ಲಿ ಹೊಸ ಸರ್ಕಾರ ಬಂದಾಗ, ಅಲ್ಲಿ, ಇಲ್ಲಿ ದರೋಡೆಗಳು ನಡೆದು, ಅಲ್ಲಿ ಇಲ್ಲಿ ನಮ್ಮ ವ್ಯವಸ್ಥೆಯನ್ನು ಕಡದಿರುವುದನ್ನು ನಾವು ಪೇಪರಿನಲ್ಲಿ ಓದಿದ್ದೇವೆ. ಇದಕ್ಕೆ ಅವಕಾಶ ಕೊಡಬಾರದು. ನಾನು ಈಗಾಗಲೇ ಮಾನ್ಯ ಗೃಹಮಂತ್ರಿಗಳಾದ ಸಿಂಧ್ಯರವರ ಹತ್ತಿರ ಹೋದ ತಿಂಗಳು ಮಾತನಾಡಿದ್ದೇನೆ. ಪತ್ರಿಕೆಗಳಲ್ಲಿ ಬಂದಾಗ, ಬೆಂಗಳೂರಿನಲ್ಲಿ ನಡೆದಂಥ

ದರೋಡೆಗಳು, ಅಲ್ಲಿ ಇಲ್ಲಿ ಕ್ರಿಮಿನಲ್ಸ್ ಸಮಾಜಘಾತುಕ ಶಕ್ತಿಗಳು, ಸಮಾಜವನ್ನು ಕೆದಕುವ ರೀತಿ ಬಂದಾಗ, ನಾನು ಅವರಿಗೆ ಫೋನ್ ಮಾಡಿ ಹೇಳಿದೆ. ನಾನು ಕಾಂಗ್ರೆಸ್ ಪಕ್ಷದಲ್ಲಿ ಮಂತ್ರಿಯಾಗಿದ್ದಾಗ ನೀವು ಮೆಚ್ಚಿದ್ದೀರಿ, ನೀವೂ ಕೂಡ ದಕ್ಷತೆಯಿಂದ ಕೆಲಸ ಮಾಡುವವರು, ಜನ ಶಾಂತಿಯಿಂದ ಕೆಲಸ ಮಾಡಬೇಕು. ಸರ್ಕಾರ ಬಂದು ಎರಡು ತಿಂಗಳಾಗಿದೆ. ಈ ಕ್ರಿಮಿನಲ್ಸ್‌ಗಳು ಕೆಲಸ ಮಾಡುವ ಬಗ್ಗೆ ತಾವು ಹೆಚ್ಚು ಗಮನಹರಿಸಬೇಕು.

ಒಂದು ಸರ್ಕಾರದಿಂದ ಮತ್ತೊಂದು ಸರ್ಕಾರ ಬಂದಾಗ, ಒಂದು ರಾಜಕೀಯ ಪಕ್ಷದಿಂದ ಮತ್ತೊಂದು ರಾಜಕೀಯ ಪಕ್ಷಕ್ಕೆ, ಅಧಿಕಾರ ಹಸ್ತಾಂತರವಾದಾಗ, ನಡೆಯುವ ಇಂತಹ ದುರ್ಘಟನೆಯನ್ನು ತಪ್ಪಿಸಬೇಕೆಂಬ ಮಾತನ್ನು ನಾನು ಅವರಿಗೆ ಹೇಳಿದೆ. ಅದಕ್ಕೆ, ಅವರು ಒಂದು ಮಾತು ಹೇಳಿದರು. ಇನ್ನು ಮೂರು ತಿಂಗಳೊಳಗೆ ಇದನ್ನು ಹದ್ದುಬಸ್ತಿನಲ್ಲಿಡಲು ನನಗೆ ಕಾಲ ಬೇಕಾಗಿದೆ. ಇನ್ನು 3-4 ತಿಂಗಳಲ್ಲಿ ನಿರ್ದಾಕ್ಷಿಣ್ಯವಾಗಿ, ಕ್ರಿಮಿನಲ್ಸ್ ಅಥವಾ ಸಮಾಜಘಾತುಕಶಕ್ತಿಗಳು ಯಾರಿದ್ದಾರೆ, ಸಮಾಜದ ಶಾಂತಿಯನ್ನು ಕಲಕುವಂಥ ಹಾಗೂ ಈ ಸಮಾಜದ ಆಸ್ತಿಪಾಸ್ತಿಗಳಿಗೆ ಯಾರು ನಷ್ಟ ಮಾಡುತ್ತಾರೆ, ಸಾರ್ವಜನಿಕರಿಗೆ ನಷ್ಟ ಮಾಡುತ್ತಾರೆ, ಅಂತಹವರನ್ನು ನಿರ್ದಾಕ್ಷಿಣ್ಯವಾಗಿ ಒಳಗಡೆ ಹಾಕುವುದಕ್ಕೆ ಪ್ರಯತ್ನ ಮಾಡುತ್ತೇನೆಂದು ಹೇಳಿದರು. ಆಗ,ನಾನು ಅವರಿಗೆ ಒಂದು ಮಾತು ಹೇಳಿದೆ. ಇದರಲ್ಲಿ, ಅಧಿಕಾರಿಗಳ ಕೈವಾಡ ಬಹಳ ಹೆಚ್ಚಿದೆ ಎನ್ನತಕ್ಕಂಥ ಮಾತನ್ನು ನೇರವಾಗಿ ಹೇಳಿದೆ. ಏತಕ್ಕೆ ಹೇಳಿದೆ ಎಂದರೆ, ನಮ್ಮ ರಾಜಕೀಯ ವ್ಯವಸ್ಥೆಯೊಳಗಡೆ, ಆಡಳಿತ ವ್ಯವಸ್ಥೆಯೊಳಗಡೆ, ಒಬ್ಬ ವ್ಯಕ್ತಿ ಅಥವಾ ಒಬ್ಬ ಅಧಿಕಾರಿ ಆ ಒಂದು ಸರ್ಕಾರಕ್ಕೆ ಹೆಚ್ಚು ಅಟ್ಯಾಚ್‌ಮೆಂಟ್ ಇರುತ್ತಾರೆ. ಯಾವುದೇ ವ್ಯಕ್ತಿ ಸರ್ಕಾರಕ್ಕೆ ಅಟ್ಯಾಚ್‌ಮೆಂಟ್ ಇದ್ದಾಗ, ಅವನಿಗೆ ಒಂದು ರೀತಿಯ ಫ್ರೀಡಮ್ ಸಿಕ್ಕುವುದಿಲ್ಲ. ಈ ಮಾತನ್ನು ಮಾನ್ಯ ಗೃಹಮಂತ್ರಿಗಳಿಗೆ ನೇರವಾಗಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಗೃಹ ಇಲಾಖೆಯಲ್ಲಿ ಯಾವುದೇ ಮುಲಾಜು ಇಲ್ಲದೆ, ಯಾರ ದಾಕ್ಷಿಣ್ಯಕ್ಕೂ ಒಳಗಾಗದೇ ಕಾರ್ಯವನ್ನು ಮಾಡಬೇಕು. ಗೃಹ ಇಲಾಖೆ ಅತ್ಯಂತ ಪ್ರಾಮುಖ್ಯವಾದ ಇಲಾಖೆ. ಇದರಲ್ಲಿ ರಾಜಕೀಯ ಹಸ್ತಕ್ಷೇಪ ಸಂಪೂರ್ಣವಾಗಿ ನಿಲ್ಲಬೇಕು. ಇದು ಒಂದು ಕಾಲದಿಂದ ಬಂದುದಲ್ಲ. ಹತ್ತಾರು ವರ್ಷಗಳಿಂದ, ನಮ್ಮ ಪ್ರಜಾಪ್ರಭುತ್ವದಲ್ಲಿ ನಡೆದು ಬಂದುದನ್ನು ನೋಡಿದ್ದೇವೆ. ಈ ರಾಜಕೀಯ ಹಸ್ತಕ್ಷೇಪ, ಈ ಅಧಿಕಾರಿಗಳ ಹಸ್ತಕ್ಷೇಪ ಇವು ಗೃಹ ಇಲಾಖೆಯಲ್ಲಿರುವುದರಿಂದ, ಯಾರು ಅಪರಾಧ ಮಾಡುತ್ತಾರೆ, ಆ ಅಪರಾಧಿಗಳನ್ನು ಕಂಡುಹಿಡಿಯುವುದಕ್ಕೆ ಬಹಳ ಕಷ್ಟವಾಗಿದೆ.

1.30 ಪಿ.ಎಂ.

ಆ ಒಂದು ಹಿನ್ನೆಲೆಯಲ್ಲಿ ನೀವು ಯಾವುದೇ ವರ್ಗಾವಣೆ ಇರಲಿ ಮತ್ತೊಂದು ಇರಲಿ ಮಗದೊಂದು ಇರಲಿ ನೀವು ನಿರ್ದಾಕ್ಷಿಣ್ಯವಾಗಿ ಕೆಲಸ ಮಾಡಬೇಕು. ಪೊಲೀಸಿನವರಿಗೆ ಸೌಜನ್ಯವಿರಬೇಕೇ ವಿನಹ ಕಳ್ಳರ ಜೊತೆಯಲ್ಲಿ ಸಹಕಾರ ಇರಬಾರದು. ಸಮಾಜಘಾತಕ ಶಕ್ತಿಗಳ ಜೊತೆಯಲ್ಲಿ ಸಹಕಾರ ಇರಬಾರದು. ಇದು ಇವತ್ತು ನಮ್ಮ ರಾಜ್ಯದಲ್ಲಿ ಅಲ್ಲ ಇದನ್ನು ನಾವು ಬೇರೆ ರಾಜ್ಯಗಳಿಗೆ ಹೋಲಿಸಿಕೊಂಡರೆ ಅದು ಬೇರೆ ತರಹ ಆಗುತ್ತದೆ. ಬೇರೆ ರಾಜ್ಯಕ್ಕೆ ನಾವು ಹೋಲಿಸಿಕೊಳ್ಳುವುದಕ್ಕೆ ಆಗುವುದಿಲ್ಲ. ನಮ್ಮದು ಬಿಹಾರ್ ಅಲ್ಲ. ಇದು ಕರ್ನಾಟಕ ರಾಜ್ಯದ ಆಡಳಿತ ಬೇರೆ ಕರ್ನಾಟಕ ರಾಜ್ಯದ ಪರಂಪರೆ ಬೇರೆ ಇದೆ. ಕರ್ನಾಟಕ ರಾಜ್ಯದ ಪೊಲೀಸಿನವರು ಬೇರೆ ಕರ್ನಾಟಕ ರಾಜ್ಯದ ಸರ್ಕಾರ ಬೇರೆ. ಯಾವುದೇ ಪಕ್ಷದ ಸರ್ಕಾರಗಳು ಬಂದು ಹೋಗಿರಲಿ. ಅದು ಕಾಂಗ್ರೆಸ್ ಸರ್ಕಾರವೇ ಇರಲಿ ಅದು ಜನತಾ ಸರ್ಕಾರ ಇರಲಿ ಅಥವಾ ಮತ್ತೊಂದು ಸರ್ಕಾರ ಇರಲಿ ಕರ್ನಾಟಕ ರಾಜ್ಯದ ಆಡಳಿತವನ್ನು

ಕೆಡಿಸುವುದಕ್ಕೆ ಯಾರೂ ಪ್ರಯತ್ನ ಮಾಡಿಲ್ಲ. ಹೆಚ್ಚು ಸೇವೆ ಮಾಡಿದವರು ಒಬ್ಬರು ಇರಬಹುದು ಕಡಿಮೆ ಸೇವೆ ಮಾಡಿದವರು ಮತ್ತೊಬ್ಬರು ಇರಬಹುದು. ಹೆಚ್ಚು ಓಟು ತೆಗೆದುಕೊಂಡವರು ಒಬ್ಬರು ಇರಬಹುದು. ಕಡಿಮೆ ಓಟು ತೆಗೆದುಕೊಂಡವರು ಮತ್ತೊಬ್ಬರು ಇರಬಹುದು, ಆದರೆ ಆಡಳಿತ ವ್ಯವಸ್ಥೆಯನ್ನು ಕೆಡಿಸುವುದಕ್ಕೆ 45-48 ವರ್ಷಗಳಿಂದ ಎಂದೂ ಸಹ ಯಾವುದೇ ಪಕ್ಷದ ಮುಖ್ಯಮಂತ್ರಿಗಳು ಇರಲಿ ಯಾವುದೇ ರಾಜಕೀಯ ಪಕ್ಷಗಳು ಇರಲಿ ವ್ಯವಸ್ಥೆಯನ್ನು ಬದಲಾಯಿಸಿ ಸಮಾಜಘಾತಕ ಶಕ್ತಿಗಳ ಜೊತೆಯಲ್ಲಿ ಸೇರಿಕೊಳ್ಳುವುದಕ್ಕೆ ಪ್ರಯತ್ನ ಮಾಡಿಲ್ಲ.

ಇಂತಹ ಒಂದು ಪರಂಪರೆ ಇರತಕ್ಕಂಥ ಈ ರಾಜ್ಯಕ್ಕೆ ಅದರಲ್ಲೂ ಸಹ ತಾವು ಯೋಗ್ಯರಾಗಿ, ಯುವಕರಾಗಿ ಬಹಳ ಹೆಚ್ಚು ತಿಳುವಳಿಕೆಯುಳ್ಳವರಾಗಿ ಮಂತ್ರಿಗಳಾಗಿ ಕೆಲಸ ಮಾಡತಕ್ಕಂಥ ನೀವು ನಿರ್ದಾಕ್ಷಿಣ್ಯವಾಗಿ ಗೃಹ ಇಲಾಖೆಯಲ್ಲಿ ಕೆಲಸ ಮಾಡಬೇಕು. ತಾವು ಯಾವುದೇ ಅಧಿಕಾರಿಗಳಾಗಲಿ ರಾಜಕಾರಣಿಗಳು ಆಗಲಿ ನಿಮ್ಮ ಇಲಾಖೆಯಲ್ಲಿ ಹಸ್ತಕ್ಷೇಪ ಮಾಡುವುದಕ್ಕಾಗಲಿ ಯಾರಾದರೂ ಸಪೋರ್ಟ್ ಮಾಡುವುದಕ್ಕೆ ಬಂದಂತಹ ಕಾಲದಲ್ಲಿ ತಾವು ಕಟ್ಟುನಿಟ್ಟಾಗಿ ಕೆಲಸ ಮಾಡಬೇಕು. ತಮ್ಮ ಮನಸ್ಸು ಕಲ್ಲಾಗಬೇಕು. ತಾವು ಕಳ್ಳರ ಪರವಾಗಿ ಎಂದೂ ಇರಬಾರದು. ತಮ್ಮ ಮನಸ್ಸು ಕಲ್ಲಾಗಿ ನಿಂತು ಯಾರು ಅಪರಾಧಿಗಳು ಇದ್ದಾರೆ ಅವರಿಗೆ ಶಿಕ್ಷೆಯನ್ನು ಕೊಟ್ಟು ನಿರ್ದಾಕ್ಷಿಣ್ಯವಾದ ಆಡಳಿತವನ್ನು ಕೊಡುವುದಕ್ಕೆ ನಮ್ಮ ಗೃಹ ಮಂತ್ರಿಗಳು ನಿಲ್ಲಬೇಕು. ಇವು ಬಹಳ ಪ್ರಾಮುಖ್ಯವಾದ ದಿನಗಳು. ನಾವು ಪ್ರಾರಂಭದಲ್ಲಿ ಏನು ಮಾಡುತ್ತೇವೆ ಒಂದು ವರ್ಷ ಈ ಒಂದು ವರ್ಷ 1995-96ರಲ್ಲಿ ಯಾವ ರೀತಿಯಲ್ಲಿ ನಾವು ಆಡಳಿತವನ್ನು ನಡೆಸುತ್ತೇವೆ ಅದರ ಮೇಲೆ ಉಳಿದ ನಾಲ್ಕು ವರ್ಷಗಳು ನಾವು ನಿಂತಿರುತ್ತೇವೆ. ಆದ್ದರಿಂದ ಆಡಳಿತದಲ್ಲಿ ಬಿಗಿ ಕ್ರಮ ನಿಮ್ಮ ಕೈಗೆ ಸಿಗಬೇಕು. ಪ್ರಾರಂಭದಲ್ಲಿ ಹೆಚ್ಚು ಕಡಿಮೆ ಆಗುತ್ತದೆ. ಆದರೆ ಅದನ್ನು ಲೆಕ್ಕಿಸದೇ ನೀವು ಮಾತ್ರ ಬಿಡಿ ಕ್ರಮ ತೆಗೆದುಕೊಳ್ಳಬೇಕು. ಆ ಒಂದು ಕೆಲಸ ಮಾಡುತ್ತೀರಿ ಎಂಬ ನಂಬಿಕೆ ನನಗೆ ಇದೆ. ಆ ಒಂದು ಮನಸ್ಸು ಇದೆ ನಿಮ್ಮಲ್ಲಿ. ಯಾವುದೇ ವರ್ಗಾವಣೆಗೆ ಆಗಲಿ ಮತ್ತೊಂದಕ್ಕೆ ಆಗಲಿ ಸಣ್ಣ ಪುಟ್ಟ ವಿಚಾರಗಳು ಶಾಸಕರು ತಂದಾಗ ಮಾಡಬಾರದು ಎನ್ನತಕ್ಕಂಥಾದ್ದು ಅಲ್ಲ ಶಾಸಕರು ಹೇಳಿದಂತಹ ಕಾಲದಲ್ಲಿ ಮಾಡಬೇಕಾಗುತ್ತದೆ. ಆದರೆ ಅದಕ್ಕೂ ಒಂದು ಪ್ರೈಯಾರಿಟಿ ಇದೆ. ಯಾವುದಕ್ಕೆ ಮಾಡಬೇಕು ಯಾವುದಕ್ಕೆ ಮಾಡಬಾರದು ಯಾವುದನ್ನು ಚ್ಯೂಸ್ ಮಾಡಬೇಕು ಯಾವುದಕ್ಕೆ ಚ್ಯೂಸ್ ಮಾಡಬಾರದು ಯಾವ ಎರಿಯಾಗೆ ಯಾವ ಶಾಸಕರು ಕೈ ಹಾಕಿದ್ದಾರೆ ಯಾವ ಜುರಿಸ್‌ಡಿಕ್ಷನ್ ಕೆಳಗೆ ಅವರು ಕೆಲಸ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ ಯಾರ ಪರವಾಗಿ ಅವರು ರೆಕಮೆಂಡ್ ಮಾಡುತ್ತಿದ್ದಾರೆ ಎನ್ನತಕ್ಕಂಥಾದ್ದನ್ನು ತಾವು ಅರ್ಥ ಮಾಡಿಕೊಂಡು ತಾವು ತೀರ್ಮಾನ ಮಾಡಬೇಕು. ಈ ಮಾರ್ಚಿ ತಿಂಗಳಲ್ಲಿ ಬರತಕ್ಕಂಥ ಜನರಲ್ ವರ್ಗಾವಣೆಯಲ್ಲಿ ನಾವು ಸರಿಯಾದ ಕ್ರಮವನ್ನು ತೆಗೆದುಕೊಳ್ಳದೇ ಹೋದರೆ ನಮ್ಮ ಸರ್ಕಾರಕ್ಕೆ ಕೆಟ್ಟ ಹೆಸರು ಬರುತ್ತದೆಂದು ನಾನು ಕಿವಿ ಮಾತನ್ನು ಹೇಳಬೇಕಾಗುತ್ತದೆ. ವರ್ಗಾವಣೆಯಲ್ಲಿಯೇ ನಾವು ಎಡುವುತ್ತಾ ಇರತಕ್ಕಂಥಾದ್ದು ಬಹಳ ದಿವಸಗಳಿಂದ. ವೀರೇಂದ್ರ ಪಾಟೀಲರಂತಹ ಅತ್ಯಂತ ಹಿರಿಯ ರಾಜಕಾರಣಿ, ಮತ್ತಡಿ ಬಹಿರಂಗವಾಗಿ ಜನರ ಕ್ಷಮಾಪಣೆ ಕೇಳಿಕೊಳ್ಳಬೇಕಾದಂತಹ ಪರಿಸ್ಥಿತಿ ಒದಗಿ ಬಂತು. ವಿಧಾನ ಸೌಧದಲ್ಲಿ ವರ್ಗಾವಣೆಗೆ ಸಹಸ್ರಾರು ಜನ ಮಂತ್ರಿಗಳ ಕೊಠಡಿಗಳ ಹತ್ತಿರ ಬಂದು ನಿಂತುಕೊಳ್ಳುವಂತಹ ಪರಿಸ್ಥಿತಿ ಬಂದು ಹೋಯಿತು. ಶ್ರೀಮಾನ್ ರಂಗನಾಥ್ ಎನ್ನುವಂತಹ ಒಬ್ಬ ಪ್ರಾಮಾಣಿಕ ಮನುಷ್ಯ ಪ್ರಾಮಾಣಿಕ ರಾಜಕೀಯ ವ್ಯಕ್ತಿ ಪೊಲೀಸಿನವರನ್ನು ಕರೆಯಿಸಿ ಜನರನ್ನು ಹೊರಗಡೆ ಕಳುಹಿಸುವಂತಹ ಒಂದು ವಾತಾವರಣ ಬಂದು ಹೋಯಿತು.

ಈ ಎಲ್ಲಾ ಅನುಭವ ನಮಗೆ ಇರುವುದರಿಂದ ಅನುಭವಗಳನ್ನೆಲ್ಲಾ ತಮ್ಮ ಗಮನಕ್ಕೆ ತೆಗೆದುಕೊಂಡು ಈ ಅನುಭವಗಳನ್ನೆಲ್ಲಾ ತಮ್ಮ ಮನಸ್ಸಿಗೆ ತೆಗೆದುಕೊಂಡು ಒಂದು ಹೊಸ ವರ್ಗಾವಣೆ ನೀತಿಯನ್ನು ನಮ್ಮ ಮುಖ್ಯಮಂತ್ರಿಗಳು ನಿರೂಪಣೆ ಮಾಡಬೇಕು. ಈ ವರ್ಗಾವಣೆ ನೀತಿ ಏನು ಇದೆ. ಅದರ ಮೇಲೆ ನಮ್ಮ ಮುಂದಿನ ಆಡಳಿತ ನಿಂತಿದೆ. ನಾವು ವರ್ಗಾವಣೆಯಲ್ಲಿ ಎಡವಿದರೆ ಇಡೀ ನಮ್ಮ ಒಂದು ವರ್ಷದ ಆಡಳಿತ ನೀತಿ ಹೋಗುತ್ತದೆ. ಆದ್ದರಿಂದ ನಾವು ಸಹ ನಮ್ಮ ನಮ್ಮ ಜವಾಬ್ದಾರಿಯನ್ನು ಅರ್ಥ ಮಾಡಿಕೊಂಡಿದ್ದೇವೆ. ಶಾಸಕರಾಗಿ ನಮ್ಮ ಜವಾಬ್ದಾರಿಯನ್ನು ನಾವು ಅರ್ಥಮಾಡಿಕೊಂಡು ಎಲ್ಲಿ ವರ್ಗಾವಣೆಗೆ ಕೈ ಹಾಕಬೇಕು ಎಲ್ಲಿ ವರ್ಗಾವಣೆಗೆ ಕೈ ಹಾಕಬಾರದು ಯಾವ ಕೆಲಸವನ್ನು ನಾವು ಮಾಡಬೇಕು ಎನ್ನತಕ್ಕಂಥಾದ್ದನ್ನು ಅರ್ಥ ಮಾಡಿಕೊಂಡರೆ ಬಹಳ ಒಳ್ಳೆಯದು. ನಮ್ಮ ಸಂಪೂರ್ಣವಾದ ಸಹಕಾರ ನಿಮ್ಮ ಕಡೆಗೆ ಇರುತ್ತದೆ. ವಿಶೇಷವಾಗಿ ಯಾರು ಆಡಳಿತದಲ್ಲಿ ಭ್ರಷ್ಟಾಚಾರವನ್ನು ಮಾಡುತ್ತಾರೆ ಯಾರು ಅಧ್ಯಕ್ಷರಾಗಿರುತ್ತಾರೆ ಯಾರು ಅಪ್ರಾಮಾಣಿಕರಾಗಿರುತ್ತಾರೆ ಯಾರು ಜನರಿಗೆ ಸ್ಪಂದಿಸುವುದಿಲ್ಲ ಯಾರು ಜನರ ಕೆಲಸವನ್ನು ಮಾಡುವುದಿಲ್ಲ ಯಾರು ಸರ್ಕಾರದ ನೀತಿಗಳನ್ನು ಜಾರಿಗೆ ತರುವುದಿಲ್ಲ ಅಂತಹ ಅಧಿಕಾರಿಗಳಿಗೆ ಬೆಂಬಲ ಕೊಡಬೇಕಾದ ಅವಶ್ಯಕತೆ ಇರುವುದಿಲ್ಲ.

ಅಂತಹ ಅಧಿಕಾರಿಗಳ ಬಗ್ಗೆ ನಿರ್ಧಾಕ್ಷಿಣ್ಯವಾಗಿ ಅವರ ರಹಸ್ಯ ವರದಿಗಳ ಮೇಲೆ ತಾವು ಕೆಲಸ ಮಾಡಬೇಕಾಗುತ್ತದೆ. ಆ ಒಂದು ಆಧಾರ ಇಟ್ಟುಕೊಂಡು ಒಂದು ಸಾರಿ ವರ್ಗಾವಣೆ ಮಾಡಿದರೆ ಮತ್ತೊಂದು ಸಾರಿ ಕ್ಯಾನ್ಸಲ್ ಮಾಡಬಾರದು. ಹೆಚ್ಚು ಮಾಡಿಫಿಕೇಷನ್ಸ್‌ಗೆ ಅವಕಾಶ ಕೊಡಬಾರದು ಎನ್ನುವಂತಹ ಮಾತನ್ನು ಹೇಳಿದರೆ ಅವರು ತಪ್ಪಾಗಿ ತಿಳಿದುಕೊಳ್ಳುವುದಿಲ್ಲ ಎಂದು ಭಾವಿಸಿದ್ದೇನೆ. ಏಕೆಂದರೆ ಮಾನ್ಯ ಮುಖ್ಯಮಂತ್ರಿಗಳು ಸದನದಲ್ಲಿದ್ದಾರೆ. ಈ ಏಪ್ರಿಲ್ 7ನೇ ತಾರೀಖು ಮುಗಿದ ಮೇಲೆ ಪ್ರಾರಂಭ ಆಗುತ್ತವೆ ವರ್ಗಾವಣೆಗಳು. ಆ ವರ್ಗಾವಣೆಗಳಲ್ಲಿ ನಮ್ಮ ಸರ್ಕಾರದ ನೀತಿ ನಮ್ಮ ಸರ್ಕಾರದ ಆಡಳಿತ ನಮ್ಮ ಜನರಿಗೆ ಸ್ಪಂದಿಸುವಂತಹ ಅಭಿವೃದ್ಧಿ ಕೆಲಸಗಳು ನಿಂತಿವೆ. ಆದ್ದರಿಂದ ಈ ವಿಚಾರದಲ್ಲಿ ಆದಷ್ಟು ನಮ್ಮ ಪ್ರಾಮಾಣಿಕತೆಯನ್ನು ನಮ್ಮ ಆಡಳಿತದ ದಕ್ಷತೆಯನ್ನು ತೋರಿಸತಕ್ಕಂಥ ಕನ್ನಡಿ ಇರತಕ್ಕಂಥಾದ್ದು ಈ ಒಂದು ವರ್ಗಾವಣೆಯ ವಿಚಾರದಲ್ಲಿ. ಅದರಲ್ಲಿ ನಿರ್ಧಾಕ್ಷಣ್ಯವಾಗಿ ನೀತಿ ನಿರೂಪಣೆ ಮಾಡಬೇಕು. ಯಾವುದನ್ನು ಯಾರು ಮಾಡಬೇಕು? ಕ್ಲಾಸ್ ಸಿ ಯನ್ನು ನಾವು ಮಾಡಬೇಕಾ, ಫಸ್ಟ್ ಡಿವಿಜನ್ ಕ್ಲರ್ಕ್ ನಾವು ಮಾಡಬೇಕಾ ಅಸಿಸ್ಟೆಂಟ್ ಇಂಜಿನೀಯರ್, ಯಾರು ಮಾಡಬೇಕು ಜೂನಿಯರ್ ಇಂಜಿನೀಯರ್ಸ್‌ನ್ನು ಯಾರು ಮಾಡಬೇಕು ಯಾವ ವರ್ಗಾವಣೆಯನ್ನು ಯಾರು ಮಾಡಬೇಕೆನ್ನುವ ಕ್ಲಾಸಿಫೈ ತಾವು ಮಾಡಬೇಕು. ಎ ವರ್ಗದ ಕ್ಲಾಸಿಫಿಕೇಷನ್, ಬಿ ವರ್ಗದ ಕ್ಲಾಸಿಫಿಕೇಷನ್, ಸಿ ವರ್ಗದ ಕ್ಲಾಸಿಫಿಕೇಷನ್ ಜಿಲ್ಲಾ ಮಟ್ಟದಲ್ಲಿ ಯಾರು ಮಾಡಬೇಕು ವಿಭಾಗ ಮಟ್ಟದಲ್ಲಿ ಯಾರು ಮಾಡಬೇಕು ಮತ್ತು ರಾಜ್ಯದ ಮಟ್ಟದ ವರ್ಗಾವಣೆಗಳನ್ನು ಯಾರಿಗೆ ಬಿಡಬೇಕು ಎನ್ನತಕ್ಕಂಥ ನೀತಿಯನ್ನು ನಿರೂಪಣೆ ಮಾಡಬೇಕು ಎಂದು ನಾನು ಸೂಚನೆ ಮಾಡುತ್ತಾ ಮತ್ತೊಂದು ವಿಷಯವನ್ನು ಹೇಳತಕ್ಕಂಥಾದ್ದು ಯಾವುದು ಅಂದರೆ ನಮ್ಮ ಪೊಲೀಸ್ ಇಲಾಖೆಯಲ್ಲಿ ಸುಸಜ್ಜಿತವಾದಂಥ ಉಪಕರಣಗಳು ಬೇಕು. ಇವತ್ತಿನ ನಮ್ಮ ವೈಜ್ಞಾನಿಕತೆಗೆ ಇವತ್ತಿನ ನಮ್ಮ ರೀತಿ ನೀತಿಗಳಿಗೆ ಬೇಕಾಗಿರತಕ್ಕಂಥ ಉಪಕರಣಗಳನ್ನು ನಾವು ಮಾಡಿಕೊಡಬೇಕು.

ನಮ್ಮಲ್ಲಿರುವ ಈಗ ಜೀಪ್‌ಗಳಾಗಲೀ, ಮತ್ತೊಂದು ಆಗಲಿ ಹೊಸ ಹೊಸ ಗನ್‌ಗಳಾಗಲಿ, ಇವುಗಳಲ್ಲಿ ಸೊಫಿಸ್ಟಿಕೇಟೆಡ್ ಆಯುಧಗಳು ಬಂದಿವೆ. ಈ ಸೊಫಿಸ್ಟಿಕೇಟೆಡ್ ಇನ್‌ಸ್ಟ್ರುಮೆಂಟ್ಸ್‌ನ್ನು ನಮ್ಮ ಪೊಸೀಲ್ ಇಲಾಖೆಗೆ ಕೊಡಬೇಕು.

ಮನುಷ್ಯನ ಮೇಲೆ ನಾವು ಸಂಪೂರ್ಣವಾಗಿ ಅವಲಂಬಿಸಿರತಕ್ಕಂಥ ಕಾಲ ಇದು ಅಲ್ಲ. ಇವತ್ತು ಮ್ಯಾನ್ ಪವರ್ಸ್ ಬಹಳಷ್ಟು ಸ್ಟ್ರಾಂಗ್ ಆಗಿದೆ, ಕ್ರಿಮಿನಲ್ ಪವರ್ಸ್ ಬಹಳಷ್ಟು ಸ್ಟ್ರಾಂಗ್ ಆಗಿದೆ. ಇಂತಹ ಒಂದು ಸಂದರ್ಭದಲ್ಲಿ ಸಂಪೂರ್ಣವಾಗಿ ನಮ್ಮ ಪೊಲೀಸ್ ಇಲಾಖೆಗೆ ಹೊಸ ಆಧುನೀಕರಣ ಯಂತ್ರಗಳನ್ನು, ಮಾಡ್ರನ್ ಇಕ್ವಿಪ್‌ಮೆಂಟ್ಸ್‌ನ್ನು ಇಲಾಖೆ ಉಪಯೋಗಿಸಬೇಕು. ನಾವು ನೋಡುತ್ತಿದ್ದೇವೆ ಸರ್ಕಲ್ ಇನ್ಸ್‌ಪೆಕ್ಟರ್ಸ್‌ಗೆ, ಸಬ್ ಇನ್ಸ್‌ಪೆಕ್ಟರ್ಸ್‌ಗಳ ಹತ್ತಿರ ಇರತಕ್ಕಂಥ ಯಂತ್ರಗಳು ಮತ್ತು ಇವತ್ತು ನಮ್ಮ ಕ್ರಿಮಿನಲ್ಸ್‌ನ್ನು ಪೊಲೀಸಿನವರು ಹಿಡಿಯುವಂತಹ ರೀತಿನೀತಿಗಳು ಇವೆಲ್ಲಾ ಬಹಳ ಹಳೆಯ ಕಾಲದ್ದು. ಇವತ್ತು ವೀರಪ್ಪನ್‌ನನ್ನು ಹಿಡಿಯುವುದಕ್ಕೆ ಇಲ್ಲಿಯವರೆಗೂ ಸುಮಾರು 4 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಆದರೂ ಅವನನ್ನು ಹಿಡಿಯಲು ಆಗಲಿಲ್ಲ. ಕಾರಣ ಏನೆಂದರೆ ನಮ್ಮ ಪೊಲೀಸ್ ಇಲಾಖೆಯಲ್ಲಿರುವಂತಹ ವ್ಯವಸ್ಥೆ ಏನು ಇದೆ ಯಂತ್ರಗಳ ವ್ಯವಸ್ಥೆ ಆಧುನೀಕರಣ ಆಗಿಲ್ಲ.

ಆ ಒಂದು ಇಲಾಖೆಯನ್ನು ಸಂಪೂರ್ಣವಾಗಿ ಆಧುನೀಕರಣಗೊಳಿಸಲು ಗಮನ ಹರಿಸಬೇಕು. ತಾವು ಎಷ್ಟು ಸಬ್ ಇನ್ಸ್‌ಪೆಕ್ಟರ್ಸ್ ಅಪಾಯಿಂಟ್ ಮಾಡುತ್ತೀರಿ, ಸರ್ಕಲ್ , ಇನ್ಸ್‌ಪೆಕ್ಟರ್ಸ್ ಅಪಾಯಿಂಟ್ ಮಾಡುತ್ತೀರಿ ಅಷ್ಟೇ ಪ್ರಾಮಾಣಿಕವಾಗಿ ಯಂತ್ರಗಳಾಗಲಿ ಜೀಪ್‌ಗಳಾಗಲಿ ಮತ್ತೊಂದು ಗನ್‌ಗಳು ಆಗಲಿ ಒದಗಿಸಬೇಕು. ಆ ಇಂಟಲಿಜನ್ಸ್ ಡಿಪಾರ್ಟ್‌ಮೆಂಟ್‌ನ್ನು ಸ್ಟ್ರಾಂಗ್‌ಥನ್ ಮಾಡದಿದ್ದರೆ ಆಗುವುದಿಲ್ಲ. ಆದ್ದರಿಂದ ಆ ಬಗ್ಗೆ ನಮ್ಮ ಸರ್ಕಾರ ಗಮನ ಹರಿಸುತ್ತದೆ ಎನ್ನುವ ನಂಬಿಕೆ ನನಗೆ ಇದೆ. ಇವತ್ತು ಪೊಲೀಸ್ ಇಲಾಖೆಯಲ್ಲಿ ಇರತಕ್ಕಂಥ ಅಧಿಕಾರಿಗಳು ಏನು ಇದ್ದಾರೆ ಅವರೇ ಗುಂಡಾಗಳಿಗೆ ಸಹಾಯ ಮಾಡತಕ್ಕಂಥ ಮಾತನ್ನು ಹೇಳಿದರೆ ತಾವು ಬೇಸರ ಮಾಡಿಕೊಳ್ಳಬಾರದು. ಅವರೇ ಹೋಗಿ ಬೆಂಬಲ ಮಾಡತಕ್ಕಂಥದ್ದನ್ನು ನಾನು ನೋಡಿದ್ದೇನೆ. ನಮ್ಮ ಕಿವಿಯಾರೇ ನಾವು ಕೇಳಿದ್ದೇವೆ. ಅವರನ್ನು ಬಿಡಿಸುವುದಕ್ಕೆ ಪ್ರಯತ್ನ ಮಾಡಿದ್ದನ್ನು ನಾವು ಕಣ್ಣಾರೆ ಕಂಡಿದ್ದೇವೆ. ಆದ್ದರಿಂದ ಆ ರೀತಿ ಆಗದೇ ಇರುವಂತೆ ನೋಡಿಕೊಳ್ಳುವ ಜವಾಬ್ದಾರಿ ನಮ್ಮ ಮಾನ್ಯ ಸಿಂಧ್ಯರವರ ಮೇಲೆ ಬಿದ್ದಿದೆ. ಅವರು ಬಹಳ ದಕ್ಷ ರೀತಿಯಲ್ಲಿ ಕೆಲಸ ಮಾಡುತ್ತಿದ್ದಾರೆ ಎನ್ನುವ ಹೆಸರು ಇದೆ. ಅವರು ಈಗ ಈ ಒಂದು ವಿಚಾರದಲ್ಲಿ ಯಾರಿಗೂ ಈಲ್ಡ್ ಆಗದೇ ಕೆಲಸವನ್ನು ಮಾಡುತ್ತಾರೆ ಎನ್ನುವ ನಂಬಿಕೆಯನ್ನು ಇಟ್ಟುಕೊಂಡು ನಾವು ಇವತ್ತಿನ ದಿವಸ ಹುಬ್ಬಳ್ಳಿಯ ಮೊದಲನೆಯ ಸಾಧನೆಯನ್ನು ನಮ್ಮ ಸರ್ಕಾರ ಮಾಡಿದೆ ಎಂದು ಹೇಳಿದರೆ ತಪ್ಪಾಗುವುದಿಲ್ಲ.

ಮಾನ್ಯ ಅಧ್ಯಕ್ಷರೇ, ಎರಡು ವಿಚಾರಗಳನ್ನು ನಾವು ನಮ್ಮ ಚುನಾವಣೆ ಕಾಲದಲ್ಲಿ ಹೇಳಿದ್ದೇವೆ. ಬಡವರಿಗೆ ಅಕ್ಕಿಯನ್ನು ಕೊಡುವಂತಹ ಕಾರ್ಯಕ್ರಮ. ನಾನು ಮತ್ತು ನಮ್ಮ ಮುಖ್ಯಮಂತ್ರಿಗಳು ಮಂಡ್ಯ ಜಿಲ್ಲೆಯಲ್ಲಿ ಪ್ರವಾಸ ಮಾಡುವಂತಹ ಕಾಲದಲ್ಲಿ ಬಡವರಿಗೆ ಅಕ್ಕಿಯನ್ನು ಕೊಡುತ್ತೇವೆ ಎನ್ನತಕ್ಕಂಥ ಮಾತನ್ನು ಪ್ರಧಾನವಾಗಿ ನಾವು ಹೇಳಿದ್ದೆವು. ಎಲ್ಲಾ ಕಡೆ ಭಾಷಣ ಮಾಡುವಂತಹ ಕಾಲದಲ್ಲಿ ಬಡವರಿಗೆ ಕಡಿಮೆ ದರದಲ್ಲಿ ಅಕ್ಕಿಯನ್ನು ಕೊಡತಕ್ಕಂಥ ವಿಚಾರದಲ್ಲಿ ಹಿಂದೆ ಮುಂದೆ ಬೀಳುವುದಿಲ್ಲ. ನಮ್ಮ ಸರ್ಕಾರದ ಆರ್ಥಿಕ ಪರಿಸ್ಥಿತಿ ಏನೇ ಇರಲಿ ಆರ್ಥಿಕ ಪರಿಸ್ಥಿತಿಗೂ ಬಡವರ ಕೆಲಸಕ್ಕೂ ಸಂಬಂಧ ಇಲ್ಲ. ಅದೂ ಇರತಕ್ಕಂಥ ಆರ್ಥಿಕ ವ್ಯವಸ್ಥೆ ಒಳಗೆ ಇದು ನಮ್ಮ ಪ್ರೆಯಾರಿಟಿ ಆಗಿರುತ್ತದೆ ಎಂದು ನಾವು ಹೇಳಿದ್ದೆವು. ಮಾನ್ಯ ಅಧ್ಯಕ್ಷರೇ, ಇವತ್ತು ಹಳ್ಳಿಗಳ ಕಡೆ ಒಂದು ತಿಂಗಳಲ್ಲಿ ಒಂದು ದಿವಸ ಎರಡು ದಿವಸ ಅನ್ನ ಊಟ ಮಾಡುವುದಿಲ್ಲ. ಹಬ್ಬ ಹರಿದಿನಗಳಲ್ಲಿ ಮಾತ್ರ ಅನ್ನ ಊಟ ಮಾಡತಕ್ಕಂಥ ಪರಿಸ್ಥಿತಿ ಇದೆ. ನಾವು ಹಳ್ಳಿಯ ಜೀವನ ನೋಡಿದ್ದೇವೆ. ಇಂತಹ ಒಂದು ವ್ಯವಸ್ಥೆಯಲ್ಲಿ ನಾವು ಬಡವರಿಗೆ ಅಕ್ಕಿ ಕೊಡಲು 135 ಕೋಟಿ ರೂಪಾಯಿಗಳ

ಒಂದು ಯೋಜನೆಯನ್ನು ಮಾಡಿದ್ದೇವೆ. ಈಗಾಗಲೇ ಈ ಯೋಜನೆಯನ್ನು ಪ್ರಾರಂಭ ಮಾಡಿದ್ದೇವೆ. ಇದು ಬಹಳ ಯಶಸ್ವಿಯಾಗಿ ನಡೆಯಬೇಕು ಎನ್ನತಕ್ಕಂಥಾದ್ದು ನಮ್ಮ ಅನಿಸಿಕೆ. ಈ ಯೋಜನೆ ಯಾವುದೇ ಲೋಪದೋಷಗಳಿಂದ ಕೂಡಿರಬಾರದು. ಇದು ಬಡಜನತೆಯ ಕಾರ್ಯಕ್ರಮ. ಪ್ರಜಾವಾಣಿಯ ಎಡಿಟೋರಿಯಲ್ ಕಾಲಂನಲ್ಲಿ ಎರಡು ಪ್ರಧಾನವಾದ ವಿಚಾರಗಳ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಆ ಎರಡು ವಿಚಾರಗಳು ಯಾವುದು ಎಂಬುದನ್ನು ಹೇಳುತ್ತೇನೆ. ನಾವು ಅಕ್ಕಿ ಹಂಚತಕ್ಕಂಥ ವ್ಯವಸ್ಥೆ ಏನು ಇದೆ ಮತ್ತು ನಮ್ಮ ಫುಡ್ ಡಿಸ್ಟ್ರಿಬ್ಯೂಷನ್ ಸಿಸ್ಟಂ ಏನು ಇದೆ ಅದರಲ್ಲಿ ಬದಲಾವಣೆ ಮಾಡಬೇಕು ಎಂಬುದೇ ಈ ಎರಡು ವಿಚಾರಗಳು. ಸುಮಾರು 135 ಕೋಟಿ ರೂಪಾಯಿಗಳಷ್ಟು ಸಬ್ಸಿಡಿಯನ್ನು ಕೊಟ್ಟು ಈಗ ಇರತಕ್ಕಂಥ ವ್ಯವಸ್ಥೆಯಲ್ಲಿ ನಾವು ಒಳ್ಳೆಯ ಹೆಸರು ಗಳಿಸುತ್ತೇವೆ ಎನ್ನತಕ್ಕಂಥ ನಂಬಿಕೆ ನನಗೆ ಇಲ್ಲ. ಅದಕ್ಕೋಸ್ಕರವಾಗಿ ನೀವು ಕಾರ್ಡ್ ಬದಲಾವಣೆ ಮಾಡಿ. ಮತ್ತೊಂದು ಮಾಡಿ. ಆದರೆ ಬಡವರ ಕೈಗೆ ಅಕ್ಕಿ ತಲುಪುವಂತಾದ್ದು ಅತ್ಯಂತ ಮುಖ್ಯವಾಗಿ ಆಗಬೇಕು. ಇದು ನಮ್ಮ ಎರಡನೇಯ ದೊಡ್ಡ ಸಾಧನೆ. ಈ 3 ತಿಂಗಳಲ್ಲಿ ಇರತಕ್ಕಂಥ ಆರ್ಥಿಕ ವ್ಯವಸ್ಥೆಯಲ್ಲಿ ಒಂದು ಸರ್ಕಾರ 135 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಬಹಳ ಉತ್ತಮವಾದ ಯೋಜನೆಯನ್ನು ಬಡವರಿಗಾಗಿ ಜಾರಿಗೆ ತಂದಿರತಕ್ಕಂಥಾದ್ದು ಬಹಳ ಸಂತೋಷದ ವಿಚಾರ. ಇದನ್ನು ಬಹುಶಃ ಎಲ್ಲಾ ರಾಜಕೀಯ ಪಕ್ಷಗಳು ಮೆಚ್ಚಿದ್ದಾವೆ.

ಹಳ್ಳಿಗಾಡಿನಲ್ಲಿ, ಭತ್ತವನ್ನು ಒಕ್ಕಣೆ ಮಾಡಿದ ಮೇಲೆ ಕೊನೆಯಲ್ಲ ಉಳಿಯುವುದನ್ನು ಬಡವರು ತೆಗೆದುಕೊಂಡು ಹೋಗಿ ಹದ ಮಾಡಿಕೊಂಡು ಅನ್ನ ತಿಂದಿರತಕ್ಕಂಥದ್ದನ್ನು ನಾವು ನೋಡಿದ್ದೇವೆ. ಆದ್ದರಿಂದ ಇಂಥಹ ಉತ್ತಮವಾದ ಹಾಗೂ 3 ತಿಂಗಳಲ್ಲಿ ಮಾಡಿರತಕ್ಕಂಥ ದೊಡ್ಡ ಸಾಧನೆ ಯಶಸ್ಥಿಯಾಗಬೇಕಾದರೆ ಸಾರ್ವಜನಿಕ ವಿತರಣಾ ವ್ಯವಸ್ಥೆ ಸರಿಹೋಗಬೇಕು. ಇವತ್ತಿನ ದಿವಸ ಸಾಕಷ್ಟು ಕೆಟ್ಟ ಪರಿಸ್ಥಿತಿಯಲ್ಲಿರುವ ನ್ಯಾಯ ಬೆಲೆ ಅಂಗಡಿಗಳಿವೆ. ಅವು ಹಣ ಮಾಡುವುದಕ್ಕೋಸ್ಕರ ಇರುವಂಥ ನ್ಯಾಯ ಬೆಲೆ ಅಂಗಡಿಗಳಾಗಿವೆ. ಅದಕ್ಕಾಗಿ ಸಹಕಾರ ಸಂಘಗಳ ಮೂಲಕ ಸಾರ್ವಜನಿಕ ವಿತರಣೆಯನ್ನು ವ್ಯವಸ್ಥಿತವಾಗಿ ಮಾಡಬೇಕು. ಪಡಿತರ ಕಾರ್ಡುದಾರರುಗಳನ್ನು ಸ್ಕೂಲ್ ಮಾಸ್ಟರ್‌ಗಳು ಐಡೆಂಟಿಫೈ ಮಾಡಿದ್ದಾರೆಂದು ಆಗಲೇ ಒಬ್ಬರು ಮಾನ್ಯ ಸದಸ್ಯರು ಹೇಳುತ್ತಿದ್ದರು. ಅದು ಸರಿಯಾದ ಕ್ರಮವಲ್ಲ. ವಿಲೇಜ್ ಅಕೌಂಟೆಟ್‌ಗಳ ಮೂಲಕ ಕಾರ್ಡುದಾರರುಗಳನ್ನು ಐಡೆಂಟಿಫೈ ಮಾಡಿಸಬೇಕು. ಇವತ್ತು ನಮ್ಮ ಸರ್ಕಾರ ಮಾಡಿರುವ ಕಾರ್ಯಕ್ರಮಗಳು ಯಶಸ್ವಿಯಾಗಿ ಸರ್ಕಾರಕ್ಕೆ ಒಳ್ಳೆ ಹೆಸರು ಬರಬೇಕಾದರೆ ಬಡವರಿಗೆ ಸೂಕ್ತ ಪ್ರಮಾಣದಲ್ಲಿ ಸಹಾಯ ಸಿಗಬೇಕು. ಆಮೇಲೆ, ಉತ್ತರ ಕರ್ನಾಟಕದ ಜನರು ಜೋಳವನ್ನು ಹೆಚ್ಚು ಉಪಯೋಗ ಮಾಡುತ್ತಿದ್ದಾರೆ, ಹಾಗೆಯೇ ನಮ್ಮ ಕಡೆ ಜನರು ರಾಗಿಯನ್ನು ಹೆಚ್ಚು ಉಪಯೋಗ ಮಾಡುತ್ತಿರುವುದರಿಂದ, ಅಕ್ಕಿಗೆ ಯಾವ ರೀತಿ ಸಬ್ಸಿಡಿಯನ್ನು ಕೊಡಲಾಗುತ್ತದೆಯೋ ಅದೇ ರೀತಿ ರಾಗಿ ಮತ್ತು ಜೋಳಕ್ಕೂ ಸಬ್ಸಿಡಿ ಕೊಡಬೇಕೆಂದು ಈ ಮೂಲಕ ಒತ್ತಾಯಿಸಿ ಇದರ ಬಗ್ಗೆ ಮಾನ್ಯ ಮಂತ್ರಿಯವರು ಉತ್ತರ ಕೊಡುವಾಗ ತಿಳಿಸಬೇಕೆಂದು ಕೋರುತ್ತೇನೆ.

ಆಮೇಲೆ, ಚುನಾವಣೆ ಸಂದರ್ಭದಲ್ಲಿ ರೈತರುಗಳ ಸಾಲದ ಮೇಲಿನ ಬಡ್ಡಿಯನ್ನು ಮನ್ನಾ ಮಾಡಲಾಗುತ್ತದೆಂದು ಹೇಳಲಾಗಿತ್ತು, ಅದರಂತೆ ಈ ದಿವಸ ರೈತರುಗಳು ಮಾಡಿರುವ ಸಾಲದ ಮೇಲಿನ ಸುಸ್ತಿ ಬಡ್ಡಿ ಹಾಗೂ ಬಡ್ಡಿಯನ್ನು ಮನ್ನಾ ಮಾಡುವಂಥ ಕೆಲಸ ಮಾನ್ಯ ಬಂಗಾರಪ್ಪನವರ ಕಾಲದಲ್ಲೂ ಆಗಲಿಲ್ಲ, ಮಾನ್ಯ ಮೊಯಲಿಯವರು ಹಾಗೂ ವೀರೇಂದ್ರ ಪಾಟೀಲರ ಕಾಲದಲ್ಲೂ ಆಗಲಿಲ್ಲ. ನಮ್ಮ

ಸರ್ಕಾರ ಅಧಿಕಾರಕ್ಕೆ ಬಂದ ತಕ್ಷಣ ಬಡ್ಡಿ ಮನ್ನಾ ಮಾಡುವಂಥ ಕೆಲಸವನ್ನು ಮಾಡಲಾಗಿದೆ. ಯಾವುದೇ ಒಂದು ಹೊಸ ಪಕ್ಷದ ಸರ್ಕಾರ ಅಧಿಕಾರಕ್ಕೆ ಬಂದರೆ ಅದರ ಪೂರ್ಣ ಲಕ್ಷಣಗಳು ಸ್ಪಷ್ಟವಾಗಿ ಕಾಣಬೇಕಾದರೆ ಕನಿಷ್ಠ 6 ತಿಂಗಳಾದರೂ ಬೇಕಾಗುತ್ತದೆ. ಅಲ್ಲಿಯವರೆಗೂ ವಿರೋಧ ಪಕ್ಷದ ಸದಸ್ಯರುಗಳು ಸುಮ್ಮನೆ ಕುಳಿತುಕೊಂಡು ಕೇಳಬೇಕು. ನಾನು ವಿರೋಧ ಪಕ್ಷದಲ್ಲಿದ್ದಾಗ, ರಾಮಕೃಷ್ಣ ಹೆಗ್ಡೆಯವರ ಸರ್ಕಾರದ ಪ್ರಾರಂಭದ 6 ತಿಂಗಳು ನಾವು ಯಾವುದೇ ರೀತಿಯಲ್ಲಿ ಮಾತನಾಡುವುದಿಲ್ಲವೆಂದು ನಾನು ಹೇಳಿದ್ದೆ. ಈಗ ಮಾನ್ಯ ವಾಟಾಳ್ ನಾಗರಾಜ್‌ರವರು ಜೀರೋ ಅವರ್‌ನಲ್ಲಿ ವಿಷಯಗಳನ್ನು ಎತ್ತಿದರೆ ಬಹಳ ಕಷ್ಟವಾಗುತ್ತದೆ. ಸರ್ಕಾರದ ಕೆಲಸವನ್ನು 6 ತಿಂಗಳಾದರೂ ವಿರೋಧ ಪಕ್ಷದವರು ಕಾಯ್ದು ನೋಡಬೇಕು.

ಶ್ರೀ ವಾಟಾಳ್ ನಾಗರಾಜ್ : ಈ ನಿರ್ಣಯವನ್ನು ಮಂಡಿಸಿದವರು ನಾನೋ? ಅವರೋ? ಇಡೀ ದಿನ ಚರ್ಚೆ ಮಾಡಿದವರು ನಾಗೇಗೌಡರು. ಅದಕ್ಕೆ ಕಾರಣಕರ್ತರು ನಾಗೇಗೌಡರು. ಅವರು ಹೇಳಿದಂತೆ ನಾವು ಬಾಯಿಗೆ ಬಟ್ಟೆ ಕಟ್ಟಿಕೊಂಡು ಕುಳಿತುಕೊಳ್ಳುವುದಕ್ಕೆ ಆಗುತ್ತದೆಯೇ? ಹಾಗೂ ಇದು ಸಾಧ್ಯವೇ? ಅವರು ಆ ರೀತಿ ಭಾಷಣ ಮಾಡಿದರೆ ನಮ್ಮ ಪರಿಸ್ಥಿತಿ ಹೇಗೆ? ನೀವು 6 ತಿಂಗಳು ಮಾತನಾಡಬಾರದು, ಗಂಭೀರವಾಗಿ ಕುಳಿತಿರಬೇಕು ಎಂದು ನೇರವಾಗಿ ನಮ್ಮ ಹಕ್ಕಿನ ಚ್ಯುತಿ ಮಾಡುತ್ತಿದ್ದಾರೆ. ಇದರ ಪರಿಸ್ಥಿತಿ ಹೇಗೆ?

ಶ್ರೀ ಕೆ.ಎನ್. ನಾಗೇಗೌಡ : ನಾನು ವಿಧಾನ ಪರಿಷತ್ತಿನ ಸದಸ್ಯನಾಗಿದ್ದಾಗ, ಹೊಸದಾಗಿ ಬಂದ ಸರ್ಕಾರದ ಬಗ್ಗೆ 6 ತಿಂಗಳು ಮಾತನಾಡುವುದಿಲ್ಲವೆಂದು ಹೇಳಿದ್ದೆ. ಅದರ ಅರ್ಥ ಇದಕ್ಕೆ ಸರ್ಟಿಫಿಕೇಟ್ ಕೊಡಕೂಡದು ಅಂತ ಅಲ್ಲ, ಈ ಸರ್ಕಾರ ಹಾಳಾಗಿ ಹೋಗಿದೆ, ಮಣ್ಣಿನ ಮಗ ಗಾಳಿಗೆ ತೂರಿ ಹೋದ, ಈ ಸರ್ಕಾರಕ್ಕೆ ಮೂರು ಕಾಸಿನ ಮರ್ಯಾದೆ ಇಲ್ಲ ಎಂದು ಹೇಳಬಾರದು. ಸ್ವಲ್ಪ ಕಾಯಬೇಕು.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಇವರು ನಮ್ಮನ್ನು ಬಯ್ದರು ಎನ್ನುವ ನೆಪದಲ್ಲಿ ಅವರನ್ನು ಇವರೇ ಬಯುತ್ತಿದ್ದಾರೆ. ಬೇಕಾದರೆ ತಾವು ರೆಕಾರ್ಡ್ ತೆಗೆಸಿ ನೋಡಿ, ತಾವು ಯಾವೊತ್ತಾದರೂ ಆ ತರಹ ಭಾಷೆಯನ್ನು ಉಪಯೋಗ ಮಾಡಿದ್ದೇವೆಯೋ? ನಾವು ಹೇಳಿವುದೇನೆಂದರೆ, ಹಣಕಾಸಿನ ಸಚಿವರು ತಂದಿರತಕ್ಕಂಥ ಆಯವ್ಯಯ ಸರಿ ಇಲ್ಲದೇ ಇದ್ದರೂ ಸಾರಾಸಗಟು ತಳ್ಳಿ ಹಾಕುವಂತಿಲ್ಲವೆಂದು ನಾವು ಹೇಳಿಲ್ಲವೇ? ಇವರು ಸ್ವಲ್ಪ ಒಳ್ಳೆಯದನ್ನೂ ಮಾಡಿರು ಸಾರಾಸಗಟು ಸರ್ಕಾರವನ್ನೇ ಕಿತ್ತು ಹಾಕಿ ಎಂದು ಹೇಳಿದ್ದೇವೆಯೋ?

ಅಧ್ಯಕ್ಷರು : ಅವರು ಹೇಳುತ್ತಾ ಇರುವುದೂ ಕೂಡ ನಿಮ್ಮನ್ನು ಗಮನದಲ್ಲಿಟ್ಟು ಕೊಂಡು ಅಲ್ಲ. ಅದಕ್ಕೆ ಯಾರು ಪ್ರತಿಕ್ರಿಯಿಸಬೇಕೋ ಅವರು ಇಲ್ಲ. ನೀವು ಸುಮ್ಮನೆ ಪ್ರತಿಕ್ರಿಯೆ ಕೊಡುತ್ತಿದ್ದೀರಿ.

ಶ್ರೀ ಕೆ.ಎನ್. ನಾಗೇಗೌಡ : ನೀವು ಅಂದರೆ, ವಾಟಾಳ್‌ರವರಲ್ಲ. ಸರ್ಕಾರದ ದಿನಚರಿಯಲ್ಲಿ ಉಂಟಾಗುವ ಲೋಪ ದೋಷಗಳನ್ನು ಮಾತನಾಡಬಾರದೆಂದು ಹೇಳುವ ಮೂರ್ತ ನಾನಲ್ಲ. ಮುಖ್ಯ ಮಂತ್ರಿಯವರಿಗಾಗಲೀ, ಮಂತ್ರಿಯವರಿಗಾಗಲೀ, ಸರ್ಕಾರಕ್ಕಾಗಲೀ, ಒಂದು ರಾಜಕೀಯ ಪಕ್ಷಕ್ಕಾಗಲೀ, ಸರ್ಟಿಫಿಕೇಟ್ ಕೊಡುವಂಥ ಸಂದರ್ಭದಲ್ಲಿ ಸ್ವಲ್ಪ ಕಾಯಿರಿ ಎಂದು ಮಾತ್ರ ಹೇಳಿದೆ ಅಷ್ಟೇ.

ಶ್ರೀ ವಾಟಾಳ್ ನಾಗರಾಜ್ : ಇವರು ತಾಮ್ರ ಪತ್ರವನ್ನು ಕೊಡುತ್ತಿದ್ದಾರೆ.

ಶ್ರೀ ಕೆ.ಎನ್. ನಾಗೇಗೌಡ : ಮಾಡಿರತಕ್ಕಂಥ ವಿಚಾರಗಳನ್ನು ಹೇಳುವುದಕ್ಕೂ ಮಾಡದೇ ಇರತಕ್ಕಂಥ ವಿಚಾರಗಳನ್ನು ಮಾಡಿದ್ದೀರಿ ಎಂದು ಹೇಳುವುದಕ್ಕೂ ಬಹಳ

ವ್ಯತ್ಯಾಸಗಳಿವೆ. ರಾಜಕೀಯ ಪಕ್ಷಗಳು ಯಾವುದೇ ವ್ಯಕ್ತಿಯ ಸ್ವತ್ತಲ್ಲ. ಯಾವ ವ್ಯಕ್ತಿಯನ್ನೂ ರಾಜಕೀಯ ಪಕ್ಷಗಳು ಗುತ್ತಿಗೆ ತೆಗೆದುಕೊಂಡಿಲ್ಲ. ಗುತ್ತಿಗೆ ತೆಗೆದುಕೊಳ್ಳಲೂಬಾರದು. ರಾಷ್ಟ್ರದ ರಾಜಕಾರಣದಲ್ಲಿ ನೂರಕ್ಕೆ ಎಂಭತ್ತರಷ್ಟು ವ್ಯಕ್ತಿಗಳು ರಾಜಕೀಯ ಪಕ್ಷಗಳನ್ನು ಬದಲಾವಣೆ ಮಾಡಿದ್ದಾರೆ. ಆದರೆ ಯಾವ ವ್ಯಕ್ತಿ ಯಾವ ವಿಚಾರದ ಬಗ್ಗೆ ನಿಂತಿರುತ್ತಾನೆ ಎಂಬುದೇ ಅವನ ವ್ಯಕ್ತಿತ್ವ ನಿಂತಿದೆಯೇ ಹೊರತು ಬೇರೆಯವರ ಮೇಲೆ ನಿಂತಿಲ್ಲ. ನಾನು ಏತಕ್ಕೆ ಹೇಳಿದೆ ಎಂದರೆ, ಯಾವುದಾದರೂ ಒಂದು ತೀರ್ಮಾನಕ್ಕೆ ಬರುವುದರ ಮೊದಲು ನಮಗೆ 6 ತಿಂಗಳು ಅವಕಾಶ ಕೊಡಿ. ಈಗ ಮುಗಿದಿರುವ 3 ತಿಂಗಳಲ್ಲಿ ಮೂರು ಕೆಲಸಗಳನ್ನು ಮಾಡಿದ್ದೇವೆ. ಒಂದನೆಯದು, ಬಡ್ಡಿ ಮನ್ನಾ ಮಾಡುವಂಥ ವಿಚಾರ ಅಷ್ಟೊಂದು ಸುಲಭ ಎಂದು ನಾನು ಭಾವಿಸಿಕೊಳ್ಳುವುದಿಲ್ಲ. ನೀವು ಕೂಡ ಅಧಿಕಾರದಲ್ಲಿ ಕೆಲಸ ಮಾಡಿ ನೋಡಿದ್ದೀರಿ. ನಮ್ಮ ರಾಜ್ಯ ಮಹಾರಾಷ್ಟ್ರ ಅಲ್ಲ ಅಥವಾ ಉತ್ತರ ಪ್ರದೇಶವೂ ಅಲ್ಲ. ನಮ್ಮದು ಬಹಳ ಚಿಕ್ಕ ರಾಜ್ಯ. ಮಹಾರಾಷ್ಟ್ರ ಅಲ್ಲ ಅಥವಾ ಉತ್ತರ ಪ್ರದೇಶವೂ ಅಲ್ಲ. ನಮ್ಮದು ಬಹಳ ಚಿಕ್ಕ ರಾಜ್ಯ. ಅಂಥಾದ್ದರಲ್ಲಿ ಇಷ್ಟು ಕೆಲಸ ಮಾಡಿದ್ದೇವೆ. ಆಗಲೇ ಮಾನ್ಯ ಸದಸ್ಯರಾದ ಶ್ರೀರಾಮರೆಡ್ಡಿಯವರು ಬಹಳ ಚೆನ್ನಾಗಿ ಹೇಳಿದರು, ಇರತಕ್ಕಂಥ 2 ಪರ್ಸೆಂಟ್ ನಮ್ಮ ಸರ್ಕಾರದ ನೌಕರರಿಗೆ 48 ರಿಂದ 50 ಪರ್ಸೆಂಟ್‌ನಷ್ಟು ಹಣ ಖರ್ಚು ಮಾಡಿ ಉಳಿದ 98 ಪರ್ಸೆಂಟ್ ಜನರಿಗೆ ಒಟ್ಟು 11 ಸಾವಿರ ಕೋಟಿಯಲ್ಲಿ 5 ಅಥವಾ 6 ಸಾವಿರ ಕೋಟಿ ರೂಪಾಯಿಗಳನ್ನು ಮಾತ್ರ ಖರ್ಚು ಮಾಡುತ್ತಿದ್ದೇವೆ ಎಂದು.

ನನಗೆ ತಿಳಿದ ಮಟ್ಟಿಗೆ ಸರ್ಕಾರಿ ನೌಕರರಲ್ಲಿ 30 ಪರ್ಸೆಂಟ್‌ನಷ್ಟು ನೌಕರರು ಕೆಲಸವನ್ನೇ ಮಾಡುವುದಿಲ್ಲ. ಸರ್ಕಾರಿ ಕೆಲಸ ದೇವರ ಕೆಲಸ, ಇದು ಜನರ ಕೆಲಸ, ಜನರ ಕೆಲಸಕ್ಕಾಗಿ ನಾವು ಸಂಬಳ ತೆಗೆದುಕೊಳ್ಳುತ್ತಿದ್ದೇವೆ ಆದಕ್ಕಾಗಿ ನಿಷ್ಠೆಯಿಂದ ಕೆಲಸ ಮಾಡಬೇಕು ಎನ್ನುವ ಮನೋಭಾವ ಸರ್ಕಾರಿ ನೌಕರರಲ್ಲಿ ಬಂದೇ ಇದ್ದರೆ ಸರ್ಕಾರದ ಯಾವ ಕೆಲಸಗಳನ್ನೂ ಮಾಡುವುದಕ್ಕಾಗುವುದಿಲ್ಲ. ಕೆಲವರು ಆಫೀಸ್‌ಗೆ ಬಂದು ಸೈನ್ ಹಾಕಿ ಹೋದರೆ, ಅವರು ಎಲ್ಲಿ ಹೋಗುತ್ತಾರೆ ಮತ್ತು ಯಾವಾಗ ಬರುತ್ತಾರೆಂದು ಯಾರಿಗೂ ಗೊತ್ತಾಗುವುದಿಲ್ಲ. ಇದಕ್ಕಾಗಿ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಆಡಳಿತಕ್ಕೆ ಹೆಚ್ಚು ಗಮನವನ್ನು ಕೊಡುತ್ತೇವೆಂದು ನಮ್ಮ ಮುಖ್ಯಮಂತ್ರಿಗಳು ಹೇಳಿದ್ದಾರೆ. ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ಸರಿಯಾಗಿ ಆಡಳಿತ ನಡೆಯದೆ ಹೋದರೆ ಬಡವರ ಪಾಲಿಗೆ ಸರ್ಕಾರ ಇಲ್ಲದ ಹಾಗಾಗುತ್ತದೆ. ಸಣ್ಣ ಪುಟ್ಟ ಕೆಲಸಕ್ಕಾಗಿ ಬರಬೇಕಾಗಿರುವುದು ವಿಧಾನ ಸೌಧಕ್ಕಲ್ಲ. ಆದ್ದರಿಂದ, ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಆಡಳಿತಕ್ಕೆ ಹೆಚ್ಚು ಗಮನವನ್ನು ಕೊಡಬೇಕಾಗಿದೆ.

ಆದ್ದರಿಂದ ಆ ಕಡೆಗೆ ನಮ್ಮ ಸರಕಾರದವರು ಹೆಚ್ಚು ಗಮನವನ್ನು ಕೊಡಬೇಕು. ಅದರಲ್ಲಿ ಹೆಚ್ಚು ಮಹತ್ವವಿದೆ. ಹಾಗೆಯೇ ಬಡ್ಡಿ ಮನ್ನಾ ವಿಚಾರದಲ್ಲಿ ನಬಾರ್ಡ್‌ನ ಬೆಂಗಳೂರು ವಿಭಾಗದ ಅಧಿಕಾರಿಯೊಬ್ಬರು ಒಂದು ಸ್ಟೇಟ್‌ಮೆಂಟ್ ಮಾಡಿರುವುದನ್ನು ನಾನು ಇವೊತ್ತು ಇಂಡಿಯನ್ ಎಕ್ಸ್‌ಪ್ರೆಸ್‌ನಲ್ಲಿ ಓದಿದ್ದೆ. ಇನ್ನು ಸ್ವಲ್ಪ ದಿವಸಗಳಲ್ಲಿಯೇ ಮರುಸಾಲವನ್ನು ಕೊಡುವುದಕ್ಕೆ ನಾವು ಒಪ್ಪಿದ್ದೇವೆ ಎಂಬ ಮಾತನ್ನು ಅವರು ಹೇಳಿದ್ದಾರೆ. ಹೀಗೆ 132 ಕೋಟಿ ರೂ.ಗಳನ್ನು ಏನು ನಾವು ಮನ್ನಾ ಮಾಡಿದ್ದೇವೆ ಇದೊಂದು ದೊಡ್ಡ ಸಾಧನೆ ಎನ್ನತಕ್ಕಂಥಾದ್ದನ್ನು ಹೇಳಬಯಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ನಾಗೇಗೌಡರು ತಮ್ಮ ಸರಕಾರ 132 ಕೋಟಿ ರೂ.ಗಳಷ್ಟು ಬಡ್ಡಿ ಮನ್ನಾ ಮಾಡಿದ್ದೇವೆಂದು ಹೇಳಿದ್ದಾರೆ. ನೀವು ಮಾರ್ಚ್ ಕೊನೆಯವರೆಗೆ ಎಷ್ಟು ಹಣವನ್ನು ಬಿಡುಗಡೆ ಮಾಡಿದ್ದೀರಿ? ಈ ಸೌಲಭ್ಯವನ್ನು ನೀವು ಮಾರ್ಚ್ ಆದಮೇಲೆ ವಿಸ್ತರಣೆ ಮಾಡುತ್ತಾ ಇಲ್ಲ. ನಮ್ಮಲ್ಲಿ

ಜೋಳ ಇತ್ಯಾದಿ ಬೆಳೆಗಳಿಗೆ ಸುಗ್ಗಿಯ ಸಮಯದಲ್ಲಿ ಬೆಲೆಯು ಸ್ವಲ್ಪ ಕಡಿಮೆ ಸಿಗುತ್ತದೆ ಎಂದು ರೈತರು ಎಲ್ಲಾ ಬೆಳೆಗಳನ್ನು ಮಾರುವುದಿಲ್ಲ. ಅವರಿಗೆ ಹಣ ಸಿಗುವುದು ಮುಂದಿನ ತಿಂಗಳುಗಳಲ್ಲಿ. ಆದ್ದರಿಂದ ಮಾರ್ಚ್ ತಿಂಗಳ ಕೊನೆಯವರೆಗೆ ಎಷ್ಟು ಹಣವನ್ನು ಬಿಡುಗಡೆ ಮಾಡಿದ್ದೀರಿ ಮತ್ತು ಅದರಲ್ಲಿ ಎಷ್ಟು ಜನರಿಗೆ ಸೌಲಭ್ಯದ ಫಲವು ಸಿಗುತ್ತದೆ ಎಂಬುದನ್ನು ತಿಳಿಸಿದರೆ ಒಳ್ಳೆಯದು.

ಶ್ರೀ ಕೆ.ಎನ್. ನಾಗೇಗೌಡ : 100 ಕೋಟಿ ರೂ.ಗಳನ್ನು ಅದಕ್ಕಾಗಿಯೇ ಕಾದಿರಿಸಲಾಗಿದೆ ಎಂದು ಹೇಳಿದ್ದಾರೆ. ಅದರಲ್ಲಿ 10 ಕೋಟಿ ರೂ.ಗಳನ್ನು ಈಗಾಗಲೇ ಬಿಡುಗಡೆ ಮಾಡಲಾಗಿದೆ ಎಂದು ಹೇಳಿದ್ದಾರೆ. ಮಾರ್ಚ್ ಕೊನೆಯವರೆಗಿನ ಅಂಕಿಅಂಶಗಳು ಎಲ್ಲಾ ಕಡೆಗಳಿಂದ ಬರಬೇಕಾಗಿದ್ದು ಯಾವ ಜಿಲ್ಲೆಗಳಲ್ಲಿ ಎಷ್ಟೆಷ್ಟು ಎಂಬಿತ್ಯಾದಿ ವಿವರಗಳನ್ನು ಮಾನ್ಯ ಮುಖ್ಯಮಂತ್ರಿಯವರು ತಮ್ಮ ಉತ್ತರದಲ್ಲಿ ಕೊಡಲಿದ್ದಾರೆಂದು ನಾನು ಭಾವಿಸುತ್ತೇನೆ.

ಶ್ರೀ ಹೆಚ್.ಎನ್. ನಂಜೇಗೌಡ : ಮಾನ್ಯ ಸದಸ್ಯರು ಇನ್ನೂ ಜಾಸ್ತಿ ಹೊತ್ತು ತೆಗೆದುಕೊಳ್ಳುವುದಾದರೆ ಊಟದ ಸಮಯದ ನಂತರ ಮುಂದುವರಿಸಿದರೆ ನಮಗೆ ಊಟ ಮಾಡಿಕೊಂಡು ಬರಲು ಅನುಕೂಲವಾಗುತ್ತದೆ. ಮಾನ್ಯ ಅಧ್ಯಕ್ಷರು ದಯಮಾಡಿ ಭೋಜನ ವಿರಾಮವನ್ನು ಘೋಷಿಸಬೇಕೆಂದು ವಿನಂತಿ.

ಶ್ರೀ ಕೆ.ಎನ್. ನಾಗೇಗೌಡ : ಮಾನ್ಯ ಅಧ್ಯಕ್ಷರೇ, ಸಾಮಾನ್ಯವಾಗಿ ಇನಿಷಿಯೇಟ್ ಮಾಡಿದವರು ತಮ್ಮ ಮಾತನ್ನು ಮುಗಿಸಿ ವಿರಮಿಸುವುದು ಸಂಪ್ರದಾಯ. ತಾವುಗಳು ಅಪ್ಪಣೆ ಕೊಡಿಸಿದರೆ ನನ್ನ ಅಭ್ಯಂತರವಿಲ್ಲ.

ಅಧ್ಯಕ್ಷರು : ತಾವು ತಮ್ಮ ಭಾಷಣವನ್ನು ಭೋಜನ ವಿರಾಮದ ನಂತರ ಮುಂದುವರಿಸಬಹುದು. ಈಗ ಸದನವು ಒಂದು ಗಂಟೆಯ ಕಾಲ ಭೋಜನ ವಿರಾಮಕ್ಕಾಗಿ ಮುಂದುವರಿಸಿ ಮತ್ತೆ 2-50 ಗಂಟೆಗೆ ಸಮಾವೇಶಗೊಳ್ಳುವುದು.

(ಸಭೆಯು ಭೋಜನ ವಿರಾಮಕ್ಕಾಗಿ ತನ್ನ ಕಲಾಪಗಳನ್ನು 1-55ಗಂಟೆಗೆ ಸ್ಥಗಿತಗೊಳಿಸಿ ಮತ್ತೆ 2-50ಕ್ಕೆ ಪುನರ್ ಸಮಾವೇಶಗೊಳ್ಳಲು ನಿರ್ಧರಿಸಿತು)

ಸಭೆಯು ಮತ್ತೆ 3.20ಕ್ಕೆ ಸಮಾವೇಶಗೊಂಡಿತು

(ಪೀಠದಲ್ಲಿ ಸಭಾಧ್ಯಕ್ಷರು ಶ್ರೀ ರಮೇಶ್ ಕುಮಾರ್ ಅವರು ಉಪಸ್ಥಿತರಾದರು)

ರಾಜ್ಯಪಾಲರ ಭಾಷಣದ ಮೇಲಿನ ವಂದನಾ ಸಲ್ಲಿಸತಕ್ಕ ನಿರ್ಣಯದ ಮೇಲಿನ ಮುಂದುವರೆದ ಚರ್ಚೆ

ಶ್ರೀ ಕೆ.ಎನ್. ನಾಗೇಗೌಡ : ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಭಾಷಣದ ವಂದನೆ ಸಲ್ಲಿಸತಕ್ಕಂಥ ಕಾರ್ಯಕ್ರಮದಲ್ಲಿ ನಾನು ಈಗಾಗಲೇ ಮೂವತ್ತು ನಿಮಿಷಗಳ ಕಾಲ ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದೇನೆ. ಇವತ್ತಿನ ದಿವಸ ಬಹಳ ಪ್ರಾಮುಖ್ಯವಾಗಿ ನಾನು ಈ ಒಂದು ಆಹಾರ ವಿತರಣಾ ವ್ಯವಸ್ಥೆಯೊಳಗದೆ ಮಾತನಾಡುತ್ತಿದ್ದ ಸಂದರ್ಭದಲ್ಲಿ ನಮ್ಮ ಕಾಗೋಡು ತಿಮ್ಮಪ್ಪನವರು ಬಂದರು. ಅವರು ಬಂದಾಗ ನನಗೆ ಜ್ಞಾಪಕ ಬಂತು. ಹೋದ ಸಾರಿ ಅವರು ಇದೇ ರೀತಿ ಚರ್ಚೆಯಾದ ಸಂದರ್ಭದಲ್ಲಿ ನ್ಯಾಯ ಬೆಲೆ ಅಂಗಡಿಗಳಲ್ಲಿ ಕಾರ್ಡುಗಳನ್ನು ಹಳ್ಳಿ ಕಡೆ ಇನ್ನೂ ಬೇಕಾದಷ್ಟು ಬಡವರಿಗೆ ಕಾರ್ಡುಗಳು ಸಿಕ್ಕಿಲ್ಲ ಎಂಬ ಮಾತನ್ನು ಹೇಳುತ್ತಾ, ಪೊಲೀಸಿನವರು ಮತ್ತು ನಮ್ಮ ಸ್ಕೂಲ್ ಟೀಚರ್‌ಗಳು ಅನಲೈಸ್ ಮಾಡಿರತಕ್ಕಂಥದ್ದು ಸರಿಯಿಲ್ಲ. ಆದ್ದರಿಂದ ಸಂಪೂರ್ಣವಾಗಿ ಯಾರು ಬಡವರಿದ್ದಾರೆ

ಅವರನ್ನು ಗುರುತಿಸಬೇಕು ಎಂಬ ಮಾತನ್ನು ಅವರು ಹೇಳಿದ್ದರು. ಇದನ್ನು ನಾನೂ ಸಹ ಒತ್ತಿ ಹೇಳುತ್ತೇನೆ. ಇವತ್ತಿನ ದಿವಸ ಗ್ರಾಮಾಂತರ ಪ್ರದೇಶಗಳಲ್ಲಿ ಬಡವರನ್ನು ಗುರುತಿಸತಕ್ಕಂಥದ್ದು, ಬಡವರಿಗೆ ಕಾರ್ಡು ಕೊಡತಕ್ಕಂಥದ್ದು ಬಡವರಿಗೆ ಹಸಿರು ಕಾರ್ಡು ಕೊಡತಕ್ಕಂಥ ಕಾರ್ಯಕ್ರಮ ಏನಿದೆ ಅದು ಒಂದು ಮಾದರಿಯ ರೀತಿಯಲ್ಲಿ ಆಗಬೇಕು. ಯಾವ ಬಡವನೂ ಸಹ ಬಂದು ನನಗೆ ಕಾರ್ಡು ಸಿಗಲಿಲ್ಲ ಎಂದು ಕೇಳತಕ್ಕಂಥ ಒಂದು ವ್ಯವಸ್ಥೆಯನ್ನು ನಾವು ನಿರ್ಮಾಣ ಮಾಡಬಾರದು.

ಬಡವರು ಯಾರಿದ್ದಾರೆ 56 ಲಕ್ಷ ಕುಟುಂಬಗಳು ಇದ್ದರೂ ಸಹ, ಹಳ್ಳಿಗಾಡಿನಲ್ಲಿರತಕ್ಕ ಬಡವರು ಅತ್ಯಂತ ಕಡುಬಡವರು, ಹಿಂದುಳಿದ ವರ್ಗ ಇರಲಿ, ಹರಿಜನ ಇರಲಿ, ರೈತರು ಇರಲಿ, ಕೂಲಿಗಾರರು ಇರಲಿ, ಆ ಬಡವರಿಗೆ ಕಾರ್ಡು ಸಿಗುವಂಥ ವ್ಯವಸ್ಥೆಯನ್ನು ಮಾಡಲು ಸರ್ಕಾರವೇ ಅವರನ್ನು ಗುರುತಿಸಬೇಕು ಬಡವರು ಗುರುತಿಸಿಕೊಂಡು ಸರ್ಕಾರದ ಕಡೆ ಬರಬಾರದು, ಬಡವರಿಗೋಸ್ಕರ ಇರತಕ್ಕಂಥ ಸರ್ಕಾರ, ಬಡವರು ನಮ್ಮನ್ನು ಗುರುತಿಸುವ ಸರ್ಕಾರ ಎನ್ನುವ ರೀತಿಯಲ್ಲಿ, ಸರ್ಕಾರ ಬಡವರನ್ನು ಗುರುತಿಸುವ ಕಡೆ ನಮ್ಮ ಸರ್ಕಾರ ಕೆಲಸ ಮಾಡಬೇಕು. ಆಂಧ್ರದಲ್ಲಿ ಮೊನ್ನೆ ಒಂದು ಭಾಷಣದಲ್ಲಿ ಕೇಳಿದೆ, ಅಲ್ಲಿ ಅಕ್ಕಿಯನ್ನು ತೆಗೆದುಕೊಂಡರೆ, ಅಕ್ಕಿಯನ್ನು ಕೆಲವು ಕಡೆ ಕೊಂಡುಕೊಂಡು ಮಾರುತ್ತಿದ್ದಾರೆ ಎನ್ನುವಂಥದ್ದು ಆಗಲಿ, ಅಥವಾ ಬ್ಲಾಕ್‌ನಲ್ಲಿ ಮಾರುತ್ತಿದದಾರೆ ಎಂಬ ಸುದ್ದಿಯನ್ನು ಅಲ್ಲಿ ಇಲ್ಲಿ ಕೇಳಿದ್ದೇವೆ. ಆದರೂ ಸಹ ಯಾರಿಗೋಸ್ಕರವಾಗಿ ಈ ಯೋಜನೆಯನ್ನು ತಂದಿದ್ದೇವೆ, ಯಾವ ಜನಕ್ಕೋಸ್ಕರ ಈ ಯೋಜನೆಯನ್ನು ತಂದಿದ್ದೇವೆ, ಯಾರಿಗೆ ಬಟ್ಟೆ ಇಲ್ಲ, ಮನೆ ಇಲ್ಲ, ಅನ್ನ ಇಲ್ಲ, ಕೂಲಿ ಇಲ್ಲ ಯಾರು ಸರ್ವನಾಶ ಆಗುತ್ತಿದ್ದಾನೆ, ಆ ಬಡವನಿಗೆ ಈ ಸೌಲಭ್ಯ ಸಿಗಬೇಕು. ಇಷ್ಟೊಂದು ಕೋಟಿ· ರೂಪಾಯಿಗಳನ್ನು ಇವತ್ತು ಆರ್ಥಿಕ ವ್ಯವಸ್ಥೆಯಲ್ಲಿ ಇಷ್ಟೊಂದು ಕಷ್ಟ ಇದ್ದರೂ ಸಹ ನಮಗೆ ಆರ್ಥಿಕವಾಗಿ ಈ ಕಾರ್ಯಕ್ರಮವನ್ನು ಜಾರಿಗೆ ತರತಕ್ಕಂಥ ಹಿನ್ನೆಲೆಯಲ್ಲಿ ಅವರಿಗೆ ಈ ಒಂದು ಸಹಾಯ ದೊರೆಯತಕ್ಕಂಥ ರೀತಿಯಲ್ಲಿ ಗುರಿತಸಬೇಕು.

ನ್ಯಾಯಬೆಲೆ ಅಂಗಡಿಗಳ ಮೇಲೆ ವಿಶೇಷವಾದಂತ ಒಂದು ದಳವನ್ನು ರಚನೆ ಮಾಡಿ ಎಸೆನ್ಷಿಯಲ್ ಕಮಾಡಿಟೀಸ್ ಆಕ್ಟ್ ಒಳಗಡೆ ಅದು ಸಕ್ಕರೆ ಇರಲಿ, ಸೀಮೆಎಣ್ಣೆ ಇರಲಿ, ಅಕ್ಕಿ ಇರಲಿ, ಗೋಧಿ ಇರಲಿ, ರಾಗಿ ಇರಲಿ, ಯಾರು ದುರುಪಯೋಗ ಮಾಡಿಕೊಳ್ಳುತ್ತಾರೆ, ಅಂತಹ ನ್ಯಾಯಬೆಲೆ ಅಂಗಡಿಗಳನ್ನು ಮಾತ್ರ ನಾವು ಉಳಿಸಿಕೊಳ್ಳಬೇಕು. ಇನ್ನುಳಿದಿದ್ದಂಥ ನ್ಯಾಯಬೆಲೆಗಳನ್ನು ನಿರ್ಧಾಕ್ಷಿಣ್ಯವಾಗಿ ರದ್ದುಮಾಡಿ ಒಂದು ಹೊಸ ಸ್ವರೂಪವನ್ನು ಈ ಒಂದು ಯೋಜನೆಗೆ ನಮ್ಮ ಸರ್ಕಾರ ಕೊಡಬೇಕು ಎಂದು ಸರ್ಕಾರಕ್ಕೆ ಸಲಹೆ ಕೊಡುತ್ತೇನೆ. ಬಹುಶಃ ನಮ್ಮ ಸರ್ಕಾರ ಈ ಕೆಲಸವನ್ನು ಮಾಡುತ್ತದೆ ಎಂದು ನಂಬಿಕೆ ಇದೆ. ಆ ನಂಬಿಕೆಯಲ್ಲಿ ಅವರು ಮುಂದುವರಿಯಬೇಕು. ಆಗ ಬಡವರು ಮುಂದಿನ ವರ್ಷ ಅಂದರೆ 1996-97ರ ಬಡ್ಜೆಟ್ ಬಂದಾಗ ನಮಗೆ ಈ ಸರ್ಕಾರದಿಂದ ಸಹಾಯ ದೊರೆತಿದೆ ಎಂದು ಹೇಳುವಂಥ ಪರಿಸ್ಥಿತಿ ಉಂಟಾಗಬೇಕು.

ನಮ್ಮ ರಾಜ್ಯದಲ್ಲಿ ಎರಡೂ ಮೂರು ಜನಪ್ರಿಯ ಕಾರ್ಯಕ್ರಮಗಳು ಫೇಲ್ ಆಗಿವೆ, ಆದರೆ ಈ ಕಾರ್ಯಕ್ರಮ ಯಾವುದೇ ಕಾರಣಕ್ಕೂ ಫೇಲ್ಯೂರ್ ಆಗಕೂಡದು. ಇದು ನಿಜವಾಗಲೂ ಹೊಟ್ಟೆಯ ಕಾರ್ಯಕ್ರಮ, ಹೊಟ್ಟೆಯನ್ನು ತುಂಬಿಸತಕ್ಕಂಥ ಕಾರ್ಯಕ್ರಮ, ಬಡವರಿಗೆ ಹಿಡಿಸುವಂಥ ಕಾರ್ಯಕ್ರಮ, ಈ ಕಾರ್ಯಕ್ರಮದಲ್ಲಿ ಯಾವುದೇ ಲೋಪ ಆಗದಿರುವ ರೀತಿಯಲ್ಲಿ ಗುರುತಿಸಿ ಅವರಿಗೆ ಕೆಲಸ ಮಾಡಿಕೊಡಬೇಕು ಮತ್ತು ರಾಗಿ, ಜೋಳಕ್ಕೂ ಸಹ ಈ ಸಬ್ಸಿಡಿಯನ್ನು ನೀಡಬೇಕು. ನಾನು ಮೊದಲು ಪ್ರಾರಂಭದಲ್ಲಿ ಹೇಳಿದ್ದೇನೆ, ನಮ್ಮ ಕೆಲವು ಭಾಗದಲ್ಲಿ ಅಕ್ಕಿ ಪ್ರಾಕ್ಟೀಸ್ ಇಲ್ಲ, ಫುಡ್

ಹ್ಯಾಬಿಟ್ಸ್ ಹೇಗೆ ಇರುತ್ತದೆ. ಅದರ ಹಾಗೆ ಹೋಗುತ್ತದೆ. ಬಡವರು ಉಪಯೋಗಿಸತಕ್ಕಂಥದ್ದು ಜೋಳ ಮತ್ತು ರಾಗಿ, ಅದಕ್ಕೂ ಕೂಡ ಸಬ್ಸಿಡಿಯನ್ನು ಎಕ್ಸ್‌ಟೆಂಡ್ ಮಾಡಬೇಕು, ಮತ್ತು ಅದನ್ನೂ ಕೂಡ ಪಡಿತರ ವ್ಯವಸ್ಥೆಯಲ್ಲಿ ಮತ್ತು ಸಬ್ಸಿಡಿಯೊಳಗೆ ತರಬೇಕು ಎಂಬುದನ್ನು ನಾನು ಈಗಾಗಲೇ ಹೇಳಿದ್ದೇನೆ. ಮುಖ್ಯಮಂತ್ರಿಗಳೂ ಸಹ ಉತ್ತರ ಕೊಡತಕ್ಕಂಥ ಕಾಲದಲ್ಲಿ ಅದನ್ನು ಅವರು ಹೇಳಬೇಕು, ನಮ್ಮ ಸರ್ಕಾರ ಮಾಡಬೇಕು ಎಂದು ನಮ್ಮ ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ.

ಮತ್ತೊಂದು ವಿಚಾರ ಏನೆಂದರೆ, ನಾನು ಟ್ರಾನ್ಸ್‌ಫರ್ ಬಗ್ಗೆ ಪ್ರಸ್ತಾಪ ಮಾಡಿದ್ದೇನೆ. ಇದು ಬಹಳ ಪ್ರಾಮುಖ್ಯವಾದುದು. ನಮ್ಮ ಈಗಿನ ಸರ್ಕಾರಕ್ಕೆ ಈ ಟ್ರಾನ್ಸ್‌ಫರ್‌ಗಳು ಒಂದು ಸವಾಲಾಗಿವೆ. ಎಲ್ಲಾ ಮಂತ್ರಿಗಳಿಗೂ ಕಾನೂನಿನ ಚೌಕಟ್ಟಿನೊಳಗೆ ಅವರವರ ಕೆಲಸ ಮಾಡುವುದು ಇದ್ದೇ ಇರುತ್ತದೆ. ವರ್ಗಾವಣೆಯನ್ನು ಒಂದು ನೀತಿಯ ಆಧಾರದ ಮೇಲೆ ಮಾಡಬೇಕು. ಆ ರೀತಿ ನೀತಿಯ ಆಧಾರದ ಮೇಲೆ ವರ್ಗಾವಣೆ ಆಗದೇ ಹೋದರೆ ಸರ್ಕಾರಕ್ಕೆ ಬಹಳ ತೊಂದರೆಯಾಗುತ್ತದೆ. ಎಂಥೆಂಥ ಮುಖ್ಯಮಂತ್ರಿಗಳು ಈ ವಿಷಯದಲ್ಲಿ ಎಡವಿದ್ದಾರೆ. ಮಾನ್ಯ ವೀರೇಂದ್ರ ಪಾಟೀಲ್‌ರಂತಹವರೇ ಈ ವರ್ಗಾವಣೆ ವಿಷಯದಲ್ಲಿ ಸರ್ಕಾರದ ವೈಫಲ್ಯತೆ ಬಗ್ಗೆ ಬಹಿರಂಗವಾಗಿ ಕ್ಷಮಾಪಣೆ ಕೇಳಿದ್ದಾರೆ. ನನಗೆ ತಿಳಿದಂತೆ ಅವರು ಒಬ್ಬ ಉತ್ತಮ ಆಡಳಿತಗಾರರು. ಅಂತಹವರೇ ಟ್ರಾನ್ಸ್‌ಫರ್ ವಿಚಾರದಲ್ಲಿ ತಮ್ಮ ಸರ್ಕಾರದ ವೈಪಲ್ಯದ ಬಗ್ಗೆ ಜನತೆಯ ಕ್ಷಮಾಪಣೆ ಕೇಳಿದರು. ಈ ಮಾತನ್ನು ನಾನು ಏಕೆ ಹೇಳುತ್ತಿದ್ದೇನೆ ಎಂದರೆ ಈ ಅಧಿವೇಶನ ಮುಗಿದ ನಂತರ ವರ್ಗಾವಣೆ ಸಮಯ ಶುರುವಾಗುತ್ತದೆ. ಶಾಸಕರಿಗೆ ಗೌರವ ನೀಡಬೇಕು ನಿಜ. ಶಾಸಕರ ಅಭಿಪ್ರಾಯವನ್ನು ಅಧಿಕಾರಿಗಳು ಪಾಲಿಸಲೇಬೇಕು. ಇದು ನಮ್ಮ ಪ್ರಜಾಪ್ರಭುತ್ವದಲ್ಲಿ ಇರತಕ್ಕ ಒಂದು ನೀತಿ ಸಂಹಿತೆ. ತಾಲ್ಲೂಕು ಮತ್ತು ಜಿಲ್ಲಾ ಮಟ್ಟದ ವರ್ಗಾವಣೆಗಳನ್ನು ಸ್ಥಳೀಯವಾಗಿ ಆಲೋಚನೆ ಮಾಡಿ ಮಾಡಬೇಕು. ರಾಜ್ಯಮಟ್ಟದ ವರ್ಗಾವಣೆಗಳು ಮಾತ್ರ ಬಹಳ ಕಟ್ಟುನಿಟ್ಟಾಗಿ ಮಾಡಬೇಕು. ಇವತ್ತು ಎಷ್ಟೋ ಜನ ಐ.ಎ.ಎಸ್. ಹಾಗೂ ಐ.ಪಿ.ಎಸ್. ಅಧಿಕಾರಿಗಳು ಬೆಂಗಳೂರು ಬಿಟ್ಟು ಹೊರಗೆ ಹೋಗಿಲ್ಲ.ಎಲ್ಲಿ ಫಲವತ್ತಾದ ಸ್ಥಳ ಇದೆ, ಎಲ್ಲಿ ಹಣ ಮಾಡಲಿಕ್ಕೆ ಸಾಧ್ಯವಾಗುತ್ತದೆ, ಎಲ್ಲಿ ಸರ್ಕಾರಕ್ಕೆ ಕೆಟ್ಟ ಹೆಸರು ತರಲಿಕ್ಕೆ ಸಾಧ್ಯವಾಗುತ್ತದೆ ಎಲ್ಲಿ ಸರ್ಕಾರದ ಕಾರ್ಯಕ್ರಮಗಳ ಸ್ವರೂಪವನ್ನು ಬದಲಾವಣೆ ಮಾಡಲಿಕ್ಕೆ ಸಾಧ್ಯವಾಗುತ್ತದೆ ಅಂತಹ ಕಡೆಗೇ ಕೆಲವು ಅಧಿಕಾರಿಗಳು ಹೋಗುತ್ತಾರೆ.

ನಾನು ಎಲ್ಲಾ ಸರ್ಕಾರಗಳ ಆಡಳಿತವನ್ನೂ ನೋಡುತಾ ಬಂದಿದ್ದೇನೆ. ಏಳೆಂಟು ಜನ ಮುಖ್ಯಮಂತ್ರಿಗಳನ್ನು ನೋಡಿದ್ದೇನೆ. 10-12 ವರ್ಷಗಳಿಂದ ಇಲ್ಲಿ ಭಾಷಣ ಮಾಡುತ್ತಾ ಬರುತ್ತಿದ್ದೇನೆ. ನಮ್ಮ ದೇವೇಗೌಡರ ಸರ್ಕಾರ ಇಂತಹ ಐ.ಎ.ಎಸ್. ಅಧಿಕಾರಿಗಳನ್ನು ಕಂಟ್ರೋಲ್‌ನಲ್ಲಿ ಇಡಬೇಕು. ಯಾರು ಭ್ರಷ್ಟ ಅಧಿಕಾರಿಗಳಿದ್ದಾರೆ. ಯಾರು ಐ.ಎ.ಎಸ್. ಮತ್ತು ಐ.ಪಿ.ಎಸ್. ಅಧಿಕಾರಿಗಳಿದ್ದಾರೆ ಯಾರು ಕೋಟಿಗಟ್ಟಲೆ ಹಣ ಲೂಟಿ ಮಾಡಿ ಸರ್ಕಾರದ ಬೊಕ್ಕಸಕ್ಕೆ ಅನ್ಯಾಯ ಮಾಡಿದ್ದಾರೆ ಅಂತಹ ಜನಕ್ಕೆ ನಮ್ಮ ದೇವೇಗೌಡರ ನೇತೃತ್ವದ ಜನತಾದಳ ಸರ್ಕಾರ ಕಡಿವಾಣ ಹಾಕಲೇಬೇಕು. ನಿರ್ಧಾಕ್ಷಿಣ್ಯವಾಗಿ ಅಂತಹ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಲೇಬೇಕು. ಇದುವರೆಗೂ ಯಾವ ಭ್ರಷ್ಟ ಅಧಿಕಾರಿಯನ್ನು ನಾವು ಮನೆಗೆ ಕಳುಹಿಸಿಲ್ಲ. ನಾನು ಮತ್ತು ನನ್ನ ಸ್ನೇಹಿತರು ಮಾತನಾಡುವಾಗ ಈ ವಿಚಾರ ಪ್ರಸ್ತಾಪಕ್ಕೆ ಬಂದಿತು. ಲೋಕಪಾಲ್ ಕಾಯ್ದೆ ಬಂತು, ಲೋಕಾಯುಕ್ತ ಬಂತು. ವಿಜಲೆನ್ಸ್ ಬಂತು ಆಂಟಿ ಕರಪ್ಷನ್ ಆಕ್ಟ್ ಬಂತು. ಕ್ರಿಮಿನಲ್ ಕೋಡ್ ಬಂತು. ಇಷ್ಟೆಲ್ಲಾ ವ್ಯವಸ್ಥೆಗಳಿದ್ದರೂ ಕಳೆದ 48 ವರ್ಷಗಳ ರಾಜ್ಯಭಾರದಲ್ಲಿ ಯಾವ ಒಬ್ಬ ಭ್ರಷ್ಮ ಅಧಿಕಾರಿಯನ್ನೂ ಕೂಡ ನಾವು ಜೈಲಿಗೆ ಕಳುಹಿಸಲಿಕ್ಕೆ ಸಾಧ್ಯವಾಗಿಲ್ಲ. ಇದು ನಮ್ಮ ರಾಜ್ಯದ ಆಡಲಿತದಲ್ಲಿ

ನಮ್ಮ ರಾಷ್ಟ್ರದ ಆಡಳಿತದಲ್ಲಿ ಒಂದು ಲೋಪ ಎಂದು ಹೇಳುತ್ತೇನೆ. ಇದು ಒಬ್ಬ ರೈತನ ಮಗನ ಸರ್ಕಾರ ಎಂದು ನಮಗೆ ಹೆಮ್ಮೆ ಇದೆ. ಯಾರು ಮಣ್ಣಿನಲ್ಲಿ ಹುಟ್ಟಿ, ಮಣ್ಣಿನಲ್ಲಿ ಬೆಳೆದು ಆಕಾಶ ನೋಡಿ ಬದುಕಿ ಬೆವರು ಸುರಿಸಿಕೊಂಡು ಬಂದಿದ್ದಾರೋ, ಅಂತಹವರು ಇವತ್ತು ಇಲ್ಲಿ ಮುಖ್ಯಮಂತ್ರಿಗಳಾಗಿದ್ದಾರೆ. ಅಂತಹವರಿಂದ ಜನ ಬಹಳಷ್ಟು ನಿರೀಕ್ಷೆ ಮಾಡುತ್ತಿದ್ದಾರೆ. ಹಳ್ಳಿಗಾಡಿನ ಬಡವರು ಸರ್ಕಾರದಿಂದ ಹೆಚ್ಚಿನ ನಿರೀಕ್ಷೆಯನ್ನು ಇಟ್ಟುಕೊಂಡಿದ್ದಾರೆ. ಹಳ್ಳಿಗಾಡಿನ ಬಡವರು ರೈಲು ನೋಡಿಲ್ಲ, ಬಸ್ಸು ನೋಡಿಲ್ಲ, ವಿಮಾನ ನೋಡಿಲ್ಲ, ಒಂದು ಸಾವಿರ ರೂಪಾಯಿ ನೋಟು ನೋಡದಂತಹ ಜನ ಇವತ್ತು ನಮ್ಮ ರಾಷ್ಟ್ರದಲ್ಲಿದ್ದಾರೆ.

ಶ್ರೀ. ಎಸ್.ಆರ್. ಲಕ್ಷ್ಮಯ್ಯ : ಎಷ್ಟೋ ಜನ ಇವತ್ತು ಪೋಸ್ಟ್ ಆಫೀಸ್ ಅನ್ನೂ ಕೂಡ ನೋಡಿಲ್ಲ.

ಶ್ರೀ ಕೆ.ಎನ್. ನಾಗೇಗೌಡ : ಅಂತಹ ಜನರಿಗೆ ಇವತ್ತು ನ್ಯಾಯ ದೊರಕಲೇಬೇಕು. ಜನರು ನಿರೀಕ್ಷೆ ಮಾಡುತ್ತಿರುವ ಹಳ್ಳಿಗಾಡಿನ ಜನರ ಆಡಳಿತ ಗ್ರಾಮೀಣ ಜನರ ಆಡಳಿತವನ್ನು ಕೊಡಬೇಕಾದರೆ ಮಾನ್ಯ ಮುಖ್ಯಮಂತ್ರಿಯವರು ಮೊದಲಿಗೆ ವಿಧಾನ ಸೌಧದಲ್ಲಿರುವ 1ನೇ, 2ನೇ ಮತ್ತು 3ನೇ ಮಹಡಿಯಲ್ಲಿರುವ ಆಡಳಿತವನ್ನು ಬಿಗಿ ಮಾಡಬೇಕು.

ಶ್ರೀ ವಾಟಾಳ್ ನಾಗರಾಜ್ : ಒಂದನೆಯ ಮಹಡಿಯಲ್ಲಿ ಮಂತ್ರಿಗಳು ಯಾರೂ ಇಲ್ಲ.

ಶ್ರೀ ಕೆ.ಎನ್. ನಾಗೇಗೌಡ : ಒಂದನೇ ಮಹಡಿಯಲ್ಲಿ ಕೆಲವರು ಅಧೀನ ಕಾರ್ಯದರ್ಶಿಗಳು ಮತ್ತು ಕಾರ್ಯದರ್ಶಿಗಳು ಇದ್ದಾರೆ. ಆದುದರಿಂದ ಮಾನ್ಯ ಮುಖ್ಯಮಂತ್ರಿಯವರು ಮೊದಲು ಇಲ್ಲಿ ಆಡಳಿತ ಬಿಗಿ ಮಾಡಬೇಕು. ನಾನು ಮಂತ್ರಿಗಳಿಗೆ ಒಂದು ಸಲಹೆ ಕೊಡುತ್ತೇನೆ. ಯಾವುದೇ ಅಧಿಕಾರಿ ಮಂತ್ರಿಗಳ ಅನುಮತಿ ಇಲ್ಲದೇ ಅವರ ಛೇಂಬರ್‌ಗೆ ಬರದಂತೆ ಮಾಡಬೇಕು. ಯಾವುದೇ ಸರ್ಕಾರಿ ಅಧಿಕಾರಿ ಮಂತ್ರಿಗಳ ಅನುಮತಿ ಇಲ್ಲದೇ, ಅವರ ಇಂಟರ್‌ವ್ಯೂ ಇಲ್ಲದೇ ಅವರಿಗೆ ಸೀಮಿತವಾದ ವ್ಯವಸ್ಥೆಯಲ್ಲಿ ಮಂತ್ರಿಗಳ ಛೇಂಬರ್‌ಗೆ ಹೋಗಬಾರದು ಎನ್ನತಕ್ಕ ಒಂದು ನೀತಿ ಸಂಹಿತೆಯನ್ನು ನಮ್ಮ ಮಾನ್ಯ ಮುಖ್ಯಮಂತ್ರಿಗಳು ರೂಪಿಸಬೇಕು.

ಒಬ್ಬ ಮಂತ್ರಿಗಳ ಹತ್ತಿರ ಜೂನಿಯರ್ ಇಂಜಿನಿಯರ್ ಆಗಲೀ, ವಿಲೇಜ್ ಅಕೌಂಟೆಂಟ್ ಆಗಲೀ ಹೋಗಿ ನಿಲ್ಲುವುದು ತಪ್ಪಬೇಕು. ಮಂತ್ರಿಗಳ ಮುಂದೆ ಬೀಡಿ, ಸಿಗರೇಟ್ ಸೇದತಕ್ಕದ್ದು ನಿಲ್ಲಬೇಕು. ನಮ್ಮ ದೇವೇಗೌಡರ ಕಾಲದಲ್ಲಾದರೂ ಇದು ನಿಲ್ಲಬೇಕು. ನಾನು ಮಂತ್ರಿ ಆಗಿದ್ದಾಗ ಯಾವುದೇ ಕಾರಣಕ್ಕೆ ಯಾವುದೇ ಸಂದರ್ಭದಲ್ಲಿ ಯಾವ ಅಧಿಕಾರಿಯೂ ಮಿನಿಸ್ಟರ್ ಛೇಂಬರ್‌ಗೆ ಬರಕೂಡದೆಂಬ ಒಂದು ಮಾತನ್ನು ಹೇಳಿದ್ದೆ. ಇಲಾಖೆಯ ಡೈರೆಕ್ಟರ್ಸ್ ಸೆಕ್ರೆಟರಿಗಳು ಕೆಲಸ ಇದ್ದರೆ ಮಾತ್ರ ಮಂತ್ರಿಗಳ ಛೇಂಬರ್‌ಗೆ ಬರಬೇಕು. ಟ್ರಾನ್ಸ್‌ಫರ್ ಅವಧಿಯಲ್ಲಿ ಎಲ್ಲರನ್ನೂ ಕರೆದುಕೊಂಡು ಬಂದು ಮಂತ್ರಿಗಳ ಛೇಂಬರ್‌ನಲ್ಲಿ ನಿಲ್ಲಿಸಿ ಬಿಡುತ್ತಾರೆ. ದಯವಿಟ್ಟು ಅಧಿಕಾರಿಗಳು ವಿಧಾನಸೌಧ ಮೆಟ್ಟಿಲನ್ನು ಹತ್ತದಂತೆ ಮಾಡಬೇಕು. ಮಂತ್ರಿಗಳ ಛೇಂಬರ್‌ಗೆ ಅಧಿಕಾರಿಗಳು ಹೋಗದಂತೆ ಮಾಡಬೇಕು. ಅಧಿಕಾರಿಗಳು ಯಾವ ಸ್ಥಳದಲ್ಲಿರಬೇಕೋ ಅಲ್ಲಿರಬೇಕು. ವರ್ಗಾವಣಾ ನೀತಿಯನ್ವಯವೇ ವರ್ಗಾವಣೆಗಳು ನಡೆಯಬೇಕು.

ಅಧ್ಯಕ್ಷರು : ನಾಗೇಗೌಡರೇ ಒಂದು ನಿಮಿಷ. ಶ್ರೀಮತಿ ಪ್ರಮೀಳರವರು ಏನೋ ಹೇಳುತ್ತಾರೆ.

ಶ್ರೀಮತಿ ಪ್ರಮೀಳ ನೇಸರ್ಗಿ : ಬೆಳಿಗ್ಗೆಯಿಂದ ಬರೀ ಟ್ರಾನ್ಸ್‌ಫರ್ ವಿಷಯದ ಬಗ್ಗೆ ಕೇಳಿ ಕೇಳಿ ಸಾಕಾಯಿತು. ಇನ್ನೇನಾದರೂ ವಿಷಯ ಇದ್ದರೆ ಹೇಳಿ.

ಶ್ರೀ ಕೆ.ಎನ್. ನಾಗೇಗೌಡ : ನಾನು ಬೇರೆ ವಿಷಯಕ್ಕೆ ಬರುತ್ತೇನೆ. ಏಕೆ ಇಷ್ಟೊಂದು ಆತುರ ಮಾಡುತ್ತೀರಿ? ನನಗೆ ಮಾತನಾಡಲು ಇನ್ನೂ ಸಾಕಷ್ಟು ಸಮಯ ಇದೆ. ವರ್ಗಾವಣೆ ಬಹಳ ಪ್ರಾಮುಖ್ಯವಾದಂತಹ ವಿಚಾರ.

ಶ್ರೀಮತಿ ಪ್ರಮೀಳ ನೇಸರ್ಗಿ : ಮಾನ್ಯ ಖರ್ಗೆಯವರು ಏನು ಹೇಳುತ್ತಿದ್ದಾರೆ ಎಂದರೆ, ತಾವು ಈ ಕಡೆಯಿಂದ ಆ ಕಡೆಗೆ ವರ್ಗ ಆಗಿ ಹೋದ ಮೇಲೆ ಬರೀ ಟ್ರಾನ್ಸ್‌ಫರ್ ವಿಚಾರವನ್ನೇ ಮಾತನಾಡುತ್ತಿದ್ದೀರಿ. ಅದು ಬಿಟ್ಟು ಬೇರೆ ವಿಷಯ ಚರ್ಚೆ ಮಾಡುತ್ತಿಲ್ಲ ಎನ್ನುತ್ತಿದ್ದಾರೆ.

ಶ್ರೀ ಕೆ.ಎನ್. ನಾಗೇಗೌಡ : ನಾನು ಇನ್ನೂ ಬಹಳಷ್ಟು ವಿಚಾರಗಳ ಬಗ್ಗೆ ಮಾತನಾಡುವುದಿದೆ. ಇನ್ನೂ ಸಮಯ ಸಾಕಷ್ಟು ಇದೆ. ತಾವು ಆತುರ ಮಾಡಬೇಡಿ. ನೀತಿಯ ಆಧಾರದ ಮೇಲೆ ಒಂದು ಟ್ರಾನ್ಸಫರ್ ಪಾಲಿಸಿಯನ್ನು ತರಬೇಕು ಎನ್ನತಕ್ಕ ಒಂದು ಸಲಹೆಯನ್ನು ನಾನು ಸರ್ಕಕಾರಕ್ಕೆ ಮಾಡುತ್ತೇನೆ. ಮತ್ತೊಂದು ಸಲಹೆ ಏನೆಂದರೆ ಮಾನ್ಯ ಖರ್ಗೆಯವರು ಮಾತನಾಡುತ್ತಾ ಸಹಕಾರ ಇಲಾಖೆಯಲ್ಲಿ ನಮ್ಮ ರೈತರಿಗೆ ಏನು ಬಡ್ಡಿ ಮನ್ನಾ ಮಾಡಿದ್ದಾರೆ ಆ ವಿಚಾರದ ಬಗ್ಗೆ ಪ್ರಸ್ತಾಪ ಮಾಡಿದರು. ಬಹುಶಃ ಅವರು ಹೇಳುತ್ತಿದ್ದ ಮಾತು ಅರ್ಧಕ್ಕೆ ನಿಂತು ಹೋಯಿತು. ಬಡ್ಡಿ ಮನ್ನಾ ಸವಲತ್ತು ಪಡೆಯಲು ನಿಗದಿಪಡಿಸಿದ ಮಾರ್ಚ್ 31ರವರೆಗಿನ ಅವಧಿಯು ಈಗ ಮುಗಿದು ಹೋಗಿದೆ. ಬಡ್ಡಿ ಮನ್ನಾ ಅಥವಾ ರಿಯಾಯಿತಿಯ ಕಾರಣದಿಂದಾಗಿ ಉಂಟಾಗುವ ಕೊರತೆಯನ್ನು ಭರಿಸಲು ಸರ್ಕಾರ ಮೀಸಲಾಗಿಟ್ಟಿರುವ 100ಕೋಟಿ ರೂಪಾಯಿಗಳಲ್ಲಿ ಎಷ್ಟು ಕೋಟಿ ಹಣವನ್ನು ರೈತರು ಪರಿಹಾರದ ಹಣವಾಗಿ ಉಪಯೋಗಿಸಿಕೊಂಡಿದ್ದಾರೆ ಎನ್ನುವ ಮಾತನ್ನು ಮಾನ್ಯ ಖರ್ಗೆಯವರು ಕೇಳಿದರು. ಈ ಅವಧಿ ಮುಗಿದ ಮೇಲೆ ಮತ್ತೆ ಎಷ್ಟು ಜನ ರೈತರು ಎಷ್ಟು ಕೋಟಿ ಹಣವನ್ನು ಉಪಯೋಗಿಸಿಕೊಂಡಿದ್ದಾರೋ ಗೊತ್ತಿಲ್ಲ. ನಾನು ನನ್ನ ಬಡ್ಜೆಟ್ ಭಾಷಣದ ಪ್ರಾರಂಭದಲ್ಲೇ ಒಂದು ಮಾತನ್ನು ಹೇಳಿದ್ದೇನೆ. ಇವತ್ತು ಮಾನ್ಯ ಮುಖ್ಯಮಂತ್ರಿಗಳು ಇಲ್ಲೇ ಇದ್ದಾರೆ. ಅವರಲ್ಲಿ ನಾನು ಒಂದು ಮನವಿ ಮಾಡಿಕೊಳ್ಳಲಿಕ್ಕೆ ಇಚ್ಛಿಸುತ್ತಿದ್ದೇನೆ. ಏನು ಬಡ್ಡಿ ಮನ್ನಾ ಮಾಡಲಿಕ್ಕೆ ಮಾರ್ಚ್ 31ರ ಗಡುವನ್ನು ಸರ್ಕಾರ ನಿಗದಿಪಡಿಸಿದೆ. ನಬಾರ್ಡ್‌ನವರು ಒಪ್ಪಲಿ, ಒಪ್ಪದೇ ಹೋಗಲಿ. ಇದೊಂದು ಪೊಲಿಟಿಕಲ್ ವಿಲ್. ಜವಾಬ್ದಾರಿ ಇರತಕ್ಕ ಸರ್ಕಾರ ತೆಗೆದುಕೊಂಡಿರತಕ್ಕ ಒಂದು ತೀರ್ಮಾನ. ರೈತರಿಗೋಸ್ಕರ ಕೈಗೊಂಡಿರತಕ್ಕ ಒಂದು ತೀರ್ಮಾನ. ಈ ಮಾರ್ಚ್ 31ರ ಅವಧಿಯ ಗಡುವನ್ನು ಇನ್ನೂ ಮೂರು ತಿಂಗಲ ಕಾಲ ವಿಸ್ತರಿಸಬೇಕೆಂದು ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ. ಮಾರ್ಚ್ 31ರವರೆಗೆ ಗಡುವು ನಿಗದಿಪಡಿಸಿರುವ ಬಡ್ಡಿ ಮನ್ನಾ ಮಾಡುವ ಸೌಲಭ್ಯವನ್ನು ಉಪಯೋಗಿಸಿಕೊಳ್ಳುವ ಸಲುವಾಗಿ ದಯವಿಟ್ಟು ಇನ್ನೂ ಮೂರು ತಿಂಗಳ ಕಾಲ ಅದನ್ನು ವಿಸ್ತರಿಸಬೇಕು.

ನಮ್ಮ ಸರ್ಕಾರ ರೈತರ ಪರವಾಗಿ ಇದೆ ಎಂದು ತೋರಿಸಬೇಕಾದರೆ ಈ ಅವಧಿಯನ್ನು ಮಾನ್ಯ ಮುಖ್ಯಮಂತ್ರಿಗಳು ವಿಸ್ತರಿಸಲೇಬೇಕು. ನಬಾರ್ಡ್‌ನಲ್ಲಿಯ ಹಣ ಬೇರೆಯವರದ್ದೇನೂ ಅಲ್ಲ. ಜನಗಳ ದುಡ್ಡು ಬ್ಯಾಂಕುಗಳಲ್ಲಿರುವುದು. ರಿಸರ್ವ್ ಬ್ಯಾಂಕಿನಲ್ಲಿರುವುದೂ ಜನಗಳ ಹಣ. ರಾಜ್ಯ ಸರ್ಕಾರ ಹಣ ಪ್ರಿಂಟ್ ಮಾಡುವುದಿಲ್ಲ. ಕೇಂದ್ರ ಸರ್ಕಾರ ಹಣ ಪ್ರಿಂಟ್ ಮಾಡುವುದಿಲ್ಲ. ಹಣ ಪ್ರಿಂಟ್ ಮಾಡುವಂಥಾದ್ದು ರಿಸರ್ವ್ ಬ್ಯಾಂಕ್. ಬ್ಯಾಂಕಿನಲ್ಲಿ ಯಾವ ಹಣ ಇದೆ ಅದು ಸಾರ್ವಜನಿಕರ ಹಣ.

ನಮ್ಮ ಸಾರ್ವಜನಿಕರಿಗೋಸ್ಕರ ಉಪಯೋಗಿಸತಕ್ಕ ಹಣ. ಅದು ನಮ್ಮ ಆರ್ಥಿಕ ನೀತಿ. ನಮ್ಮ ಆರ್ಥಿಕ ನೀತಿಯನ್ನು ನಾವು ಮೊದಲಿನಿಂದಲೂ ರೂಪಿಸಿಕೊಂಡು ಬಂದಿದ್ದೇವೆ. ರಾಜ್ಯ ಸರ್ಕಾರಕ್ಕೆ ಹಣ ಪ್ರಿಂಟ್ ಮಾಡುವುದಕ್ಕೆ ಅಧಿಕಾರ ಇದ್ದಿದ್ದರೆ ನಬಾರ್ಡ್‌ಗೆ ಕೇಳುತ್ತಾ ಇರಲಿಲ್ಲ. ನಮ್ಮ ಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರಿಗೆ ಹಣ ಪ್ರಿಂಟ್ ಮಾಡುವಂತಹ ಅಧಿಕಾರ ಇಲ್ಲ. ದಯವಿಟ್ಟು ರೈತರಿಗೋಸ್ಕರ ಬಡ್ಡಿ ಮನ್ನಾ ಪಡೆಯಲು ಇರುವ ಗಡುವನ್ನು ತಾವು ಇನ್ನೂ 2-3 ತಿಂಗಳುಗಳ ಕಾಲ ವಿಸ್ತರಿಸಬೇಕು. ಏಕೆಂದರೆ ಈಗ ತಾನೇ ರೈತರು ಭತ್ತ, ಕಬ್ಬು ಕಟಾವು ಮಾಡುತ್ತಿದ್ದಾರೆ. ರೈತರಿಗೆ ಈ ಅವಧಿ ವಿಸ್ತರಣೆ ತುರ್ತಾಗಿ ಆಗಬೇಕಾಗಿದೆ. ತುರ್ತಾಗಿ ಹಣ ಕಟ್ಟಲಿಕ್ಕೆ ಅವರಿಗೆ ಹಣ ಸಿಗುತ್ತಿಲ್ಲ.

ಆದುದರಿಂದ ಕನಿಷ್ಠ ಪಕ್ಷ ಇನ್ನು 2-3 ತಿಂಗಳುಗಳ ಕಾಲವಾದರೂ ಬಡ್ಡಿ ಮನ್ನಾ ಸೌಲಭ್ಯ ಪಡೆಯಲು ಇರುವ ಗಡುವನ್ನು ವಿಸ್ತರಿಸಬೇಕೆಂದು ನಾನ ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಯಪೂರ್ವಕವಾಗಿ ಕೇಳಿಕೊಳ್ಳುತ್ತೇನೆ. ರೈತರ ಬಳಿ ಹಣ ಇದ್ದರೆ ಅವರು ಕೂಡಲೇ ಪಾವತಿ ಮಾಡುತ್ತಾರೆ. ರೈತರು ಕಳ್ಳರೇನೂ ಅಲ್ಲ, ಅವರು ಸಾಲಗಾರರಾಗಿ ಸಾಯುವುದಿಲ್ಲ. ರೈತ ಬೆವರು ಸುರಿಸಿಕೊಂಡು ಬದುಕುವವನು. ಅವನಿಗೋಸ್ಕರ ಆದರೂ ಯಾವ ನಬಾರ್ಡ್ ಈ ಬಡ್ಡಿ ಮನ್ನಾಕ್ಕೆ ಅಡ್ಡಿ ಬಂದರೂ, ಎಲ್ಲಾ ರಾಜಕೀಯ ಪಕ್ಷಗಳೂ ಹೋಗಿ ಕೇಂದ್ರದ ಅರ್ಥ ಮಂತ್ರಿಗಳನ್ನು ನೋಡಿ, ಪ್ರಧಾನ ಮಂತ್ರಿಗಳನ್ನು ನೋಡಿ ಈ ಬಗ್ಗೆ ಒತ್ತಾಯ ಮಾಡೋಣ. ಇವತ್ತು ತಾವು ರೈತರ ಮಗ ಎಂದು ಏನು ಅನಿಸಿಕೊಂಡಿದ್ದೀರಿ, ಆ ರೈತರ ಮಗನ ಸರ್ಕಾರಕ್ಕೆ ಒಂದು ಗೌರವ ಬರಬೇಕಾದರೆ ದಯವಿಟ್ಟು ಇನ್ನೂ 2-3 ತಿಂಗಳುಗಳ ಕಾಲ ಬಡ್ಡಿ ಮನ್ನಾ ಸೌಲಭ್ಯ ಪಡೆಯಲು ಇರುವ ಗಡುವನ್ನು ವಿಸ್ತರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, ಒಂದು ಮಾತನ್ನು ನಾನು ಹೇಳಲಿಕ್ಕೆ ಇಚ್ಛೆ ಪಡುತ್ತೇನೆ. ಈ ವಿಷಯದ ಬಗ್ಗೆ ಈಗಾಗಲೇ ಅನೇಕ ತರ್ಕ, ವಿತರ್ಕ ನಡೆಯುತ್ತಿದೆ. ನನ್ನ ಸಹೋದ್ಯೋಗಿಗಳಾದ ಆರ್ಥಿಕ ಸಚಿವರಾದ ಶ್ರೀಮಾನ್ ಸಿದ್ಧರಾಮಯ್ಯನವರು 1995-96ನೇ ಸಾಲಿನ ಆಯವ್ಯಯದ ಮೇಲೆ ಚರ್ಚೆ ನಡೆದಂತಹ ಕಾಲದಲ್ಲಿ ದಿನಾಂಕ 30ನೇ ಮಾರ್ಚ್ 1995ರಂದು ಸದನದಲ್ಲಿ ಉತ್ತರ ಹೇಳಿದ್ದಾರೆ. ನಾನು ಅವತ್ತೇ ಸರ್ಕಾರದ ನಿಲುವನ್ನು ಹೇಳಬೇಕು ಎನ್ನುವುದು ನನ್ನ ಮನಸ್ಸಿನಲ್ಲಿತ್ತು. ಆದರೆ ಇನ್ನೂ $1\frac{1}{2}$ ದಿನಗಳಲ್ಲಿ ಎಷ್ಟು ಮಂದಿ ರೈತ ಬಾಂಧವರು ಇದರಿಂದ ಪ್ರಯೋಜನ ಪಡೆಯುತ್ತಾರೋ ನೋಡೋಣ ಎಂದು ಭಾವಿಸಿ ಸರ್ಕಾರದ ನಿಲುವನ್ನು ಪ್ರಕಟಿಸಲಿಲ್ಲ. ಮತ್ತೆ ಮೂರು ದಿನಗಳಲ್ಲಿ ಸದನದಲ್ಲಿ ಇದೇ ವಿಷಯವಾಗಿ ಚರ್ಚೆಯಾಗಿದೆ. ಇವತ್ತು ಇನ್ನೂ 3ನೇ ತಾರೀಖು. ರಾಜ್ಯಪಾಲರ ಭಾಷಣದ ಮೇಲೆ ಅಂತಿಮವಾಗಿ ಉತ್ತರವನ್ನು ದಿನಾಂಕ 5 ಅಥವಾ 6 ರಂದು ಅಥವಾ ಯಾವ ದಿನ ಎಂದು ತಾವು ನಿರ್ಣಯ ಮಾಡುತ್ತೀರೋ, ಈ ಸದನ ತೀರ್ಮಾನ ಮಾಡುತ್ತದೆಯೋ ಅವತ್ತು ಕೊಡಬೇಕಾಗಿದೆ. ಉತ್ತರ ಕೊಡುವುದು ಇನ್ನೂ ಎರಡು ಮೂರು ಮುಂದಕ್ಕೆ ಹೋಗುವುದರಿಂದ, ಸರ್ಕಾರ ಈಗಾಗಲೇ ಈ ಬಗ್ಗೆ ಚರ್ಚಿಸಿ ಒಂದು ನಿರ್ಣಯ ತೆಗೆದುಕೊಂಡಿದೆ. ರೈತರಿಗೆ ಬಡ್ಡಿ ಮನ್ನಾ ಸೌಲಭ್ಯ ಪಡೆಯಲು ನಿಗದಿಪಡಿಸಿದ ಗಡುವನ್ನು ಮಾರ್ಚ್ 31ರಿಂದ ಇನ್ನೂ ಎರಡು ತಿಂಗಳಕಾಲ ಅಂದರೆ ಮೇ 31ರವರೆಗೆ ಮುಂದುವರೆಸಲಾಗಿದೆ. ಈ ಒಂದು ಸೌಲಭ್ಯವನ್ನು ಮೇ 31ನೇ ತಾರೀಖಿನ ಒಳಗೆ ಅಂದರೆ ಎರಡು ತಿಂಗಳುಗಳ

ಕಾಲ ಮುಂದುವರಿಸಿದ್ದೇವೆ. ಇದರ ಲಾಭವನ್ನು ರಾಜ್ಯದ ರೈತ ಬಾಂಧವರು ಪಡೆದುಕೊಂಡು ಈಗಲಾದರೂ ಅವರು ದಯಮಾಡಿ ಸರ್ಕಾರಕ್ಕೆ ಕಟ್ಟಬೇಕಾದ ಪ್ರಿನ್ಸಿಪಲ್ ಹಣವನ್ನು ಕೊಡುವುದಕ್ಕೆ ಮುಂದಾಗಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಕೆ.ಎನ್. ನಾಗೇಗೌಡ : ಕಾಗೋಡು ತಿಮ್ಮಪ್ಪನವರಿಗೆ ಹೇಳುತ್ತಿದ್ದೇನೆ, ಇದನ್ನೇ ಮಣ್ಣಿನ ಮಗನ ಸರ್ಕಾರ ಎಂದುಹೇಳುವುದು. ಮಣ್ಣಿನ ಮಗನ ಸರ್ಕಾರ ಎಂದರೆ ಇದೆ. ರೈತರ ಮಕ್ಕಳು ಯಾರು ಎಂದರೆ ರೈತರಿಗೆ ಸ್ಪಂದಿಸುವವರು.

ಶ್ರೀಮತಿ ಪ್ರಮೀಳಾ ನೇಸರ್ಗಿ : ಇದನ್ನು ನಮ್ಮ ನಾಯಕರಾದ ಶ್ರೀ ಯಡಿಯೂರಪ್ಪನವರು ಮೂರು ದಿವಸಗಳ ಮುಂಚೆ ಕೇಳಿದ್ದರು. ಅದಕ್ಕೆ ನೀವು ಸ್ಪಂದಿಸಿದ್ದೀರಿ, ನಿಮಗೆ ಅಭಿನಂದನೆಗಳು.

ಶ್ರೀ ಎಸ್.ಆರ್. ಲಕ್ಷ್ಮಣಯ್ಯ : ನೀವು ರೈತರ ಮಕ್ಕಳೇ?

(ಗೊಂದಲ)

ಶ್ರೀಮತಿ ಪ್ರಮೀಳಾ ನೇಸರ್ಗಿ : ಅವರು ಏನು ಹೇಳುತ್ತಾರೆ? ಈ ರೀತಿ ಮಾತನಾಡುವುದು ಸರಿಯಲ್ಲ.

ಶ್ರೀ ವಾಟಾಳ್ ನಾಗರಾಜ್ : ಸ್ವಲ್ಪ ಗೌರವದಿಂದ ಮಾತನಾಡಬೇಕು ಎಂದು ಅವರಿಗೆ ಹೇಳಿ. ಅನಾಗರೀಕ ಪ್ರವೃತ್ತಿ ಇಲ್ಲಿ ಬೇಡ. ಹೆಂಗಸರ ಬಗ್ಗೆ ಏನು ಅವರು ಮಾತನಾಡುತ್ತಿದ್ದಾರೆ?

(ಗೊಂದಲ)

ಶ್ರೀಮತಿ ಪ್ರಮೀಳಾ ನೇಸರ್ಗಿ : ಅವರ ವರ್ತನೆ ಸರಿ ಇಲ್ಲ. ನಿಮಗೆ ಹೆಣ್ಣು ಮಕ್ಕಳು ಇಲ್ಲವೆ?

(ಗೊಂದಲ)

ಅಧ್ಯಕ್ಷರು : ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ನಾನು ನಿಂತಿದ್ದೇನೆ. ಸದಸ್ಯರು ಕಲಾಪ ನಡೆಯತಕ್ಕ ಸಂದರ್ಭದಲ್ಲಿ ಇನ್ನೊಬ್ಬರ ಮನಸ್ಸಿಗೆ ನೋವಾಗತಕ್ಕ ರೀತಿಯಲ್ಲಿ ಇನ್ನೊಬ್ಬರಿಗೆ ಅಗೌರವವಾಗಿ ಕಾಣತಕ್ಕಂಥ ರೀತಿಯಲ್ಲಿ ನಡೆದುಕೊಳ್ಳಬಾರದು. ಆತುರದಲ್ಲಿ ಹೇಳತಕ್ಕದ್ದು ನಿಮ್ಮ ಅಭಿಪ್ರಾಯ ಆಗಿದ್ದರೂ ನೀವು ಆ ರೀತಿ ನಿಂತು ಹಾವ ಭಾವ ತೋರಿಸುವುದು ಸದನಕ್ಕೆ ಗೌರವ, ಶೋಭೆ ತರುವುದಿಲ್ಲ. ದಯಮಾಡಿ ಇನ್ನೊಮ್ಮೆ ಆ ರೀತಿ ಆಗುವುದಕ್ಕೆ ತಾವು ಅವಕಾಶ ಕೊಡಬೇಡಿ. ಇದರ ಬಗ್ಗೆ ಇನ್ನು ಚರ್ಚೆ ಬೇಡ. ಶ್ರೀ ಲಕ್ಷ್ಮಯ್ಯನವರು ತಾವು ಹಿರಿಯರಿದ್ದೀರಿ, ಸದನಕ್ಕೆ ನೀವೇನೂ ಹೊಸಬರಲ್ಲ, ನೀವು ಏನು ಬೇಕಾದರೂ ಹೇಳಬಹುದು ಆದರೆ ನೀವು ಪ್ರತಿಪಾದನೆ ಮಾಡಬೇಕಾದರೆ ನೇರವಾಗಿ ಸದಸ್ಯರನ್ನು "ರೀ" ಎಂದು ಮಾತನಾಡುವುದು ಸರಿಯಲ್ಲ . ನಿಮ್ಮ ಉದ್ದೇಶವನ್ನು ಅರ್ಥಮಾಡಿಕೊಂಡಿದ್ದೇನೆ, ಆದರೆ ಹೇಳತಕ್ಕ ಕಾಲದಲ್ಲಿ, ಆತುರದಲ್ಲಿ ಆ ರೀತಿ ಆಗಿದೆ, ಅದಕ್ಕೆ ಇನ್ನೊಮ್ಮೆ ಅವಕಾಶ ಕೊಡಬೇಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ನಾಗೇಗೌಡರು ಮಾತನಾಡುವಾಗ ಇದೇ ಮಾತನ್ನು ನಾನು ಹೇಳಿದ್ದೆ. ಈಗಾಗಲೇ ನೀವು ಈ ಸುಸ್ತಿ ಬಡ್ಡಿ ಸವಲತ್ತನ್ನು ಕೊಟ್ಟಿದ್ದೀರಿ. ಇದರಿಂದ ಸುಮಾರು 20-30 ಕೋಟಿಗಿಂತ ಹೆಚ್ಚು ಖರ್ಚು ಆಗಿಲ್ಲ. ಯಾರೂ ಕೂಡ ಇದನ್ನು ಉಪಯೋಗ ಮಾಡಿಕೊಂಡಿಲ್ಲ ಎಂದು ಗೊತ್ತಾಗಿದೆ. ಅದಕ್ಕೆ ನೀವು ಮೇ ತಿಂಗಳ ಕೊನೆಯವರೆಗೆ ಇದನ್ನು ಮುಂದುವರಿಸಿ ಎಂದು ನಾನು ಆಗಲೇ ಕೇಳಿದ್ದೆ. ಮುಖ್ಯಮಂತ್ರಿಗಳು ನೇರವಾಗಿ ಅನೌನ್ಸ್ ಮಾಡುವುದನ್ನು

ನೋಡಿದರೆ ಬಹುಶಃ ಅಫೆಕ್ಸ್ ಬ್ಯಾಂಕಿನಲ್ಲಿ ಅವರು ನಿಗದಿ ಪಡಿಸಿದ ಹಣಕ್ಕೂ ಇನ್ನೂ ಜನ ಬಂದಿಲ್ಲ ಎಂಬುದು ಗೊತ್ತಾಗುತ್ತದೆ. 130 ಕೋಟಿ ರೂಪಾಯಿ ಟಾರ್ಗೆಟ್ ಇನ್ನೂ ರೀಚ್ ಆಗಿಲ್ಲ ಎಂದು ಕಾಣುತ್ತದೆ. ಇನ್ನು ಎರಡನೆಯದಾಗಿ, ನಾನು ನಾಳೆ ಇರುವುದಿಲ್ಲ. ಅದಕ್ಕಾಗಿ ತಾವು ಅಪ್ಪಣೆ ಕೊಟ್ಟರೆ ಒಂದೆರಡು ಮಾತುಗಳನ್ನು ಹೇಳುತ್ತೇನೆ. ಒಂದು ಹೇಳಿಕೆಯನ್ನು ಸನ್ಮಾನ್ಯ ಮುಖ್ಯಮಂತ್ರಿಗಳವರು ಮಾಡಬೇಕಾಗಿದೆ. ರಾಯಚೂರು, ಬಳ್ಳಾರಿ ಭಾಗದ ಜನರಿಗೆ ಸಂಬಂಧಪಟ್ಟ ಹಾಗೇ ತುಂಗಭದ್ರಾ ನೀರಿನ ಯೋಜನೆಯ ಬಗ್ಗೆ. ತುಂಗಭದ್ರಾ ನದಿಯ ಒಂದು ಕಾಲುವೆನಲ್ಲಿ ನೀರನ್ನು ಬಿಡುತ್ತಿರುವುದಕ್ಕೆ ರಾಯಚೂರಿನ ಜನ ಬಹಳಷ್ಟು ಗಲಾಟೆ ಮಾಡಿದ್ದಾರೆ. ಏತಕ್ಕೆಂದರೆ ಆಂಧ್ರಕ್ಕೆ ಹೆಚ್ಚಿನ ನೀರನ್ನು ಬಿಟ್ಟರೆ ನಮಗೆ ಎರಡನೆಯ ಬೆಳೆಗೆ ತೊಂದರೆಯಾಗುತ್ತದೆ ಎಂದು ಎಲ್ಲಾ ಜನರು ಹೇಳುತ್ತಿದ್ದಾರೆ. ಸುಮಾರು 3-4 ಎಕರೆಗಳಲ್ಲಿ ಸ್ಟ್ಯಾಂಡಿಂಗ್ ಕ್ರಾಪ್ ಹಾಳಾಗಿ ಹೋಗುತ್ತಿದೆ. ಅದಕ್ಕಾಗಿ ನೀರು ಬಿಡಬಾರದು ಎನ್ನತಕ್ಕದ್ದು ಅವರ ವಾದ ಇದೆ. ಅದೇ ರೀತಿ ಬಳ್ಳಾರಿಯವರದ್ದು ಕೂಡ ಒಂದು ವಾದ ಇದೆ. ಇದರ ಬಗ್ಗೆ ಒಂದು ಹೇಳಿಕೆಯನ್ನು ಸನ್ಮಾನ್ಯ ಮುಖ್ಯಮಂತ್ರಿಗಳು ಮಾಡಬೇಕಾಗಿದೆ. ಅದೇ ರೀತಿ ಜುರಾಲಾ ಸಮಸ್ಯೆ ಇದೆ. ರೀ-ಹ್ಯಾಬಿಲಿಟೇಷನ್ ಸ್ಕೀಮ್ ಏನು ಇದೆ ಅದನ್ನು ಆಂಧ್ರಪ್ರದೇಶದವರು ಇಂಪ್ಲಿಮೆಂಟ್ ಮಾಡುತ್ತಾ ಇಲ್ಲ. ನಮ್ಮ ಪಕ್ಷದ ವರ್ಕಿಂಗ್ ಕಮಿಟಿ ಸಭೆಗೆ 5-6ನೇ ತಾರೀಖು ಹೋಗಿ ನಾನು ಎಲ್ಲಾ ಮುಗಿಸಿಕೊಂಡು ಬರುವ ಹೊತ್ತಿಗೆ ಇಲ್ಲಿ ಎಲ್ಲಾ ಮುಗಿದು ಹೋಗಿರುತ್ತದೆ. ಆದುದರಿಂದ ಇಲ್ಲಿ ಪ್ರಸ್ತಾಪ ಮಾಡುತ್ತಿದ್ದೇನೆ.

ಶ್ರೀ ಹೆಚ್.ಎನ್. ನಂಜೇಗೌಡ : ನಾವು ಒಂದು ನೋಟೀಸ್ ಕೊಟ್ಟಿದ್ದೇವೆ. ಇದರ ಬಗ್ಗೆ ಒಂದೆರಡು ದಿವಸ ಚರ್ಚೆ ಆಗಬೇಕೆಂದು, ಅದಕ್ಕೆ ಸನ್ಮಾನ್ಯ ಮುಖ್ಯಮಂತ್ರಿಗಳೂ ಕೂಡ ಒಪ್ಪಿಕೊಂಡಿದ್ದಾರೆ. ಅದನ್ನು ಕೊನೆಯಲ್ಲಿ ತೆಗೆದುಕೊಳ್ಳೋಣ ಎಂದು ಹೇಳಿದ್ದಾರೆ. We should show our seriousness and interest on those problems. ಇದನ್ನು ಅಲಾಯಿದಾ ತೆಗೆದುಕೊಳ್ಳಬೇಕು. ಅವರು ಬಂದ ಮೇಲೆ ತೆಗೆದುಕೊಳ್ಳೋಣ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲಾ) : ಮಾನ್ಯ ಮುಖ್ಯಮಂತ್ರಿಗಳು ಬಹಳ ಪ್ರಮುಖವಾದ ನಿರ್ಧಾರವನ್ನು ಈ ಸದನದಲ್ಲಿ ಪ್ರಕಟ ಮಾಡಿದ್ದಾರೆ. ಮೇ ಕೊನೆಯವರೆಗೆ ಈ ಒಂದು ಸಾಲವನ್ನು ತುಂಬಲು ಅವಕಾಶ ಮಾಡಿಕೊಟ್ಟಿದ್ದಾರೆ. ಆದರೆ ನಾವು ಇವೊತ್ತು ಇಟ್ಟಿರತಕ್ಕಂಥ ಬೇಡಿಕೆ ಏನು ಎಂದರೆ ಹಾಗೂ ರಾಜ್ಯದ ರೈತರು ಅಪೇಕ್ಷೆ ಇಟ್ಟಿದ್ದು ಏನು ಎಂದರೆ ಇದನ್ನು ಜೂನ್‌ವರೆಗೆ ಮುಂದುವರಿಸಬೇಕೆಂದು. ಇನ್ನೊಂದು ಪ್ರಮುಖವಾದ ಬೇಡಿಕೆ ಏನೂ ಎಂದರೆ ಪಿ.ಎಲ್.ಡಿ. ಮತ್ತು ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ತೆಗೆದುಕೊಂಡವರಿಗೂ ಸಹ ಈ ಸೌಲಭ್ಯ ಸಿಗಬೇಕು. ಆಗ ರಾಜ್ಯದ ರೈತ ಸಮೂಹ ಸನ್ಮಾನ್ಯ ಮುಖ್ಯಮಂತ್ರಿಗಳನ್ನು ಹೊಗಳುತ್ತಾರೆ ಎಂದು ನಾನು ಭಾವಿಸಿದ್ದೇನೆ.

ಶ್ರೀ ಹೆಚ್.ಡಿ. ದೇವೇಗೌಡ : ಇದರ ಬಗ್ಗೆ ಚರ್ಚೆ ಮುಂದುವರಿಯುವುದು ಬೇಡ. ಸದನ ಎಷ್ಟು ದಿವಸ ಕುಳಿತುಕೊಳ್ಳಬೇಕು ಎಂಬ ಬಗ್ಗೆ ಇವೊತ್ತು ನಾಲ್ಕು ಗಂಟೆಗೆ ಸದನದ ಕಾರ್ಯಕಲಾಪಗಳ ಸಲಹಾ ಸಮಿತಿ ಸಭೆಯನ್ನು ತಾವು ಕರೆದಿದ್ದೀರಿ. ಅಲ್ಲಿ ಏನು ತೀರ್ಮಾನ ಆಗುತ್ತದೆ ಅದಕ್ಕೆ ನಾವು ಒಪ್ಪಿಕೊಳ್ಳುತ್ತೇವೆ. ನೀರಾವರಿ ಬಗ್ಗೆ ಚರ್ಚೆ ಮಾಡುವುದರ ಬಗ್ಗೆ ಅಲ್ಲಿ ನಿರ್ಧಾರ ತೆಗೆದುಕೊಳ್ಳಬಹುದು. ಇನ್ನು ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ತೆಗೆದುಕೊಳ್ಳುವರಿಗೆ ನಾವು ಇದನ್ನು ವಿಸ್ತರಣೆ ಮಾಡಲು ಸಾಧ್ಯವಿಲ್ಲ ಎಂಬುದನ್ನು ಸ್ಪಷ್ಟೀಕರಿಸಲು ಇಚ್ಛಿಸುತ್ತೇನೆ. ಕೆಲವು ಪ್ರಾಥಮಿಕ ಸಹಕಾರಿ ಸಂಘಗಳ ಸಾಲ ರಾಷ್ಟ್ರೀಕೃತ ಬ್ಯಾಂಕುಗಳಿಂದ ಕೊಡುವ ವ್ಯವಸ್ಥೆ ಇದೆ. ಆ

ಜ್ಯುರಿಸ್‌ಡಿಕ್ಷನ್‌ನನ್ನು ಬದಲಾವಣೆ ಮಾಡಿ; ಅವರಿಗೆ ಅಟ್ಯಾಚ್ ಮಾಡಿದ್ದಾರೆ; ಕೆಲವು ಕಡೆ ಸೆಂಟ್ರಲ್ ಕೋ-ಆಪರೇಟಿವ್ ಬ್ಯಾಂಕಿನಿಂದ ಕೊಟ್ಟಿದ್ದಾರೆ. ಕೆಲವು ಏರಿಯಾದಲ್ಲಿ primary co-operative society has been attached to the nationalised Banks. ಎಲ್ಲಿ ರೈತರಿಗೆ ಪ್ರಾಥಮಿಕ ಸಹಕಾರಿ ಸಂಘಕ್ಕೆ ಸಾಲ ರಾಷ್ಟ್ರೀಕೃತ ಬ್ಯಾಂಕುಗಳ ವ್ಯಾಪ್ತಿಯಲ್ಲಿ ಬಂದಿರಲಿ ಅಥವಾ ನಮ್ಮ ಸೆಂಟ್ರಲ್ ಕೊ-ಆಪರೇಟಿವ್ ಬ್ಯಾಂಕಿನಿಂದ ಬಂದಿರಲಿ, ಆ ಸಾಲಕ್ಕೆ ಇದು ಅಪ್ಲೈ ಆಗುತ್ತದೆ. ನಮ್ಮ ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕ್‌ನಿಂದ ಒಂಭತ್ತು ಪರ್‌ಸೆಂಟ್ ಬಡ್ಡಿ ಏನು ಹೇಳಿದ್ದೇವೆ ಅದನ್ನು ಮುಂದುವರಿಸುತ್ತೇವೆ. ಮೇ ಮೂವತ್ತೊಂದನೇ ತಾರೀಖನ್ನು ಯಾವುದೇ ಕಾರಣದಿಂದ ಮುಂದುವರಿಸಲು ಸಾಧ್ಯವಿಲ್ಲ. ಈ ಸೌಲಭ್ಯವನ್ನು ಕಾರಣ ಇಷ್ಟೇ, ಮಳೆಗಾಲ ಪ್ರಾರಂಭವಾಗುತ್ತದೆ. ರೈತರಿಗೆ ಮತ್ತೆ ಸಾಲದ ವ್ಯವಸ್ಥೆ ಮುಂದೆ ಮುಂಗಾರು ಬೆಳೆಗೆ ಮಾಡಬೇಕಾಗಿದೆ. ಆದ್ದರಿಂದ ಇದನ್ನು ಯಾವುದೇ ಕಾರಣದಿಂದ ಮುಂದುವರಿಸಲು ಸಾಧ್ಯವಿಲ್ಲ. ನಾನು ಸದಸ್ಯರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಈ ಸಾಲದ ಸೌಲಭ್ಯವನ್ನು ರೈತರು ಉಪಯೋಗ ಮಾಡಿಕೊಳ್ಳಲು ನೀವೆಲ್ಲರೂ ಹೇಳಬೇಕು, ಇದನ್ನು ಮುಂದುವರಿಸಲು ಸಾಧ್ಯವಿಲ್ಲ.

ಒಬ್ಬ ಮಾನ್ಯ ಸದಸ್ಯರು : ಒಂದೇ ಕಂತಿಗೆ ಬಡ್ಡಿ ಮನ್ನಾ ಆಗುತ್ತದೆ, ಉಳಿದ ಕಂತುಗಳಿಗೆ ಈ ಬಡ್ಡಿ ಮನ್ನಾ ಆಗುವುದಿಲ್ಲ ಎಂದು ಹೇಳುತ್ತಾರೆ. ಗ್ರಾಮೀಣ ಸೇವಾ ಸಹಕಾರಿ ಸಂಘಗಳು ಏನು ರಿಯಾಯಿತಿ ಕೊಡುತ್ತೇವೆ ಅದನ್ನು ಕನ್‌ವರ್ಷನ್ ಮಾಡಿರುವುದಕ್ಕೂ ನೀಡಲು ಸನ್ಮಾನ್ಯ ಮುಖ್ಯಮಂತ್ರಿಗಳು ಒಪ್ಪಿಗೆಯನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

3.50 ಪಿ.ಎಂ.

ಶ್ರೀ ಹೆಚ್.ಡಿ. ದೇವೇಗೌಡ : ಇದು ಈಗ ಇಷ್ಯೂ ಮಾಡಿರತಕ್ಕಂಥ ಗೌವರ್ನಮೆಂಟ್ ಆರ್ಡರ್‌ನಲ್ಲಿ ಸೇರಿಸಿದ್ದೇವೆ.

ಶ್ರೀ ಕೆ.ಎನ್. ನಾಗೇಗೌಡ : ಮಾನ್ಯ ಅಧ್ಯಕ್ಷರೇ, ಈಗಾಗಲೇ ಈ ಬಡ್ಡಿ ಮನ್ನಾ ವಿಚಾರದಲ್ಲಿ ಕಾಲ ವಿಸ್ತರಣೆ ಮಾಡಬೇಕು ಎಂದು ಮುಖ್ಯಮಂತ್ರಿಗಳನ್ನು ನಾವು ಏನು ಕೇಳಿಕೊಂಡೆವೋ, ಆ ಪ್ರಕಾರ, ಇದನ್ನು ವಿರೋಧ ಪಕ್ಷದವರು ಕೇಳಿರಲಿ ಅಥವಾ ಯಾವ ಪಕ್ಷದವರೇ ಕೇಳಿರಲಿ ಅವರಿಗೂ ಆ ಗೌರವ ಸಲ್ಲುವುದಿಲ್ಲ ಎಂದು ನಾನು ಹೇಳುವುದಕ್ಕೆ ತಯಾರಿಲ್ಲ. ಒಂದು ಬೇಡಿಕೆ ಎಂದರೆ ಸಮಾಜದೊಳಗಡೆ ಪ್ರಜಾಪ್ರಭುತ್ವದಲ್ಲಿ ಯಾರ ಬೇಡಿಕೆಗೆ ಸ್ಪಂಧಿಸುತ್ತದೆ ಸರ್ಕಾರ ಅದು ಜನಪರ ಸರ್ಕಾರ. ಯಾವ ವ್ಯಕ್ತಿ ಕೇಳುತ್ತಾರೆ, ಯಾವ ರಾಜಕೀಯ ಪಕ್ಷ ಕೇಳುತ್ತದೆ ಎನ್ನುವುದಕ್ಕಿಂತ ಮುಖ್ಯವಾಗಿ ಸರ್ಕಾರ ಸ್ಪಂಧಿಸುತ್ತದೆಯೇ ಎನ್ನುವುದು ಬಹಳ ಮುಖ್ಯವಾದುದು. ಈಗ ಈ ಸರ್ಕಾರ ವಿರೋಧ ಪಕ್ಷದವರಾದ ಶ್ರೀ ಖರ್ಗೆಯವರ ಮತ್ತು ವಿರೋಧಪಕ್ಷಗಳವರ ಎಲ್ಲರ ಭಾವನೆಗಳಿಗೆ, ಅನಿಸಿಕೆಗಳಿಗೆ ಅರ್ಥ ಕೊಟ್ಟು ಸ್ಪಂಧಿಸಿದ್ದೇವಲ್ಲಾ ಅದಕ್ಕೆ ನಾನು ಮೇ ತನಕ ಎಕ್ಸ್‌ಟೆಂಡ್ ಮಾಡಿರತಕ್ಕಂಥದ್ದು ಯಾವ ಸರ್ಕಾರ ನಮ್ಮ ಮಣ್ಣಿನ ಮಗನ ಸರ್ಕಾರ ಎಂದು ಅದಕ್ಕೆ ನಾನು ಹೇಳಿದ್ದೇ ವಿನಃ ಅದನ್ನು ಬೇರೆ ಅರ್ಥದಲ್ಲಿ ನಾನು ಹೇಳಲಿಲ್ಲ. ಅದಕ್ಕೆ ಶ್ರೀಮತಿ ಪ್ರಮೀಳಾ ಅವರೂ ಕೂಡ ಸಂತೋಷಪಡುತ್ತಾರೆ ಎಂದು ಭಾವಿಸಿಕೊಳ್ಳುತ್ತೇನೆ.

(ಗೊಂದಲ)

ಶ್ರೀ ಕೆ.ಎನ್. ನಾಗೇಗೌಡ : ಈಲ್ಡ್ ಆಗಬಹುದು. ಆದರೆ ತುಂಬಾ ತುಂಬಾ ಜಾಸ್ತಿಯಾದರೆ ಈಲ್ಡ್ ಆಗುವುದು ತುಂಬಾ ಕಷ್ಟವಾಗುತ್ತದೆ. ಆದ್ದರಿಂದ ಇವೊತ್ತು ಇಂಥಹ ಒಂದು ಸಾಧನೆ ಬಹಳ ಹೆಮ್ಮೆ ತಂದಿದೆ. ಅದರಲ್ಲೂ ಸಹ ಇವೊತ್ತು

ಇದು ಬಹಳ ಮೆಚ್ಚಿಗೆಯಾಗಿದೆ. ಅದರಲ್ಲೂ ಸಹ ಈ ಕಾಲದಲ್ಲಿ ಬೇಸಾಯ ಇಲ್ಲದೇ ಉತ್ಪನ್ನ ಇಲ್ಲದೇ ಬೇರೆ ಕಡೆ ಹಣ ಬಡ್ಡಿಗೆ ತೆಗೆದುಕೊಂಡು ಕಟ್ಟಬೇಕಾದ ಕಾಲ ಇತ್ತು. ಆದರೆ ಈಗ ಅವರಿಗೆ ಎರಡು ತಿಂಗಳುಗಳ ಕಾಲ ಕೊಟ್ಟಿದ್ದರಿಂದ ಅವರಿಗೆ ಸ್ವಲ್ಪ ಕಾಲಾವಕಾಶ ಸಿಕ್ಕಿತು ಅವರು ಈಗ ಸುಧಾರಿಸಿಕೊಂಡು ಈ ಅವಧಿಯೊಳಗೆ ಕಟ್ಟುವುದಕ್ಕೆ ಅವಕಾಶ ಸಿಕ್ಕಿತು ಎನ್ನತಕ್ಕಂಥ ಮಾತನ್ನು ಹೇಳುತ್ತೇನೆ. ಆದರೆ ಎಷ್ಟು ಕೋಟಿ ಎನ್ನತಕ್ಕ ವಿಚಾರ ನನಗೆ ಗೊತ್ತಿಲ್ಲ. ಈ ಮಾರ್ಚ್ 31 ರೊಳಗೆ ಎಷ್ಟು ಕೋಟಿ ಕಟ್ಟಿದ್ದಾರೆ, ಎಷ್ಟು ಕೋಟಿ ಯುಟಿಲೈಸ್ ಮಾಡಿಕೊಂಡಿದ್ದಾರೆ ಎನ್ನತಕ್ಕದ್ದನ್ನು ಅವರು ಹೇಳುತ್ತಾರೆ ಎನ್ನತಕ್ಕ ಮಾತನ್ನು ಹೇಳಿ, ಒಟ್ಟಾರೆ ಹೇಳುವುದಾದರೆ ಇದೊಂದು ಸ್ವಾಗತಾರ್ಹ ಕಾರ್ಯಕ್ರಮ, ಇದನ್ನು ಜನ ಮೆಚ್ಚುತ್ತಾರೆ. ನಾನು ಮುಖ್ಯಮಂತ್ರಿಗಳಿಗೆ ವಿಶೇಷವಾಗಿ ನನ್ನ ಅಭಿನಂದನೆಗಳನ್ನು, ಧನ್ಯವಾದಗಳನ್ನು ಅರ್ಪಿಸುತ್ತೇನೆ. ಮತ್ತೊಂದು ವಿಚಾರ ನಾವು ಬಹಳ ಪ್ರಮುಖವಾಗಿ ವಿಚಾರ ಮಾಡಬೇಕಾಗಿರುವುದು ಯಾವುವೆಂದರೆ ನಮ್ಮ ಜಿಲ್ಲಾ ಪಂಚಾಯತಿ, ತಾಲ್ಲೂಕು ಪಂಚಾಯತಿ ಚುನಾವಣೆ ನಡೆದಿರುವ ವಿಷಯ. ನಮ್ಮ ವೀರೇಂದ್ರಪಾಟೀಲರು ಇದ್ದಂಥ ಕಾಲದಲ್ಲಿ ಚುನಾವಣೆಗಳನ್ನು ಮಾಡಬೇಕು ಎನ್ನತಕ್ಕಂಥ ಸಂದರ್ಭದಲ್ಲಿ, ಈ ವಿಚಾರ ನಮ್ಮ ಕಾಂಗ್ರೆಸ್ ಪಕ್ಷದಲ್ಲಿ ಬಂದಂಥ ನಿರ್ಣಯದಲ್ಲಿ ಒಂದು ಮಾತನ್ನು ನಾನು ಶಾಸಕಾಂಗ ಸಭೆಯಲ್ಲಿ ಹೇಳಿದ್ದೆ. ಯಾವುದೇ ಕಾರಣಕ್ಕೆ ಅವರು ಅವಧಿ ಇನ್ನೂ ಇರುವಾಗಲೇ ಅದನ್ನು ನಾವು ಮೊಟಕು ಮಾಡಬಾರದು, ಅವರು ಆ ಅವಧಿಯಲ್ಲಿ ಇರಬೇಕು, ಯಾವುದೇ ಸರ್ಕಾರ ಬರಲಿ, ಅದು ಪಂಚಾಯತ್ ರಾಜ್ ಆಳ್ವಿಕೆ ಇಟ್ಟುಕೊಂಡ ರಾಜಕೀಯ ಪಕ್ಷಗಳು ಅಥವಾ ರಾಜ್ಯದಲ್ಲಿ ಯಾವುದೇ ರಾಜಕೀಯ ಪಕ್ಷಗಳು ಅಧಿಕಾರದಲ್ಲಿ ಇರಲಿ ಅಥವಾ ಕೇಂದ್ರದಲ್ಲಿ ಯಾವುದೇ ರಾಜಕೀಯ ಪಕ್ಷಗಳು ಅಧಿಕಾರದಲ್ಲಿರಲಿ ಅವರ ಅವಧಿ ಮುಗಿಯುವವರೆಗೂ ನಾವು ಅವನ್ನು ರದ್ದು ಮಾಡಬಾರದು ಎಂದು ಮಾನ್ಯ ವೀರೇಂದ್ರ ಪಾಟೀಲರು ಬಹಳ ಪಟ್ಟು ಹಿಡಿದು ಯಾವುದ ಕಾಲಕ್ಕೆ ನಾವು ಜಿಲ್ಲಾ ಪಂಚಾಯಿತಿಯನ್ನು ರದ್ದು ಮಾಡುವುದಿಲ್ಲ, ಗ್ರಾಮ ಪಂಚಾಯತಿಯ ಅವಧಿಯನ್ನು ನಾವು ರದ್ದು ಮಾಡುವುದಿಲ್ಲ ಅವುಗಳ ಸಂಪೂರ್ಣವಾಗಿ ಅವರ ಅವಧಿಯನ್ನು ಮುಗಿಸಬೇಕು ಎಂಬ ನಿರ್ಧಾರವಾಯಿತು. ಆಗ ಮೂರು-ನಾಲ್ಕು ವರ್ಷಗಳ ಕಾಲ ಚುನಾವಣೆಯನ್ನು ಮಾಡುವುದಕ್ಕೆ ಆಗಲೇ ಇಲ್ಲ, ನಮ್ಮ ಕಾಗೋಡು ತಿಮ್ಮಪ್ಪನವರು ಇಲ್ಲೇ ಇದ್ದಾರೆ, ನಮ್ಮ ಖರ್ಗೆಯವರು ಕೂಡ ಇಲ್ಲೇ ಇದ್ದಾರೆ, ಅವರಿಗೆ ಈ ವಿಚಾರ ಚೆನ್ನಾಗ ಗೊತ್ತಿದೆ. ನಾವು ಚುನಾವಣೆಯನ್ನು ಮಾಡಬೇಕು ಎಂದು ಮುಂದೆ ಬಂದಾಗ ಈ ಮೀಸಲಾತಿ ಹಿಂದುಳಿದ ವರ್ಗದವರಿಗೆ ರಾಜಕೀಯ ಮೀಸಲಾತಿ ಕೊಡತಕ್ಕಂಥ ವಿಚಾರ ಬಂತು ಮಾನ್ಯ ವೈ. ರಾಮಕೃಷ್ಣ ಇದನ್ನು ಒಪ್ಪಿಕೊಳ್ಳುತ್ತಾರೆಂದು ನಾನು ಭಾವಿಸಿಕೊಳ್ಳುತ್ತೇನೆ. ಬಹಳ ವರ್ಷಗಳಿಂದ ಈ ರಾಜಕೀಯ ಮೀಸಲಾತಿಗೋಸ್ಕರ ತಾಲ್ಲೂಕು ಮಟ್ಟದಲ್ಲಿ, ಜಿಲ್ಲಾ ಮಟ್ಟದಲ್ಲಿ ಗಲಾಟೆಯನ್ನು ತಾವು ಮಾಡಿದ್ದೀರಿ. ಅಲ್ಲೇ ಪಟ್ಟಭದ್ರ ಹಿತಾಸಕ್ತಿಗಳಿದ್ದು ರಾಜಕೀಯ ಅಧಿಕಾರವನ್ನು, ರಾಜಕೀಯ ಶಕ್ತಿಯನ್ನು ಪ್ರಜಾಪ್ರಭುತ್ವದಲ್ಲಿ ಬಳಸಿಕೊಂಡು ಸ್ವಂತಕ್ಕೋಸ್ಕರವಾಗಿ ಸ್ವಂತ ಪ್ರತಿಷ್ಠೆಗೋಸ್ಕರವಾಗಿ ಪ್ರಜಾಪ್ರಭುತ್ವಕ್ಕೆ ಮಸಿ ಬಳಿದಂಥ ಆ ಒಂದು ಕೆಳಮಟ್ಟದ ಪ್ರಜಾಪ್ರಭುತ್ವ ಇತ್ತೋ ಅವರಿಗೆ ಕೊಡಬೇಕು ಎಂದು ಹೇಳಿ ನೀವೆಲ್ಲಾ ಹೋರಾಟ ಮಾಡಿದ್ದೀರಿ. ನಾನು ಇವೊತ್ತು ದೇವೇಗೌಡರನ್ನು ಏಕೆ ಮೆಚ್ಚುತ್ತೇನೆ ಎಂದು ಕೇಳಿದರೆ ಒಂದೇ ಒಂದು ಮಾತು ಬಂತು, ಒಬ್ಬ ಒಕ್ಕಲಿಗ ಮುಖ್ಯಮಂತ್ರಿ, ಇವರನ್ನು ಜಾತಿವಾದಿಗಳು ಎಂದು ಏನು ಹೇಳುತ್ತಿದ್ದರೋ, ಇವರು ಜಾತಿ ಪರ ಮಾಡುತ್ತಾರೆ ಎಂದು ಯಾರು ಹೇಳುತ್ತಿದ್ದರೋ ಅಂಥವರ ಕಾಲದಲ್ಲೇ ಈ ಒಂದು ಜಾತಿಯ ಮೀಸಲಾತಿ ಬಂತಲ್ಲಾ ಈ ಒಂದು ಹಿಂದುಳಿದ ವರ್ಗದ ಮೀಸಲಾತಿ ಜಾರಿಗೆ ಬಂದಿರುವುದರಿಂದ ಅದನ್ನು ನಾವು ನಿಜವಾಗಿಯೂ ಮೆಚ್ಚಬೇಕಾಗಿದೆ. ಕಾರಣ ಏಕೆಂದರೆ ಹಿಂದುಳಿದ ವರ್ಗದ

ಮೀಸಲಾತಿ ಸಮಿತಿಯಲ್ಲಿ ಹಿಂದೆ ಬಸವಲಿಂಗಪ್ಪನವರು ಅಧ್ಯಕ್ಷರಾಗಿದ್ದರು. ಆಗ ಗಂಟೆಗಟ್ಟಲೇ ಚರ್ಚೆ ಮಾಡಿದ್ದೇವೆ. ಒಳಗಡೆ ಶಾಸಕಾಂಗ ಪಕ್ಷದಲ್ಲಿ ಚರ್ಚೆಯನ್ನು ಗಂಟೆಗಟ್ಟಲೇ ಮಾಡಿದ್ದೇವೆ. ಆಗ ಆಗಲಿಲ್ಲ. ಮಾನ್ಯ ಘೋರ್ಪಡೆಯವರು ಬಂದರು, ಆಗ ಮೊಯಿಲಿಯವರು ಒಂದು ಕೆಲಸ ಮಾಡಿದರು ಅದು ಮೆಚ್ಚಬೇಕಾದುದು ಅದು ಏನೆಂದರೆ.....

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇದಕ್ಕೆ ನಮ್ಮ ಅಬ್ಜೆಕ್ಷನ್ ಇದೆ. ಏಕೆಂದರೆ ಯಾರೂ ಕೂಡ ಶ್ರೀ ದೇವೇಗೌಡರನ್ನು ಜಾತಿವಾದಿಗಳು ಎಂದು ಈ ಸದನದಲ್ಲಿ ಹೇಳಿಲ್ಲ. ಎಲ್ಲಾದರೂ ಪ್ರಸ್ತಾಪವಾಗಿದೆಯೇ, ಕಡತವನ್ನು ತೆಗೆದುನೋಡಿ. ಅವರೇ ಪ್ರಶ್ನೆಯನ್ನು ಸೃಷ್ಟಿ ಮಾಡಿ, ಅವರೇ ಉತ್ತರವನ್ನು ಕೊಡುತ್ತಾರೆ. This is very bad. ಏನು ಬಿ.ಜೆ.ಪಿ.ಯವರು ಹೇಳಿದ್ದಾರೆಯೇ? ಕಾಂಗ್ರೆಸ್‌ನವರು ಹೇಳಿದ್ದಾರೆಯೇ ಅಥವಾ ಪಕ್ಷೇತರರು ಹೇಳಿದ್ದಾರೆಯೆ? ಕಾಂಗ್ರೆಸ್‌ನವರು ಹೇಳಿದ್ದಾರೆಯೇ ಅಥವಾ ಪಕ್ಷೇತರರು ಹೇಳಿದ್ದಾರೆಯೇ? ಸಿ.ಪಿ.ಎಂ.ನವರು ಹೇಳಿದ್ದಾರೆಯೇ? ಯಾರು ಹೇಳಿದ್ದಾರೆ? ಯಾರೂ ಕೂಡ ಹೇಳಿಲ್ಲ. ಅವರೇ ಪ್ರಶ್ನೆಯನ್ನು ಸೃಷ್ಟಿ ಮಾಡಿ ಅದಕ್ಕೆ ಉತ್ತರವನ್ನು ಅವರೇ ಹೇಳುವುದು. ಅಲ್ಲ ಎನ್ನುವವರು ಅವರೇ, ಹೌದು ಎನ್ನುವವರು ಅವರೇ ಏಕೆ ನೀವು ಈ ರೀತಿ ಮಾಡುತ್ತೀರಿ?

(ಗೊಂದಲ)

ಶ್ರೀ ಕೆ.ಎನ್. ನಾಗೇಗೌಡ : ಒಂದು ನಿಮಿಷ ಸುಮ್ಮನಿರಿ. ನಾವು ನೀವು ಈ ಮೀಸಲಾತಿ ಬಗ್ಗೆ ಎಷ್ಟು ಸಲ ಕಮಿಟಿ ಸೇರಿದ್ದೇವೆ. ಆದರೆ ಈ ಬಗ್ಗೆ ತೀರ್ಮಾನವಾಗಲಿಲ್ಲ. ಏಕೆ ಆಗಲಿಲ್ಲ? ಏಕೆ ಘೋರ್ಪಡೆ ರಾಜೀನಾಮೆ ಕೊಟ್ಟರು? ಏಕೆ ಘೋರ್ಪಡೆ ರಾಜೀನಾಮೆ ಕೊಟ್ಟರು ಎನ್ನುವುದನ್ನು ಹೇಳಿ. ಈಗ ಹೇಳುವುದಲ್ಲಾ, ನಾವು ಅಲ್ಲಿ ಏನು ಹೋರಾಟ ಮಾಡಿದ್ದೇವೆ ಆ ಹೋರಾಟವನ್ನು ಹೇಳುತ್ತಿರುವುದು. ನಾವು ಅಲ್ಲಿ ಏನು ಹೋರಾಟ ಮಾಡಿಕೊಂಡು ಬಂದಿದ್ದೇವೆ. ಅದಕ್ಕೆ ನೀವು ಮುಕ್ತಿಯನ್ನು ಕೊಡುವುದಕ್ಕೆ ನಿಮ್ಮ ಕೈಯಲ್ಲಿ ಆಗಲಿಲ್ಲ. ಒಂದೇ ಒಂದು ಕೊಟ್ಟಿದ್ದುದು ಗ್ರಾಮ ಪಂಚಾಯಿತಿಯೊಳಗೆ. ಆ ಗ್ರಾಮ ಪಂಚಾಯಿತಿ ಒಳಗಡೆ ಕೊಡಬೇಕು ಎಂದ ಹಾವನೂರ್ ಕಾಲದಿಂದಲೂ ನಾವು ಹೋರಾಟ ಮಾಡಿಕೊಂಡು ಬಂದಿದ್ದೇವೆ. ಆದುದರಿಂದ ಇವೊತ್ತು ಅದನ್ನು ಯಾರು ಕೊಟ್ಟಿದ್ದಾರೆ, ಅವರ ಬಗ್ಗೆ ಹೇಳಿದರೆ ನಿಮಗೆ ಕಣ್ಣು ಕೆಂಪಗೆ ಆಗುವುದು ಬೇಡ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇಲ್ಲಿ ಪ್ರಶ್ನೆ ನೇರವಾಗಿದೆ. ನೇರವಾಗಿ ಮುಖ್ಯಮಂತ್ರಿಗಳಿಗೆ ಯಾರಾದರೂ ಹೇಳಿದ್ದಾರೇನು?

ಅಧ್ಯಕ್ಷರು : ನೇರವಾಗಿ ಇವರಿಗೆ ಹೇಳದೇ ಹೋದರೂ ಅವರಿಗೆ ಯಾರೋ ಹೇಳಿರಬಹುದು. ಆದ್ದರಿಂದ ಅವರು ಹೇಳುತ್ತಿದ್ದಾರೆ. ತಾವು ಮುಂದುವರಿಸಿ.

ಶ್ರೀ ಕೆ.ಎನ್. ನಾಗೇಗೌಡ : ಅಧ್ಯಕ್ಷರೇ, ಇದು ಚರ್ಚೆಯಾಗಬೇಕು, ರಾಜ್ಯಪಾಲರ ಭಾಷಣವ, ತರಹದ್ದು. ರಾಜ್ಯಪಾಲರ ಭಾಷಣಕ್ಕೆ ಈ ರೀತಿಯ ವಂದನೆ ಸಲ್ಲಿಸಬೇಕು. ಇದು ಜನತಾದಳದ ಶಾಸಕಾಂಗ ಪಕ್ಷದ ಪಾರ್ಟಿ ನಡೆಯಿತು. ನಾನು ಆಗ ಇಪ್ಪತ್ತು-ಮೂವತ್ತು ನಿಮಿಷ ಭಾಷಣ ಮಾಡಿದೆ. ಏನು ಭಾಷಣ ಮಾಡಿದೆ ಎಂದರೆ ಜಿಲ್ಲಾ ಪಂಚಾಯತಿ, ತಾಲ್ಲೂಕು ಪಂಚಾಯತಿ ಚುನಾವಣೆ ಮಾಡಬಾರದು ಚುನಾವಣೆ ಮುಂದಕ್ಕೆ ಹಾಕಬೇಕು ಎಂದು ಹೇಳಿದೆ. ಜನತಾ ಶಾಸಕಾಂಗ ಪಕ್ಷದ ಪಾರ್ಟಿಯಲ್ಲಿ ನನ್ನ ಬಹುತೇಕ ಸ್ನೇಹಿತರು ಅದಕ್ಕೆ ಒಪ್ಪಿಕೊಂಡರು. ಆದರೆ ಮುಖ್ಯಮಂತ್ರಿಗಳು ಒಪ್ಪಿಕೊಳ್ಳಲಿಲ್ಲ. ಕಲ್ಯಾಣ್‌ಸಿಂಗ್ ತರಹ ನಾವು ಜೈಲಿಗೆ ಹೋಗಬೇಕಾಗುತ್ತದೆ. ಮಾರ್ಚಿ 31 ರೊಳಗಡೆ ಚುನಾವಣೆ ಮಾಡುತ್ತೇನೆಂದು ಸುಪ್ರೀಂಕೋರ್ಟಿಗೆ ಬರೆದುಕೊಟ್ಟಿದ್ದೇನೆ.

ನಮ್ಮ ಪಕ್ಷ ಅಧಿಕಾರಕ್ಕೆ ಬಂದರೆ ನಾನು ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಚುನಾವಣೆಯನ್ನು ಮಾರ್ಚಿ 31 ರೊಳಗಡೆ ಮೀಸಲಾತಿ ಆಧಾರದ ಮೇಲೆ ರಾಜ್ಯದ ಎಲ್ಲಾ ಕಡೆಯಲ್ಲಿಯೂ ಮಾಡುತ್ತೇನೆಂದು ಹೇಳಿದರು. ಇಲ್ಲದೇ ಹೋದರೆ ಕಲ್ಯಾಣ್‌ಸಿಂಗ್ ತರಹ ಜೈಲಿಗೆ ಹೋಗುತ್ತೇನೆ ಎಂದು ಹೇಳಿದರು. ನಾನು ಈ ಚುನಾವಣೆಗಳನ್ನು ಮುಂದಕ್ಕೆ ಹಾಕಬೇಕು ಎಂದು ಭಾಷಣ ಮಾಡಿದವನು. ಶಾಸಕಾಂಗ ಪಕ್ಷದ ಸಭೆಯಲ್ಲಿ ಸುಮಾರು 70-80 ಭಾಗದ ಶಾಸಕರು ಈ ಚುನಾವಣೆಗಳು ಬೇಡ ಎಂದಿದ್ದೆವು. ಆದರೂ ಸಹಿತ ಪೊಲಿಟಿಕಲ್ ವಿಲ್ ಎಂದು ಹೇಳಿದೆನಲ್ಲಾ ಅದಕ್ಕೆ ಸಿಟ್ಟು ಬಂತು ಅವರಿಗೆ. ಆ ಪೊಲಿಟಿಕಲ್ ವಿಲ್‌ನಿಂದ ಚುನಾವಣೆ ಮಾಡಿದ್ದು ಈ ಮಾರ್ಚ್ 31ರೊಳಗಡೆ.

ಶ್ರೀ ಎ. ರಾಮದಾಸ್ : ನೀವು ನಿಮ್ಮ ಮುಖ್ಯಮಂತ್ರಿಗಳದ್ದನ್ನು ಹೇಳಿ. ಕಲ್ಯಾಣ್‌ಸಿಂಗ್ ಬಗ್ಗೆ ಏಕೆ ಹೇಳುತ್ತೀರಿ?

(ಗೊಂದಲ)

ಅಧ್ಯಕ್ಷರು : ರಾಮದಾಸ್‌ರವರೇ, ನೀವು ನೇರ ವಾಗ್ವಾದ ಮಾಡುವುದು ಬೇಕಾಗಿಲ್ಲ. ಕಲ್ಯಾಣಸಿಂಗ್‌ರವರ ಹೆಸರನ್ನು ಅವರು ಆರೋಪಣೆ ಮಾಡುವ ರೀತಿಯಲ್ಲಿ ಹೇಳಲಿಲ್ಲ. ಕಂಟೆಂಪ್ಟ್ ಆಫ್ ಕೋರ್ಟ್ ಆದರೆ ಹಾಗಾಗುತ್ತದೆ ಎಂದು ಹೇಳಿದರು. ದಯಮಾಡಿ ಕುಳಿತುಕೊಳ್ಳಿ. ಸುಪ್ರೀಂ ಕೋರ್ಟ್‌ಗೆ ಸರ್ಕಾರದ ಕಮಿಟ್‌ಮೆಂಟ್ ಇತ್ತು. ನಾವು ಕೋರ್ಟಿನ ಆಜ್ಞೆಯನ್ನು ಉಲ್ಲಂಘನೆ ಮಾಡಿದರೆ ಅದು ತಪ್ಪಾಗುತ್ತದೆ ಎಂದು ಸಂದರ್ಭಕ್ಕೆ ಅನುಗುಣವಾಗಿ ಹೇಳಿದರು. ನೀವು ಮುಂದುವರಿಸಿ ನಾಗೇಗೌಡರೇ.

ಶ್ರೀ ಕೆ.ಎನ್. ನಾಗೇಗೌಡ : ಆದುದರಿಂದ ನಾವೆಲ್ಲರೂ ಪಾರ್ಟಿ ಮೀಟಿಂಗ್‌ನಲ್ಲಿ ಈ ಚುನಾವಣೆಗಳನ್ನು ಮುಂದಕ್ಕೆ ಹಾಕಬೇಕು ಎಂದು ಹೇಳಿದರೂ ಸಹಿತ, ಹಿಂದುಳಿದ ಜನಾಂಗಕ್ಕೆ ವರ್ಗದವರಿಗೆ ರಾಜಕೀಯ ಮೀಸಲಾತಿ ಕೊಡಬೇಕು ಎನ್ನುವುದಕ್ಕೋಸ್ಕರ, ಮುಖ್ಯಮಂತ್ರಿಗಳು ಒಂದು ದೃಢ ನಿರ್ಧಾರ ಕೈಗೊಂಡರು. ನಾನು ಇನ್ನು ಒಂದು ಹೇಳುವುದಾದರೆ ಹಿಂದೆ ನಜೀರ್‌ರವರು ಏನು ಕಾಂಟೆಪ್ಟ್ ಮಾಡಿದ್ದರೋ, ಅದು ಕೌನ್ಸಿಲ್‌ನಲ್ಲಿ ಬಂತು. ನಾವು ಮೆಜಾರಿಟಿ ಇದ್ದೆವು ಆಗ. ನಮ್ಮ ಕಾಂಗ್ರೆಸ್ ಪಕ್ಷದವರು ಮೆಜಾರಿಟಿ ಕೌನ್ಸಿಲ್‌ನಲ್ಲಿತ್ತು. ಆವೊತ್ತು ಜನತಾ ಪಕ್ಷ ಅಧಿಕಾರದಲ್ಲಿ ಇರಲಿಲ್ಲ. ಮೆಜಾರಿಟಿಯೂ ಇರಲಿಲ್ಲ. ಆದರೆ ಅವತ್ತು ನಾವು ಪಾಸ್ ಮಾಡಿಕೊಟ್ಟೆವು, ವಿಕೇಂದ್ರಿಕರಣ ಆಗ ಬೇಕು ಹಳ್ಳಿ ಜನರ ಕೈಗೆ ಅಧಿಕಾರ ಸಿಕ್ಕಬೇಕು ಎಂದು ಹೇಳಿ ನಾವು ಆವತ್ತು ಪಾಸ್ ಮಾಡಿಕೊಟ್ಟೆವು. ನಾನು ಇದೊಂದು ರಾಜಕೀಯ ವಿಚಾರವಲ್ಲ. ಅಥವಾ ರಾಜಕೀಯ ಪಕ್ಷದ ವಿಚಾರವಲ್ಲ ಎಂದು ತಿಳಿದುಕೊಂಡಿದ್ದೇನೆ. ಈ ಚುನಾವಣೆಯ ವಿಚಾರ ಅಷ್ಟು ಸುಲಭದ ಕೆಲಸವಲ್ಲ. ಕೇವಲ ಮೂರು ತಿಂಗಳೊಳಗೆ ಯಾವ ಘರ್ಷಣೆಯೂ ಇಲ್ಲದೇ ಮೀಸಲಾತಿ ಆಧಾರದ ಮೇಲೆ ಚುನಾವಣೆ ನಡೆಸಿದ್ದೇವೆ. ನಾವು ನೋಡಿದ್ದೇವೆ ವೆಂಕಟಸ್ವಾಮಿ ಕಮಿಷನ್ ಏನಾಯಿತು ಎಂದು. ಚಿನ್ನಪ್ಪರೆಡ್ಡಿ ಕಮಿಷನ್ ಏನಾಯಿತು ಎಂದು ನಾವು ನೋಡಿದ್ದೇವೆ. ಆರ್ಥಿಕ ವಿಚಾರಗಳಲ್ಲಿ ಬೇಕಾದಷ್ಟು ಜಗಳವಾಗಿದೆ. ನೀವೇ ಅಷ್ಟು ಸುಲಭದ ಚುನಾವಣೆಯಲ್ಲಿ ಇದು. ಒಂದು ಮೀಸಲಾತಿ ಕೊಟ್ಟು ಚುನಾವಣೆ ಮಾಡಬೇಕು ಮತ್ತು ಆ ಮೀಸಲಾತಿಯನ್ನು ಸರ್ವರೂ ಒಪ್ಪಿಕೊಳ್ಳಬೇಕು ಎಂದರೆ, ಅದು ಅಷ್ಟು ಸುಲಭವಲ್ಲ. ನನ್ನ ಕ್ಷೇತ್ರದಲ್ಲಿ ಸುಮಾರು 60 ರಿಂದ 70 ಭಾಗ ಒಕ್ಕಲಿಗರೂ ಇದ್ದಾರೆ. ಆ ಕ್ಷೇತ್ರದಲ್ಲಿ ಅಗಸರು ಇದ್ದಾರೆ. ಇವೊತ್ತು ಎಲ್ಲಾ ಜನಾಂಗಗಳಲ್ಲೂ ಆರ್ಥಿಕವಾಗಿ, ಸಾಮಾಜಿಕವಾಗಿ ಹಿಂದೆ ಇದ್ದಾರೋ ಆ ಜನಾಂಗಕ್ಕೆ ರಾಜಕೀಯ ಅಧಿಕಾರ ಕೊಡುವುದು

ಇದೆಯಲ್ಲಾ ಅದು ಬಹಳ ಕಷ್ಟವಾದ ಕೆಲಸ. ಮಧ್ಯಪ್ರದೇಶದಲ್ಲಿ ನಮ್ಮ ದಿಗ್ವಿಜಯಸಿಂಗ್ ಒಂದು ಪ್ರಯತ್ನ ಮಾಡಿದರು. ಮೊಯಿಲಿರವರು ಗ್ರಾಮ ಪಂಚಾಯತಿಯಲ್ಲಿ ಪ್ರಯತ್ನ ಮಾಡಿದರು. ಇವೆರಡು ಬಿಟ್ಟು ಇವೊತ್ತಿನ ದಿವಸ ತಾಲ್ಲೂಕು ಪಂಚಾಯಿತಿಗೆ, ಜಿಲ್ಲಾ ಪಂಚಾಯಿತಿಗೆ ಮೀಸಲಾತಿ ಕೊಟ್ಟು, ಆ ಮೀಸಲಾತಿಯನ್ನು ಜನ ಒಪ್ಪಿಕೊಂಡು ಓಟು ಮಾಡಿ ಚುನಾವಣೆ ನಡೆದು ಹಳ್ಳಿಯ ಜನರ ಕೈಗೆ ಅಧಿಕಾರ ಕೊಟ್ಟಿರತಕ್ಕಂಥದ್ದು ರಾಷ್ಟ್ರದಲ್ಲೇ ಮೊಟ್ಟಮೊದಲ ಸರ್ಕಾರ ಎಂದರೆ ಅದು ಆ ಕೀರ್ತಿ ನಿಮಗೂ ಸೇರಬಹುದು, ಇವರಿಗೂ ಸೇರಬಹುದು. ಅದನ್ನು ಜನ ಒಪ್ಪಿಕೊಂಡಿದ್ದಾರೆ.

(ಗೊಂದಲ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಈ ಸದನಕ್ಕೆ ಸುಳ್ಳು ಹೇಳುತ್ತಿದ್ದಾರೆ. ಇಡೀ ಭಾರತದಲ್ಲಿ ಪಂಚಾಯತ್‌ರಾಜ್ ವ್ಯವಸ್ಥೆಯನ್ನು ಮೀಸಲಾತಿಯ ಆಧಾರದ ಮೇಲೆ ಜಾರಿಗೆ ತಂದವರು ಪಶ್ಚಿಮ ಬಂಗಾಳದ ಸರ್ಕಾರ. ಇದು ನಾಗೇಗೌಡರಿಗೆ ಗೊತ್ತಿಲ್ಲ, ತಿದ್ದುಪಡಿ ಮಾಡಿಕೊಳ್ಳುವಂತೆ ಹೇಳುತ್ತೇನೆ.

ಶ್ರೀ ಕೆ.ಎನ್. ನಾಗೇಗೌಡರು : ನಾನು ಜಿಲ್ಲಾ ಪಂಚಾಯತ್ ಮತ್ತು ತಾಲ್ಲೂಕು ಪಂಚಾಯತ್‌ಗಳಿಗೆ ಅಧಿಕಾರವನ್ನು ಕೊಟ್ಟಿದ್ದನ್ನು ಮಾತನಾಡುತ್ತಿಲ್ಲ. ಸಾಮಾಜಿಕ ಮೀಸಲಾತಿಯನ್ನು ಇಟ್ಟು ಪ್ರಥಮ ಬಾರಿಗೆ ತಂದ ಬಗ್ಗೆ ಹೇಳುತ್ತಿದ್ದೇನೆ. ಇದು ಎಲ್ಲೂ ನಡೆದಿಲ್ಲ.

ಅಧ್ಯಕ್ಷರು : ಶ್ರೀ ಜಿ.ವಿ. ರಾಮರೆಡ್ಡಿಯವರೆ? ನೀವು ದಳದವರು ಪಾರ್ಟ್‌ನರ್ಸ್. ನೀವು ಓಪನ್ನಾಗಿ ಜಗಳ ಮಾಡಿಕೊಳ್ಳಬಾರದು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಇದು ಪಾರ್ಟನರ್ಸ್ ಪ್ರಶ್ನೆಯಲ್ಲ. ಇದು ತಾತ್ವಿಕಪ್ರಶ್ನೆ. ಅವರು ಸದನಕ್ಕೆ ಸುಳ್ಳು ಹೇಳುತ್ತಿದ್ದಾರೆ. ಅವರು ಪಶ್ಚಿಮ ಬಂಗಾಳಕ್ಕೆ ಹೋಗಿ ವೆರಿಫೈ ವೆರಿಫೈ ಮಾಡಿಕೊಳ್ಳಲಿ.

ಶ್ರೀ ಕೆ.ಎನ್. ನಾಗೇಗೌಡ : ಮಾನ್ಯ ಸದಸ್ಯರು ತಿಳುವಳಿಕೆ ಇಲ್ಲದೆ ಮಾತನಾಡುತ್ತಿದ್ದಾರೆ. ನನ್ನ ವಿಚಾರ ಏನೆಂದರೆ ರಾಜಕೀಯ ಮೀಸಲಾತಿಯನ್ನು ಜಿಲ್ಲಾ ಪಂಚಾಯತ್‌ನಲ್ಲಿ ಮತ್ತು ತಾಲ್ಲಾಕು ಪಂಚಾಯತ್‌ನಲ್ಲಿ ಜಾರಿಗೆ ತಂದದ್ದು ಎಲ್ಲಿಯೂ ಇಲ್ಲ. ಅವರು ಭಾಷಣ ಮಾಡುವಾಗ ಬೇಕಾದರೆ ಹೇಳಲಿ. ಆದುದರಿಂದ ಈ ಒಂದು ಕೀರ್ತಿ ಈ ಸರ್ಕಾರಕ್ಕೆ ಬರುತ್ತದೆ. ಕಾರಣ ಮೀಸಲಾತಿ ವಿಚಾರ ಕಠಿಣವಾದ ಸಮಸ್ಯೆ. ಅದನ್ನು ಸರ್ಕಾರ ನಿಭಾಯಿಸತಕ್ಕಂತಹದ್ದು ಮತ್ತು ಬಡಿಸತಕ್ಕಂತಹದ್ದು ಬಹಳ ಪರಮುಖವಾದದ್ದು. ಇವತ್ತು ಅದು ರಾಜ್ಯದಲ್ಲಿ ಆಗಿದೆ. ನಾನು ಒಂದು ಸಲಹೆಯನ್ನು ಸರ್ಕಾರಕ್ಕೆ ಕೊಡುವುದಕ್ಕೆ ಇಷ್ಟಪಡುತ್ತೇನೆ. ನಜೀರ್ ಸಾಹೇಬರು ಒಂದು ಮಾತನ್ನು ಹೇಳುತ್ತಿದ್ದರು. ತಾವು ಕೂಡ ಇದ್ದೀರಿ. ಆ ಕಾಲದಲ್ಲಿ ಗ್ರಾಮ ಪಂಚಾಯತಿ ಬಗ್ಗೆ ಅಕೌಂಟೆಬಿಲಿಟಿ ಬೇಕು, ತಾಲ್ಲೂಕು ಪಂಚಾಯತಿ ಬಗ್ಗೆ ಅಕೌಂಟೆಬಿಲಿಟಿ ಬೇಕು. ಅಕೌಂಟೆಬಿಲಿಟಿ ಯಾವುದೆಂದರೆ ಚುನಾವಣೆಗಳನ್ನು ಮಾಡುವುದು ಅಕೌಂಟೆಬಿಲಿಟಿಯಲ್ಲ, ಚುನಾವಣೆ ಪದ್ಧತಿ ಅಕೌಂಟೆಬಿಲಿಟಿಯಲ್ಲ. ದೇಶದಲ್ಲಿ ಚುನಾವಣೆಯಲ್ಲಿ ಕೆಲಸ ಮಾಡಿದವರು, ಮಾಡದವರೂ ಸೋತಿದ್ದಾರೆ. ಚುನಾವಣೆ ಒಂದೇ ಆಧಾರವಲ್ಲ, ಯಾವುದೇ ಒಂದು ಸರ್ಕಾರಕ್ಕೆ, ರಾಜಕಾರಣಿಗೆ ಜನಗಳ ಮುಂದೆ ಹೋಗತಕ್ಕಂಥ ವಿಚಾರದಲ್ಲಿ ರೀಕಾಲ್ ಎಂದು ನಾನು ಕರೆಯುವುದಿಲ್ಲ. ಗ್ರಾಮಸಭೆಗಳನ್ನು ಮಾಡಬೇಕೆನ್ನುವ ಉದ್ದೇಶವನ್ನು ನಜೀರ್ ಸಾಬ್‌ರವರು ಹೇಳುತ್ತಿದ್ದರು.

ಇವತ್ತು ಗ್ರಾಮಸಭೆಗಳಿಗೆ ಒತ್ತು ಕೊಡಬೇಕಾಗಿದೆ. 18 ವರ್ಷ ವಯಸ್ಸಾದವರು ಯಾರಿದ್ದಾರೆ ಅವರು ಓಟರ್ ಲಿಸ್ಟನಲ್ಲಿ ಇರಲಿ ಇಲ್ಲದಿರಲಿ ಹಳ್ಳಿಯಲ್ಲಿರತಕ್ಕ ಯುವಕರು ಚಿಂತನೆ ಮಾಡತಕ್ಕಂತಹ, ಆರ್ಥಿಕ ಚಿಂತನೆ ಮಾಡತಕ್ಕಂಥ ಗ್ರಾಮದ ಬಗ್ಗೆ ಚಿಂತನೆ ಮಾಡುವವರು ಅಂತಹ ಯುವಕರು ಗಳನ್ನೊಳಗೊಂಡಂತೆ ಗ್ರಾಮಸೇಗಳನ್ನು 2-3 ತಿಂಗಳಿಗೆ ಒಂದು ಸಾರಿ ಜಿಲ್ಲಾ ಪಂಚಾಯತಿ ಮತ್ತು ತಾಲ್ಲೂಕು ಪಂಚಾಯತಿ ಸದಸ್ಯರುಗಳನ್ನೊಳಗೊಂಡ ರೀತಿಯಲ್ಲಿ ಕನಿಷ್ಟ ವರ್ಷಕ್ಕೆ ಎರಡು ಸಾರಿ ಕರೆಯುವ ಬಗ್ಗೆ ಆಲೋಚನೆ ಮಾಡತಕ್ಕಂಹದ್ದು ಸೂಕ್ತ, ಅದಕ್ಕೆ ಹೆಚ್ಚಿನ ಗಮನವನ್ನು ಕೊಡಬೇಕೆಂದು ಹೇಳುತ್ತೇನೆ. ನ್ಯಾಯ ಪಂಚಾಯತಿಗಳನ್ನು ಪ್ರಾರಂಭದಲ್ಲಿ ಆಕ್ಟ್‌ನಲ್ಲಿ ಸೇರಿಸಿದ್ದೇವೆ. ಆದರೆ ಕ್ರಿಮಿನಲ್ ಕೋಡ್‌ಗಳಿಗೆ ಸಂಬಂಧಪಟ್ಟಂತೆ ಗೊಂದಲ ಉಂಟಾಗುತ್ತದೆ ಎನ್ನುವ ಕಾರಣಕ್ಕಾಗಿ ಅದನ್ನು ಕೈಬಿಡಲಾಯಿತು. ತ್ರಿ ಟೈಯರ್‌ಸಿಸ್ಟಂ ಒಳಗಡೆ ಗ್ರಾಮ ಪಂಚಾಯತಿಯನ್ನು ಖಂಡಿತವಾಗಿ ಜಾರಿಗೆ ಬರಬೇಕು. ಆಗ ಗ್ರಾಮಪಂಚಾಯಿತಿ ಮತ್ತು ಜಿಲ್ಲಾಪಂಚಾಯಿತಿ ಕೆಲಸ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಗ್ರಾಮಪಂಚಾಯಿತಿಗಳ ಕೆಲಸ ಮಾಡುವುದಕ್ಕೆ ಸಾಧ್ಯವುದಕ್ಕೆ ಸಾಧ್ಯವಾಗುತ್ತದೆ. ಗ್ರಾಮಪಂಚಾಯತಿ ಕೆಲಸ ಮಾಡುವುದರ ಬಗ್ಗೆ ಯಾವ ರೀತಿಯ ಸ್ವರೂಪ ಕೊಡುತ್ತಿರೋ ನನಗೆ ಗೊತ್ತಿಲ್ಲ. ಅದರ ಬಗ್ಗೆ ಒಂದು ಸರ್ಕ್ಯುಲರ್ ಕೊಡಬೇಕೆಂದು ಸರ್ಕಾರಕ್ಕೆ ನಾನು ಒತ್ತಾಯ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಮಾನ್ಯ ಅಧ್ಯಕ್ಷರೇ ಮತ್ತೊಂದು ಬಹಳ ಮುಖ್ಯವಾದ ಪ್ರಶ್ನೆ, ಇವತ್ತು ರಾಜ್ಯದಲ್ಲಿ 70-80 ಸಾವಿರ ಹುದ್ದೆಗಳು ಖಾಲಿ ಇವೆ. ಅನೇಕ ವಿದ್ಯಾವಂತ ನಿರುದ್ಯೋಗಿ ಯುವಕರು ಕೆಲಸಕ್ಕಾಗಿ ಸರ್ಕಾರದ ಕಡೆ ತಿರುಗಿ ತಿರುಗಿ ನೋಡತ್ತಿದ್ದಾರೆ. ಅವರಿಗೆ ಯಾವ ರೀತಿ ಕೆಲಸ ಸಿಗುತ್ತದೆ ಎನ್ನುವುದು ಗೊತ್ತಿಲ್ಲ. ನಮ್ಮ ಮೊಯಿಲಿಯವರ ಸರ್ಕಾರದಲ್ಲಿ 10-12 ಸಾವಿರ ಉಪಾಧ್ಯಾರುಲಗಳನ್ನು ನೇಮಕ ಮಾಡಿದ್ದೇವು. ಅದಾದ ಮೇಲೆ ಇತ್ತೀಚಿನ ದಿನಗಳಲ್ಲಿ ನೇಮಕಾತಿ ನಡೆದಿಲ್ಲ. ಮಾನ್ಯ ರೆಡ್ಡಿಯವರು ಹೇಳಿದಂತೆ ಶೇಕಡ 4-5 ರಷ್ಟು ಜನ ಮಾತ್ರ ಸರ್ಕಾರದಲ್ಲಿ ಕೆಲಸ ಮಾಡುತ್ತಿದ್ದಾರೆ. ನಾನು ಮುಖ್ಯಮಂತ್ರಿಗಳಿಗೆ ಒಂದು ಸೂಚನೆಯನ್ನು ಕೊಡುತ್ತೇನೆ, ಅವರು ತಪ್ಪಾಗಿ ತಿಳಿದುಕೊಳ್ಳಬಾರದು. ನಿವೃತ್ತಿ ಮಾಡತಕ್ಕಂಥ 58 ವರ್ಷವನ್ನು 55 ವರ್ಷವೆಂದು ಜಾರಿಗೆತರಬೇಕು. 55 ವರ್ಷ ಅಥವಾ 30 ವರ್ಷ ಕಾಲ ಯಾರು ಸರ್ಕಾರಿ ಸೇವೆ ಮಾಡಿರುತ್ತಾರೆ ಅವರನ್ನು ನಿವೃತ್ತಿ ಮಾಡಬೇಕು. ಕಾರಣ ಏಕೆಂದರೆ ನಾನು ಹಳ್ಳಿಯಿಂದ ಬಂದಿರುತ್ತೇನೆ. ನನಗೆ ಸರಿಯಾಗಿ ಲೆಕ್ಕಾ ಗೊತ್ತಿರಲಿಲ್ಲ. ಹಳ್ಳಿಗಳಲ್ಲಿ ಯಾರೋ ಮಾಸ್ಟರ್‌ಬರುತ್ತಾರೆ, ಎಷ್ಟೋ ವಯಸ್ಸು ಬರೆಯುತ್ತಾರೆ. 58 ವರ್ಷ ಎಂದ ತಕ್ಷಣ ನನಗೆ ಅವಕಾಶ ಸಿಗತಕ್ಕಂಥದ್ದು 25 ವರ್ಷ. ಯಾರ ಹುಟ್ಟಿದ ದಿನಾಂಕ ಸರಿಯಾಗಿರುತ್ತದೆ ಅವರಿಗೆ 35 ವರ್ಷ ಅವಕಾಶ ಸಿಗುತ್ತದೆ. ಈ ತಾರತಮ್ಯವನ್ನು 7-8 ವರ್ಷಗಳಿಂದ ನಡೆದುಕೊಂಡು ಬಂದಿದ್ದೇವೆ. ಆದರೆ ನಮ್ಮ ಸರ್ಕಾರ ಯಾವುದೇ ಕಾರಣಕ್ಕೆ ಈ ತಾರತಮ್ಯವನ್ನು ಮುಂದುವರೆಸದೆ, ಇವತ್ತು 55 ವರ್ಷಕ್ಕೆ ನಿವೃತ್ತಿಯಾಗುವಂತೆ ಕಾನೂನನ್ನು ಜಾರಿಗೆತರಬೇಕು. 30 ವರ್ಷಕ್ಕಿಂತ ಹೆಚ್ಚಿನ ಕಾಲ ಸೇವೆಯಲ್ಲಿ ಇರಕೂಡದು. ಇದು ಪ್ರಮುಖವಾದ ವಿಚಾರ. ಇದರ ಬಗ್ಗೆ ಸರ್ಕಾರ ಪರಿಶೀಲನೆ ಮಾಡಬೇಕು. ಇವತ್ತು ಯುವಕರಲ್ಲಿ ಬಹಳಷ್ಟು ಜಿಗುಪ್ಸೆ ಬಂದಿದೆ. ಇಷ್ಟು ವರ್ಷಗಳ ಕಾಲ ಕೆಲಸ ಕೊಡತಕ್ಕಂತಹ ನೀತಿ ಎಲ್ಲಿಯೂ ಇಲ್ಲ. ನಾನು ಹಿಂದೆ ಪೆನ್‌ಷನ್ ನಿಲ್ಲಿಸುವ ಬಗ್ಗೆ ಹೇಳಿದ್ದೆ. ಇವತ್ತು ಪೆನ್‌ಷನ್‌ಗೋಸ್ಕರ 50-60 ಕೋಟಿ ರೂಪಾಯಿಗಳನ್ನು ಕೊಡುತ್ತಿದ್ದೇವೆ. ಖಾಲಿ ಇರತಕ್ಕಂತಹ 60-70 ಸಾವಿರ ಹುದ್ದೆಗಳನ್ನು ರೋಸ್ಟರ್ ಪದ್ಧತಿಯನ್ನು ಅನುಸರಿಸಿಕೊಂಡು ಆದಷ್ಟು ಬೇಗ ತುಂಬಲಿಕ್ಕೆ ಪ್ರಯತ್ನ ಮಾಡಬೇಕೆಂದು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ.

ಇನ್ನು ಆಶ್ರಯ ಸ್ಕೀಂನಲ್ಲಿ ಬಹಳ ಪ್ರಮುಖವಾದ ಕೆಲಸ ಆಗಬೇಕಾಗಿದೆ. ಈಗಾಗಲೇ ರೂರಲ್ ಸರ್ವೆ ಮಾಡತ್ತಿದ್ದಾರೆ ಮತ್ತು ಅರ್ಬನ್ ಸರ್ವೆ ಮಾಡುತ್ತಿದ್ದಾರೆ. ಇವತ್ತು ರಾಜ್ಯದಲ್ಲಿ ಎಷ್ಟು ಗುಡಿಸಲುಗಳು ಇದ್ದಾವೆ, ಆ ಗುಡಿಸಲುಗಳನ್ನು 5 ವರ್ಷಗಳಲ್ಲಿ ನಿರ್ಮೂಲನೆ ಮಾಡುವುದಕ್ಕೆ ಒಂದು ಸರ್ವೆ ಮಾಡಿಸಿ ಒಂದು ಮಾಸ್ಟರ್ ಪ್ಲಾನ್ ಮಾಡಿಸಬೇಕು. ಇವತ್ತು ನಾವು ಒಂದು ಲಕ್ಷ ಮನೆಗಳನ್ನು ಕಟ್ಟಿಸುವ ಯೋಜನೆಯನ್ನು ಹಾಕಿಕೊಂಡಿದ್ದೇವೆ. ಒಂದು ಲಕ್ಷ ಮನೆ ಕಟ್ಟಿಸುವ ಗುರಿ ಇದ್ದರೂ ಕೂಡ ಇಡೀ ರಾಜ್ಯದಲ್ಲಿ ಎಷ್ಟು ಗುಡಿಸಲು ಇವೆ, ಎಷ್ಟು ಜನರಿದ್ದಾರೆ ಎಂಬುದನ್ನು ನೋಡಬೇಕು. ಸೈಟ್ ಕೇಳುವುದಕ್ಕಾಗಲಿ, ಮನೆ ಕೇಳುವುದಕ್ಕಾಗಲಿ ಜನ ಬರಬಾರದು. ನಾವೇ ನಿಯಮ ಮಾಡಿ ನಾವೇ ಅದನ್ನು ಅನುರಿಸಿ ಮನೆ ಕೊಡತಕ್ಕಂಥ ನಿವೇಶನ ಕೊಡತಕ್ಕಂಥ ಕೆಲಸ ಮಾಡಬೇಕು. ನಿವೇಶನ ಕೊಡತಕ್ಕಂಥ ಮತ್ತು ಮನೆ ಕಟ್ಟತಕ್ಕಂಥ ಕಾಲದಲ್ಲಿ ಗುಡಿಸಲುಗಳು ಏನಿವೆ, ಅವನ್ನು ನಿರ್ಮೂಲನ ಮಾಡತಕ್ಕಂತಹ ಕಾರ್ಯಕ್ರಮ ಜಾರಿಗೆ ತರಬೇಕು. ಇನ್ನು ಐದು ವರ್ಷಗಳಲ್ಲಿ ರಾಜ್ಯದಲ್ಲಿ ಗುಡಿಸಲುಗಳನ್ನು ತೆಗೆಯುವುದರ ಮೂಲಕ ಬಡವರಿಗೆ ಸಹಾಯವಾಗುವಂತೆ ಸಹಾಯ ಮಾಡಿ ಅವರಿಗೆ ಈ ಯೋಜನೆಯ ಲಾಭ ದೊರೆಯುವಂತೆ ಮಾಡಬೇಕೆಂದು ತಮ್ಮಲ್ಲಿ ಮನವಿಕೊಳ್ಳುತ್ತೇನೆ.

ನೀರಾವರಿ, ವಿದ್ಯುಚ್ಛಕ್ತಿ ವಿಚಾರದಲ್ಲಿ ಸಾಕಷ್ಟು ಚರ್ಚೆಯಾಗಿದೆ. ಅದರ ಬಗ್ಗೆ ನಾನು ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ, ಆದರೆ ಕೃಷಿ ನೀತಿಯನ್ನು ಮಾತ್ರ ರಾಜ್ಯದಲ್ಲಿ ಜಾರಿಗೆತರಬೇಕು. ಕೃಷಿ ನೀತಿ ಬಗ್ಗೆ ಬೈರೇಗೌಡರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ನೇಮಕ ಮಾಡಿದ್ದೀರಿ. ಸಂಸತ್ತಿನಲ್ಲಿ ಕೃಷಿ ನೀತಿಯನ್ನು ಮಾಡುವಾಗ ರಸಗೊಬ್ಬರದ ಬಗ್ಗೆ ಕೂಡ ಮಾನ್ಯ ದೇವೇಗೌಡರು ಹೋರಾಟ ಮಾಡಿದ್ದಾರೆ. ಇವತ್ತು ರಸಗೊಬ್ಬರಕ್ಕೆ 5 ಸಾವಿರ, 8 ಸಾವಿರ ಕೋಟಿ ರೂಪಾಯಿಗಳ ಸಬ್ಸಿಡಿ ಸಿಕ್ಕಿದೆ. ಅದನ್ನೂ ಕೂಡ ನಾವು ಸರಿಯಾಗಿ ಉಪಯೋಗಿಸಿಕೊಳ್ಳಬೇಕು. ನಮ್ಮ ರಾಜ್ಯದಲ್ಲಿ ಸರಿಯಾಗಿ ಅದನ್ನು ಉಪಯೋಗಿಸಿಕೊಳ್ಳುತ್ತಿಲ್ಲ. ಗೊಬ್ಬರಕ್ಕೆ ರೇಟ್‌ನಿಗದಿ ಮಾಡುವ ಬಗ್ಗೆ ಸರ್ಕಾರ ಕ್ರಮ ತೆಗೆದುಕೊಂಡಿಲ್ಲ. ಅದು ಫಾಸ್ಫೇಟ್ ಇರಲಿ, ಮಗದೊಂದಿರಲಿ, ರೇಟ್ ನಿಗಧಿ ಮಾಡಿಲ್ಲ. ಅದೇ ನಮ್ಮ ಬಜೆಟ್‌ನಲ್ಲಿ 20 ಕೋಟಿ ರೂಪಾಯಿಗಳ ಟರ್ನ್ ಓವರ್‌ಟ್ಯಾಕ್ಸ್‌ಅನ್ನು ಮಾಡಿದ್ದೀರಿ. ಅಷ್ಟಕ್ಕೆ ಸಾಕಾಗುವುದಿಲ್ಲ. ನಮ್ಮ ರಾಜ್ಯ ಸರ್ಕಾರ ಈಗ ಬೇರೆ ರಾಜ್ಯಗಳಿಗೆ ಹೋಲಿಸಿಕೊಂಡು ಗೊಬ್ಬರದ ರೇಟನ್ನು ನಿಗದಿ ಮಾಡತಕ್ಕಂಥ ಕೆಲಸದಲ್ಲಿ ತೊಡಗಬೇಕು. ಹೊಸ ಕೃಷಿ ನೀತಿಯನ್ನು ಇವತ್ತು ರಾಜ್ಯದಲ್ಲಿ ಜಾರಿಗೆತರಬೇಕು. ಭೂಮಿಯನ್ನು ಉಪಯೋಗಿಸಿಕೊಳ್ಳುವುದಿರಲಿ, ನೀರಾವರಿಯನ್ನು ಉಪಯೋಗಿಸಿಕೊಳ್ಳುವುದಿರಲಿ ಅಥವಾ ತೋಟಗಾರಿಕೆ ಇರಲಿ, ಯಾವುದೇ ಇರಲಿ, ನಮ್ಮ ರಾಜ್ಯದಲ್ಲಿ ಒಂದು ಕೃಷಿ ನೀತಿ ಇಲ್ಲ. ರೈತರಿಗೆ ಸೈನ್ಸ್ ಹಾಗೂ ಟೆಕ್ನಾಲಜಿ ಸರಿಯಾಗಿ ದೊರೆಯುತ್ತಿಲ್ಲ. ಆದುದರಿಂದ ದಯವಿಟ್ಟು ಕೃಷಿ ನೀತಿಯನ್ನು ಆದಷ್ಟು ಬೇಗ ಜಾರಿಗೆ ತರಬೇಕೆಂದು ಪ್ರಸ್ತಾಪ ಮಾಡಿ, ಇನ್ನೊಂದು ಬಹಳ ಪ್ರಮುಖವಾದ ವಿಷಯವೇನೆಂದರೆ ಮಂಡ್ಯ ಜಿಲ್ಲೆಯ ಸೇರಿ 8 ಜಿಲ್ಲೆಗಳಲ್ಲಿ ತಾಳೆ ಎಣ್ಣೆ ಬೆಳೆಬೆಳೆಯತಕ್ಕಂಥದನ್ನು ಮೊಯಿಲಿಯವರ ಕಾಲದಲ್ಲಿ ಜಾರಿಗೆ ತಂದರು;5-6 ವರ್ಷ ಕಾಲ ಆ ಫೈಲ್ ಹೊರಗಡೆಗೆ ತೆಗೆಯಲಿಲ್ಲ. ಮಾನ್ಯ ಕುರಿಯನ್‌ರವರು ಬೆಂಗಳೂರಿನಲ್ಲಿ ಇದ್ದಾಗ ಮುಖ್ಯಮಂತ್ರಿಗಳ ಹತ್ತಿರ ಕರೆದುಕೊಂಡು ಹೋಗಿ, ಎನ್‌ಡಿಬಿಐ ಸೇರಿದಂತೆ ಇತರೆ ಕಂಪನಿಯವರನ್ನು ಸೇರಿಸಿ 8 ಜಿಲ್ಲೆಗಳಲ್ಲಿ ತಾಳೆ ಎಣ್ಣೆ ತೆಗೆಯತಕ್ಕಂತಹ ಕೈಗಾರಿಕೆಗಳಿಗೆ ಒಂದೇ ದಿವಸದಲ್ಲಿ ಪರವಾನಿಗೆ ಕೊಡಿಸಿ ಫೈಲ್ ಕ್ಲಿಯರ್‌ಮಾಡಿಸಿದೆ. ಇವತ್ತು 8 ಜಿಲ್ಲೆಗಳಲ್ಲಿ ಮಂಡ್ಯವು ಒಂದಾಗಿದೆ. ಮಂಡ್ಯ ಜಿಲ್ಲೆಗಳಲ್ಲಿ ಎನ್‌ಡಿಬಿಐನವರು ಮಾಡಿದ್ದಾರೆ. ತಾಳೆ ಎಣ್ಣೆ ತಯಾರಿಕೆಯಲ್ಲಿ ನಾವು ಆಂಧ್ರದವರನ್ನು ಬೀಟ್ ಮಾಡಬೇಕಾಗಿತ್ತು. ಆದರೆ ಫೈಲ್ ನೋಡಿರಲಿಲ್ಲ, ಮಾಡಿರಲಿಲ್ಲ. ಈ ಒಂದು

ವರ್ಷದ ಹಿಂದೆ ಸರ್ಕಾರಿ ಆಜ್ಞೆಯಾಗಿದೆ. ಇದರ ಬಗ್ಗೆ ತಾವು ಬಹಳ ಗಮನ ಕೊಡಬೇಕು, ತಾಳೆ ಎಣ್ಣೆ ತಯಾರಿಕೆಯಲ್ಲಿ ಸಂಬಂಧಪಟ್ಟ ಏನು ಪ್ರಾಜೆಕ್ಟ್ ಬಂದಿದ್ದಾವೆ ಅವುಗಳಿಗೆ ಹೆಚ್ಚು ಕೊಡಿ. ನಾವು ಬರೀ ಸಕ್ಕರೆ ಭತ್ತದ ಮೇಲೆ ಅವಲಂಬಿಸಿಕೊಂಡಿದ್ದೇವೆ. ಅದರ ಜೊತೆಗೆ ಈ ತಾಳೆ ಎಣ್ಣೆ ಮೇಲೆ ಅವಲಂಬಿಸಿಕೊಳ್ಳಬೇಕು. ಇನ್ನೊಂದು ಮುಖ್ಯ ವಿಚಾರ ಎಂದರೆ ಸಕ್ಕರೆ ಕಂಪೆನಿಗಳು. ತಾವು ರೈತರ ಜೊತೆ ಸೇರಿ ಬಹಳ ವರ್ಷಕಾಲ ಹೋರಾಟ ಮಾಡಿದವರು. ನಮ್ಮ ರಾಜ್ಯದಲ್ಲಿ ಸಾಕಷ್ಟು ಕಬ್ಬು ಇದೆ. ನನ್ನ ಗಮನಕ್ಕೆ ಬಂದಿರುವ ಪ್ರಕಾರ ನಮ್ಮ ರಾಜ್ಯದಲ್ಲಿ ಸುಮಾರು 215 ಲಕ್ಷ ಮೆಟ್ರಿಕ್‌ಟನ್ ಕಬ್ಬು ಇದೆ. ನಾವು ಇವತ್ತು ಸಕ್ಕರೆ ಮಾಡುವುದಕ್ಕೆ, ಖಂಡಸಾರಿಗೆ, ಹೊರ ರಾಜ್ಯಗಳಾದ ತಮಿಳ್ನಾಡಿಗೆ ಮತ್ತು ಮಹಾರಾಷ್ಟ್ರಕ್ಕೆ ಹೋಗುತ್ತದೆ. ಮಹಾರಾಷ್ಟ್ರ ಬಹಳ ದೊಡ್ಡ ರಾಜ್ಯ. ಅಲ್ಲಿ ಸುಮಾರು100 ಸಕ್ಕರೆ ಕಂಪೆನಿಗಳಿವೆ.ನಮ್ಮ ಕರ್ನಾಟಕದಲ್ಲಿ 29 ಸಕ್ಕರೆ ಕಾರ್ಖಾನೆಗಳಿವೆ. ಇದರಲ್ಲಿ ಒಂದೆರಡು ಕಾರ್ಖಾನೆಗಳು ನಡೆಯುತ್ತಿಲ್ಲ. ಇವತ್ತು ತಮಗೆ ಗೊತ್ತಿರುವಂತೆ ಬಿಜಾಪುರ, ಬೆಳಗಾಂ, ಮೈಸೂರು, ಮಂಡ್ಯ ಹೀಗೆ ಬಹಳಷ್ಟು ಕಡೆಗಳಲ್ಲಿರತಕ್ಕ ರೈತರು ತಮ್ಮ ಕಬ್ಬಿಗೆ ಪರ್ಮಿಟ್ ಕೊಡಿ ಎಂದು ಕೇಳುತ್ತಿದ್ದಾರೆ. ಸರ್ಕಾರದಲ್ಲಿ ನನ್ನ ಮನವಿ ಏನೆಂದರೆ, ನಮ್ಮ ರಾಜ್ಯಕ್ಕೆ ಹೆಚ್ಚು ಹೆಚ್ಚು ಸಕ್ಕರೆ ಕಾರ್ಖಾನೆಗಳು ಕೂಡಲೇ ಬರುವಂತೆ ಮಾಡಬೇಕು. ಮಾನ್ಯ ಸದಸ್ಯರಾದ ಸಿದ್ನಾಳ್‌ರವರು ಪಾರ್ಲಿಮೆಂಟ್‌ನಲ್ಲಿ ಬಹಳ ಪ್ರಾಮುಖ್ಯವಾದ ಪ್ರಶ್ನೆಯನ್ನು ಕೇಳಿದ್ದಾರೆ.ಅದೇನೆಂದರೆ, ಇವತ್ತು ಮಹಾರಾಷ್ಟ್ರಕ್ಕೆ, ಉತ್ತರಪ್ರದೇಶ, ಇನ್ನೂ ಮುಂತಾದ ಕಡೆಗಳಿಗೆ ಕೇಂದ್ರಸರ್ಕಾರ ಹೆಚ್ಚು ಹೆಚ್ಚು ಸಕ್ಕರೆ ಕಾರ್ಖಾನೆಗಳನ್ನು ಮಂಜೂರು ಮಾಡುತ್ತಿದೆ, ಕಳೆದ ವರ್ಷ ಕೇವಲ 3 ಮಾತ್ರ ಸಕ್ಕರೆ ಕಾರ್ಖಾನೆಗಳನ್ನು ಪಬ್ಲಿಕ್‌ಸೆಕ್ಟಾರನಲ್ಲಿ, ಪ್ರೈವೇಟ್ ಸೆಕ್ಟಾರ್‌ನಲ್ಲಿ, ಕೋ ಆಪರೇಟಿವ್ ಸೆಕ್ಟಾರ್‌ನಲ್ಲಿ ಸ್ಥಾಪನೆ ಮಾಡಬೇಕೆಂದು ನಮ್ಮ ಸ್ಟೇಟ್ ಕಮಿಟಿಯವರು ರೆಕಮೆಂಡ್ ಮಾಡಿ ಕಳುಹಿಸಿಕೊಟ್ಟಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳಿಗೆ ಅಜಿತ್‌ಸಿಂಗ್‌ರವರು ಬಹಳಷ್ಟು ಪರಿಚಯವಿರುವವರು. ನಾನು ಒಂದು ಮಾತನ್ನು ಹೇಳುವುದಾದರೆ, ನಮ್ಮ ರಾಜ್ಯದಲ್ಲಿ ಬೆಳೆದ ಕಬ್ಬಿನಲ್ಲಿ ಸುಮಾರು 52 ಪರ್ಸೆಂಟ್ ಕಬ್ಬನ್ನು ಸಕ್ಕರೆಗೆ ಉಪಯೋಗ ಮಾಡಿಕೊಳ್ಳುತ್ತಿಲ್ಲ. ನಾವು ಉಪಯೋಗಿಸಿಕೊಳ್ಳುತ್ತಿರುವುದು ಕೇವಲ 48 ಪರ್ಸೆಂಟ್ ಮಾತ್ರ.

ಮಹಾರಾಷ್ಟ್ರದಲ್ಲಿ 109 ಸಕ್ಕರೆ ಕಾರ್ಖಾನೆಗಳಿವೆ. ಯು.ಪಿ.ಯಲ್ಲಿ 84, ತಮಿಳ್ನಾಡಿನಲ್ಲಿ 37, ಆಂಧ್ರಪ್ರದೇಶದಲ್ಲಿ 36, ನಮ್ಮ ರಾಜ್ಯದಲ್ಲಿ 28 ಸಕ್ಕರೆ ಕಾರ್ಖಾನೆಗಳಿವೆ. ನಮ್ಮ ಸ್ಕ್ರೀನಿಂಗ್ ಕಮಿಟಿಯವರು ರೆಕಮೆಂಡ್ ಮಾಡಿ ಕೇಂದ್ರಕ್ಕೆ ಕಳುಹಿಸಿಕೊಟ್ಟಿದ್ದಾರೆ. ಕೇಂದ್ರದಲ್ಲಿ ಅಜಿತ್ ಸಿಂಗ್‌ರವರು ಆಹಾರಖಾತೆ ಮಂತ್ರಿಗಳಾಗಿದ್ದಾರೆ. ಇವತ್ತು ನಮ್ಮ ರಾಜ್ಯದ ರೈತರು ಕಬ್ಬನ್ನು ಬೆಳೆದು ಕಷ್ಟಪಡುತ್ತಿರುವುದನ್ನು ನಾವು ನೋಡುವುದಕ್ಕಾಗುವುದಿಲ್ಲ. ನಮ್ಮ ಕಡೆಯ ರೈತರು ಒಂದುಕಡೆ ತಮಿಳ್ನಾಡಿಗೆ, ಇನ್ನೊಂದು ಕಡೆ ಮಹಾರಾಷ್ಟ್ರಕ್ಕೆ ತೆಗೆದುಕೊಂಡು ಹೋಗುತ್ತಿದ್ದಾರೆ. ಇನ್ನೂ ಎಷ್ಟೋ ಜನರು ಕಬ್ಬನ್ನು ತೆಗೆದುಕೊಂಡು ಹೋಗುವುದಕ್ಕಾಗದೆ ಬೆಲ್ಲವನ್ನು ಮಾಡುತ್ತಿದ್ದಾರೆ. ಶಿವಮೊಗ್ಗದಲ್ಲೂ ಸಕ್ಕರೆ ಕಾರ್ಖಾನೆಗಳು ಬಹಳ ಕಡಿಮೆ ಇವೆ. ನನ್ನ ಒಂದೇ ಒಂದು ಮನವಿ ಎಂದರೆ ಮಾನ್ಯ ಮುಖ್ಯ ಮಂತ್ರಿಗಳು ಮಾನ್ಯ ಮುಖ್ಯ ಮಂತ್ರಿಗಳು ಮಾನ್ಯ ಅಜಿತ್‌ಸಿಂಗ್‌ರವರನ್ನೋ, ಮಾನ್ಯ ಪ್ರಧಾನ ಮಂತ್ರಿಗಳನ್ನೊ ಭೇಟಿ ಮಾಡಿ ಸ್ಕ್ರೀನಿಂಗ್ ಕಮಿಟಿಯವರಿಗೆ ಹೋಗಿರುವ ಶಿಫಾರಸಿನ ಪ್ರಕಾರ ಕನಿಷ್ಟ 10 ಸಕ್ಕರೆ ಕಾರ್ಖಾನೆಗಳನ್ನಾದರೂ ಕೋ-ಆಪರೇಟಿವ್ ಸೆಕ್ಟಾರ್‌ನಲ್ಲಿ ಅಥವಾ ಜಾಯಿಂಟ್ ಸೆಕ್ಟಾರನಲ್ಲಾದರೂ ನಿಮ್ಮ ಅವಧಿಯಲ್ಲಿ ತರುವ ಪ್ರಯತ್ನ ಮಾಡಬೇಕು. ಇದರಿಂದಾಗಿ ರಾಜ್ಯಕ್ಕೆ ಮತ್ತು ರಾಜ್ಯದ ರೈತರಿಗೆ ಬಹಳಷ್ಟು ಅನುಕೂಲವನ್ನು ಮಾಡಿದಂತಾಗುತ್ತದೆ. ನಮ್ಮಲ್ಲಿರತಕ್ಕ ಸಕ್ಕರೆ ಕಾರ್ಖಾನೆಗಳಿಗೆ ಬಹಳಷ್ಟು ನಷ್ಟವಾಗಿದೆ. ನಮ್ಮಲ್ಲಿರತಕ್ಕ ಸಕ್ಕರೆ ಕಾರ್ಖಾನೆಗಳು ಸುಮಾರು 100 ಕೋಟಿ ರೂ.ಗಿಂತ

ಹೆಚ್ಚು ನಷ್ಟವನ್ನು ಅನುಭವಿಸುತ್ತಿವೆ. ನಷ್ಟದ ವಿಚಾರ ಒಂದುಕಡೆ ಇರಲಿ. ಎಲ್ಲದಕ್ಕಿಂತ ಹೆಚ್ಚಾಗಿ ಇವತ್ತು ನಮ್ಮ ರೈತರಿಗೆ ಹೆಚ್ಚು ಅನುಕೂಲವಾಗಬೇಕು. ಇಲ್ಲದೇ ಹೋದರೆ ರೈತರಿಗೆ ಬಹಳ ತೊಂದರೆಯಾಗುತ್ತದೆ.

ಇನ್ನೊಂದು ಬಹಳ ಮುಖ್ಯವಾದ ವಿಚಾರ ಎಂದರೆ, ಲೋಕಾಯುಕ್ತ ಮಸೂದೆಗೆ ಒಂದು ಸೂಕ್ತ ತಿದ್ದುಪಡಿಯಾಗಬೇಕೆಂದು ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ್ದಾರೆ. ಮಾನ್ಯ ಅಧ್ಯಕ್ಷರೇ ತಮಗೆ ಗೊತ್ತಿರುವಂತೆ ಲೋಕಾಯುಕ್ತದ ವಿರುದ್ಧ ನಾವು ಸಾಕಷ್ಟು ಹೋರಾಟವನ್ನು ಮಾಡಿದ್ದೇವೆ. ಮಾನ್ಯ ಸದಸ್ಯರಾದ ನಂಜೇಗೌಡರು ಹೇಳಿದಂತೆ ಈಗಿರುವ ಕಾಯಿದೆಯ ಪ್ರಕಾರ ಅವರು ಪೋಲೀಸರ ಶೋಷಣೆ ಮಾಡುವುದಕ್ಕೆ ಪೋಲೀಸರು ಹೋಗಿ ಅವರನ್ನು ಹೆದರಿಸಿ ಅವರು ಬೇಟೆ ಮಾಡುವುದಕ್ಕೆ ಅನುಕೂಲವಾಯಿತೇ ಹೊರತೇ ಬೇರೆ ಅನುಕೂಲವಾಗಲಿಲ್ಲ. ನಾನು ಈ ವಿಚಾರದಲ್ಲಿ ಹೆಚ್ಚು ಹೇಳುವುದಕ್ಕೆ ಹೋಗದಿದ್ದರೂ, ಈ ವಿಚಾರದಲ್ಲಿ ನಾನು ಸಾಕಷ್ಟು ತಿಳಿದುಕೊಂಡಿರುವುದರಿಂದ ಲೋಕಾಯುಕ್ತಕ್ಕೆ ಇವತ್ತೂ ಕೂಡ ನನ್ನ ಅಸೆಟ್ಸ್‌ನ್ನು ಕೊಟ್ಟಿಲ್ಲ. ಇಗಿರತಕ್ಕ ಆಕ್ಟ್‌ನ ಪ್ರಕಾರ ನಾನು ಕೊಡುವುದೂ ಇಲ್ಲ. ಕಳೆದ 13 ವರ್ಷಗಳಿಂದ ಲೋಕಾಯುಕ್ತಕ್ಕೆ ನಾನು ನನ್ನ ಅಸೆಟ್ಸ್‌ನ್ನು ಕೊಟ್ಟೂ ಇಲ್ಲ, ಕೊಡುವುದೂ ಇಲ್ಲ. ಈ ಸದನದಲ್ಲೂ ಕೂಡ ಹೇಳುತ್ತೇನೆ, ನಾನು ನನ್ನ ಅಸೆಟ್ಸ್‌ನ್ನು ಕೊಡುವುದಿಲ್ಲ. ಕಾರಣ ಏನೆಂದರೆ, ಈ ಆಕ್ಟ್ ತಿದ್ದುಪಡಿ ಆಗಬೇಕೆಂಬ ಉದ್ದೇಶದಿಂದ. ಹಿಂದೆ ಇದ್ದಂಥ ವಿಜಿಲೆನ್ಸ್ ಇದಕ್ಕಂತಲೂ ಹೆಚ್ಚು ಯಶಸ್ವಿಯಾಗಿತ್ತು, ಎಫೆಕ್ಟೀವ್ ಆಗಿತ್ತು. ಇವತ್ತು ಯಾರು ಏನು ಮಾಡಬೇಕೆಂಬುದು ಇಲ್ಲ. ಲೋಕಾಯುಕ್ತ ಎಂಬುದು ಒಂದು ರೀತಿಯ ಬಿಳಿ ಆನೆಯಂತ ಕೆಲಸಮಾಡುತ್ತಿದೆ. ಮಾನ್ಯ ಮಂತ್ರಿಗಳೂ ಕೂಡ ಲೋಕಾಯುಕ್ತದ ಅಡಿಯಲ್ಲಿ ಬರಬೇಕೆಂದು ಹೇಳುತ್ತಿದ್ದಾರೆ. ನಾನಾದರೂ ಸಲಹೆ ಮಾಡುತ್ತೇನೆ, ಮಾನ್ಯ ಮಂತ್ರಿಗಳು, ಮಂತ್ರಿಗಳು, ಶಾಸಕರು ಇಷ್ಟೂ ಜನರು ಪಬ್ಲಿಕ್ ಸರ್ವೆಂಟ್ಸ್ ಎಂದು ಡಿಸೈಡ್ ಆಗಿದೆ. ಇದೇ ಆಕ್ಟನಡಿಯಲ್ಲಿ ಕುಮಾರಿ ಜಯಲಲಿತರವರ ಮೇಲೆ ಮಾನ್ಯ ರಾಜ್ಯಪಾಲರು ಕೊಟ್ಟಿರತಕ್ಕ ಪರ್ಮಿಶನ್. ನಮ್ಮ ರಾಜ್ಯಾಂಗದಲ್ಲಿ ಇವರೆಲ್ಲರೂ ಪಬ್ಲಿಕ್ ಸರ್ವೆಂಟ್ಸ್ ಎಂದು ತೀರ್ಮಾನವಾದ ಮೇಲೆ ಯಾರು ಬೇಕಾದರೂ ಅವರಮೇಲೆ ಪಬ್ಲಿಕ್ ಲಿಟಿಗೇಷನ್ ಕೇಸನ್ನು ಹಾಕಬಹುದು. ಆಸ್ತಿಯನ್ನು ಕ್ರಯ ಮಾಡಿದ್ದರೆ, ಆಸ್ತಿಯನ್ನು ಕೊಂಡಿದ್ದರೆ, ಅಧಿಕಾರವನ್ನು ಕಿತ್ತುಕೊಂಡಿದ್ದರೆ, ಅಧಿಕ ಸಂಪತ್ತನ್ನು ಇಟ್ಟುಕೊಂಡಿದ್ದರೆ ಅವರ ಮೇಲೆ ಕೇಸ್ ಹಾಕಬಹುದು. ಆದರೆ ಮುಖ್ಯ ಮಂತ್ರಿ ಇರಾತ್ತಾರೆ, ಯಾರು ಅಧಿಕಾರಿಗಳು ಇರುತ್ತಾರೆ ಆ ಇಲಾಖೆಯ ಅನುಮತಿ ಪಡೆದುಕೊಳ್ಳಬೇಕು. ಇಲ್ಲದಿದ್ದರೆ ಮಾನ್ಯ ರಾಜ್ಯಪಾಲರಿಂದ ತೆಗೆದುಕೊಳ್ಳಬೇಕು. ಮಾನ್ಯ ಮುಖ್ಯ ಮಂತ್ರಿಗಳು ರಾಜ್ಯಪಾಲರಿಂದ ನೇಮಕ ಆಗುವವರು. ಮಂತ್ರಿಗಳು ಸರ್ಕಾರದಿಂದ ನೇಮಕಾತಿ ಆರುವವರು. ಆದರೆ ಇಲ್ಲಿ ಮಾನ್ಯ ಚೆನ್ನಾರೆಡ್ಡಿಯವರ ಕೇಸ್ ಬೇರೆ. ಚೆನ್ನಾರೆಡ್ಡಿಯವರ ಕೇಸಿನಲ್ಲಿ ರಾಜಕೀಯಕ್ಕೋಸ್ಕರ ಉಪಯೋಗಿಸಿಕೊಂಡಿದ್ದಾರೆಂದು ಅನಿಸುತ್ತದೆ. ಅದೇ ರೀತಿ ಅಂತುಳೆಯವರ ಕೇಸ್ ಬೇರೆ. ಶಾಂತಿಭೂಷಣ, ಜಸ್ಟೀಸ್ ಸಾಹಾ ಹಾಗೂ ಇನ್ನೊಬ್ಬರು ಈ ಮೂರು ಜನರೂ ಮೂರು ರೀತಿಯ ಅಭಿಪ್ರಾಯವನ್ನು ಹೇಳಿರುವುದನ್ನು ನಾನು ಪತ್ರಿಕೆಯಲ್ಲಿ ನೋಡಿದ್ದೇನೆ. ನಾನು ಏತಕ್ಕ ಹೇಳುತ್ತಿದ್ದೇನೆಂದರೆ, ನಾವೇ ಪಬ್ಲಿಕ್ ಸರ್ವೆಂಟ್ಸ್ ಎಂದು ಲೋಕಾಯುಕ್ತದ ಕೆಳಗೆ ಬಂದರೆ ಒಲ್ಲವೂ ಸರಿಹೋಗುತ್ತದೆ. ಎಲ್ಲರೂ ನಮ್ಮ ಕಡೆ ಕೈತೋರಿಸಿ ಹೋಗತಕ್ಕದ್ದು ಅಲ್ಲ. ಮಾನ್. ಶಾಸಕರು ಏನಾ ಕೆಲಸಮಾಡಬೇಕು, ಮುಖ್ಯ ಮಂತ್ರಿಗಳು ಏನು ಕೆಲಸ ಮಾಡಬೇಕು, ಮಂತ್ರಿಗಳು ಏನಾ ಕೆಲಸ ಮಾಡಬೇಕು, ಪ್ರಧಾನ ಮಂತ್ರಿಗಳು ಏನಾ ಕೆಲಸ ಮಾಡಬೇಕು, ಜಡ್ಜ್‌ಗಳು ಏನಾ ಕೆಲಸ ಮಾಡಬೇಕು ಎಂಬುದನ್ನು ಸಂಪೂರ್ಣವಾಗಿ

ರಾಜ್ಯಾಂಗದಲ್ಲಿ ಹೇಳಿದೆ. ರಾಜ್ಯಾಂಗದಲ್ಲಿ ಏನಾ ಕರ್ತವ್ಯ ಎಂದು ತೋರಿಸುತ್ತಾರೆ ಅದರ ಪ್ರಕಾರವೇ ಎಲ್ಲವೂ ನಡೆಯಬೇಕು. ಆ ಕರ್ತವ್ಯವನ್ನು ಬಿಟ್ಟು ಹೋಗುವುದಕ್ಕಾಗುವುದಿಲ್ಲ. ಇವತ್ತು ಲೋಕಾಯುಕ್ತದಲ್ಲಿ ತಿದ್ದುಪಡಿಯನ್ನು ಮಾಡಬೇಕು, ಮುಖ್ಯ ಮಂತ್ರಿಗಳು, ಮಂತ್ರಿಗಳು, ಶಾಸಕರು ಎಲ್ಲರೂ ಕೂಡ ಇದರಲ್ಲಿ ಬರಬೇಕು. ಆಗಲೇ ಇದಕ್ಕೆ ಹೆಚ್ಚು ಮಹತ್ವ ಬರುತ್ತದೆಂಬುದನ್ನು ಹೇಳಬಯಸುತ್ತೇನೆ. ಒಂದು ಬೇಸರದ ಸಂಗತಿ ಎಂದರೆ, ತಮಿಳುನಾಡಿನಲ್ಲಿ ಅವರು ತೀರ್ಮಾನ ತೆಗೆದುಕೊಳ್ಳುವುದಕ್ಕೆ ಬದಲಾಗಿ ಆ ಸ್ಥಾನವನ್ನು ಅವರು ಬಿಟ್ಟು ಬೇರೆಯವರು ಕ್ರಮ ತೆಗೆದುಕೊಳ್ಳಬೇಕಾಗಿತ್ತು ಎನ್ನತಕ್ಕದ್ದು ಒಂದೇ ಒಂದು ಇರತಕ್ಕದ್ದು. ಮಾನ್ಯಯ ಚೆನ್ನಾರೆಡ್ಡಿಯವರು ಬಹಳ ದೊಡ್ಡ ರಾಜಕಾರಿಣಿಯಾಗಿ ಅವರು ಆ ಸ್ಥಾನದಲ್ಲಿ ಕೂತುಕೊಂಡು.......

ಛೇರ್ಮನ್:- ಅಲ್ಲಿ ಅವರು ಕೈಗೊಂಡಿರತಕ್ಕ ತೀರ್ಮಾನದ ಬಗ್ಗೆ ನಾವು ಈ ಸದನದಲ್ಲಿ ನಮ್ಮ ಅಭಿಪ್ರಾಯವನಾನು ಸೂಚಿಸುವುದು ಸರಿಯಲ್ಲ.

ಶ್ರೀ ಕೆ,ಎನ್. ನಾಗೇಗೌಡ : ಪ್ರತಿಯೊಂದನ್ನೂ ಅವರು ರಾಜ್ಯಾಂಗದಲ್ಲಿ ನೇಮಸಿರುವ ಪ್ರಯುಕ್ತ, ಅದೇರೀತಿ ಲೋಕಾಯುಕ್ತಕ್ಕೂ ಕೂಡ ಒಂದು ತಿದ್ದುಪಡಿ ಆಗಬೇಕು, ಅದರಲ್ಲಿ ಬಹಳ ಮಹತ್ವವಿದೆ. ಅಡ್ಡಾದಿಡ್ಡಿ ಆಡುವಂಥ ಬಾಯಿಗಳಿಗೆ, ನಾಲಿಗೆಗಳಿಗೆ ಹೋಗುತ್ತಾ ಇರಬಹುದು, ದನ್ನು ತಡೆಗಟ್ಟುವುದಕ್ಕೆ ಅನುಕೂಲ ಮಾಡಿಕೊಡಬೇಕಂದು ಹೆಚ್ಚು ಒತ್ತುಕೊಟ್ಟು ಹೇಳುತ್ತಿದ್ದೇನೆ. ಮಾನ್ಯ ಚೆನ್ನಾರೆಡ್ಡಿಯವರ ಬಗ್ಗೆ ನಾನು ಮಾತನಾಡುತ್ತಿಲ್ಲ.

(ಗೊಂದಲ)

ಶ್ರೀ ಎ,ಟಿ. ರಾಮಸ್ವಾಮಿ : ತಮಿಳುನಾಡಿನ ಮಾನ್ಯ ರಾಜ್ಯಪಾಲರು ರಾಜಕೀಯ ದುರುದ್ದೇಶದಿಂದ ಈ ರೀತಿಯ ತೀರ್ಮಾನವನ್ನು ತೆಗೆದುಕೊಂಡಿದ್ದಾರೆಂಬ ಅಭಿಪ್ರಾಯವನ್ನು ತಾವು ವ್ಯಕ್ತಮಾಡಿದಿರಿ. ಅದು ಸರಿಯಲ್ಲ. ಈ ಮಾತು ಕಡತಕ್ಕೆ ಹೋಗಿದ್ದರೆ ಅದು ಸೂಕ್ತವಲ್ಲ. ಎಂದು ನನ್ನ ಅಭಿಪ್ರಾಯ.

ಶ್ರೀ ಕೆ.ಎನ್. ನಾಗೇಗೌಡ : ಪಬ್ಲಿಕ್ ಸರ್ವೆಂಟ್ಸ್ ಎಂದು ಬಂದರೆ, ಲೋಕಾಯುಕ್ತದ ಕೆಳಗೆ ಬಂದರೆ ನಾವು ಅಕೌಂಟಬಿಲಿಟಿ ಆಗುತ್ತೇವೆ. ಮಾನ್ಯ ಮಂತ್ರಿಗಳು ಲೋಕಾಯುಕ್ತದ ಕೆಳಗೆ ಬರಬೇಕು ಎನ್ನತಕ್ಕದ್ದು ನನ್ನ ವಾದ. ಆ ಸ್ಥಾನದ ಗಾರವ ಉಳಿಯಬೇಕಾದರೆ, ಇದು ಆಗಬೇಕು. ಮಾನ್ನಯ ಚೆನ್ನಾರೆಡ್ಡಿಯಂಥ ರಾಷ್ಟ್ರದ ಹಿರಿಯ ನಾಯಕರ ಪರಿಚಯ ಸುಮಾರು 20-22 ವರ್ಷಗಳಿಂದ ನನಗಿದೆ. ಅವರು ತೆಗೆದುಕೊಂಡಿರತಕ್ಕ ತೀರ್ಮಾನ ರಾಜ್ಯಾಂಗದ ಪ್ರಕಾರ ಸರಿಯಾಗಿದೆ. ಆದರೆ ಅವರು ಯಾವ ಸಂದರ್ಭದಲ್ಲಿ ತೆಗೆದುಕೊಂಡಿದ್ದಾರೆ ಎದಬುದನ್ನು ಗಮನಿಸಬೇಕು. ಅಲ್ಲಿನ ಮಾನ್ಯ ಮುಖ್ಯ ಮಂತ್ರಿಗಳಿಗೂ, ರಾಜ್ಯಪಾಲರಿಗೂ ಭಿನ್ನಾಭಿಪ್ರಾಯವಿತ್ತು.

(ಗೊಂದಲ)

ಶ್ರೀ ಕೆ.ಎನ್. ನಾಗೇಗಾಡ : ಮಾನ್ಯ ಅಧ್ಯಕ್ಷರೇ, ನಾನು ಹೆಚ್ಚು ಹೊತ್ತು ಭಾಷಣ ಮಾಡುವುದಕ್ಕೆ ಹೋಗುವುದಿಲ್ಲ.

4.20 ಪಿ.ಎಂ.

ನಮ್ಮ ಸರ್ಕಾರ ಇದಕ್ಕೆ ತಿದ್ದುಪಡಿ ತರಬೇಕೆಂದು ಪ್ರಸ್ತಾಪ ಮಾಡುತ್ತಾ ಇನ್ನು ಎರಡು ಮೂರು ವಿಚಾರಗಳನ್ನು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ. ಬಸ್ಸುಗಳ ವ್ಯವಸ್ಥೆ ಸರ್ಕಾರದ ಮಟ್ಟದಲ್ಲಿ ಇರತಕ್ಕದ್ದು 3 ಮುಖ್ಯ ಸಮಸ್ಯೆಗಳು. ವಿದ್ಯುಚ್ಛಕ್ತಿ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ. ವಿದ್ಯುಚ್ಛಕ್ತಿ ವಿಚಾರದಲ್ಲಿ ಚರ್ಚೆಯಾಗಿರುವುದರ ಬಗ್ಗೆ

ನಾನು ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ಇದು 3 ತಿಂಗಳಿಂದ ಬಂದ ಸಮಸ್ಯೆ ಅಲ್ಲ, ಇದನ್ನು ಹಿಂದಿನಿಂದಲೂ ಹೇಳಿಕೊಂಡು ಬಂದಿದ್ದೇನೆ. ನಾನು 2-3 ಗಂಟೆಗಳ ಕಾಲ ವಿದ್ಯುಚ್ಛಕ್ತಿ ಬಗ್ಗೆ ಭಾಷಣ ಮಾಡಿದ್ದೇನೆ. ಯಾವ ಯೋಜನೆಗಳು ಆಗಬೇಕು, ಹೈಡಲ್ ಯಾವುದು ಆಗಬೇಕು, ಮಿನಿ ಹೈಡಲ್ ಯಾವುದು ಆಗಬೇಕು, ಥರ್ಮಲ್ ಪ್ಲಾಂಟುಗಳು ಯಾವುದು ಆಗಬೇಕು, ಇದರ ಕಾನ್‌ಸೆಪ್ಟ್ ಏನಾಗುತ್ತದೆ, ಹತ್ತು ವರ್ಷಕ್ಕೆ ಏನಾಗುತ್ತದೆ, 20 ವರ್ಷಕ್ಕೆ ಏನಾಗುತ್ತದೆ, 25 ವರ್ಷಕ್ಕೆ ಏನಾಗುತ್ತದೆಂದು ನೀವು ನಾವು ಎಲ್ಲಾ ಮಾತನಾಡಿದ್ದೇವೆ. ಆದುದರಿಂದ ವಿದ್ಯುಚ್ಛಕ್ತಿ ಬಗ್ಗೆ ಹೆಚ್ಚಿಗೆ ಮಾತನಾಡುವುದಕ್ಕೆ ಹೋಗುವುದಿಲ್ಲ. ಇನ್ನು ಕುಡಿಯುವ ನೀರಿನ ಸಮಸ್ಯೆ. ಮಾನ್ಯ ಪ್ರಕಾಶ್ ಅವರು ಹೊರಗಡೆ ಹೋದರು. ಅವರಿಗೆ ಒಂದು ಮಾತು ಹೇಳುವುದೇಂದರೆ ಕೇಂದ್ರ ಸರ್ಕಾರದವರು ಒಂದು ಮಾಸ್ಟರ್ ಪ್ಲಾನ್ ನ್ನು ಪ್ರತಿ ರಾಜ್ಯದಲ್ಲಿ ಮಾಡಬೇಕೆಂದು ಮಾಡಿದ್ದಾರೆ. ಎಲ್ಲಾ 25 ಸಾವಿರ ಹಳ್ಳಿಗಳಿಗೆ ನೀವು ನಲ್ಲಿಯಲ್ಲಿ ನೀರು ಕೊಡತಕ್ಕ ಅಥವಾ ಕುಡಿಯುವ ನೀರು ಕೊಡತಕ್ಕ ವ್ಯವಸ್ಥೆಯನ್ನು ಮಾಡುವುದು ಮತ್ತು ಹತ್ತು ಸಾವಿರ ಹಳ್ಳಿಗಳಿಗೆ ದಿನಂಪ್ರತಿ 40 ಸಾವಿರ ಲೀಟರ ನೀರು ಕೊಡುತ್ತೀದ್ದೇವೆಂದು ಹೇಳುತ್ತೀರಿ. ಆದರೆ 20 ಲೀಟರ್ ನೀರು ಕೂಡ ಸಿಗದೆ ಇರತಕ್ಕ ಹಳ್ಳಿಗಳು ಇದೆ. ನಾರ್ಮ್ಸ್ ಎಲ್ಲಾ ಇಟ್ಟುಕೊಂಡಿದ್ದೇವೆ. ಆ ಕಡೆ ಗಮನ ಕೊಟ್ಟು ಹಣ ಒದಗಿಸಿ. ನಮರೆ ಏನು ಬಡ್ಡಿ ಮನ್ನಾಕ್ಕೆ ಹಣ ಕೊಟ್ಟೇದ್ದೀರಿ, ಬೇರೆ ಬೇರೆ ವಿಚಾರಗಳಿಗೆ ಹಣ ಒದಗಿಸಿದ್ದೀರಿ ಅದೇ ರೀತಿ ಅಕ್ಕಿಗೆ ಯಾವ ರೀತಿ ಹಣ ಒದಗಿಸಿದ್ದೀರಿ ಅದೇ ರೀತಿ 300 ಕೋಟಿ ರೂಪಾ.ಗಳನ್ನು 1995-96-97ಕ್ಕೆ ಎರಡು ವರ್ಷದೊಳಗಾದರೂ ಕೊಡಿ. ಕೇಂದ್ರ ಸರ್ಕಾರದಿಂದ 55 ಕೋಟಿ ರೂಪಾಯಿ ಬಂದಿದೆ. ಕರ್ನಾಟಕ ಭವನದಲ್ಲಿದ್ದಾರಲ್ಲಾ ಅಧಿಕಾರಿಗಳು ಅವರ ಬಗ್ಗೆ ಹೇಳುವುದಕ್ಕೆ ನಾಚಿಕೆಯಾಗುತ್ತದೆ. ಅವರು ರಾಜ್ಯ ಸರ್ಕಾರದವರು ಅಲ್ಲ. ಅವರು ಸೀನಿಯರ್ ಐಎಎಸ್ ಅಧಿಕುಗಿಗಳು, ಅಡಿಷನಲ್ ಚೀಫ್ ಸೆಕ್ರೆಟರಿ ಗ್ರೇಡಿನವರು. ತಮಿಳುನಾಡು ಭವನದಲ್ಲಿ ಯಾವ ಯಾವ ಯೋಜನೆಗಳು ಸಿಗುತ್ತವೆ, ಕುಡಿಯುವ ನೀರಿಗೆ ಎಷ್ಟು ಸಿಗುತ್ತದೆ, ಸಮಾಜ ಕಲ್ಯಾಣ ಇಲಾಖೆಗೆ ಒಷ್ಟು ಸಿಗುತ್ತದೆ ಮತ್ತು ಬೇರೆ ಬೇರೆ ಪ್ಲಾನ್ ಪ್ರೋಗ್ರಾಂಗಳಿಗೆ ಎಷ್ಟು ಸಿಗುತ್ತದೆ.

ಸೋಷಿಯಲ್ ವೆಲ್‌ಫೇರ್ ಪ್ರೋಗ್ರಾಂನಲ್ಲಿ ಏನು ಸಿಗುತ್ತದೆಂದು ಕಂಡುಹಿಡಿದು ಕಾಂಟ್ಯಾಕ್ಟ್ ಮಾಡಿ ಪಬ್ಲಿಕ್ ರಿಲೇಷನ್‌ಷಿಫ್ ಮಾಡಿಕೊಂಡು ಅಲ್ಲಿಂದ ಹಣ ತರುವುದಕ್ಕೆ ತಮಿಳುನಾಡಿವರು ಮಂತ್ರಿಗಳನ್ನು ನೇಮಿಸಿದ್ದಾರೆ. ನಾವು ಅಧಿಕಾರಿಗಳನ್ನು ನೇಮಿಸಿದ್ದೇವೆ. ಮೊದಲು ತಹಶೀಲ್ದಾರರು ಇದ್ದರು. ಆಮೇಲೆ ಅಸಿಸ್ಟಂಟ್ ಕಮಿಷನರ್ ಬಂದರು. ತರುವಾಯ ಡಿ.ಸಿ.ಬಂದರು. ಈಗ ಅಡಿಷನಲ್ ಚೀಫ್ ಸೆಕ್ರೆಟರಿ ಗ್ರೇಡಿನವರು ಇದ್ದಾರೆ. ಇದುವರೆಗೆ ಒಂದು ಸ್ವಲ್ಪವೂ ಇಂಪ್ರೂವ್‌ಮೆಂಟ್ ಆಗಿಲ್ಲ. ಒಂದು ರೆಫರೆನ್ಸ್ ಸಿಗುವುದಿಲ್ಲ. ನಾನು ಮೊನ್ನೆ ಸಿದ್ಧರಾಮಯ್ಯನವರ ಭಾಷಣ ಮಾಡಿದ್ದನ್ನು ಷುಗರ್ ಫ್ಯಾಕ್ಟರಿನಲ್ಲಿ ಓದುತ್ತಾ ಸಿದ್ಧರಾಮಯ್ಯನವರಿಗೆ ಫೋನ್ ಮಾಡಿ ಹೇಳಿದೆ. ಯಾವ ಯಾವ ಸ್ಕ್ರೀನಿಂಗ್ ಕಮಿಟಿಗಳು ಮುಂದೆ ಇವೆ, ಯಾವ ಯಾವುದನ್ನು ಸ್ಕ್ರೀನಿಂಗ್ ಕಮಿಟಿಗಳು ಅಪ್ರೂವ್ ಮಾಡಿವೆ, ಅವುಗಳಿಗೆ ಯಾರು ಯಾರನ್ನು ನೇಮಿಸಿದ್ದಾರೆ ಎಂದು ಕೇಳಿದೆ. ನಮ್ಮ ಎಂ.ಪಿ.ಅವರು ಯಾವುದೇ ರಾಜಕೀಯ ಪಕ್ಷದವರು ಇದ್ದರೂ ಸಹ ಅವರಿಗೆ ರಾಜ್ಯದ ಬಗ್ಗೆ ಆಸಕ್ತಿ ಇರುತ್ತದೆ. ಕಾವೇರಿ ವಿಚಾರ ಬಂದರೆ ಹಿಂದೆ ಬೀಳುವುದಿಲ್ಲ. ಆದ್ದರಿಂದ ಒಂದು ಮಾತನ್ನು ಇವತ್ತಿನ ದಿವಸ ಸರ್ಕಾರಕ್ಕೆ ನಾನು ಆಗ್ರಹಪೂರ್ವಕವಾಗಿ ಹೇಳುವುದೇಂದರೆ, ಡೆಲ್ಲಿಯಲ್ಲಿ ನಿಮ್ಮ ಆಫೀಸು ಪಕ್ಕವಾಗಿ ಎಸ್ಟಾಬ್ಲಿಷ್ ಆಗಬೇಕು. ಅಲ್ಲಿ ಹೋಗಿ ಕೇಂದ್ರದಿಂದ ಬರತಕ್ಕ ಯೋಜನೆಗಳನ್ನು ತೆಗೆದುಕೊಳ್ಳಬೇಕು. ಇವತ್ತಿನ ದಿವಸ ಕುಡಿಯುವ ನೀರಿಗೆ

ಬರೀ 55 ಕೋಟಿ ರೂಪಾಯಿಗಳನ್ನು ತಂದಿದ್ದಾರೆ. ಅವರು ಸರಿಯಾಗಿ ಕೆಲಸ ಮಾಡಿದ್ದರೆ ನೂರಾರು ಕೋಟಿ ರೂಪಾಯಿಗಳನ್ನು ತೆಗೆದುಕೊಳ್ಳಬಹುದಾಗಿತ್ತು. 30-35 ಸಾವಿರ ರೂಪಾಯಿಗಳಿಗೆ ಒಂದೊಂದು ಬೋರ್‌ವೆಲ್‌ನಂತೆ ಒಂದೊಂದು ಕ್ಷೇತ್ರಕ್ಕೆ 30-40ಸಾವಿ ರ ಬೋರ್ ವೆಲ್‌ಕೊಡಬಹುದಿತ್ತು. ಮಿನಿ ವಾಟರ್‌ಸಪ್ಲೈ ಆಗಲಿ,ಯಾವುದೇ ಆಗಲಿ, ನಮ್ಮ ರಾಜ್ಯ ವೈಯಕ್ತಿಕರಾಗಿ ಅಂಥ ಕಡೆ ಗಮನ ಕೊಡಬೇಕೆಂದು ಹೇಳುತ್ತೇನೆ.

ಇನ್ನು ಬಸ್ಸಿನ ವಿಚಾರ. ಇವತ್ತಿನ ದಿವಸ ನಮ್ಮಲ್ಲಿ ಮೊನ್ನೆ ಬಸ್ ಮುಷ್ಕರ ನಡೆಯಿತು.ನಮ್ಮದು ಸಂಪೂರ್ಣವಾಗಿ ರಾಷ್ಟ್ರೀಕರಣವನ್ನೂ ಮಾಡಲಿಲ್ಲ, ಸಂಪೂರ್ಣ ಖಾಸಗಿಯಾಗಿಯೂ ಇಲ್ಲ. 5-6 ಜಿಲ್ಲೆಗಳಲ್ಲಿ ಅರ್ಧ ರಾಷ್ಟ್ರೀಕರಣ ಮಾಡಿದ್ದಾರೆ, ಅರ್ಧ ರಾಷ್ಟ್ರೀಕರಣ ಮಾಡಿಲ್ಲ. ಬೇರೆ ಕಡೆ ರಾಷ್ಟ್ರೀಕರಣ ಮಾಡಿದ್ದಾರೆ. ಕೆ.ಎಸ್.ಆರ್.ಟಿ.ಸಿ.ಯಲ್ಲಿ ನೂರು ಕೋಟಿ ರೂಪಾಯಿ ನಷ್ಟವಾಗಿದೆ. ತಾವು ಯಾವುದೇ ಆರ್ಥಿಕ ತಜ್ಞರನ್ನು ಬೇಕಾದರೂ ಕರೆದು ವಿಚಾರ ಮಾಡಿ. ಈಗ ಸಿದ್ಧರಾಮಯ್ಯನವರು ಇಲ್ಲ. ತಮಗೆ ಬರತಕ್ಕ ಇಲಾಖೆಗಳಲ್ಲಿ ಸೇಲ್ಸ್ ಟ್ಯಾಕ್ಸ್ ಆಗಲಿ, ಕಮರ್ಷಿಯಲ್ ಟ್ಯಾಕ್ಸ್ ಆಗಲಿ, ಎಕ್ಸೈಜ್ ಆಗಲಿ, ಫಾರೆಸ್ಟ್ ಆಗಲಿ, ಮೋಟಾರ್ ವೆಹಿಕಲ್ ಟ್ಯಾಕ್ಸ್ ಆಗಲಿ, ಇವೆಲ್ಲ ಟ್ಯಾಕ್ಸ್ ಗಳಿಗಿಂತ ನಮಗೆ ಎಸೆನಷಿಯ ಇರತಕ್ಕದ್ದು ಕೆ.ಇ.ಬಿ. ಮತ್ತು ಕೆ.ಎಸ್.ಆರ್.ಟಿ.ಸಿ.ಯಲ್ಲಿ ನೀವು ಕೆಇಬಿ ಮತ್ತು ಕೆಎಸ್‌ಆರ್‌ಟಿಸಿಯಲ್ಲಿ.

ಫೈನಾನ್ಷಿಯಲ್ ರಿಸೋರ್ಸಸ್ ಹೆಚ್ಚಿಸಿಕೊಳ್ಳದಿದ್ದರೆ ಹೆಚ್ಚು ಸರ್ವೀಸನ್ನು ನಾವು ಕೊಡುವುದಕ್ಕಾಗುವುದಿಲ್ಲ, ಇವತ್ತು ಕೆಇಬಿ. ಫೇಲ್ ಆಗಿದೆ, ಕೆಎಸ್‌ಆರ್‌ಟಿಸಿ ನೂ ಫೇಲ್ ಆಗಿದೆ. ಕೆಎಸ್‌ಆರ್‌ಟಿಸಿಯಲ್ಲಿ ನೂರು ಕೋಟಿ ರೂಪಾಯಿ ನಷ್ಟವಾಗಿದೆ. ಇಷ್ಟೆಲ್ಲಾ ಇದ್ದರೂ ಬಸ್ಸುಗಳನ್ನು ಓಡಿಸುವುದಕ್ಕಾಗುವುದಿಲ್ಲ. ಬಸ್ಸುಗಳ ತೊಂದರೆ ಬಹಳ ಇದೆ. ಸಾರಿಗೆ ಸಚಿವರು ಇದ್ದರು, ಅವರೂ ಕೂಡ ಹೊರಗಡೆ ಹೋಗಿದ್ದಾರೆ. ಆದುದರಿಂದ ಇವತ್ತಿನ ದಿವಸ ಏನು ಮಾಡಬೇಕಾದಿದೆ ಎಂದರೆ ಬಸ್ಸಿನ ಬಗ್ಗೆ ಹೆಚ್ಚಿಗೆ ಗಮನ ಕೊಡಬೇಕು. ಮತ್ತು ಯಾವ ಯಾವ ರೂಟ್ ಎಂದು ಐಡೆಂಟಿಫೈ ಮಾಡಬೇಕು. ನಾನು ಸಾರಿಗೆ ಸಚಿವರ ಹತ್ತಿರ ಮಾತನಾಡಿದೆ. ಮೆಯಿನ್ ರೋಡಿನಲ್ಲಿ ಖಾಸಗಿ ಬಸ್ಸುಗಳು ಓಡಾಡುತ್ತಿವೆ. ಬೆಂಗ ಳೂರು-ಮೈಸೂರು ಹೈವೇನಲ್ಲಿ ಖಾಸಗಿ ಬಸ್ಸುಗಳು ಓಡಾಡುತ್ತವೆ. ಹಳ್ಳಿಗಳ ಕಡೆ ಹೋಗುವುದಿಲ್ಲ. ಆದುದರಿಂದ ಸಂಪೂರ್ಣವಾಗಿ ಯಾವುದಾದರೂ ಒಂದು ಹೊಸ ಯೋಜನೆಯನ್ನು ತಮಿಳುನಾಡು ರೀತಿಯಲ್ಲಿ ತರುತ್ತೀರಾ ಅಥವಾ ಗುಜರಾತ್ ರೀತಿ ಮಾಡುತ್ತೀರಾ ಅಥವಾ ಯಾವ ರೀತಿ ಅಳವಡಿಸುತ್ತೀರೋ ಗೊತ್ತಿಲ್ಲ. ಕೂಡಲೇ ಬಸ್ಸಿನ ವ್ಯವಸ್ಥೆ ಮಾಡಬೇಕು. ಇಲ್ಲದಿದ್ದರೆ ಎರಡು ಸಾವಿರ ಬಸ್ಸುಗಳನ್ನು ಕೊಂಡು ಕೆಎಸ್‌ಆರ್‌ಟಿಸಿಯಲ್ಲಿ ಇಟ್ಟುಕೊಂಡು ಗ್ರಾಮಾಂತರ ಸರ್ವೀಸ್ ಕೊಡಬೇಕು. ಎಲ್ಲಿ ಹೋದರೂ ಬಸ್ಸಿನ ಬಗ್ಗೆ ತೀವ್ರ ಪ್ರತಿಭಟನೆ ಇದೆ.

ಶ್ರೀ ಜಿ.ಬಿ. ಶಿವಕುಮಾರ್:- ಈಗ ಮಾನ್ಯ ನಾಗೇಗೌಡರು ರಾಜ್ಯಪಾಲರ ಭಾಷಣದ ಮೇಲೆ ವಂದನೆ ಸಲ್ಲಿಸತಕ್ಕದ್ದನ್ನು ಸಂಬಂಧಪಟ್ಟ ಇಲಾಖೆಯವರಿಗೆ ಸುದೀರ್ಘವಾಗಿ ಅರ್ಥಗರ್ಭಿತವಾಗಿ ಹೇಳಿದಾಗ ಸರ್ಕಾರದಿಂದ ಸಾರಿಗೆ ಮಂತ್ರಿಗಳು ಇಲ್ಲ, ಪಂಚಾಯತ್ ರಾಜ್ ಮಂತ್ರಿಗಳು ಇಲ್ಲ, ವಿದ್ಯಾ ಸಚಿವರು ಇಲ್ಲ, ಸಾರಿಗೆ ಇಲಾಖೆಯ ಬಗ್ಗೆ ಅವರು ಬಹಳ ಪ್ರಮುಖವಾಗಿ ಹೇಳುತ್ತಿದ್ದಾರೆ. ಆದುದರಿಂದ ಸಾರಿಗೆ ಸಚಿವರ ಗಮನ ಇತ್ತಕಡೆ ಹರಿಯಬೇಕು.

ಶ್ರೀಮತಿ ಪ್ರಮೀಳಾ ನೇಸರ್ಗಿ : ಮಾನ್ಯ ನಾಗೇಗೌಡರು ಭಾಷಣ ಮಾಡುವುದಕ್ಕೆ ಶುರು ಮಾಡಿದ ಮೇಲೆ ಒಬ್ಬಿಬ್ಬರು ಮಂತ್ರಿಗಳು ಎದ್ದು ಹೋಗುವುದಕ್ಕೆ ಶುರು

ಮಾಡಿದರು. ನಾಗೇಗೌಡರು ಅವರ ಸಬ್ಜೆಕ್ಟ್ ಬಗ್ಗೆ ಹೇಳುವುದಕ್ಕೆ ಮುಂಚೆ ಸಿಂಧ್ಯ ಅವರು ಆಚೆ ಹೋದರು.

ಶ್ರೀ ಎಸ್.ಹೆಚ್ ಕೌಜಲಗಿ : ಈಗ ಬಿ.ಎ.ಸಿ.ಮೀಟಿಂಗ್ ನಡೆಯುತ್ತಿದೆ.

ಶ್ರೀ ಕೆ.ಎನ್. ನಾಗೇಗೌಡ : ಹೌದು ಬಿಸಿನೆಸ್ ಅಡ್ವೈಸರಿ ಕಮಿಟಿ ಮೀಟಿಂಗ್ ಇದೆ. ಸದನದ ಕಾರ್ಯಕಲಾಪಗಳ ಬಗ್ಗೆ ತೀರ್ಮಾನ ಕೈಗೊಳ್ಳಲು ಅವರು ಅಲ್ಲಿ ಹೋಗಿದ್ದಾರೆ. ಏಕೆಂದರೆ 7ನೇ ತಾರೀಖು ಸಭೆಯನ್ನು ಮುಗಿಸಬೇಕೆಂದು ಇದೆಯಲ್ಲಾ ಅದಕ್ಕೋಸ್ಕರ ಹೋಗಿದ್ದಾರೆ. ಬಹುಶ: ಬರುತ್ತಾರೆ. ಈಗ ಮಾನ್ಯ ಬಚ್ಚೇಗೌಡರು ಬರೆದುಕೊಳ್ಳುತ್ತಿದ್ದಾರೆ. ಅವರು ಮಾನ್ಯ ದೇವೇಗೌಡರಿಗೆ ಕೊಡುತ್ತಾರೆ, ಏನೂ ತೊಂದರೆ ಇಲ್ಲ. ಬಸ್ಸುಗಳದ್ದು ಎಲ್ಲರಿಗೂ ಗೊತ್ತಿರುವ ವಿಚಾರ.

ದೇವೇಗೌಡರು ಮಣ್ಣಿನ ಮಗ. ಜಾತಿ ಹಿಡಿದು ಮಾತನಾಡಿದರೆ ತಪ್ಪೇನೂ ಇಲ್ಲ. ಮಾನ್ಯ ಬಸವಲಿಂಗಪ್ಪನವರು ಒಂದು ಮಾತು ಹೇಳಿದ್ದರು., ಯಾರು ಜಾತಿ ಹಿಡಿದು ರಾಜಕಾರಣ ಮಾಡುವುದಿಲ್ಲ, ಜಾತಿ ಹಿಡಿದು ಮೀಸಲಾತಿ ಬಗ್ಗೆ ಮಾತನಾಡುರುದಿಲ್ಲ ಅವರು ಆತ್ಮಕ್ಕೆ ಮೋಸ ಮಾಡಿಕೊಂಡ ಹಾಗೆ ಎಂದು. ನಮ್ಮ ರಾಜ್ಯದಲ್ಲಿ ಎರಡು ಜನ ಹಿಂದುಳಿದ ಜನಾಂಗಕ್ಕೆ ಸೇರಿದ ಮುಖ್ಯ ಮಂತ್ರಿಗಳು ಇದ್ದರು. ದೇವರಾಜ ಅರಸು ಅವರನ್ನು ಬಿಡಿ, ಅವರು ಗ್ರೇಟ್ ಮ್ಯಾನ್, ನೀವು ನಾವು ಅರಸು ಹತ್ತಿರ ಇದ್ದವರು. ಅವರ ಬಗ್ಗೆ ಮಾತನಾಡುವುದಕ್ಕಾಗುವುದಿಲ್ಲ. ಯಾರು ಒಕ್ಕಲಿಗ ದೇವೇಗೌಡ ಎಂದು ಪಟ್ಟ ಕಟ್ಟಿದ್ದು ಎಲ್ಲರಿಗೂ ಗೊತ್ತಿರುವ ವಿಚಾರ ಅವರ ಕಾಲದಲ್ಲಿ ಮುಂದುವರಿದ ಜಾತಿಯನ್ನು ನೀವೇ ಬೈದ್ದೀದೀರಿ ನಮ್ಮನ್ನು ನಿಮ್ಮ ಗೌಡರು ನಮಗೆ ಯಾವುದೂ ಕೊಡುವುದಿಲ್ಲ. ಮೀಸಲಾತಿ ಬಗ್ಗೆ . ಇಲ್ಲಿ ನಾವು ಸದನದಲ್ಲಿ ನಮ್ಮ ಆತ್ಮವನ್ನು ಬಿಟ್ಟುಕೊಂಡು ಸರಿಯಾಗಿ ಮಾತನಾಡಿದರೆ ಮೋಸ ಆಗುವುದಿಲ್ಲ. ಸೊಫೆಸ್ಟಿಕೇಟೆಡ್ ವರ್ಡ್ಸ್ ಉಪಯೋಗಿಸುವುದಕ್ಕೆ ನನರೂ ಬರುತ್ತದೆ. ನಾಜೂಕಾದ ಭಾಷೆಯಿಂದ ಇಂಥ ಸಮಸ್ಯೆ ಬಗೆಹರಿಯುವುದಿಲ್ಲ. ಯಾರು ಮುಂದುವರಿದವರು ಆರ್ಥಿಕವಾಗಿ ಕರ್ನಾಟಕದ ರಾಜಕೀಯ ತನ್ನ ಕೈಯಲ್ಲಿ ಇದೆ ಎಂದು ಪಟ್ಟ ಕಟ್ಟಿಸಿ ಕೊಂಡಿದ್ದರೋ ಅವರ ಕಾಲದಲ್ಲಿ ಜಿಲ್ಲಾ ಪಂಚಾಯತ್ ಮತ್ತು ತಾಲ್ಲೂಕು ಪಂಚಾ.ಯಿತಿಯಲ್ಲಿ ಕುರುಬರಿಗೆ, ಕುಂಬಾರರಿಗೆ, ಅಗಸರಿಗೆ, ಯಾರು ರಾಜಕೀಯವನ್ನೇ ನೋಡದೇ ಇದ್ದವರು, ಚುನಾವಣೆಯಲ್ಲಿ ಗೆದ್ದು ಹೋದರಲ್ಲಾ ಅದಕ್ಕೆ ನಾನು ಪ್ರಶಂಸೆ ಆಗತಕ್ಕ ಮಾತನ್ನು ಹೇಳಿದೆ. ಮಾನ್ಯ ಶಿವನಂಜಪ್ಪನವರು ಎಲ್ಲೋ ಹೋಗಿದ್ದಾರೆ. ಆದುದರಿಂದ ನ್ನು ಬಸವಲಿಂಗಪ್ಪನವರ ಛೇಂಬರ್ ನಲ್ಲಿ ನಾನು ಮತ್ತು ಶಿವನಂಜಪ್ಪನವರು ಇಬ್ಬರೂ...

ಶ್ರೀ. ಬಿ.ಬಿ. ಚಿಮ್ಮನ್ಣಕಟ್ಟಿ : ಮಾನ್ಯ ನಾಗೇಗೌಡರ ಮೀಸಲಾತಿಯನ್ನು ತಮ್ಮ ಸರ್ಕಾರ ತಂದಿದೆ ಎಂಬ ಮಾತನ್ನು ಈ ಸದನಕ್ಕೆ ಹೇಳುತ್ತಿದ್ದಾರೆ. ಮೀಸಲಾತಿ ಬಗ್ಗೆ ತಿದ್ದುಪಡಿ ಮಾಡಿದವರು ಕಾಂಗ್ರೆಸ್ ಎಂಬುದನ್ನು ಅವರು ಮರೆತಿದ್ದಾರೆ.

ಶ್ರೀ ಕೆ.ಎನ್, ನಾಗೇಗೌಡ : ತಾವು ಪ್ರಾರಂಭದಲ್ಲಿ ಇರಲಿಲ್ಲ. ಅಧ್ಯಕ್ಷರು ಇದ್ದಾಗ ಹೇಳಿದ್ದೆ. ಮಾನ್ಯ ವೀರೇಂದ್ರ ಪಾಟೀಲರ ಕಾಲದಲ್ಲಿ ಯಾವ ರೀತಿ ನಡೆಯಿತು, ಬಂಗಾರಪ್ಪನವರ ಕಾಲದಲ್ಲಿ ಯಾವ ರೀತಿ ನಡೆಯಿತು, ಬಸವಲಿಂಗಪ್ಪನವರು ಮತ್ತು ನಾವು ನೀವು ಕುಳಿತಾಗ ಏನು ಮಾಡಿದೆವು, ನಂತರ ಮೊಯಿಲಿಯವರು ಬಂದಾಗ ಘೋರ್ಪಡೆಯವರು ಏತಕ್ಕೆ ರಾಜೀನಾಮೆ ಕೊಟ್ಟರು , ಯಾವ ಕಾರಣಕ್ಕೆ ರಾಜೀನಾಮೆ ಕೊಟ್ಟರು ಎಂದು ವಿಶ್ಲೇಷಣೆ ಮಾಡಿದೆ ಮೀಸಲಾತಿ ತಂದರೂ ಜಾರಿಗೆ ಕೊಡಬೇಕಲ್ಲ.

ನಾವು ಜನತಾ ದಳದ ಶಾಸಕಾಂಗ ಪಕ್ಷದಲ್ಲಿ ಡೀಲಿಮಿಟೇಷನ್ ಸರಿಯಾಗಿಲ್ಲ, ಮೀಸಲಾತಿ ಸರಿಯಾಗಿಲ್ಲ, ಅದನ್ನು ಸರಿ ಮಾಡಬೇಕಾಗಿದೆ, ನಾವು ಗೆದ್ದು 3 ತಿಂಗಳಾಗಿದೆ, ಚುನಾವಣೆಯನ್ನು ಮುಂದಕ್ಕೆ ಹಾಕಿ ಎಂದು ಮುಖ್ಯ ಮಂತ್ರಿಗಳನ್ನು ಕೇಳಿದೆ. 70-80 ಎಂ.ಎಲ್.ಎ. ಗಳೆಲ್ಲಾ ಫೋರ್ಸ್ ಮಾಡಿದೆವು. ಆದರೆ ದೇವೇಗೌಡರು ಮಾರ್ಚಿ 31ರೊಳಗೆ ಇದು ಆಗಲೇಬೇಕು ಎಂದು ಹೇಳಿದರು. ಅದನ್ನೇ ಪೊಲಿಟಿಕಲ್ ವಿಲ್ ಎಹದು ಹೇಳಿದೆ. ಯಾವ ರಾಜಕೀಯ ಪಕ್ಷ ಆಡಳಿತ ಮಾಡುತ್ತಿವೆ, ಅದೇ ಆಡಳಿತ ಪಕ್ಷದ ಶಾಸಕಾಂಗ ಪಕ್ಷದಲ್ಲಿ ಬೇಡ ಅಂದರೂ ಮಾಡಿದರಲ್ಲಾ, ಮಾಡಿ ಸಕ್ಸಸ್‌ಫುಲ್ ಅದರಲ್ಲೂ ಅದು . ದೊಡ್ಡ ಸಾಧನೆ ಎಂದು ಹೇಳಿದೆನೇ ವಿನಹ ರಾಜೀವ್ ಗಾಂಧಿಯವರ ಜೊತೆಯಲ್ಲಿ ಮೀಸಲಾತಿ • ಬಗ್ಗೆ ನೀವು ನುವು ಚರ್ಚೆ ಮಾಡಿರುವುದ್, ತ್ರೀ ಟೈರ್ ಸಿಸ್ಟಂ ಚರ್ಚೆ ಮಾಡಿರುವುದು ಅದೆಲ್ಲವೂ ಕಾರಣ ಇದೆ. ಯಾವುದೇ ಮೀಸಲಾತಿ ಆಗಲೀ, ಹುಬ್ಬಳ್ಳಿಯಂಥ ಸಮಸ್ಯೆಯಾಗಲೀ ಒಂದು ರಾಜಕೀಯ ಪಕ್ಷ, ಸರ್ಕಾರ ಮಾಡುವುದಕ್ಕೆ ಸಾಧ್ಯವೇ ಇಲ್ಲ. ಹತ್ತಾರು ಕೈಗಳು ಒಟ್ಟಿಗೆ ಕೂಡಬೇಕಾಗುತ್ತದೆ. ಹತ್ತಾರು ವರ್ಷಗಳು ಬೇಕಾಗುತ್ತವೆ. ಯಾವುದೋ ಒಂದು ಕಾಲದಲ್ಲಿ ವೀರೇಂದ್ರ ಪಾಟೀಲರು: ಅವರು ಹೇಮಾವತಿ ಯೋಜನೆಗೆ ಫೌಂಡೇಷನ್‌ಹಾಕಿದರು. ದೇವರಾಜ ಅರಸ್ ಅವರು ಕೆಲಸ ಮಾಡಿದರು: ಗುಂಡೂರಾಯರು ನಾಲೆ ನೀರು ಎತ್ತಿದರು. ಅಂದರೆ ಗುಂಡೂರಾಯರೊಬ್ಬರಿಗೇ ಇದು ಸೇರುತ್ತದೆ ಎನ್ನತಕ್ಕಂಥದ್ದಲ್ಲ. ಒಂದು ಸರ್ಕಾರ ಅಂದರೆ ಕಂಟಿನ್ಯೂಯಸ್ ಗೌರ್ನಮೆಂಟ್ ಅಂದರೆ, ಕಂಟಿನ್ಯೂಯಸ್ ಫಂಕ್ಷನರಿ ಅಂದರೆ ಅದರ ಷೇರ್ ಎಲ್ಲರಿಗೂ ಇರುತ್ತದೆ. ಯಾರೋ ವಿರೋಧಪಕ್ಷದವರು ಒಂದು ವಿಚಾರ ಪ್ರಸ್ತಾಪ ಮಾಡಿ ಅದು ಜಾರಿಗೆ ಬಂದರೆ ಆ ಕೀರ್ತಿ ಅವರಿಗೆ ಸೇರುತ್ತದೆ, ಸೇರುವುದಿಲ್ಲ ಎಂದು ಹೇಳುವುದಿಲ್ಲ. ಅದೇ ನಮ್ಮ ಡೆಮಾಕ್ರಸಿಯೊಳಗಡೆ ನಮ್ಮ ಪಾರ್ಲಿಮೆಂಟರಿ ಸಿಸ್ಟಂನೊಳಗಡೆ ಇರತಕ್ಕದ್ದು. ಅದಕ್ಕೆ ಎಲ್ಲರದೂ ಕೂಡ ಕಾಂಟ್ರಿಬ್ಯೂಷನ್ ಇದೆ, ಎಲ್ಲರೂ ಕೂಡ ಭಾಗಿಯಾಗುತ್ತಾರೆ. ಭಾಗಿಯಾಗುವುದಿಲ್ಲ ಎಂದು ಹೇಳುವುದಕ್ಕಾಗುವುದಿಲ್ಲ. ಆಮೇಲೆಮಾನ್ಯ ಅಧ್ಯಕ್ಷರೆ, ಈ ಕೆ.ಎಸ್.ಆರ್.ಟಿ,ಸಿ ಬಸ್ಸುಗಳನ್ನು ಸರಿ ಮಾಡಬೇಕು. ಹೆಚ್ಚು ಬಸ್‌ಗಳನ್ನು ಹಾಕಬೇಕು. ಇಲ್ಲದಿದ್ದರೆ ಐಡೆಂಟಿಫೈ ಮಾಡಿ ರಾಷ್ಟ್ರೀಕರಣನ್ನು ಯಾವ ಯಾವ ಜಿಲ್ಲೆಯಲ್ಲಿ ಮಾಡಿಲ್ಲ ಆ ಕಡೆ ಮಾಡಬೇಕೆನ್ನತಕ್ಕದ್ದನ್ನು ಹೇಳಿ ಕೊನೆಯದಾಗಿ ನೀರಾವರಿ ಬಗ್ಗೆ ನ್ನು ಒಂದು ವಿಚಾವವನ್ನು ಹೇಳಬೇಕಾಗಿದೆ.

ಒಬ್ಬ ಮಾನ್ಯ ಸದಸ್ಯರು:- ಹಿರಿಯ ಸದಸ್ಯರಾದ ಮಾನ್ಯ ನಾಗೇಗೌಡರು ಜ್ವಲಂತ ಸಮಸ್ಯೆಗಳಾದ ನೀರು, ಬಸ್ಸು, ರಸ್ತೆ ಈ ವಿಚಾರಗಳ ಬಗ್ಗೆ ಇಡೀ ಸದನದ ಗಮನವನ್ನು ಸೆಳೆದು ಸರ್ಕಾರಕ್ಕೆ ಅನೇಕ ಸಲಹೆಗಳನ್ನು ಕೊಡುತ್ತಾ ಇರತಕ್ಕ ಸಮಯದಲ್ಲಿ ಸರ್ಕಾರದ ಪರವಾಗಿ ಉತ್ತರಿಸುವಂಥ ಇಲಾಖಾ ಮಂತ್ರಿಗಳಾಗಲೀ, ಜವಾಬ್ದಾರಿ ವ್ಯಕ್ತಿಗಳಾಗಲೀ ಸದನದಲ್ಲಿ ಕಾಣದೇ ಇರುವಂಥ ಸಂದರ್ಭದಲ್ಲಿ ಸದನವನ್ನು ಮುಂದೂಡುವುದು ಸೂಕ್ತ ಎಂದು ಕೊಡುತ್ತಿದ್ದೇನೆ ಸ್ವಾಮಿ.

ಶ್ರೀ ಕೆ.ಎನ್. ನಾಗೇಗೌಡ : ಅಧ್ಯಕ್ಷರೇ, ಕೊನೆಯದಾಗಿ ಒಂದು ಮಾತನ್ನು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ. ಅದು ನೀರಾವರಿ ವಿಚಾರ. ಮಾನ್ಯ ಅಧ್ಯಕ್ಷರೇ, ಇವತ್ತು ನಮ್ಮ ಕರ್ನಾಟಕ ರಾಜ್ಯದಲ್ಲಿ ನಾವು ಇನ್ನೂ ನೀರಾವರಿಗೆ ಹೆಚ್ಚು ಗಮನ ಕೊಡಬೇಕಾಗಿರತಕ್ಕ ಪ್ರಸಂಗ ಬಂದಿದೆ. ಅದರಲ್ಲೂ ಮೈನರ್ ಇರಿಗೇಶನ್ಗೆ ಹೆಚ್ಚು ಒತ್ತನ್ನು ಕೊಡಬೇಕು. ನೀವುನಾ ವು ಕೌನ್ಸಿಲ್‌ನಲ್ಲಿ ಒತ್ತಾಯ ಮಾಡಿದ್ದೆವು. ತಮಗೆ ಜ್ಞಾಪಕ ಇದೆ ಎಂದು ಕಾಣುತ್ತದೆ. ದೊಡ್ಡ ನೀರಾವರಿಗೆ ಗಮನ ಕೊಡುವುದರ ಜೊತೆಗೆ ನಮ್ಮಲ್ಲಿ ಸಣ್ಣ ನೀರಾವರಿಗೆ ಹೆಚ್ಚು ಗಮನ ಕೊಡಬೇಕಂದು ಬಹಳಷ್ಟು ಭಾಷಣ ಮಾಡಿದ್ದುದು ತಮಗೆ ಜ್ಞಾಪಕ ಇರಬಹುದು ಎಂದು ನಾನು

ಅಂದುಕೊಂಡಿದ್ದೇನೆ. ಅಲ್ಲಿ ನಾನು ಒಂದು ಮಾತನ್ನು ಹೇಳಿದೆ, ನಮ್ಮಲ್ಲಿ 40 ಸಾವಿರ ಟ್ಯಾಂಕ್‌ಗಳಿವೆ. ಅದಕ್ಕೆ ಹೆಚ್ಚು ಹಣವನ್ನು ಕೊಟ್ಟು ರಿಪೇರಿ ಮಾಡತಕ್ಕದ್ದು ಮತ್ತು ಹಳೇ ನಾಲೆಗಳ ರಿಪೇರಿ ಮಾಡತಕ್ಕದ್ದರ ಬಗ್ಗೆ ಪ್ರಸ್ತಾಪ ಮಾಡಿದೆವು. ಇವತ್ತು ಡೆಕ್ಕನ್‌ಹೆರಾಲ್ಡ್ ರಿಪೋರ್ಟ್ ಯಾವುದು ಎಂದರೆ ನಮ್ಮ ಕೆ.ಆರ್.ಎಸ್.ನಲ್ಲಿ ವಿಶ್ವೇಶ್ವರಯ್ಯ ಕೆನಾಲ್‌ಒಡೆದಿರುವ ಬಗ್ಗೆ ನಮ್ಮ ಶಿವಕುಮಾರ್ ಕಾನ್‌ಸ್ಟಿಟ್ಯುಯೆನ್ಸಿ ಶಿವಳ್ಳಿ ಹತ್ತಿರ, ಅದು ಕೆ.ಆರ್.ಎಸ್.ಡ್ಯಾಮ್ ಕೆಳಗಡೆ ಇರತಕ್ಕ ನಾಲೆ. ಅಲ್ಲಿ 50-60 ಸಾವಿರ ರೂ.ಗಳ ಬೆಳೆಯೂ ನಷ್ಟ ಆಯಿತು, ಒಂದು ನಾಲೆ ಒಡೆದುಹೋಯಿತು. ಆ ನಾಲೆ ಒಡೆದುಹೋದ ಬಗ್ಗೆ ಇವತ್ತಿನ ದಿವಸ ಇವರು ಎಡಿಟೋರಿಯಲ್ ಬರೆಯುತ್ತಾರೆ, ನಮ್ಮ ಫೀಲ್ಡ್ ಆಫ್ ಸೈನ್ಸ್ ಅಂಡ್ ಟೆಕ್ನಾಲಜಿಯನ್ನು ಮಾಡಿಕೊಳ್ಳದೇ ಇರತಕ್ಕದ್ದು ಮತ್ತು ನೀರಾವರಿ ಇಲಾಖೆ ಇಂಜಿನಿಯರ್ಸ ನೆಗ್ಲಿಜಿಯನ್ಸ್ ಎಷ್ಟಿದೆ ಎನ್ನತಕ್ಕದ್ದನ್ನು it is a matter of concern ಎಂದು ಬರೆದಿದ್ದಾರೆ. ಒಂದು ಸಣ್ಣ ವಿಚಾರ ಇವತ್ತಿನ ಡೆಕ್ಕನ್‌ಹೆರಾಲ್ಡ್‌ನಲ್ಲಿ ಬಂದಿರುವುದು. ನಾವು ತಿಳಿದುಕೊಂಡಿದ್ದೇವೆ ಒಂದು ನಾಲೆ ಒಡೆದುಹೋದರೆ ಒಂದು ತೂಬು ಒಡೆದುಹೋದರೆ, ಲೀಕೇಜ್ ಆದರೆ ಅದರ ಬಗ್ಗೆ ಸಾಮಾನ್ಯವಾಗಿ ಹೆಚ್ಚು ಗಮನ ಕೊಡುವುದಿಲ್ಲ. ಸರಿ ಮಾಡಪ್ಪ ಎಂದು ಹೇಳುತ್ತೇನೆ. ಆದರೆ ಪತ್ರಿಕೆಯವರು ಇಂಥಹ ಕಡೆ ಗಮನ ಕೊಟ್ಟು 'Matter for concern' ಎಂದು ಡೀಟೈಲಾಗಿ ಬರೆದಿದ್ದಾರೆ. ಏತಕ್ಕೆ ಇದು ಬಂತು ಎದಬುದನ್ನು ವಿಮರ್ಶೆ ಮಾಡಬೇಕು ಎಂದು ನನಗನ್ನಿಸುತ್ತದೆ. ಇವತ್ತು ಬಂದಿರುವುದೇಂದರೆ ನಮ್ಮ ಕೆ,ಆರ್.ಎಸ್. ಹತ್ತಾರ್ರುಗಳ ಹಿಂದೆ ನಿರ್ಮಾಣವಾಗಿ ಚಾನೆಲ್ ಎಲ್ಲಾ ಇದೇ ರೀತಿ ಆಗಿವೆ

ಶ್ರೀ ಜಿ.ಬಿ. ಶಿವಕುಮಾರ್ : ಕಳೆದ ವಾರ ಹೊಸ ಮದ್ದೂರು ಶಾಖೆ ಎಂದು ಹೇಳತಕ್ಕ ವಿಶ್ವೇಶ್ವರಯ್ಯ ಕೆನಾಲ್‌ನಲ್ಲಿ ಬರತಕ್ಕದ್ದು, ಅಲ್ಲಿ ಮದ್ದೂರಿನ ಕೊನೆಯ ಭಾಗ ಮತ್ತು ಮಳವಳ್ಳಿ ಕೊನಯ ಭಾಗಕ್ಕೆ ಅಂದರೆ ಅವರ ಕ್ಷೇತ್ರ ಮತ್ತು ಮಹೇಶ್‌ಚಂದ್ರ ಅವರ ಕ್ಷೇತ್ರಕ್ಕೆ ಹೋಗತಕ್ಕದ್ದು. ಅವರಿಗೆ ಪೂರಕವಾಗಿ ಏನು 50-60 ವರ್ಷದ ಹಿಂದೆ ಎಂಬ್ಯಾಕ್ಮೆಂಟ್ ಇದನ್ನೆಲ್ಲಾ ಮಾಡಿದ್ದಾರೆ ಇದು ಸಂಪೂರ್ಣ ಶಿಥಿಲವಾಗಿ ಹೋಗಿದೆ. ಈಗ ಬಹುಶ: ಆಗಿರತಕ್ಕದ್ದು ಪ್ರತಿ ಸಾರಿ ಮುಂಚೆ ನೀರು ಬಿಟ್ಟಾಗಲೂ ಯಾವ ಟೈಮಿನಲ್ಲಿ ಎಲ್ಲಿ ಬೇಕಾದರೂ ಆಗಬಹುದು. ಆದರೆ ಪರಿಸ್ಥಿತಿ ಏನಾಗಿದೆ? 5 ದಿವಸ ಮುಂದೆ ಹೋಗಿದೆ ಈಗ. ಈಗ ಮಳೆ ಇಲ್ಲ, ಸಾಕಷ್ಟು ಬೆಳೆ ಒಣಗಿದೆ. ಮಂಡ್ಯ ಜಿಲ್ಲೆಯ ವಿಶ್ವೇಶ್ವರಯ್ಯ ನಾಲಾ ಅಚ್ಚುಕಟ್ಟಿನ ಕೊನೆಯ ಭಾಗದಲ್ಲಿ ಮದ್ದೂರು ಮತ್ತು ಮಳವಲ್ಲಿ ಭಾಗದಲ್ಲಿ ಬೆಳೆ ಸಂಪೂರ್ಣ ಒಣಗಿದೆ. ಅಂಥಹ ಕಡೆ ನಮ್ಮ ಇಲಾಖೆಯವರು ಜಾಸ್ತಿ ಗಮನ ಕೊಡಬೇಕು.

ಛೇರ್ಮನ್ : ನಿಮ್ಮ ಪ್ರಕಾರ ಅದು ಜರೂರು ಪ್ರಶ್ನೆಯಾಗಿದ್ದರೆ ಪ್ರತ್ಯೇಕವಾಗಿ ಪ್ರಸ್ತಾಪ ಮಾಡಿರಿ.

ಶ್ರೀ ಕೆ.ಎನ್ ನಾಗೇಗೌಡ ; ಕೊನೆಯದಾಗಿ ಒಂದು ಮಾತು ಹೇಳುತ್ತಾರೆ-

"...... the canals are likely to breach and they should take preventive steps in time as part of its modernisation scheme,"

ನಮ್ಮ ವಿಶ್ವೇಶ್ವರಯ್ಯ ನಾಲಾ ಮಾಡ್ರನೈಸೇಷನ್ ಡಿಲೇ ಆದ ಪ್ರಯುಕ್ತ ಇದೆಲ್ಲಾ ಆಗಿದೆ ಎನ್ನತಕ್ಕ ಮಾತನ್ನು ಅವರು ಹೇಳಿದ್ದಾರೆ. ಇದು ಬಹಳ ಸಣ್ಣ ವಿಚಾರ ಆದರೂ ಇದರ ಹಿಂದೆ ಇರತಕ್ಕ ಮಹತ್ವದ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ನಾನು ನಮ್ಮ ಸರ್ಕಾರಕ್ಕೆ ಮುಖ್ಯಮಂತ್ರಿಗಳಿಗೆ ಈಗಾಗಲೇ ನಾನು ಕಾಗದ ಬರೆದಿದ್ದೇನೆ.

ಅವರು ನನಗೆ ಉತ್ತರ ಕೊಟ್ಟಿದ್ದಾರೆ. ಇನ್ನು ಮೂರು ವರ್ಷಗಳಲ್ಲಿ ಈ ಕೆನಾಲ್ ಮಾಡ್ರನೈಸೇಷನ್ ಮುಗಿಯಬೇಕು. ಇಲ್ಲದೆ ಹೋದರೆ ನಾವು ಯಾರೂ ಮುಖ ತೋರಿಸಿಕೊಂಡು ಓಡಾಡುವುದಕ್ಕಾಗುವುದಿಲ್ಲ. ಕೋಟ್ಯಾಂತರ ರೂಪಾಯಿ ಬೆಳೆ ನಮ್ಮ ಎರಡು ತಾಲ್ಲೂಕುಗಳಲ್ಲಿ ನಮ್ಮ ಸೋಮಶೇಖರ್ ಅವರ ಕಾನ್‌ಸ್ಟಿಟ್ಯುಯೆನ್ಸಿ ನಮ್ಮ ಮಹೇಶ್ ಅವರ ಕಾನ್‌ಸ್ಟಿಟ್ಯುಯೆನ್ಸಿ ಮತ್ತು ನನ್ನದು, ಸ್ವಲ್ಪ ಪುಟ್ಟಣ್ಣಯ್ಯನವರದು, ನಮ್ಮ ವಿಜಯಲಕ್ಷ್ಮಮ್ಮ ಇವರಿಗೆ ಸೇರಿರತಕ್ಕ ಕ್ಷೇತ್ರಗಳಲ್ಲ ಬರುವ ಬಹುಳಷ್ಟು ನಾಲೆಗಳೆಲ್ಲಾ ಶಿಥಿಲವಾಗಿವೆ, ಎಲ್ಲಾ ಒಡೆದುಹೋಗುತ್ತಿವೆ. ನಮ್ಮ ಲೀಡರ್ ಆಗಿದ್ದ ಮಾನ್ಯ ಕೃಷ್ಣ ಅವರೇ ಡೆಪ್ಯುಟಿ ಚೀಫ್ ಮಿನಿಸ್ಟರ್ ಆಗಿದ್ದರು. ಸುಮಾರು 25 ಕೋಟಿ ರೂಪಾಯಿ.....

ಒಬ್ಬ ಮಾನ್ಯ ಸದಸ್ಯರು : ಈಗ ಸಿ.ಡಿ.ಎಸ್. ನಾಲೆ ಹಳೆಯ ಅಚ್ಚುಕಟ್ಟು ಪ್ರದೇಶ. ನಾಲೆ ಒಡೆದುಹೋಗಿ ರೈತರಿಗೆ 6 ಲಕ್ಷ ರೂಪಾಯಿಗಳನ್ನು ಸರ್ಕಾರ ಕೊಡಬೇಕಾಗಿದೆ. ನೂರಾರು ವರ್ಷಗಳ ಹಳೆಯ ನಾಲೆಗಳ ಬಗ್ಗೆ ಸರ್ಕಾರ ಗಮನ ಕೊಡದೆ ಹೂಳು ತೆಗೆಸದೇ ಇದ್ದರೆ ರೈತರಿಗೂ ಅನಾನುಕೂಲವಾಗುತ್ತದೆ ಮತ್ತು ಸರ್ಕಾರಕ್ಕೂ ನಷ್ಟವಾಗುತ್ತದೆ. ಆದ್ದರಿಂದ ದಯವಿಟ್ಟು ಸರ್ಕಾರ ಇದರ ಬಗ್ಗೆ ಗಮನ ಕೊಟ್ಟು ಸಲೀಸಾಗಿ ನೀರು ಹೋಗುವಂತೆ ವ್ಯವಸ್ಥೆಯನ್ನು ಮಾಡಿಕೊಡಬೇಕೆಂದು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ

ಶ್ರೀ ಕೆ.ಎನ್. ನಾಗೇಗೌಡ : ಲಿಫ್ಟ್ ಇರಿಗೇಷನ್‌ಮಾಡತಕ್ಕದ್ದು ದೊಡ್ಡ ವಿಚಾರವಲ್ಲ. ಏಕೆಂದರೆ ಮೊದಲು ಕೃಷ್ಣ ಕಾವೇರಿ ಬೇಸಿನ್‌ನಲ್ಲಿ ನೀರನ್ನು ಕ್ರೋಢೀಕರಿಸಿಕೊಳ್ಳಿ. ಅಣೆಕಟ್ಟು ಕಟ್ಟಿ ನೀರು ನಿಲ್ಲಿಸಿಕೊಳ್ಳಿ. ನಂತರ ನಮ್ಮ ಎರಡು ಡಿಸ್‌ಪ್ಯೂಟ್ಸ್ ಎಲ್ಲಾ ಮುಗಿದಮೇಲೆ ನಂತರ ನೀವು ಲಿಫ್ಟ್ ಮಾಡಿ. ಮಾನ್ಯ ಅಧ್ಯಕ್ಷರೇ ಒಂದು ಮಾತು ತಾವು ಬೇಜಾರು ಮಾಡಿಕೊಳ್ಳಬಾರದು. ನಾನು ಹಿಂದೆಯೂ ಹೇಳಿದ್ದೆ. ನಮ್ಮಲ್ಲಿ ಬೇಕಾದಷ್ಟು ಲಿಫ್ಟ್ ಇರಿಗೇಷನ್ ಎಷ್ಟೆಷ್ಟು ಸ್ಯಾಂಕ್ಷನ್ ಮಾಡಿದ್ದಾರೆ. ಆ ಲಿಫ್ಟ ಇರಿಗೇಷನ್ ಎಷ್ಟೆಷ್ಟು ಮೆಟೀರಿಯಲ್ಸ್ ಬೇಕೋ ಅಷ್ಟೆಲ್ಲಾ ಕೋಟ್ಯಾಂತರ ರೂಪಾಯಿಗಳ ಮೆಟೀರಿಯಲ್ಸ್ ಕೊಂಡಿಟ್ಟಿದ್ದಾರೆ. ಪಂಪ್‌ಗಳು, ಮೋಟಾರುಗಳು, ವಾಲ್ವ್‌ಗಳು ಎಲ್ಲಾ ಕೊಂಡಿದ್ದಾರೆ. ಇನ್ನೂ ಟೆಕ್ನಿಕಲ ಸ್ಯಾಂಕ್ಷನ್ನೇ ಆಗಿಲ್ಲ. ಎಷ್ಟೋ ಕರೆಗಳಲ್ಲಿ ಇವತ್ತಿನ ದಿವಸ ಅಡ್ಮಿನಿಸ್ಟ್ರೇಷನ್‌ನಲ್ಲೂ ಮಾಡಿದ್ದಾರೆ. ಮೆಟೀರಿಯಲ್ಸ್ ಎಲ್ಲಾ ಕೊಂಡಿಟ್ಟುಕೊಡಿದ್ದಾರೆ. ಮೊನ್ನೆ ನಾವು ಮಾತನಾಡುವಾಗ ಪೀಸ್ ವರ್ಕ್ ಲಗ್ಗೆ ಹೇಳಿದೆವು. ಸುಮಾರು 500 ಕೋಟಿ ರೂಪಾಯಿಗಳಷ್ಟು ಪೀಸ್‌ವರ್ಕ್ ಕೊಟ್ಟಿದ್ದಾರೆ. ಸ್ವಾಮಿ, ಹಿಂದೆ ಇದ್ದದ್ದು, ಇದೇ ವಿಚಾರ ಚರ್ಚೆ ಮಾಡಿದಾಗ 5 ಕ್ಯೂಸೆಕ್ಸ್ ನೀರಿಗೆ 5 ಲಕ್ಷ ರೂಪಾಯಿ ಖರ್ಚಾಗುವ ಕರೆ ಮಾತ್ರ ಲಿಫ್ಟ್ ಇರಿಗೇಷನ್ ಮಾಡಬೇಕೆಂದು ತೀರ್ಮಾನ ಮಾಡಿದ್ದೆವು. ಇವತ್ತು ಕ್ಯಾಬಿನೆಟ್‌ಗೂ ಬಂದಿಲ್ಲ. ಮೊಯಿಲಿ ಅವರಿಗೂ ಗೊತ್ತಿಲ್ಲ ಇದು. ಕ್ಯಾಬಿನೆಟ್‌ಗೆ ಬರುವುದೇ ಇಲ್ಲ. 500 ಕೋಟಿ ರೂಪಾಯಿನ ಲಿಫ್ಟ್ ಇರಿಗೇಷನ್ ಕೆಲಸವೇ ಆಗಿಲ್ಲ. 380 ಕೋಟಿ ರೂಪಾಯಿ ಡಿಪಾರ್ಟಮೆಂಟಿನದ್ದು ಮತ್ತು 150 ಕೋಟಿ ರೂಪಾಯಿ ಪೀಸ್ ವರ್ಕ್. ಇದರ ಬಗ್ಗೆ ಎನ್‌ಕ್ವೈರಿ ಆರಬೇಕೆಂದು ಹೇಳಿದ್ದೇನೆ. ಈ ಸಭೆಯಲ್ಲಿ ನಾನು ಹೇಳುತ್ತೇನೆ ಸರ್ಕಾರಕ್ಕೆ ಗೌರವ ಬರಬೇಕಾದರೆ ನಮ್ಮ ಸರ್ಕಾರಕ್ಕೆ ಬರಬೇಕಾದರೆ ಏನು ಪೀಸ್ ವರ್ಕನ್ನು ಕೊಟ್ಟು ಕೋಟ್ಯಾಂತರ ರೂಪಾಯಿಗಳನ್ನು ಇಂಜಿನಿಯರ್ಸ್ ಲೂಟಿ ಮಾಡಿದ್ದಾರೆ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಎನ್‌ಕ್ವೈರಿ ಇಸ್ಟಿಟ್ಯೂಟ್ ಮಾಡಬೇಕು. ನನರೆ ಗೊತ್ತು ನಾಲ್ಕೈದು ಜನ ಚೀಫ್ ಇಂಜಿನಿಯರ್ಸ್ ಮನೆಗೆ ಹೋಗುತ್ತಾರೆ. ಕಳುಹಿಸಬೇಕು ಸರ್ಕಾರ. ದೇವೇಗೌಡರು ಏನಾದರೂ

ಇಂಜಿನಿಯರುಗಳನ್ನು ಮನೆಗೆ ಕಳುಹಿಸದೆ ಸಸ್ಪಂಡ್ ಮಾಡದೇ ಇಟ್ಟುಕೊಂಡರೆ ನಮ್ಮ ಸರ್ಕಾರಕ್ಕೆ ಕೆಟ್ಟ ಹೆಸರು ಬರುತ್ತದೆ. 500 ಕೋಟಿ ರೂಪಾಯಿ. ನಾವು ಪಾರ್ಟಿ ಮೀಟಿಂಗ್‌ನಲ್ಲಿ ಹೇಳಾಯಿತು. ಮೊಯಿಲಿ ಅವರಿಗೆ ಹೇಳಾಯಿತು, ಕ್ಯಾಬಿನೆಟ್‌ಗೆ ಹೋಗಿಲ್ಲ ಅದು. ನಮ್ಮ ಜಿಲ್ಲೆಯಲ್ಲೇ ಎಲ್ಲಾ ಮೆಟೀರಿಯಲ್ಸ್ ಕೊಂಡಿಟ್ಟಿದ್ದಾರೆ. ಜನ ನಮ್ಮನ್ನು ಕೇಳುತ್ತಿದ್ದಾರೆ. ಅವರು ಬಂದು ಗುದ್ದಲಿ ಪೂಜೆ ಮಾಡಿ ಹೋದರು, ಅವರು ಬಂದು ಫೌಂಡೇಷನ್ ಹಾಕಿ ಹೋದರು, ಈಗ ನೀವು ಬಂದು ಕೆಲಸ ಮುಗಿಸಿಕೊಡಿ ಎಂದು ಕೇಳುತ್ತಾರೆ. ಅಡ್ಮಿನಿಸ್ಟ್ರೇಟಿವ್ ಅಪ್ರೂವಲ್ ಆಗಿಲ್ಲ, ಟೆಕ್ನಿಕಲ್ ಅಪ್ರೂವಲ್ ಆಗಿಲ್ಲ, ವಾಟರ್ ಅವೈಲಬಲಿಟಿ ಗೊತ್ತಿಲ್ಲ, ಹಣ ಇಟ್ಟಿಲ್ಲ. ಮೇಟೀರೀಯಲ್ಸ್ ಎಲ್ಲಾ ಕೊಂಡುಕೊಂಡಿದ್ದಾರೆ. ಹೇಮಾವತಿ ಒಂದರಲ್ಲೇ ಕೋಟಿಗಟ್ಟಲೆ ಪೀಸ್ ವರ್ಕ್. ಆವತ್ತೂ ಕೂಡ ನ್ನು ಹೇಳಿದ್ದೆ. ಇವತ್ತೂ ಕೂಡ ಸರ್ಕಾರಕ್ಕೆ ಹೇಳುತ್ತಿದ್ದೇನೆ. ಬಹುಶ: ಅವರು ಕೇಳುತ್ತಿದ್ದಾರೆ ಎಂದು ನಾನಂದುಕೊಂಡಿದ್ದೇನೆ. ಮಾನ್ಯ ಮುಖ್ಯ ಮಂತ್ರಿಗಳು ಸ್ಪೀಕರ್ ಛೇಂಬರ್‌ನಲ್ಲಿ ಕುಳಿತಿದ್ದಾರೆ. ಅಲ್ಲಿ ಕ್ಲೋಸ್ ಸರ್ಕ್ಯೂಟ್ ಟಿ.ವಿ. ಅವಕಾಶ ಇರುವುದರಿಂದ ಬಹುಶ: ಅಲ್ಲಿ ಭಾಷಣ ಕೇಳುತ್ತಿದ್ದಾರೆ ಎಂದು ಅಂದುಕೊಂಡಿದ್ದೇನೆ.

ಅವರು ಇನ್ನೊಂದು ಸಾರಿ ಕೇಳಬೇಕು. ಉತ್ತರ ಕೊಡುವ ಕಾಲದಲ್ಲಿ ವಿಚಾರಣೆಯನ್ನು ಮಾಡಿ, ಈ ಅಧಿಕಾರಿಗಳನ್ನು ಸಸ್‌ಪೆಂಡ್ ಮಾಡುತ್ತೇನೇ ಎಂದು ಹೇಳಬೇಕು. ಲೋಕಾಯುಕ್ತಕ್ಕೆ ರೆಫರ್ ಮಾಡಬೇಕು. ಒಬ್ಬೊಬ್ಬ ಚೀಫ್ ಇಂಜಿನಿಯರ್ ಕೋಟಿ ಗಟ್ಟಲೆ ಹಣವನ್ನು ಮಾಡಿದ್ದಾರೆ. ರಾಜಕಾರಿಣಿಗಳು ಭಿಕಾರಿಗಳು ಈ ದೇಶದಲ್ಲಿ ಅತ್ಯಂತ ಸುಲಭವಾಗಿ ಹರಾಜಾಗತಕ್ಕಂತಹ ವಸ್ತು ಯಾರು ಅಂದರೆ ಪೊಲಿಟೀಷಿಯನ್ಸ್. ಮಾನ್ಯ ನಂಜೇಗೌಡರು ಬಹಳ ಚೆನ್ನಾಗಿ ಹೇಳಿದರು. ಕಾಂಟೆಸ್ಸಾ ಕಾರು ತೆಗೆದುಕೊಂಡರೆ ಜನ ಉಗಿಯುತ್ತಾರೆ ನಮ್ಮನ್ನು ಎಂದು ಅತ್ಯಂತ ಸುಲಭವಾಗಿ ಜನರ ಬಾಯಿಗೆ ಸಿಕ್ಕಿ ಬಯಿಸಿಕೊಳ್ಳತಕ್ಕಂತಹ ಸುಲಭದ ವಸ್ತು , ಹರಾಜಾಗುವ ವಸ್ತು ಸಣ್ಣ ವಸ್ತು ಅಂದರೆ ರಾಜಕಾರಣಿಗಳು. ಅಧಿಕಾರಿಗಳ ಮೇಲೆ ಏಕೆ ಹೇಳುತ್ತಿದ್ದೇನೆಂದರೆ, 300 ಕೋಟಿ ಮತ್ತು 150 ಕೋಟಿ ಆ ದುಡ್ಡಿನಲ್ಲಿ ಮಾಡ್ರನೈಜೇಸನ್‌ಗೆ 28 ಕೋಟಿ ಇಟ್ಟರು, ಆದರೆ ಇವತ್ತಿನವರೆಗೂ 7 ಕೋಟಿ ಖರ್ಚಾಗಲಿಲ್ಲ.

ಈ ಮಾಡ್ರನೈಜೇಸನ್ ಬಗ್ಗೆ ನಾನು ಒಂದು ಮಾತನ್ನು ಪಬ್ಲಿಕ್‌ನಲ್ಲಿ ಹೇಳಿದ್ದೇನೆ. 3 ವರ್ಷಗಳಲ್ಲಿ ನಮ್ಮ ಮಾಡ್ರನೈಜೇಸನ್ ಕೆನಾಲ್ ಆಗಲಿಲ್ಲ ಅಂದರೆ ಈ ಸದನಕ್ಕೆ ನಾನು ಶಾಸಕನಾಗಿ ಬರುವುದಿಲ್ಲ ಎಂದು. ರೈತರು ನಮ್ಮನ್ನು ನಂಬಿಕೊಂಡಿದ್ದರೆ. ಮುಖ್ಯಮಂತ್ರಿಗಳಿಗೆ ಈಗಾಗಲೇ ಹೇಳಿದ್ದೇನೆ, ನಮ್ಮ ಸರ್ಕಾರದ ಬಗ್ಗೆ ಹೇಳುವುದಾದರೆ ಕೃಷಿ ಸಾಲದ ಮರು ಪಾವತಿಯ ಅವಧಿಯನ್ನು ಮುಂದಕ್ಕೆ ಹಾಕಿ ಎಂದು ಕೇಳಿಕೊಂಡೆ. ದಿಢೀರ್ ನಿಂತುಕೊಂಡು ಮೇ 31 ರವರೆಗೆ ಮುಂದಕ್ಕೆ ಹಾಕುತ್ತೇನೆಂದು ಹೇಳಿದರು. ಅಷ್ಟು ಸುಲಭ ಅಲ್ಲ. ಯಾರಿಗೆ ಒಳಗಡೆ ಕನ್ಸರ್ನ್ ಇರುತ್ತದೋ ಅವರಿಗೆ ಮಾತ್ರ ರೈತರ ಕಷ್ಟ ಗೊತ್ತಿರುವುದು. ಯಾರಿಗೆ ರೈತರ ಬಗ್ಗೆ ಕನ್‌ಸರ್ನ್ ಇರಾತ್ತದೆ ಅವರು ಹೇಳುತ್ತಾರೆ. ಆ ಮಾತನ್ನು ರೈತರು ಅಂದರೆ ಸಾಲಗಾರರು, ಬಡವರು, ಅವರು ಎಲ್ಲಾ ಕಾಲದಲ್ಲೂ ಕೇಳುವುದಿಲ್ಲ. ರೈತರಿಗೆ ಬೇಕಾದರೆ ಕನಿಷ್ಟ ನೀರು ಕೊಟ್ಟರೆ ಈ ದೇಶದಲ್ಲಿ ಎಲ್ಲವೂ ಸರಿಹೋಗುತ್ತದೆ. ಆದ್ದರಿಂದ ಈ 500 ಕೋಟಿ ರೂಪಾಯಿಗಳ ದುರುಪಯೋಗ ಏನು ಆಗಿದೆ, ಈ ಪೀಸ್ ವರ್ಕ್‌ನಲ್ಲಿ ಅದರ ಬಗ್ಗೆ ವಿಚಾರಣೆ ಆಗಲೇಬೇಕು. ಯಾವನೇ ಅಧಿಕಾರಿಯಾಗಿರಲಿ; ಮುಖ್ಯಮಂತ್ರಿಗಳು ಈಗಾಗಲೇ ಒಂದು ಮೀಟಿಂಗ್ ಮಾಡಿದ್ದಾರೆ. 35 ಜನ ಚೀಫ್ ಇಂಜಿನಿಯರ್ಸ್‌ನ್ನು ಕೂಡಿಸಿಕೊಡು ಒಂದು ಮೀಟಿಂಗನ್ನು ಮಾಡಿದ್ದಾರೆ. ನಾನು ಆಗಲೇ ಅವರಿಗೆ

ಹೇಳಿದ್ದೇನೆ. ಇಲ್ಲಿ ಬಹಳ ದುರುಕಯೋಗವಾಗಿದೆ. ಇದನ್ನು ವಿಚಾರಣೆ ಮಾಡಿಸಬೇಕು. ವಿಚಾರಣೆಯನ್ನು ಮಾಡಿ ಒಂದು 4 ಜನ ಇಂಜನಿಯರ್ಸ್‌ನ್ನು ಮನೆಗೆ ಕಳುಹಿಸಿ. ಆಗ ಎಲ್ಲಾ ಆಡಳಿತದ ಅಧಿಕಾರ ನಿಮ್ಮ ಕೈಗೆ ಬರುತ್ತದೆ. ಎಲ್ಲರೂ ಸಹ ಇವತ್ತು ಐ.ಪಿ.ಎಸ್ ಅದಿಕಾರಿಗಳು, ಐ.ಎ.ಎಸ್ ಅಧಿಕಾರಿಗಳು, ಈ ಚೀಫ್ ಇಂಜನೀಯರ್ಸ್ ಇರರುಗಳ ಮನೆಗೆ ಲೋಕಾಯುಕ್ತದವರೂ ಹೋಗುವುದಿಲ್ಲ.

ದೇಶದ ಇತಿಹಾಸದಲ್ಲಿ ಒಬ್ಬ ಸುಪ್ರೀಂ ಕೋರ್ಟಿನ ಜಡ್ಜನ್ನು ನಾನು ಒಬ್ಬ ಸಿಟಿ ಮ್ಯಾಜಿಸ್ಟ್ರೇಟರ ಮುಂದೆ ನಿಲ್ಲಿಸಿದೆ ಕರೆದುಕೊಂಡು ಹೋಗಿ: ಇದನ್ನು ಏಕೆ ಹೇಳುತ್ತಿದ್ದೇನೆಂದರೆ, ರಾಜಕೀಯ ಬ್ರಷ್ಟಾಚಾರ ಸಹಿಸುತ್ತೇನೆ ನಾನು. ಆದರೆ ಆಡಳಿತ ಬ್ರಷ್ಟಾಚಾರ ಸಹಿಸುವುದಿಲ್ಲ. ಹೌದು, ರಾಜಕೀಯ ಬ್ರಷ್ಟಾಚಾರ ಇದೆ. ಈ ದೇಶದಲ್ಲಿ ಏತಕ್ಕೆ ಅಂದರೆ ಚುನಾವಣೆಗಳು ಬೇಕು. ರಾಜಕೀಯ ಬ್ರಷ್ಟಾಚಾರ ಬೇಕು. ಚುನಾವಣೆ ಬೇಕು. ಆದರೆ ಆಡಳಿತ ಬ್ರಷ್ಟಾಚಾರ ಏನು ದೆ, ಅದನ್ನು ನೀವು ನಾವೆಲ್ಲಾ ಬಹಳ ವರ್ಷಗಳಿಂದ ವಿರೋಧ ಮಾಡಿಕೊಂಡು ಬಂದಿರತಕ್ಕಂತಹಫರು. ನಮ್ಮ ಕಾಲುವೆಗೆ 5 ಕೋಟಿ ಖರ್ಚು ಮಾಡಿದ್ದರೆ ಇವತ್ತು ನಮಗೆ ನೀರು ಸಿಗುತ್ತಾ ಇತ್ತು. ಶ್ರೀಮಾನ್ ಸೋಮಶೇಖರ್ ಹಾಗೂ ನಾನು ಬಹುಶ: ಊರಿಗೆ ಹೋಗುವುದಕ್ಕಾಗುವುದಿಲ್ಲ. 7ನೇ ತಾರೀಖು ಈ ಸದನ ಮುಗಿಯುತ್ತದೆ. ಆದ್ದರಿಂದ 75 ಕೋಟಿ ರೂಪಾಯಿಗಳನ್ನು 3 ವರ್ಷಗಳಲ್ಲಿ ಮಾಡ್ರನೈಜೇಷನ್ ಆಫ್ ವಿಶ್ವೇಶ್ವರಯ್ಯ ಕೆನಾಲ್‌ಗೆ ಬಿಡುಗಡೆ ಮಾಡಲೇಕು. ವರ್ಷಕ್ಕೆ 25 ಕೋಟಿ ಕೊಡಬೇಕು. ವರುಣಾ ನಾಲೆಗೂ ನಮಗೂ ಏನು ಜಗಳ ಇತ್ತೋ, ಇದು ಇತ್ಯರ್ಥವಾಗಿದೆ. ವರುಣಾ ನಾಲೆಯನ್ನೂ ಮಾಡಿಸಿಕೊಡಿ. ನಮ್ಮದೂ ಮಾಡಿಸಿಕೊಡಿ. ದಿವಂಗತ ದೇವರಾಜ ಅರಸುರವರ ಕಾಲದಲ್ಲಿ ಆಗಿತ್ತು ಒಪ್ಪಂದ. ಅದು ಶ್ರೀಮಾನ್ ದೇವೇಗೌಡರ ಕಾಲದಲ್ಲಿ ಖಂಡಿತ ಆಗಲೇಬೇಕು. ಅದು ನಮ್ಮ ಅನಿಸಿಕೆ. ನಾವೆಲ್ಲಾ ಶಾಸಕರು ದೇವೇಗೌಡರಿಗೆ ಮನವಿ ಸಲ್ಲಿಸುತ್ತೇವೆ. ಈ 3 ವರ್ಷಗಳಲ್ಲಿ ಈ ನಾಲೆಯ ಮಾಡ್ರನೈಜೇಷನ್ ಕೆಲಸವನ್ನು ಮಾಡಿಸಿಕೊಡಬೇಕು ಎಂದು ಇನ್ನು ಒಟ್ಟಾರೆ ಹೇಳುವುದಾದರೆ, ಆಡಳಿತದ ಸುಧಾರಣೆಯಲ್ಲಿ ಎಲ್ಲಾ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದೇನೆ. ಟ್ರಾನ್ಸ್‌ಫರ್ ಪಾಲಿಸಿ ಬಗ್ಗೆ ಎಚ್ಚರಿಕೆಯಿಂದಿರಬೇಕು. ಯಾರೇ ಮಂತ್ರಿಗಳು ಯಾರೇ ಅಧಿಕಾರಿಗಳುನ್ನು ಅವರ ಛೇಂಬರ್‌ನಳಗೆ ಇಂಟರ್‌ವ್ಯೂಇದ್ದ ದಿವಸ ಬಿಟ್ಟು ಉಳಿದ ಧಿವಸಗಳಲ್ಲಿ ಬರಕೂಡದು ಅನ್ನತಕ್ಕಂತಹ ಎಚ್ಚರಿಕೆಯನ್ನು ಕೊಡಬೇಕೆಂಬ ಮಾತನ್ನು ಹೇಳುತ್ತಿದ್ದೇನೆ. ಇಲ್ಲಿ ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದೇನೆ. ಒಟ್ಟಾರೆ ಹೇಳುವುದಾದರೆ, ಬಹಳಷ್ಟು ಜನ ನಮ್ಮಿಂದ ನಿರೀಕ್ಷಣೆ ಮಾಡಿದ್ದಾರೆ. ಈ 5 ವರ್ಷಗಳಲ್ಲಿ ರೈತರಿಗೋಸ್ಕರ, ಬಡವರಿಗೋಸ್ಕರ ಕೆಲಸಗಳಾಗುತ್ತವೆ ಎಂಬುದಾಗಿ ನಿರೀಕ್ಷಣೆ ಮಾಡಿದ್ದಾರೆ. ಅದನ್ನು ಮಾಡುತ್ತೇವೆ ಎಂಬ ಸಂಪೂರ್ಣ ವಿಶ್ವಾಸ ನಂಬಿಕೆ ನಾವು ಇಟ್ಟುಕೊಂಡಿದ್ದೇವೆ. ಅದನ್ನು ಮಾಡತಕ್ಕಂತಹದ್ದೂ ಸಹ ನಮ್ಮೆಲ್ಲರ ಕರ್ತವ್ಯವಾಗಿದೆ ಅನ್ನತಕ್ಕ ಮಾತನ್ನು ಹೇಳಿ ಇವತ್ತಿನ ದಿವಸ ರಾಜ್ಯಪಾಲರ ಭಾಷಣಕ್ಕೆ ವಂದನೆಯನ್ನು ಸಲ್ಲಿಸತಕ್ಕಂಥದ್ದು ಡೆಮಾಕ್ರಸಿಯೊಳಗಡೆ ಅದರಲ್ಲೂ ಪ್ರಜಾಪ್ರಭುತ್ವದ ವ್ಯವಸ್ಥೆಯ ಪಾರ್ಲಿಮೆಂಟರಿ ಸಿಸ್ಟಂನಲ್ಲಿ ಅತ್ಯಂತ ಘನತೆವೆತ್ತ ಕೆಲಸ. ಅದು ರಾಷ್ಟ್ರಪತಿಗಿರಲಿ, ಅಥವಾ ರಾಜ್ಯಪಾಲರಿಗಿರಲಿ, ಬಹಳ ಪ್ರಮುಖವಾದ ವಿಚಾರ. ಅವರ ಭಾಷಣದಲ್ಲಿ ನಮ್ಮ ಸಿಸ್ಟಂ ಒಳಗಡೆ ಅವರಿಗೆ ವಂದನೆ ಯನ್ನುಲಿಸತಕ್ಕಂತಹದ್ದು ಬಹಳ ಪ್ರಮುಖವಾದ ಕರ್ತವ್ಯ ನಮ್ಮ ಶಾಸಕಾಂಗದಲ್ಲಿ ಅಂತಹ ಕೆಲಸವನ್ನು ಮಾಡುವುದಕ್ಕೆ ನಮ್ಮ ಪಕ್ಷದವರು ಇವತ್ತು ನನಗೆ ಅವಕಾಶವನ್ನು ಕೊಟ್ಟಿದ್ದಾರೆ. ಆ ನಿರ್ಣಯವನ್ನು ಮಂಡಿಸುವುದಕ್ಕೆ ನನಗೆ ಮತ್ತು ಅದನ್ನು ಸ್ವಾಗತ ಮಾಡುವುದಕ್ಕೆ ಮಾನ್ಯ ಬಸವಣ್ಣಪ್ಪನವರಿಗೆ ಕೊಟ್ಟಿದ್ದಕ್ಕೆ ನಮ್ಮ ಜನತಾದಳ ಶಾಸಕಾಂಗ ಪಕ್ಷಕ್ಕೂ

ಮಾನ್ಯ ಮುಖ್ಯ ಮಂತ್ರಿಗಳಿಗೂ ಅದರಲ್ಲೂ ಇಷ್ಟು ಸಮಯ ಮಾತನಾಡಲು ಅವಕಾಶ ಕೊಟ್ಟ ತಮಗೂ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ವೈ. ರಾಮಕೃಷ್ಣ : ಸನ್ಮಾನ್ಯ ನಾಗೇಗೌಡರನ್ನು ಕುರಿತು ಒಂದು ಪ್ರಶ್ನೆಯನ್ನು ಕೇಳುತ್ತೇನೆ. ಅವರು ತಮ್ಮ ಭಾಷಣದ ಬಹುಕಾಲವನ್ನು ಟ್ರಾನ್ಸ್‌ಫರ್‌ಮತ್ತು ಮೀಸಲಾತಿಯ ಬಗ್ಗೆ ಮಾತನಾಡಿದರು. ಈ ರಾಜ್ಯದಲ್ಲಿ ಒಂದು ಕೋಟಿಗೂ ಮಿಗಿಲಾಗಿರತಕ್ಕಂತಹ ಹರಿಜನರ ಪ್ರಾತಿನಿಧ್ಯ ವಿಲೇಜ್ ಪಂಚಾಯತ್‌ನಲ್ಲಿ, ತಾಲ್ಲೂಕು ಪಂಚಾಯಿತಿಯಲ್ಲಿ ಹಾಗೂ ಜಿಲ್ಲಾ ಪಂಚಾಯಿತಿಯಲ್ಲಿ ಎಷ್ಟು ಅನ್ಯಾಯವಾಗಿದೆ ಎಂಬುದು ನಿಮಗೆ ಗೊತ್ತಿದೆ ತಾನೇ ಜಿಲ್ಲಾ ಪಂಚಾಯಿತಿಯಲ್ಲಿ 24, ತಾಲ್ಲೂಕು ಪಂಚಾಯಿತಿಯಲ್ಲಿ 130 ಮತ್ತೆ ವಿಲೇಜ್ ಪಂಚಾಯಿತಿಯಲ್ಲಿ ಇದನ್ನೇ ಲೆಕ್ಕ ಹಾಕುವುದಾದರೆ, ಸುಮಾರು 4-5 ಸಾವಿರ ಆಗುತ್ತದೆ. ಈ ಒಂದು ಕೋಟಿ ಇರತಕ್ಕ ಜನರಿಗೆ ಇಷ್ಟೊಂದು ಪ್ರಾತಿನಿಧ್ಯ ಕಡಿಮೆಯಾಗಿದೆಯಾಗಿಲ್ಲಾ, ಇದನ್ನು ವಿರೋಧಿಸಿ ಭಾರತೀಯ ಜನತಾ ಪಾರ್ಟಿ, ಕಾಂಗ್ರೆಸ್, ಕಮ್ಯುನಿಸ್ಟ, ಮತ್ತು ಎಲ್ಲಾ ರಾಜಕೀಯ ಪಕ್ಷಗಳೂ ಹೋರಾಟ ನಡೆಸಿದರೂ ಕೂಡ ನಮ್ಮ ಮಾನ್ಯ ಮುಖ್ಯಮಂತ್ರಿಗಳ ಗಮನ ಈ ಕಡೆ ಹರಿಯಲಿಲ್ಲವಲ್ಲಾ, ಏನು ಅದಕ್ಕೆ ಭಾವಿಸಬೇಕು ಎಂಬುದನ್ನು ಕೇಳುತ್ತೇನೆ.

ಶ್ರೀ ಎಂ. ನಾರಾಯಣಸ್ವಾಮಿ : ಮಾನ್ಯ ಶ್ರೀ ವೈ. ರಾಮಕೃಷ್ಣರವರು ಹಿರಿಯರು ಇದ್ದಾರೆ, ಅನುಭವಿಶಾಲಿಗಳಾಗಿದ್ದಾರೆ. ನಾವು ಮಾಡಿರತಕ್ಕ ಮೀಸಲಾತಿ ಶೇಕಡ ವಾರು ವಿಚಾರದಲ್ಲಾಗಲಿ,ಅವರ ಮುಂದೆ ಏನು ಮಂಡಿಸುತ್ತೇವೆ, ಬೇರೆಯವರಿಗಿಂತ ಹೆಚ್ಚಿಗೆ ಇದ್ದರೆ ಒಪ್ಪಲಿ,. ಅದನ್ನು ಬಿಟ್ಟು ಬರೀ ರಾಜಕೀಯವಾಗಿ ಭಾಷಣಮಾಡುವುದು, ರಾಜಕೀಯವಾಗಿ ತೇಜೋವಧ್ ಮಾಡುವುದು ಬೇಡ.

ಶ್ರೀ ಕೆ.ಎನ್. ನಾಗೇಗೌಡ : ನಮ್ಮ ಬಸವಣ್ಣಪ್ಪನವರು ಮುಂದಿನ ಭಾಷಣಕಾರರು. ಅವರೇ ಆ ವರ್ಗದಕ್ಕೆ ಸೇರಿದವರು. ಆದ್ದರಿಂದ ಅವರೇ ಹೇಳುತ್ತಾರೆ. ೨೩ ಪರ್ಸೆಂಟ್‌ಶೇಕಡಾವಾರು. ತಾವು ಇದ್ದೀರಿ. ನೀವು ನಾವೂ ನಡೆದುಕೊಂಡು ನಡೆದುಕೊಂಡು ಚರ್ಚೆ ಮಾಡಿದ್ದೇವೆ. ಬಹುಶಃ ವೀರೇಂದ್ರ ಪಾಟೀಲ್‌ರವರ ಮನೆಗೆ ನಿಮ್ಮ ಮನೆಗೂ ನಡೆದುಕೊಂಡು ನಡೆದುಕೊಂಡು ಚರ್ಚೆ ಮಾಡಿದ್ದೇವೆ. ಮಿಸಲಾತಿ ಕೊಡಬೇಕು ಎಂದು ಹೇಳಿ ನಾವು-ನೀವು ಮಾತನಾಡಿಕೊಂಡಿದ್ದೇವೆ. 23 ಪರ್ಸೆಂಟ್‌ಕೊಟ್ಟಿದೆ. ಅದನ್ನೂ ನೋಡಬೇಕು. ಇದನ್ನು ಮರೆಯಬಾರದು.

+ ಶ್ರೀ ಬಿ. ಬಸವಣ್ಣಪ್ಪ (ಹೊನ್ನೂರು) : ಸನ್ಮಾನ್ಯ ಸಭಾಧ್ಯಕ್ಷರೇ, ಮಾನ್ಯ ರಾಜ್ಯಪಾಲರು ಉಭಯ ಸದನಗಳನ್ನುದ್ದೇಶಿಸಿ ಮಾತನಾಡಿದ ಭಾಷಣದ ಮೇಲೆ ವಂದನಾ ನಿರ್ಣಯವನ್ನು ಸೂಚಿಸಿ ಸ್ನೇಹಿತರಾದ ಸನ್ಮಾನ್ಯ ನಾಗೇಗೌಡರು ಒಳ್ಳೆಯ ಮಾತುಗಳನ್ನು ಆಡಿದ್ದಾರೆ. ಒಳ್ಳೆಯ ಸಲಹೆಗಳನ್ನು ಕೊಟ್ಟಿದ್ದಾರೆ. ನಿಜವಾಗಿಯೂ ಹೇಳುವುದಾದರೆ, ಅವರು ಒಳ್ಳೆಯ ಸಂಸದೀಯ ಪಟು. ರಾಜ್ಯದ ಆಡಳಿತ ಬಗ್ಗೆ, ಮತ್ತು ಸರ್ಕಾರದ ಗಮನವನ್ನು ಹಾಗೂ ಈ ಸಭೆಯ ಗಮನವನ್ನು ಸೆಳೆದಿದ್ದಾರೆ. ನಿಜವಾಗಿಯೂ ಅವರು ಅಭಿನಂದನಾರ್ಹರು ತಮ್ಮ ಪರವಾಗಿ ನಾನು ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಈ ಸೂಚನೆಯನ್ನು ಏನು ಮಂಡಿಸಿದ್ದಾರೆ,ಅದನ್ನು ಅನುಮೋದಿಸುತ್ತಾ, ತಮ್ಮ ಅಪ್ಪಣೆ ಪಡೆದು ಕೆಲವು ಸಲಹೆಗಳನ್ನು ಕೊಡುವುದಕ್ಕೆ ಇಚ್ಛೆಪಡುತ್ತೇನೆ. ರಾಜ್ಯಪಾಲರ ಭಾಷಣ ಬಹಳ ಸಂಕ್ಷಿಪ್ತವಾಗಿದೆ. ಚಿಕ್ಕದಾಗಿದೆ ಮತ್ತು ಚೊಕ್ಕಟವಾಗಿದೆ. 1995-96ನೇ ಸಾಲಿನ ಕಾರ್ಯಕ್ರಮಗಳ ಬಗ್ಗೆ ಬಹಳ ಚೆನ್ನಾಗಿ ರಾಜ್ಯಪಾಲರು ಭಾಷಣದಲ್ಲಿ ಪ್ರಸ್ತಾಪಿಸಲಾಗಿದೆ.

ಅಷ್ಟೇ ಅಲ್ಲ ಕಳೆದ 2-3 ತಿಂಗಳಿಲ್ಲಿ ಈ ಸರ್ಕಾರದ ಸಾಧನೆ ಬಗ್ಗೆಯೂ ಸಹ ಅವರು ಪ್ರಸ್ತಾಪ ಮಾಡಿದ್ದಾರೆ. ರಾಜ್ಯಪಾಲರು ಪ್ರಸ್ತಾಪಿಸಿದ ಕೆಲವು ಸಾಧನೆಗಳ

ಬಗ್ಗೆ ಹೇಳುವುದಾದರೆ,ತಮಗೆ ತಿಳಿದಹಾಗೆ ಬಹಳ ವರ್ಷಗಳಿಂದ ಗೊಂದಲದಲ್ಲಿ ಸಿಲುಕಿದ, ಒಂದು ರೀತಿಯೊಳಗೆ ಸಮಸ್ಯೆಯಿಂದ ಕೂಡಿದ ಈದ್ಗಾ ಸಮಸ್ಯೆಯನ್ನು ಬಗೆಹರಿಸಿ ಶಾಂತಿಯಿಂದ ರಾಷ್ಟ್ರ ಧ್ವಜವನ್ನು ಹಾರಿಸಿ ಅಲ್ಲಿ ನೆಮ್ಮದಿಯನ್ನು ಉಂಟು ಮಾಡಿದ ಕೀರ್ತಿ ರಾಜ್ಯ ಸರ್ಕಾರಕ್ಕೆ ಸಲ್ಲತಕ್ಕದ್ದು ಮಾನ್ಯ ಶ್ರೀ ದೇವೇಗೌಡರಿಗೆ ಸಲ್ಲತಕ್ಕದ್ದು. ಸನ್ಮಾನ್ಯ ಶ್ರೀ ದೇವೇಗೌಡರು ಅಧಿಕಾರವನ್ನು ವಹಿಸಿಕೊಂಡ ತಕ್ಷಣ ಈ ಸಮಸ್ಯೆ ರಾಜ್ಯದ ಒಟ್ಟಾರೆ ಸಮಸ್ಯೆಯೆಂದು ಭಾವಿಸಿ ಪಕ್ಷದ ಅಧ್ಯಕ್ಷರು, ಗೃಹ ಮಂತ್ರಿಗಳು, ಸ್ಥಳೀಯ ಮುಖಂಡರು, ಅಲ್ಪ ಸಂಖ್ಯಾತರು

ಇನ್ನಿತರೇ ಮುಖಂಡರುಗಳೊಡನೆ ಚರ್ಚೆ ಮಾಡಿ, ಅದಕ್ಕೆ ಒಂದು ಸೂತ್ರವನ್ನು ಕಂಡು ಹಿಡಿದು, ಯಾವ ಒಂದು ಗಲಾಟೆ ಇಲ್ಲದೆ, ರಾಷ್ಟ್ರ ಧ್ವಜವನ್ನು ಗಣರಾಜ್ಯೋತ್ಸವದ ದಿನ ಹಾರಿಸಿದ್ದು ನಿಜವಾಗಿಯೂ ಬಹಳ ವರ್ಷಗಳಿಂದ ಜಿಲ್ಲಾ ಪಂಚಾಯ್ತಿ ಮತ್ತು ತಾಲ್ಲೂಕು ಪಂಚಾಯ್ತಿಗಳಿಗೆ ಚುನಾವಣೆಯನ್ನು ಮಾಡದೆ ಒಂದಲ್ಲ ಒಂದು ಕಾರಣದಿಂದ ಚುನಾವಣೆಗಳನ್ನು ಮುಂದೂಡಿ, ಜನಗಳ ಮನಸ್ಸಿನಲ್ಲಿ ಒಂದು ಗೊಂದಲ ಉಂಟಾಗಿ, ಅಧಿಕಾರ ವಿಕೇಂದ್ರೀಕರಣಕ್ಕೆ ಒಂದು ಪ್ರಶ್ನೆ ಉಂಟಾಗಿತ್ತು. ಅದು ತಮಗೆ ತಿಳಿದ ಹಾಗೆ, ಜನತಾದಳ ಪಕ್ಷ ಮತ್ತು ಜನತಾ ದಳ ಸರ್ಕಾರ ಪ್ರಜಾಪ್ರಭುತ್ವಕ್ಕೆ ಅಧಿಕಾರ ವಿಕೇಂದ್ರೀಕರಣಕ್ಕೆ ಯಾವಾಗಲೂ ಬದ್ಧವಾಗಿದೆ. ಈ ಒಂದು ತತ್ವವನ್ನು ನಾವು ಹಿಂದಿನಿಂದಲೂ ಆಚರಿಸಿಕೊಂಡು ಬಂದಿದ್ದೇವೆ. 1983ರಲ್ಲಿ ರಾಮಕೃಷ್ಣ ಹೆಗಡೆಯವರ ನೇತೃತ್ವದ ಸರ್ಕಾರ, ಈ ಜಿಲ್ಲಾ ಪಂಚಾಯ್ತಿ ಮತ್ತು ಮಂಡಲ್ ಪಂಚಾಯ್ತಿ ಮಸೂದೆಯನ್ನು ತಂದು, 1986ರಲ್ಲಿ ಜಿಲ್ಲಾ ಪಂಚಾಯ್ತಿ ಚುನಾವಣೆಗಳನ್ನು ಮಾಡಿ, ಅರ್ಥಪೂರ್ಣವಾದ ಅಧಿಕಾರ ವಿಕೇಂದ್ರಿಕರಣವನ್ನು ಮಾಡಿದ ಕೆಲಸ ತಮಗೆ ತಿಳಿದೇ ಇದೆ,ಅಧಿಕಾರಕ್ಕೆ ಬಂದ ಕೇವಲ 3 ತಿಂಗಳೊಳಗೆ, ನಾವು ಚುನಾವಣೆಯನ್ನು ಘೋಷಣೆ ಮಾಡಿ,ಚುನಾವಣೆಯನ್ನು ನಡೆಸಿ ಜನತೆಯ ಆಶೀರ್ವಾದವನ್ನೂ ಸಹ ನಾವು ಪಡೆದಿದ್ದೇವೆ.

ಇದು ನಿಜವಾಗಲೂ ಕರ್ನಾಟಕ ರಾಜ್ಯದ ಜನತೆ ಆಶೀರ್ವಾದ ಮಾಡಿದ್ದಾರೆ. ಈಗ ಜಿಲ್ಲಾಪಂಚಾಯತ್ ಮತ್ತು ತಾಲ್ಲೂಕು ಪಂಚಾಯತ್‌ಗಳು ಏನಿವೆ ಅವು ಅರ್ಥಪೂರ್ಣವಾಗಬೇಕಾದರೆ ಅವರಿಗೆ ನಾವು ಅಧಿಕಾರವನ್ನು ಕೊಡಬೇಕಾಗುತ್ತದೆ. ಪಂಚಾಯಿತಿ ಕಾಯ್ದೆಗೆ ಸಮಗ್ರರ ತಿದ್ದುಪಡಿ ತಂದು ಅದನ್ನು ಅರ್ಥಪೂರ್ಣ ಮಾಡತಕ್ಕ ಒಂದು ಕಾರ್ಯಕ್ರಮವನ್ನು ಮಾಡಲಿಕ್ಕೆ ಕ್ರಮ ತೆಗೆದು ಕೊಂಡದ್ದು ಸಂತೋಷದ ವಿಷಯ. ಸಹಕಾರ ಸಂಸ್ಥೆಗಳು ಏನಿವೆ. ಅವುಗಳ ಮುಖಾಂತರ ನಮ್ಮ ರೈತರು ಕೃಷಿ ಸಾಲವನ್ನು ಏನು ತೆಗೆದುಕೊಂಡಿದ್ದಾರೆ, ಅಲ್ಪಾವಧಿ ಮತ್ತು ಮಧ್ಯಮಾವಧಿ ಸಾಲಗಳ ಮೇಲಿನ ಬಡ್ಡಿ ಮತ್ತು ಸುಸ್ತಿ ಬಡ್ಡಿಯನ್ನು ಮನ್ನಾಮಾಡಲು ಕಳೆದ ಮಾರ್ಚಿ 31ನೇ ತಾರೀಖಿನವರೆಗೆ ಅವಕಾಶ ಕೊಡಲಾಗಿತ್ತು. ಮಾನ್ಯ ನಾಗೇಗೌಡರರು ಈ ಮನೆಯ ಸದಸ್ಯರು ಮಾನ್ಯ ಮುಖ್ಯಮಂತ್ರಿಗಳನ್ನು ಈ ಸಭೆಯ ಮುಖಾಂತರ ಗಮನಸೆಳೆದಾಗ ಕೂಡಲೇ ಅದನ್ನು ಮೇ 30ರವರೆಗೆ ಅವಕಾಶವನ್ನು ವಿಸ್ತರಣೆ ಮಾಡಿದ್ದು ಇದು ನಿಜವಾಗಲೂ ಹೆಮ್ಮೆಪಡತಕ್ಕ ವಿಷಯ. ನಮ್ಮ ರೈತ ಸಮುದಾಯ ಕರ್ನಾಟಕದಲ್ಲಿ ಬಹಳ ಆನಂದ ಮತ್ತು ಸಂತೋಷವನ್ನು ಪಡುತ್ತಾರೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಚುನಾವಣೆಯ ಸಂದರ್ಭದಲ್ಲಿ ಯಾವುದೇ ಒಂದು ಪಕ್ಷವಾಗಲೀ ಕಾಂಗ್ರೆಸ್ ಪಕ್ಷವಾಗಲೀ ಜನತಾದಳಪಕ್ಷವಾಗಲೀ ತನ್ನ ಪ್ರಣಾಳಿಕೆಯನ್ನು ಜನತೆಯ ಮುಂದಿಟ್ಟು ಚುನಾವಣೆಗೆ ಹೋಗುತ್ತಾರೆ. ಅದೇ ರೀತಿ ನಾವು ಚುನಾವಣೆಯ ಪ್ರಣಾಳಿಕೆಯಲ್ಲಿ ಅಧಿಕಾರಕ್ಕೆ ಬಂದರೆ ಬಡವರಿಗೆ ಸುಲಭದರದಲ್ಲಿ ಆಹಾರಧಾನ್ಯವನ್ನು ಕೊಡುತ್ತೇವೆ ಎನ್ನುವ ವಚನವನ್ನು ನಾವು ಕೊಟ್ಟಿದ್ದೆವು ಅದರ ಪ್ರಕಾರ ಏಪ್ರಿಲ್ 1ನೇ ತಾರೀಖು ಉಗಾದಿಯ ದಿವಸ ನಾವು ವಚನವನ್ನು ಕೊಟ್ಟಂತೆ ಹಸಿರು

ಕಾರ್ಡ್ ಮುಖಾಂತರ 3.20 ಪೈಸೆಗೆ ಒಂದು ಕೆ.ಜಿ. ಅಕ್ಕಿಯನ್ನು ಕೊಡತಕ್ಕ ಕಾರ್ಯಕ್ರಮವನ್ನು ಜಾರಿಗೆ ತಂದಿದ್ದೇವೆ. ಇದು ನಿಜವಾಗಲೂ ಹೆಮ್ಮೆಪ್ರಡತಕ್ಕ ವಿಷಯ. ಈ ಹಸಿರು ಕಾರ್ಡ್‌ನಲ್ಲಿ ಒಂದು ಸಮಸ್ಯೆ ಏನಿದೆ ಅಂದರೆ, ಹಿಂದೆ ಶ್ರೀಮಾನ್ ರಾಮಕೃಷ್ಣ ಹೆಗಡೆಯವರ ಮಂತ್ರಿಮಂಡಲದಲ್ಲಿ ನಾನು ಆಹಾರಮಂತ್ರಿಯಾಗಿದ್ದೆ; ಅದು ತಮಗೆ ಗೊತ್ತಿದೆ.

30ಲಕ್ಷ ಬಡ ಕುಟುಂಬಗಳನ್ನು ಗುರುತಿಸಿ ಹಸಿರುಕಾರ್ಡ್ ಕೊಡುವಾಗ ತಾಲ್ಲೂಕಿನ ತಹಶೀಲ್ದಾರ್ ಮತ್ತು ಬಿಡಿಒಗಳು ಏನಿದ್ದಾರೆ ಅವರಿಗೆ ಸಂಪೂರ್ಣ ಜವಾಬ್ದಾರಿಯನ್ನು ಕೊಟ್ಟು ಎನ್ಯುಮರೇಷನ್‌ಮಾಡಿ ಹಸಿರುಕಾರ್ಡ್ ಕೊಡುವ ಕಾರ್ಯಕ್ರಮವನ್ನು ನಾವು ಮಾಡಿದ್ದೇವು. ನನ್ನ ಕೆಲ ಸ್ನೇಹಿತರು ಮಾತನಾಡುವಾಗ ಉಪಾಧ್ಯಾಯರನ್ನು ನೇಮಿಸಿ ಅದು ಏನೋ ಗೊಂದಲ ಮಾಡಿದ್ದೀರಿ ಎಂದು ಹೇಳಿದರು. ಅದು ನನ್ನ ಕಾಲದಲ್ಲಿ ಅಲ್ಲ. ನನ್ನ ಕಾಲದಲ್ಲಿ ಆ ಕೆಲಸವನ್ನು ಮಾಡಿದಾಗ, 30 ಲಕ್ಷ ಹಸಿರುಕಾರ್ಡ್‌ನ್ನು ಕೊಡುವಾಗ ಬಹಳ ಪರಿಣಾಮಕಾರಿಯಾಗಿ ಮಾಡಿದ್ದೇವೆ. ಆದರೆ ಈಗ ಮತ್ತೆ ಬೋಗಸ್‌ರೇಷನ್‌ಕಾರ್ಡ್‌ಗಳು ಉದ್ಭವವಾಗಿವೆ ಎನ್ನುವುದು ನನಗೂ ಗೊತ್ತಿದೆ ತಮಗೂ ಗೊತ್ತಿದೆ. ಆದ್ದರಿಂದ ಮೇ 1ರಿಂದ ಟ್ರೈಕಲರ್ ಕಾರ್ಡ್ ಬದಲಾವಣೆ ಮಾಡಿ ಗ್ರೀನ್‌ಕಾರ್ಡ್ ಕೊಡತಕ್ಕ ಕಾರ್ಯಕ್ರಮವನ್ನು ಸರ್ಕಾರ ಹಾಕಿಕೊಂಡಿದೆ. ಸುಮಾರು 52ಲಕ್ಷ ಕುಟುಂಬಗಳನ್ನು ನಾವು ಗುರುತಿಸಿ ಹಸಿರುಕಾರ್ಡ್ ಕೊಡುವಾಗ ಬಹಳ ಪರಿಪಕ್ವ ಮಾಡಬೇಕಾದರೆ ಫಲಾನುಭವಿಗಳ ಪಟ್ಟಿಯನ್ನು ಮಾಡಿ ಪ್ರತಿ ಪಂಚಾಯತಿಯಲ್ಲಿಯೂ ಪಟ್ಟಿಯನ್ನು ಪ್ರಕಟ ಮಾಡಬೇಕು. ಅದರಲ್ಲಿ ಬಡವರು ಯಾರು ಬಲ್ಲಿದರು ಯಾರು ಎನ್ನುವುದು ಗುರುತು ಆಗುತ್ತದೆ. ಅದರಿಂದ ಈ ವೊಂದು ಬಡವರ ಪಟ್ಟಿಯನ್ನು ಸರಿಪಡಿಸಬಹುದು. ಈವೊಂದು ಜವಾಬ್ದಾರಿಯನ್ನು, ಫಲಾನುಭವಿಗಳ ಪಟ್ಟಿಯಲ್ಲಿ ಯಾರಾದರೂ ಉಳ್ಳವರು ಬಂದರೆ ಅಥವಾ ಫಲಾನುಭವಿಗಳಿಗೆ ಹಸಿರು ಕಾರ್ಡ್ ಕೊಡುವಾಗ ಅಧಿಕಾರಿಗಳು ದುರುಪಯೋಗ ಮಾಡಿದ್ದರೆ ಅವರ ಮೇಲೆ ಉಗ್ರಕ್ರಮ ತೆಗೆದುಕೊಳ್ಳಬೇಕು. ಈ ಸಂಪೂರ್ಣ ಜವಾಬ್ದಾರಿಯನ್ನು ತಾಲ್ಲೂಕಿನ ತಹಶೀಲ್ದಾರರು ಮತ್ತು ಬಿಡಿಒಗಳಿಗೆ ಕೊಟ್ಟು ಅವರೇ ಜವಾಬ್ದಾರಿಯನ್ನು ತಾಲ್ಲೂಕಿನಲ್ಲಿಯೂ ಹೆಚ್ಚು ಕಡಿಮೆಯಾದರೆ, ಆ ರೀತಿ ಮಾಡಿ ಹಸಿರುಕಾರ್ಡ್ ವಿತರಣೆ ಮಾಡಿ. ಜೊತೆಗೆ ಪ್ರತಿ ತಾಲ್ಲೂಕಿನಲ್ಲಿಯೂ ನಗರಪ್ರದೇಶಗಳ ಪ್ರತಿ ವಾರ್ಡಿನಲ್ಲಿಯೂ ವಿಜಿಲೆನ್ಸ್ ಕಮಿಟಿ ಜಾಗೃತದಳ ರಚನೆ ಮಾಡಿ ಎಂದು ನನ್ನ ಸ್ನೇಹಿತರಾದ ಮಾನ್ಯ ನಾಗೇಗೌಡರು ಸಲಹೆ ಮಾಡಿದ್ದಾರೆ. ಬೋಗಸ್‌ಕಾರ್ಡ್ ಆಗಲಿ, ಅಗತ್ಯವಸ್ತುಗಳು ಸರಿಯಾದ ರೀತಿಯಲ್ಲಿ ವಿತರಣೆ ಆಗಿದಯೋ ಇಲ್ಲವೋ ಎನ್ನುವ ಬಗ್ಗೆ ನೋಡುವುದಕ್ಕೆ ಒಂದು ವಿಜಿಲೆನ್ಸ್ ಕಮಿಟಿ ಮಾಡುವುದು ಅವಶ್ಯಕವೆಂದು ನಾನು ಈ ಸಂದರ್ಭದಲ್ಲಿ ಸಲಹೆ ಕೊಡುವುದಕ್ಕೆ ಇಚ್ಛೆಪಡುತ್ತೇನೆ. ಹಣದುಬ್ಬರ 11ಕ್ಕೂ ಮೀರಿದೆ. ಅಗತ್ಯವಸ್ತುಗಳ ಬೆಲೆ ಆಕಾಶಕ್ಕೆ ಏರಿರುವಾಗ ಬಡವರ ಜೀವನ ಕಳವಳಕಾರಿಯಾಗಿರುವಾಗ, ಈ ಸಂದರ್ಭದಲ್ಲಿ ಸುಮಾರು ೫೨ಲಕ್ಷ ಕುಟುಂಬಗಳಿಗೆ ಹಸಿರುಕಾರ್ಡ್ ಕೊಟ್ಟು 3.20 ಪೈಸೆಗೆ ಒಂದು ಕೆ.ಜಿ. ಅಕ್ಕಿಯನ್ನು ಕೊಡತಕ್ಕ ಕಾರ್ಯಕ್ರಮ ಅದೊಂದು ವರಪ್ರಸಾದವಾಗಿದೆಯೆಂದು ಬಹಳ ಹೆಮ್ಮೆಯಿಂದ ಹೇಳುತ್ತಿದ್ದೇನೆ. ಮಾನ್ಯ ನಾಗೇಗೌಡರು ಸರ್ಕಾರದ ಗಮನವನ್ನು ಸೆಳೆದಿದ್ದಾರೆ. ರಾಗಿ ಮತ್ತು ಜೋಳವನ್ನು ಸಹ ಸುಲಭ ದರದಲ್ಲಿ ಹಸಿರುಕಾರ್ಡ್ ಮುಖಾಂತರ ಕೊಡತಕ್ಕ ಕಾರ್ಯಕ್ರಮ ಒಳ್ಳೆಯದೆಂದೂ ಅದನ್ನು ಜಾರಿಗೆ ತರಬೇಕೆಂದು ಹೇಳಿದ್ದಾರೆ. ನಾನು ಸಹ ಈ ಸಭೆಯ ಮುಖಾಂತರ ಮಾನ್ಯ ಮುಖ್ಯಮಂತ್ರಿಗಳಿಗೆ ಒತ್ತಾಯ ಮಾಡುತ್ತೇನೆ. ವಿದ್ಯುತ್ ಕೊರತೆಯ ಬಗ್ಗೆ ಸಾಕಷ್ಟು ಈ ಮನೆಯಲ್ಲಿ ಆಡಳಿತ ಪಕ್ಷದ ಕಡೆಯಿಂದ ಮತ್ತು ವಿರೋಧಪಕ್ಷದ ಕಡೆಯಿಂದ ಚರ್ಚೆಯಾಗಿದೆಯ

ಅದಕ್ಕೆ ಸಂಬಂಧಪಟ್ಟ ಉಪಮುಖ್ಯಮಂತ್ರಿಗಳು ಸಾಕಷ್ಟು ಇದರಲ್ಲಿ ಭಾಗಿಯಾಗಿದ್ದಾರೆ. ವಿದ್ಯುತ್ ಉತ್ಪಾದನೆ ಮತ್ತು ವಿತರಣೆಯ ಬಗ್ಗೆ ಪರಿಣಾಮಕಾರಿಯಾದ ಉತ್ತರವನ್ನು ಅವರು ಕೊಟ್ಟಿದ್ದಾರೆ. ಈ ಸಮಸ್ಯೆ ಬೃಹದಾಕಾರವಾಗಿದೆ. ಈ ಸಮಸ್ಯೆಯನ್ನು ಯಾವರೀತಿ ಬಗೆಹರಿಸಬೇಕು ಎನ್ನುವುದು ಬಹಳ ಮುಖ್ಯ. ವಿದ್ಯುತ್ ವಿತರಣೆ ಏನಿದೆ ಅದು ಬಹಳ ಮುಖ್ಯ. ಸುಮಾರು ೨೦ಪರ್ಸೆಂಟ್ ವಿದ್ಯುತ್ ಮಾರ್ಗದಲ್ಲಿ ಸೋರಿಹೋಗುತ್ತದೆ. ಅದರ ಬಗ್ಗೆ ಏನು ಕಾರ್ಯಕ್ರಮ ತೆಗೆದುಕೊಳ್ಳಬೇಕು, ವಿದ್ಯುಚ್ಛಕ್ತಿ ಮಂಡಳಿಯವರು ಕಾರ್ಯಕ್ರಮ ತೆಗೆದುಕೊಂಡಿದ್ದಾರೆ. ನಮಗೆ ಕೊರತೆಯಿರುವ 25 ಪರ್ಸೆಂಟ್ ಸೋರಿ ಹೋಗುವುದನ್ನು ಸರಿಪಡಿಸಿದರೆ ಸಾಕಷ್ಟು ಸುಧಾರಣೆಯಾಗುತ್ತದೆ. ಆದುದರಿಂದ ವಿದ್ಯುಚ್ಛಕ್ತಿ ಮಂಡಳಿಗೆ ಕಾಯಕಲ್ಪವನ್ನು ಕೊಟ್ಟು ದೃಢಸಂಕಲ್ಪದಿಂದ ಕೆಲಸ ಮಾಡಿದರೆ ಅದನ್ನು ಸರಿಪಡಿಸಬಹುದು. ಬಾಂಬೆಯಲ್ಲಿ ಬಾಂಬೆ ಸಬರ್‌ಬನ್ ಎಲೆಕ್ಟ್ರಿಕಲ್ ಕಂಪನಿ ಅದು ಬಾಂಬೆ ನಗರದಲ್ಲಿ ಎಲೆಕ್ಟ್ರಿಸಿಟಿ ವಿತರಣೆ ಮಾಡತಕ್ಕ ಜವಾಬ್ದಾರಿಯನ್ನು ತೆಗೆದುಕೊಂಡಿದೆ. ಅಲ್ಲಿ ಯಾವ ತೊಂದರೆಯೂ ಇಲ್ಲ. ಬೆಂಗಳೂರಿನಲ್ಲಿ ಆ ತರಹ ವ್ಯವಸ್ಥೆ ಏಕೆ ಆಗಬಾರದು? ಆದುದರಿಂದ ತಮ್ಮ ಮುಖಾಂತರ ಮಾನ್ಯ ಮುಖ್ಯಮಂತ್ರಿಗಳನ್ನು ಮತ್ತು ಉಪಮುಖ್ಯಮಂತ್ರಿಗಳನ್ನು ಒತ್ತಾಯ ಮಾಡುವುದಕ್ಕೆ ಇಚ್ಛೆಪಡುತ್ತೇನೆ. ಬೇಕಾದಷ್ಟು ಜನ ತಜ್ಞರು ಇದ್ದಾರೆ.

ವಿದ್ಯುತ್‌ವಿತರಣೆಯ ಬಗ್ಗೆ ನೀವು ಯಾವ ಕ್ರಮ ತೆಗೆದುಕೊಳ್ಳಬೇಕೆಂಬ ಬಗ್ಗೆ ತಜ್ಞರೊಡನೆ ವಿಚಾರಮಾಡಿ ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ನಾನ್ ಕನ್‌ವೆನ್‌ಷನಲ್ ಸೋರ್ಸಸ್, ಅಸಂಪ್ರದಾಯ ಮೂಲಗಳಿಂದ ವಿದ್ಯುತ್ ಉತ್ಪಾದನೆ ಮಾಡತಕ್ಕದ್ದು, ಅದು ಯಾವುದೆಂದರೆ, ಗಾಳಿ, ಸೂರ್ಯನ ಬೆಳಕು ಇಂತಹದ್ದು 13 ಐಟಂಗಳಿವೆ. ಅದಕ್ಕಾಗಿ ಕೇಂದ್ರದಲ್ಲಿ ಒಬ್ಬ ಮಂತ್ರಿಗಳಿದ್ದಾರೆ. ಪ್ರತ್ಯೇಕ ಇಲಾಖೆಯಿದೆ. ನಾನ್‌ಕನ್‌ವೆನ್‌ಷನಲ್ ಎನರ್ಜಿಗೆ ಸೆಂಟ್ ಪರ್ಸೆಂಟ್‌ಹಣವನ್ನು ಕೇಂದ್ರ ಸರ್ಕಾರದವರು ಕೊಡುತ್ತಿದ್ದಾರೆ. ಅದರ ಬಗ್ಗೆ ರಾಜ್ಯಸರ್ಕಾರದ ಕಾರ್ಯಕ್ರಮವೇನು? ಏನು ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದೀರಿ? ಅದರ ಬಗ್ಗೆ ಹೆಚ್ಚಿನ ಆದ್ಯತೆಯನ್ನು ಕೊಡಬೇಕೆಂದು ಈ ಸಂದರ್ಭದಲ್ಲಿ ತಮ್ಮ ಮುಖಾಂತರ ಸರ್ಕಾರಕ್ಕೆ ಹೇಳುತ್ತೇನೆ. ನಾವೆಲ್ಲಾ ಗ್ರಾಮಾಂತರ ಪ್ರದೇಶಗಳಿಂದ ಬಂದಿರಬಹುದು. ಆದರೆ ನಾವೆಲ್ಲಾ ಬೆಂಗಳೂರು ನಗರದಲ್ಲಿ ವಾಸವಾಗಿದ್ದೇವೆ. ಬೆಂಗಳೂರು ನಗರದ ಸಮಸ್ಯೆಗಳು ಬೃಹದಾಕಾರವಾಗಿ ಬೆಳೆದಿವೆ. ಬೆಂಗಳೂರು ನಗರದ ಜೀವನ ನಿಜವಾಗಲೂ ಹೇಳಬೇಕಾದರೆ ತುಂಬಾ ಕಳವಳಕಾರಿಯಾಗಿದೆ. ನಾಗರೀಕ ಸೌಲಭ್ಯಗಳಿಂದ ನಾಗರೀಕರು ವಂಚಿತರಾಗಿದ್ದಾರೆ. ಅದಕ್ಕೋಸ್ಕರ ಬೆಂಗಳೂರು ನಗರಕ್ಕೆ 10 ವರ್ಷದ ಪ್ರಾಸ್ಪೆಕ್ಟೀವ್ ಪ್ಲಾನ್ ತಯಾರಿಸಬೇಕು. ಅದರಲ್ಲಿ ವಸತಿ, ಸಾಗಾಣಿಕೆ, ಶಿಕ್ಷಣ, ಆರೋಗ್ಯ, ನೀರು, ವಿದ್ಯುಚ್ಛಕ್ತಿ ಇತ್ಯಾದಿ, ಇವುಗಳ ಬಗ್ಗೆ ಒಂದು ಪ್ಲಾನ್ ಮುಖ್ಯ. ರಾಜ್ಯಪಾಲರ ಭಾಷಣದಲ್ಲಿ ಬೆಂಗಳೂರು ನಗರದ ಜನತೆಯನ್ನು ರಕ್ಷಿಸಲು.....

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಸಭಾಪತಿಯವರೇ ಬಹಳ ಕೂಲಂಕಷವಾಗಿ ಮಾನ್ಯ ನಾಗೇಗೌಡರು ಮತ್ತು ಬಸವಣ್ಣೆಪ್ಪನವರು ವಿವರವಾಗಿ ಹೇಳಿದ್ದಾರೆ. ನನ್ನ ಸಲಹೆ ಏನೆಂದರೆ ತಾಲ್ಲೂಕು ಮಟ್ಟದಲ್ಲಿ ಅನೇಕ ಯೋಜನೆಗಳಿಗೆ....

ಛೇರ್ಮನ್: ಮಾನ್ಯ ಸದಸ್ಯರು ಸಲಹೆ ಕೊಡವುದಾದರೆ ಪ್ರತ್ಯೇಕವಾಗಿ ಮಾತನಾಡಿ. ಅವರು ಮಾತನಾಡತಕ್ಕ ಕಾಲದಲ್ಲಿ ಇನ್ನೊಬ್ಬರು ಎಷ್ಟರ ಮಟ್ಟಿಗೆ ಪ್ರವೇಶ ಮಾಡಬಹುದು?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ವಿದ್ಯುತ್ ಯಾವರೀತಿ ವಿತರಣೆ ಮಾಡಬೇಕು ಎನ್ನುವ ಬಗ್ಗೆ ನಾನು ಸಲಹೆ ಕೊಡುತ್ತೇನೆ. ನಾನು ಹೇಳುತ್ತಿರುವುದು ಯಾವರೀತಿ

ವಿತರಣೆ ಮಾಡಬೇಕೆನ್ನುವ ಬಗ್ಗೆ, ತಾಲ್ಲೂಕು ಮಟ್ಟದಲ್ಲಿ ಯಾವರೀತಿ ವಿತರಣೆ ಮಾಡಿದರೆ ಸರಿಹೋಗುತ್ತದೆ ನಾನು ಹೇಳುವುದು ಅಷ್ಟೆ, ದಯವಿಟ್ಟು ಒಂದು ನಿಮಿಷ ಅವಕಾಶ ಕೊಡಿ.

ಛೇರ್ಮನ್ : ಅವರಿಗೆ ಕಂಡಂತಹ ರೀತಿಯಲ್ಲಿ ಅವರು ಪ್ರಸ್ತಾಪ ಮಾಡುತ್ತಿದ್ದಾರೆ. ನಿಮಗೆ ಸಮಯ ಕೊಟ್ಟಾಗ ನೀವು ಮಾತನಾಡಿ.

ಶ್ರೀ ಜಿ.ಬಸವಣ್ಣೆಪ್ಪ : ಮಾನ್ಯ ಸಭಾಪತಿಗಳೇ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಒಂದು ಮೆಗಾಸಿಟಿ ಯೋಜನೆಯನ್ನು ಪ್ರತ್ಯೇಕವಾಗಿ, ಏಷ್ಯಾ ಅಭಿವೃದ್ಧಿ ಬ್ಯಾಂಕಿನಿಂದ ಸುಮಾರು 250 ಕೋಟಿ ರೂಪಾಯಿ ಈ ಯೋಜನೆಗೆ ಸಹಾಯ ಪಡೆದು ಮಾಡಬೇಕೆಂದು ಪ್ರಸ್ತಾಪಿಸಲಾಗಿದೆ, ರಾಮನಗರದ ಸುತ್ತಮುತ್ತಲಿನ ಪ್ರದೇಶಗಳನ್ನು ಬೆಂಗಳೂರಿನ ಸುತ್ತಮುತ್ತಲಿನಲ್ಲಿ ಉಪನಗರಗಳನ್ನು ಬೆಳೆಸಲು ಹೊರಟಿರುವುದು ಬಹಳ ಸಂತೋಷದ ವಿಷಯ. ಈ ಬೆಂಗಳೂರು ನಗರದಲ್ಲಿ ಕೊಳಚೆಪ್ರದೇಶಗಳ ಸಮಸ್ಯೆ ಬೃಹದಾಕಾರವಾಗಿದೆ. ಸ್ಲಮ್ ಕ್ಲಿಯರೆನ್ಸ್ ಆಕ್ಟ್ 1973ರಲ್ಲಿ ಏನಿದೆ, ಅದರಲ್ಲಿ ಕೊಳಚೆ ಪ್ರದೇಶವೆಂದರೇನು? ಅದನ್ನು ಯಾವರೀತಿ ಘೋಷಣೆ ಮಾಡಬೇಕು? ಕೊಳಚೆ ಪ್ರದೇಶವೆಂದು ಘೋಷಣೆ ಮಾಡಿದ ಮೇಲೆ ಕೊಳಚೆಪ್ರದೇಶದ ವಾಸಿಗಳಿಗೆ ಯಾವರೀತಿಯ ರಕ್ಷಣೆ ಕೊಡಬೇಕು? ಹೊಸದಾಗಿ ಕೊಳಚೆಪ್ರದೇಶಗಳು ಉದ್ಭವವಾಗದ ಹಾಗೆ ಏನು ಮಾಡಬೇಕು? ಅದಕ್ಕಾಗಿ ಒಂದು ಸ್ಲಮ್‌ಕ್ಲಿಯರೆನ್ಸ್ ಬೋರ್ಡ್ ಇದೆ ನನಗೆ ಆಶ್ಚರ್ಯವಾಗುತ್ತದೆ, ಆಸ್ಲಮ್‌ಕ್ಲಿಯರೆನ್ಸ್ ಬೋರ್ಡ್ ಅಸ್ತಿತ್ವದಲ್ಲಿಯೇ? ದಿನೇ ದಿನೇ ಕೊಳಚೆ ಪ್ರದೇಶಗಳು ಬೆಳೆಯುತ್ತಿವೆ, ಸ್ಲಮ್‌ಕ್ಲಿಯರೆನ್ಸ್ ಬೋರ್ಡ್‌ನ ಉದ್ದೇಶ ಕೊಳಚೆಪ್ರದೇಶದ ವಾಸಿಗಳಿಗೆ ನಾಗರೀಕ ಸೌಲಭ್ಯವನ್ನು ಕೊಡವುದರ ಜೊತೆಗೆ ಹೊಸದಾಗಿ ಒಂದು ಗುಡಿಸಲೂ ಕೂಡ ಬಾರದಹಾಗೆ, ಹೊಸದಾಗಿ ಕೊಳಚೆಪ್ರದೇಶ ಬೆಳೆಯದ ಹಾಗೆ ನೋಡಿಕೊಳ್ಳುವುದು ಕರ್ನಾಟಕ ಕೊಳಚೆ ನಿರ್ಮೂಲನ ಮಂಡಳಿಯ ಕರ್ತವ್ಯವಾಗಿದೆ. ಆದರೆ ಇಂದು ಈ ದಿಸೆಯಲ್ಲಿ ವಿಫಲರಾಗಿದೆ. ಈ ಕೊಳಚೆ ನಿರ್ಮೂಲನ ಮಂಡಳಿಯ ಪರಿಣಾಮಕಾರಿಯಾಗಿ ಕೆಲಸ ಮಾಡುವಂತೆ ಮಾಡಬೇಕು. ಒಬ್ಬ ಡಿವೈ.ಎಸ್.ಪಿ. ನೇತೃತ್ವದಲ್ಲಿ ಒಂದು ಸೆಲ್‌ಮಾಡಿ ಅವರು ಯಾವಾಗಲೂ ವಿಜಿಲೆಂಟ್ ಆಗಿದ್ದು ಯಾರ್‍ಯಾರು ಗುಡಿಸಲು ಹಾಕಿರುತ್ತಾರೆ, ಅದು ಯಾರೇ ಬರಲಿ, ಖಾಸಗಿ ಜಮೀನು ಆಗಲಿ, ಸರ್ಕಾರಿ ಜಮೀನಿನಲ್ಲೇ ಆಗಲಿ, ಅಥವಾ ಏನಾದರೂ ಸೈಟ್ ಇದ್ದರೆ ಅಲ್ಲಿ ಗುಡಿಸಲು ಹಾಕಿಕೊಳ್ಳುವುದು ಇಂಥಾದ್ದು ಏನು ಬೆಂಗಳೂರಿನಲ್ಲಿ ಅವ್ಯಾಹತವಾಗಿ ನಡೆಯುತ್ತಿದೆ, ಇದು ಒಂದು ರಾಕೆಟ್ ಇದೆ. ಅದಕ್ಕಾಗಿ ಇದನ್ನು ಸರಿಯಾಗಿ ಡೀಲ್‌ಮಾಡಿದರೆ ಮಾತ್ರ ಬೆಂಗಳೂರ ನಗರದ ಪರಿಸರವನ್ನು ಕಾಪಾಡವುದಕ್ಕೆ ಸಾಧ್ಯವಾಗುತ್ತದೆ. ಇಷ್ಟೇ ಅಲ್ಲ it comes under environment a improvement scheme.

ಕೇಂದ್ರದಿಂದ ಹಣ ಸಿಗುತ್ತದೆ., ವರ್ಲ್ಡ್ ಬ್ಯಾಂಕ್‌ನಿಂದ ಹಣ ಸಿಗುತ್ತದೆ. ಆದರೆ ಇದರ ಬಗ್ಗೆ ಯಾರೂ ಕೂಡ ಚಿಂತನೆಯನ್ನೇ ಮಾಡುತ್ತಿಲ್ಲ. ವರ್ಲ್ಡ್ ಬ್ಯಾಂಕ್‌ನಿಂದ ಬೇಕಾದಷ್ಟು ಹಣ ಸಿಗುತ್ತದೆ. ಅದರಿಂದ ಬೇಕಾದಷ್ಟು ಮನೆಗಳನ್ನು ಕಟ್ಟಿಸಿಕೊಡಬಹುದು. ಈ ಹೆಚ್.ಯು.ಡಿ. ಇಲಾಖೆ ಏನಿದೆ, ಇದರ ಬಗ್ಗೆ ಗಮನಹರಿಸಿ ಚಿಂತನೆ ಮಾಡಿ ಬೆಂಗಳೂರು ನಗರದ ಪರಿಸರವನ್ನು ಕಾಪಾಡುವುದಕ್ಕೆ ಹೆಚ್ಚಿನ ಆದ್ಯತೆಯನ್ನು ವಹಿಸಬೇಕೆಂದು ಹೇಳಿ ತಮ್ಮ ಮೂಲಕ ನಾನು ಸಭೆಯ ಗಮನಕ್ಕೆ ತರುತ್ತಿದ್ದೇನೆ. ಸನ್ಮಾನ್ಯ ಅಧ್ಯಕ್ಷರೇ, ನನಗೆ ಬಹಳ ಸಂತೋಷವಾಗಿದೆ, ನಮ್ಮ ಮುಖ್ಯಮಂತ್ರಿಗಳಾದ ಶ್ರೀ ದೇವೇಗೌಡರು ಮತ್ತು ಉಪಮುಖ್ಯಮಂತ್ರಿಗಳಾದ ಶ್ರೀಮಾನ್ ಜೆ.ಎಚ್. ಪಟೇಲರು ವಿದೇಶಗಳಿಗೆ ಹೋಗಿ ವಿದೇಶಿ ಬಂಡವಾಳವನ್ನು ಆಕರ್ಷಿಸಿದ್ದಾರೆ. ಬಹಳ ಸಂತೋಷ.

ಆದರೆ ಇಲ್ಲಿ ನಮ್ಮ ಆಡಳಿತ ಪರಿಸ್ಥಿತಿಯನ್ನು ಸುಧಾರಿಸಿಕೊಳ್ಳುವುದು ಬಹಳ ಒಳ್ಳೆಯದು. ಆದರೆ ಇಲ್ಲಿರತಕ್ಕಂಥ ಭ್ರಷ್ಟಾಚಾರ, ವಿಳಂಬ ನಿರ್ಧಾರ ಹಾಗೂ ಅನಾವಶ್ಯಕ ದಾಖಲೆಗಳನ್ನು ಕೇಳುವುದು ಇವುಗಳಿಂದಾಗಿ ಅವರು ಇಲ್ಲಿ ಇರುತ್ತಾರೋ ಓಡಿ ಹೋಗುತ್ತಾರೋ ನೋಡಬೇಕು. ಆದ್ದರಿಂದ ಹೊರಗಿನವರು ಬಂದು ಇಲ್ಲಿ ಇಂಡಸ್ಟ್ರಿ, ಕೈಗಾರಿಕೆಗಳನ್ನು ಹಾಕಬೇಕು, ಎಲೆಕ್ಟ್ರಿಸಿಟಿ ಉತ್ಪಾದನೆ ಮಾಡಬೇಕು ಎಂದಾಗ ನಮ್ಮ ಅಧಿಕಾರಗಳು ಮತ್ತು ಅದಕ್ಕೆ ಸ್ಪಂದಿಸಿ ಎಲ್ಲ ರೀತಿಯ ಸಹಕಾರವನ್ನು ಅವರಿಗೆ ನೀಡಿ, ಯಾವ ರೀತಿಯ ಗೊಂದಲವೂ ಆಗದಂತೆ ನೋಡಿಕೊಳ್ಳುವುದು ಬಹಳ ಮುಖ್ಯ.

ಎರಡನೆಯದಾಗಿ ಪರಿಸರ. ಇತ್ತೀಚಿನ ದಿವಸಗಳಲ್ಲಿ ಜನಸಂಖ್ಯೆ ಬೆಳೆದಿದೆ ಮತ್ತು ಕೈಗಾರಿಕೆಗಳು ಹೆಚ್ಚಾಗಿ ಇವುಗಳಿಂದಾಗಿ ಪರಿಸರ ಹಾಳಾಗಿ ಹೋಗಿದೆ. ಆದ್ದರಿಂದ ಪರಿಸರ ರಕ್ಷಣೆಗೆ ನಾವು ವಿಶೇಷ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು. ಅದಕ್ಕೋಸ್ಕರ ಮಾಲಿನ್ಯ ನಿಯಂತ್ರಣ ಮಂಡಳಿ ಅಂತ ಏನಿದೆ, ಅದು ನಿಜವಾಗಿಯೂ ಕೆಲಸ ಮಾಡುತ್ತಿದೆಯೋ ಅಥವಾ ನಿದ್ದೆ ಮಾಡುತ್ತಿದೆಯೋ ಎಂದು ನಾವು ವಿಚಾರ ಮಾಡಬೇಕು. ಈ ಮಾಲಿನ್ಯ ನಿಯಂತ್ರಣ ಮಂಡಳಿಯನ್ನು ಚುರುಕುಗೊಳಿಸಲಾವುದು ಅನಿವಾರ್ಯವಾಗಿದೆ. ಮಾನ್ಯ ನಾಗೇಗೌಡರು ತಮ್ಮ ಭಾಷಣದಲ್ಲಿ ಬಹಳ ಚೆನ್ನಾಗಿ ಹೇಳಿದರು. ಕೇಂದ್ರಸರ್ಕಾರದಿಂದ ನಮಗೆ ಬರತಕ್ಕಂಥ ಸಹಾಯ ಬರುತ್ತಿಲ್ಲ, ಡೆಲ್ಲಿಯಲ್ಲಿ ಇರತಕ್ಕಂಥ ಕರ್ನಾಟಕ ಭವನ ಅಲ್ಲಿ ಇರತಕ್ಕಂಥ ರೆಸಿಡೆನ್ಸ್ ಆಫೀಸರ್ಸ್ they are ineffective and are not delivering goods in the interest of the State. ಎನ್ನುವುದನ್ನು ಅವರು ತಮ್ಮ ಭಾಷಣದಲ್ಲಿ ಬಹಳ ಚೆನ್ನಾಗಿ ಪ್ರತಿಪಾದನೆ ಮಾಡಿದ್ದಾರೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನಮ್ಮ ಎಂ.ಪಿ.ಗಳು ಏನು ಮಾಡುತ್ತಿದ್ದಾರೆ? ನಮ್ಮ ಅಧಿಕಾರಗಳು ಅಲ್ಲಿ ಏನು ಮಾಡುತ್ತಿದ್ದಾರೆ?

ಶ್ರೀ ಜಿ. ಬಸವಣ್ಣೆಪ್ಪ : ನನ್ನ ಸಲಹೆ ಇಷ್ಟೆ, ನಮ್ಮ ರಾಜ್ಯದ ಅನೇಕ ಯೋಜನೆಗಳಿಗೆ ಕೇಂದ್ರಸರ್ಕಾರದಿಂದ ಇನ್ನೂ ಕೂಡ ಮಂಜೂರಾತಿ ದೊರೆತಿಲ್ಲ. ಇನ್ನೂ ಬರಬೇಕಾದ ಹಣ ಬಹಳ ಇದೆ. ತಮಿಳುನಾಡಿನಲ್ಲಿ ಏನು ಮಾಡಿದ್ದಾರೆ ಎಂದರೆ, ಶ್ರೀ ತಂಬಿದೊರೈ ಅವರಿಗೆ ಒಬ್ಬರಿಗೆ ಸ್ಟೇಟ್ ಮಿನಿಸ್ಟರ್ ಸ್ಟೇಟಸ್ ಕೊಟ್ಟು, ಅವರಿಗೆ ಅಧಿಕಾರವನ್ನು ಕೊಟ್ಟಿದ್ದಾರೆ. ಅವರು ದೆಹಲಿಯಲ್ಲೇ ಇರಬೇಕು. He is a full-fledged Minister lookinfg after the affairs of state of Tamil Nadu.

ಇಲ್ಲಿಂದ ತಮಿಳುನಾಡಿನಲ್ಲಿ ಏನು ಪ್ರಪೋಸಲ್ಸ್ ಹೋಗುತ್ತವೆ ಅವುಗಳನ್ನು ಅವರು ಫಾಲೋ ಆಫ್ ಮಾಡುತ್ತಾರೆ, ಕೇಂದ್ರದಿಂದ ಏನು ಹಣ ಬರುತ್ತದೆ ಅದನ್ನೆಲ್ಲಾ ಅವರು ನೋಡಿಕೊಳ್ಳುತ್ತಾರೆ. ಪ್ರತಿಯೊಂದು ಕೆಲಸವನ್ನು ಚಾಕಚಕ್ಯತೆಯಿಂದ ಮಾಡಿ, ಅವರ ಕೋಟಾ ಏನಿದೆ, ಅದರಲ್ಲಿ ಹೆಚ್ಚು ಕಡಿಮೆಯಾಗದಂತೆ ಅದನ್ನು ಅವರು ನೋಡಿಕೊಳ್ಳಿತ್ತಾರೆ. ಎಂತಹ ಕೆಲಸವನ್ನು ಅವರು ಮಾಡುತ್ತಾರೆ. My sincere suggestion is, on par with Tamil Nadu Govt, a Senior experienced Minister or a minister of State, who knows Hindi & English may please be posted to function at Delhi ಅವರನ್ನು ಅಲ್ಲಿ ಸ್ಟೇಟ್‌ಮಿನಿಸ್ಟರ್ ಸ್ಟೇಷಸ್ ಕೊಟ್ಟು ಅಥವಾ ಕ್ಯಾಬಿನೆಟ್‌ಮಿನಿಸ್ಟರ್ ಸ್ಟೇಟಸ್ ಕೊಟ್ಟು ಈ ಜವಾಬ್ದಾರಿಯನ್ನು ಅವರಿಗೆ ವಹಿಸುವುದು ಇದರಿಂದ ಬಹಳ ಲಾಭವಿದೆಯೆಂದು ನಾನು ಹೇಳುತ್ತೇನೆ. ವೃತ್ತಿಪರ ಶಿಕ್ಷಣದ ಬಗ್ಗೆ ತಿಳಿಸುವುದಾದರೆ ವೃತ್ತಿಪರ ಶಿಕ್ಷಣದಲ್ಲಿ ಪ್ರವೇಶ ನೀತಿ ಒಂದು ರೀತಿಯಲ್ಲಿ ವಿಫಲವಾಗಿದೆ. ಹಿಂದೆ ೨೦ ಸಾವಿರ ಕೊಟ್ಟರೆ ಇಂಜಿನಿಯರಿಂಗ್ ಕಾಲೇಜ್ ಸೀಟ್ ಸಿಗುತ್ತಿತ್ತು, ಒಂದು ಲಕ್ಷ ರೂಪಾಯಿ ಮೆಡಿಕಲ್‌ಸೀಟ್‌ಸಿಗುತ್ತಿತ್ತು. ಈಗ ಅದು ಐದಾರು ಪಟ್ಟು

ಹೆಚ್ಚಾಗಿದೆ. ಆದ್ದರಿಂದ ಇದಕ್ಕೆ ಸೂಕ್ತವಾದ ಪ್ರವೇಶ ನೀತಿಯನ್ನು ರೂಪಿಸಿ ಮಾದಲು ಏನಿತ್ತು, ೨೦ ಸಾವಿರವಾದರೂ ಕೊಡಲಿ, ಒಂದು ಲಕ್ಷ ರೂಪಾಯಿಯಾದರೂ ಕೊಡಲಿ. ಈಗ ಪ್ರತಿವರ್ಷ ವಿದ್ಯಾರ್ಥಿಗಳು ಎಷ್ಟೋ ಜನ ಬಿಟ್ಟುಬಂದಿದ್ದಾರೆ. ಇದಕ್ಕೆ ಕಾರಣ ಇದು ಆರುಪಟ್ಟು ಹೆಚ್ಚಾಗಿರುವುದರಿಂದ .ಆದ್ದರಿಂದ ಪ್ರವೇಶ ನೀತಿಯನ್ನು ಬದಲಾವಣೆ ಮಾಡುವುದು ಅತ್ಯಂತ ಸೂಕ್ತವೆಂದು ಈ ಸಂದಂರ್ಭದಲ್ಲಿ ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇದರ ಜೊತೆಗೆ ಕಾಲೇಜುಗಳಲ್ಲಿ ಓದತಕ್ಕಂಥ ವಿದ್ಯಾರ್ಥಿಗಳಿಗೆ ಸೂಕ್ತ ಮಾರ್ಗದರ್ಶನ ಕೊಡುವುದು ಬಹಳ ಒಳ್ಳೆಯದು. ನಮ್ಮ ಮಕ್ಕಳು ಏನು ಕಾಲೇಜಿನಲ್ಲಿ ಓದುತ್ತಿದ್ದಾರೆ,ಅವರು ಹಾಳಾಗುತ್ತಿದ್ದಾರೆ. ಅವರ ಚಟಗಳು ಏನು ಎನ್ನುವುದು ತಮಗೆ ಗೊತ್ತಿದೆ. ಇದನ್ನು ನಾನು ಬಹಳ ನೊಂದ ಮನಸ್ಸಿನಿಂದ ಹೇಳುತ್ತಿದ್ದೇನೆ. ಒಂದು ಸಾವಿರ ಕಾಲೇಜು ವಿದ್ಯಾರ್ಥಿಗಳು ಇರತಕ್ಕಂಥ ಕಾಲೇಜಿನಲ್ಲಿ ಒಂದು ಕೌನ್ಸಿಲಿಂಗ್ ಸೆಂಟರ್‌ಎಂದು ಮಾಡಿ, ಒಬ್ಬ ಸೀನಿಯರ್ ಲೆಕ್ಚರರ್‌ರನ್ನು ಅದಕ್ಕೆ ಮುಖ್ಯಸ್ಥರನ್ನಾಗಿ ಮಾಡಿ, ವಿದ್ಯರ್ಥಿಗಳಿಗೆ ಸೂಕ್ತ ಮಾರ್ಗದರ್ಶನ ಕೊಟ್ಟು, ಅವರು ಕೆಟ್ಟು ಹೋಗದಹಾಗೆ ನೋಡಿಕೊಳ್ಳುವುದು ಬಹಳ ಮುಖ್ಯವಾಗಿದೆ. ಇದರ ಬಗ್ಗೆ ಸರ್ಕಾರ ಮತ್ತು ವಿದ್ಯಾ ಇಲಾಖೆ ಹೆಚ್ಚಿನ ಆದ್ಯತೆಯನ್ನು ಕೊಡಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇನ್ನು ಖಾಸಗಿ ನರ್ಸಿಂಗ್ ಹೋಮ್‌ಗಳ ಬಗ್ಗೆ ಹೇಳಬೇಕೆಂದರೆ ಕೆಲವು ನರ್ಸಿಂಗ್ ಹೋಮ್‌ಗಳು ಬಹಳ ಚೆನ್ನಾಗಿ ಕೆಲಸ ಮಾಡುತ್ತವೆ. ನಾನು ಅನೇಕಸಾರಿ ನಮ್ಮ ಕುಟುಂಬದ ಸದಸ್ಯರನ್ನು ಅಲ್ಲಿಗೆ ಕರೆದುಕೊಂಡು ಹೋಗುತ್ತೇವೆ. ಕೆಲವು ನರ್ಸಿಂಗ್ ಹೋಮ್‌ಗಳು ಬಹಳ ಒಳ್ಳೆಯ ರೀತಿಯಲ್ಲಿ ಇವೆ. ಆದರೆ ಈ ಮಧ್ಯೆ ಕೆಲವು ನರ್ಸಿಂಗ್ ಹೋಮ್‌ಗಳ ವಿಚಾರದಲ್ಲಿ ಕೆಲವು ಅವ್ಯವಹಾರಗಳು ನಡೆದು ಈ ನರ್ಸಿಂಗ್ ಹೋಮ್‌ಗಳಿಗೆ ಒಂದು ಕಳಂಕ ಬಂದು ಬಿಟ್ಟಿದೆ. ಅಲ್ಲಿಗೆ ಹೋಗಬೇಕೇ ಬೇಡವೇ ಎನ್ನತಕ್ಕಂಥ ವಾತಾವರಣ ನಿರ್ಮಾಣವಾಗಿ ಬಿಟ್ಟಿದೆ. ಇದನ್ನು ಯಾವರೀತಿ ಸರಿಪಡಿಸಬೇಕು ಎನ್ನುವುದರ ಬಗ್ಗೆ ಒಂದು ಸೂಕ್ತ ಮತ್ತು ದಿಟ್ಟ ನಿಲುವನ್ನು ತೆಗೆದುಕೊಂಡು ಈ ನರ್ಸಿಂಗ್ ಹೋಮ್‌ಗಳಿಗೆ ಏನು ಕಳಂಕ ಉಂಟಾಗಿದೆ, ಇದನ್ನು ಹೋಗಲಾಡಿಬೇಕು ಮತ್ತು ಕೆಟ್ಟ ನರ್ಸಿಂಗ್‌ಗಳ ಮೇಲಿ ದಿಟ್ಟ ಕ್ರಮ ತೆಗೆದುತಕೊಳ್ಳಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇನ್ನು ವಿಶೇಷ ಘಟಕ ಯೋಜನೆ ಸನ್ಮಾನ್ಯ ಅಧ್ಯಕ್ಷರೇ, ಪಂಚವಾರ್ಷಿಕ ಯೋಜನೆಗಳಿಂದ ರಾಷ್ಟ್ರದ ಸರ್ವಾಂಗೀಣ ಅಭಿವೃದ್ಧಿಯಾಗಲಿಲ್ಲವೆಂದು ತಿಳಿದುಕೊಂಡು ಅದರಲ್ಲೂ ಸಮಾಜದ ದುರ್ಬಲವರ್ಗದವರ, ಪರಿಶಿಷ್ಟ ಜಾತಿ, ಪರಿಶಿಷ್ಟವರ್ಗದವರ ಕಲ್ಯಾಣ ಆಗಲಿಲ್ಲ ವೆಂದು 1980-81ನೇ ಇಸವಿಯಲ್ಲಿ ವಿಶೇಷ ಘಟಕ ಯೋಜನೆಯನ್ನು ಕೇಂದ್ರ ಮತ್ತು ರಾಜ್ಯಸರ್ಕಾರ ರೂಪಿಸಿತು. ೬.ನೇ ಪಂಚವಾರ್ಷಿಕ ಯೋಜನೆಯಲ್ಲಿ 5.5 ಲಕ್ಷ ಎಸ್.ಸಿ. ಕುಟುಂಬಗಳನ್ನು ಬಡತನ ರೇಖೆಯಿಂದ ಎತ್ತಬೇಕೆಂದು 256 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಸುಮಾರು 25-26 ಇಲಾಖೆಗಳ ಮುಖಾಂತರ ಹಣವನ್ನು ಖರ್ಚುಮಾಡಿದ್ದಾರೆ. 7ನೇ ಪಂಚವಾರ್ಷಿಕ ಯೋಜನೆಯಲ್ಲಿ 4.83 ಲಕ್ಷ ಕುಟುಂಬಗಳನ್ನು ಬಡತನ ರೇಖೆಯಿಂದ ಎತ್ತಬೇಕೆಂದು ಹೇಳಿ ಸುಮಾರು 400 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಈ ಶೆಡ್ಯುಲ್ಡ್‌ಕ್ಯಾಸ್ಟ್-ಕುಟುಂಬಗಳು ಬಡತನದ ರೇಖೆಯಿಂದ ಯಾರು ಕೆಳಗೆ ಏನಿದ್ದಾರೆ ಅವರನ್ನು ಮೇಲಕ್ಕೆ ತರಬೇಕೆಂದು, ಮತ್ತು ಈ ಸಲುವಾಗಿ ಆರುನೂರು ಕೋಟಿ ರೂಪಾಯಿಗಳನ್ನು ಏನು ಖರ್ಚುಮಾಡಿದ್ದಾರೆ, ಈ ಹಣ ಎಲ್ಲಿಗೆ ಹೋಯಿತು? ಇದೆಲ್ಲ ಮಧ್ಯವರ್ತಿಗಳ ಪಾಲಾಗಿದೆ. ಇಂತಹ ರಾಷ್ಟ್ರೀಯ ಯೋಜನೆಗಳು ಫಲಾನುಭವಿಗಳಿಗೆ ಮುಟ್ಟದೆ ಮಧ್ಯವರ್ತಿಗಳು, ಅಧಿಕಾರಿಗಳು, ಕೆಲವು ರಾಜಕಾರಣಿಗಳು ಇವರ ಪಾಲಾಗಿ, ಒಂದು ರೀತಿಯಲ್ಲಿ ಈ ಹಿಂದುಳಿದ ವರ್ಗಗಳ ಶೋಷಣೆ ಸತತವಾಗಿ ನಡೆಯುತ್ತಿದೆ.

ಇದರ ಬಗ್ಗೆ ಯಾರೂ ಚಿಂತನೆ ಮಾಡಿಲ್ಲವೇಕೆ? ಇದರ ಬಗ್ಗೆ ಏಕೆ ಯಾರೂ ಗಮನಹರಿಸಿಲ್ಲ? ಇದರ ಬಗ್ಗೆ ಮಾನ್ಯ ಸಮಾಜಕಲ್ಯಾಣ ಸಚಿವರು ಇಲ್ಲಿ ಇದ್ದಾರೆ, ಯೂರೂ ಗಮನಹರಿಸಿಲ್ಲ? ಇದರ ಬಗ್ಗೆ ಮಾನ್ಯ ಸಮಾಜಕಲ್ಯಾಣ ಸಚಿವರು ಇಲ್ಲಿ ಇದ್ದಾರೆ,ನಾನು ಅವರ ಗಮನ ಸೆಳೆಯುತ್ತಿದ್ದೇನೆ. ಈ ವಿಶೇಷ ಘಟಕ ಯೋಜನೆ ಏನಿದೆ, ಇದನ್ನು ಪರಿಣಾಮಕಾರಿಯಾಗಿ ಅನುಷ್ಠಾನಕ್ಕೆ ತಂದು ಇದು ಆ ಜನತೆಗೆ ಮುಟ್ಟಬೇಕಾದರೆ ನಾವು ಏನು ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕೆಂದು ಇದರ ಬಗ್ಗೆ ಚಿಂತನೆ ಮಾಡುವುದು ಅತ್ಯವಶ್ಯಕ. ರಾಜ್ಯದ ಜನತೆಯನ್ನು ಬಡತನ ರೇಖೆಯಿಂದ ಎತ್ತಿಹಿಡಿಯದಿದ್ದರೆ ರಾಜ್ಯದ ಆರ್ಥಿಕ ಯೋಜನೆಗೆ ಮತ್ತು ರಾಜ್ಯದ ಆರ್ಥಿಕ ಪರಿಸ್ಥಿತಿಯ ಮೇಲೂ ಕೂಡ ಪೆಟ್ಟು ಬೀಳುವುದರಲ್ಲಿ ಯಾವ ಸಂಶಯವೂ ಇಲ್ಲ ಎಂದು ಈ ಸಂದರ್ಭದಲ್ಲಿ ನಾನು ಹೇಳುತ್ತನೆ. ಇನ್ನು ಮಹಿಳೆ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಐಸಿಡಿಎಸ್ ಸಮಗ್ರ ಬಾಲವಿಕಾಸ ಯೋಜನೆ ಏನಿದೆ, ಅದು ಸರಿಯಾಗಿ ಅನುಷ್ಟಾನಕ್ಕೆ ಬರುತ್ತಿಲ್ಲ. ನಮ್ಮ ಸಮಾಜದಲ್ಲಿ ಬಡಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿದ್ದು ಅವರಿಗೆ ಪೌಷ್ಟಿಕ ಆಹಾರ ಇಲ್ಲ, ಹೀಗಿರುವಾಗ ಅವರಿಗೆ ಚುಚ್ಚುಮದ್ದು ಇತ್ಯಾದಿಗಳನ್ನು ಕೊಡಿಸುವ ಪ್ರಶ್ನೆ ಎಲ್ಲಿಂದ ಬರುತ್ತದೆ? ಅದಕ್ಕೋಸ್ಕರವಾಗಿ ಕೇಂದ್ರಸರ್ಕಾರ ಮತ್ತು ರಾಜ್ಯಸರ್ಕಾರಗಳು ಸಮಗ್ರವಾಗಿ ಬಾಲವಿಕಾಸ ಯೋಜನೆಯನ್ನು ರೂಪಿಸಿದ್ದಾರೆ. ಇದು ಬಹಳ ಒಳ್ಳೆಯ ಕಾರ್ಯಕ್ರಮ. ನಾನು ಸಹ ಸಮಾಜ ಕಲ್ಯಾಣ ಇಲಾಖೆಯ ಮಂತ್ರಿಯಾಗಿದ್ದಾಗ ಈ ಕಾರ್ಯಕ್ರಮಕ್ಕೆ ಹೆಚ್ಚಿನ ಒತ್ತನ್ನು ಕೊಟ್ಟಿದ್ದೆ.

ಆದರೆ ಇದು ಏನಾಗಿದೆ ಎಂದರೆ ಆರೋಗ್ಯ ಇಲಾಖೆಗಳ ನಡುವೆ ಸರಿಯಾದ ಕೋಆರ್ಡಿನೇಶನ್ ಇಲ್ಲ. ಚುಚ್ಚುಮದ್ದು ಕೊಡುವಾಗ ಡಾಕ್ಟರುಗಳು ಇರುವುದಿಲ್ಲ, ಅಂಗನವಾಡಿ ಕಾರ್ಯಕ್ರಮ ಇದೆ. ಇದಕ್ಕೆ ಕೋಟ್ಯಾಂತರ ರೂಪಾಯಿ ಇದೆ. ಆದರೆ ಪೌಷ್ಠಿಕ ಆಹಾರ ದುರುಪಯೋಗವಾಗಿ, ಚುಚ್ಚುಮದ್ದು ಮಾರಾಟ ಆಗುತ್ತದೆ. ಹೀಗಾಗಿ ಕೇಂದ್ರ ಮತ್ತು ರಾಜ್ಯಸರ್ಕಾರ ಕೋಟ್ಯಾಂತರ ರೂಪಾಯಿ ಹಣ ಖರ್ಚು ಮಾಡತಕ್ಕಂಥಾದ್ದು ಈ ಯೋಜನೆಗಳು ನೀರುಪಾಲಾಗುತ್ತಿವೆ. ಇದನ್ನು ಆಡಳಿತ ಎಂದು ಹೇಗೆ ಹೇಳುವುದು ?As far as ICDS programme is concerrned there is no co-ordination between Health and Family welfare Dept. Woman and Child Department. ಆದ್ದರಿಂದ ಇದರ ಬಗ್ಗೆ ಬಹಳ ಗಮನಹರಿಸಬೇಕಾದದ್ದು ಅತ್ಯಾವಶ್ಯಕ. ಆದ್ದರಿಂದ, ಈ ಎಲ್ಲವನ್ನೂ ವಿಚರಣೆಯಿಂದ ನೋಡಬೇಕು. ದೊಡ್ಡ ದೊಡ್ಡ ಡಿಪಾರ್ಟ್‌ಗಳಲ್ಲಿ, ಹೆಡ್ಸ್ ಆಗಿ ಐ.ಎ.ಎಸ್ ಅಧಿಕಾರಿಗಳು ಇದ್ದಾರೆ. I don't know what they are doing. ಮಂತ್ರಿಗಳು ಹೋಗಿ ನೋಡುತ್ತಾರೆ, ಆದರೆ ಪರಿಣಾಮಕಾರಿಯಾಗಿ ಕ್ರಮ ತೆಗೆದುಕೊಳ್ಳದೇ ಇದ್ದರೆ ಏನು ಉಪಯೋಗ? ಮಂತ್ರಿಗಳು ಬರುತ್ತಾರೆ, ಹೋಗುತ್ತಾರೆ ಎನ್ನುವ ತಾತ್ಸಾರ ಬರುತ್ತದೆ. I don't know what these heads of the departments i.e. IAS and IPS offices are doing?

ನಾನು ಸ್ಪೆಷಲ್‌ಕಾಂಪೊನೆಂಟ್ ಪ್ಲಾನ್ ಬಗ್ಗೆ ಮತ್ತು ಐ.ಸಿ.ಡಿ.ಸಿ. ಪ್ರೋಗ್ರಾಂ ಬಗ್ಗೆ ಹೇಳಿದೆ. ಇವತ್ತು ಹರಿಜನ ಗಿರಿಜನ ಕೇರಿಗೆ ಹೋಗಿ ನೋಡಿ, ಹೊಟ್ಟೆಗೆ ಅನ್ನವಿಲ್ಲದೆ, ಮೈಗೆ ಬಟ್ಟೆ ಇಲ್ಲದೆ ಇದ್ದಾರೆ. ಈ ಯೋಜನೆಗಳ ಹಣ ಆ ಜನತೆಗೆ ಮುಟ್ಟಿದ್ದರೆ ಬಡತನ ಎಲ್ಲಿ ಇರುತ್ತಿತ್ತು? ಇದರ ಬಗ್ಗೆ ಏನು ಕಾರ್ಯಕ್ರಮ ತೆಗೆದುಕೊಳ್ಳಬೇಕೋ ಅದೆಲ್ಲವನ್ನೂ ತೆಗೆದುಕೊಳ್ಳಬೇಕು. ಇಷ್ಟನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇನ್ನು ಈಗಾಗಲೇ ಮಾನ್ಯ ನಾಗೇಗೌಡರು ಅನೇಕ ವಿಷಯಗಳ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ, ಬೆಳಕು ಚೆಲ್ಲಿದ್ದಾರೆ. ನಾನು ಹೆಚ್ಚಿಗೆ ಕಾಲವನ್ನು ತೆಗೆದುಕೊಳ್ಳುವುದಕ್ಕೆ ಹೋಗುವುದಿಲ್ಲ, ನನ್ನ ಕ್ಷೇತ್ರದ ವ್ಯಾಪ್ತಿಗೆ ಬರತಕ್ಕ ಬದ್ರಾ ಯೋಜನೆ. ಮಾನ್ಯ ಅಧ್ಯಕ್ಷರೇ, ತಮಗೂ ಗೊತ್ತಿದೆ. 1991 ನೇ ಇಸವಿಯಲ್ಲಿ ಬದ್ರಾ ಬಲದಂಡೆ ನಾಲೆಯ

ಗೈಡ್‌ವಾಲ್ ಕುಸಿದು ಬಿತ್ತು. ಆಗ ಸನ್ಮಾನ್ಯ ಬಂಗಾರಪ್ಪನವರು ಮುಖ್ಯಮಂತ್ರಿಯಾಗಿದ್ದರು. ಅವರು ತಕ್ಷಣ ಕಾರ್ಯಕ್ರಮ ತೆಗೆದುಕೊಂಡು, ಒಂದು ಪರ್ಯಾಯ ವ್ಯವಸ್ಥೆಮಾಡಿದರು, ಅಷ್ಟೇ ಹೊರತು ಆ ಗೈಡ್‌ವಾಲ್ ಕಟ್ಟುವ ಪ್ರಯತ್ನ ಮಾಡಲಿಲ್ಲ. ನಂತರ ಮಾನ್ಯ ವೀರಪ್ಪ ಮೊಯ್ಲಿಯವರೂ ಮಾಡಲಿಲ್ಲ. ಆ ಗೈಡ್‌ವಾಲ್‌ಕಟ್ಟದೇ ಇದ್ದರೂ ಅಲ್ಪಸ್ವಲ್ಪ ಬೆಳೆಯ ರಕ್ಷಣೆಯಾಯಿತು. 20 ಟಿ.ಎಂ. ಸಿ. ನೀರು ಬದ್ರಾ ನಾಲೆಯಲ್ಲಿ ಉಳಿಯಿತು. ಸುಮಾರು 150 ಕೋಟಿ ರೂಪಾಯಿಗಳು ನಷ್ಟವಾಗತಕ್ಕ ಪರಿಸ್ಥಿತಿ. ನಾನು ಶಾಸಕನಾಗಿ ಬಂದತಕ್ಷಣವೇ, ಸನ್ಮಾನ್ಯ ಮುಖ್ಯಮಂತ್ರಿಗಳ ಗಮನವನ್ನು ಸೆಳೆದಾಗ, ಅವರು ನೀರಾವರಿ ಕಾರ್ಯದರ್ಶಿಗಳಾದ ರಮೇಶ್ ಎಂಬುವರನ್ನು ಕೂಡಲೇ ಕಳುಹಿಸಿಕೊಟ್ಟರು. ಈ ಕೆಲಸವನ್ನು ಸನ್ಮಾನ್ಯ ದೇವೇಗೌಡರು ಮುಖ್ಯಮಂತ್ರಿಯಾಗಿ ಬಂದಕೂಡಲೇ, ಅಂದರೆ ಈ ಗೈಡ್‌ವಾಲ್ ಕಟ್ಟತಕ್ಕ ಕೆಲಸ ಈಗ ಪ್ರಾರಂಭವಾಗಿದೆ. ಹೀಗಾಗಿ ವರ್ಷಕ್ಕೆ 150 ಕೋಟಿ ರೂಪಾಯಿಗಳ ನಷ್ಟ ಎಂದರೆ, 1991ನೇ ಇಸವಿಯಿಂದ ಎಷ್ಟು ನಷ್ಟವಾಗಿರಬಹುದು.

ಆದ್ದರಿಂದ ನಾನು ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಗಳನ್ನು ಮತ್ತೊಮ್ಮೆ ಒತ್ತಾಯ ಮಾಡುತ್ತೇನೆ. ಈ ಕೆಲಸವನ್ನು ಆದಷ್ಟು ಬೇಗ ಮುಂದುವರಿಸಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಸನ್ಮಾನ್ಯ ಅಧ್ಯಕ್ಷರೇ, ನೀವೂ ಸಹ ಶಿವಮೊಗ್ಗ ಜಿಲ್ಲೆಯಿಂದ ಬಂದವರು. ಈ ಬಗರ್ ಹುಕುಂ ಸಾಗುವಳಿ ಬಗ್ಗೆ ಅಪಾರವಾದ ಕಳಕಳಿಯನ್ನು ಹೊಂದಿರುವವರು ನಮ್ಮ ಜಿಲ್ಲೆಯಲ್ಲಿ ಲಕ್ಷಾಂತರ ಕುಟುಂಬಗಳು ಬಗರ್‌ಹುಕುಂ ಸಾಗುವಳಿ ಮಾಡಿಕೊಂಡು ಬಂದಿದ್ದಾರೆ. ಅದರಲ್ಲಿ ಮೈನರ್ ಫಾರೆಸ್ಟ್ ಎಂದುಹೇಳಿ, ಸುಮಾರು 20 ವರ್ಷಗಳಿಂದ ಸಾಗುವಳಿ ಮಾಡುತ್ತಿದ್ದಾರೆ. ಈ ಜಾಗದಲ್ಲಿ ಫಾರೆಸ್ಟ್ ಬೆಳೆಯುವ ಹಾಗೆಯೂ ಇಲ್ಲ, ಸರ್ಕಾರಕ್ಕೆ ತೆರಿಗೆ ಬರುವ ಹಾಗೆಯೂ ಇಲ್ಲ. ಇಂತಹ ಗೊಂದಲ ಪರಿಸ್ಥಿತಿಯಲ್ಲಿ 20 ವರ್ಷಗಳಿಂದ ಹಾಗೆಯೇ ಇಟ್ಟುಕೊಂಡು ಬಂದಿದ್ದಾರೆ. ಇದರ ಬಗ್ಗೆ ಈಗಾಗಲೇ ನಮ್ಮ ಮುಖ್ಯಮಂತ್ರಿಗಳು, ಕೇಂದ್ರ ಸರ್ಕಾರದ ಪರಿಸರ ಖಾತೆಯ ಮಂತ್ರಿಗಳನ್ನು ಭೇಟಿ ಮಾಡಿ, ಮೈನರ್ • ಫಾರೆಸ್ಟ್‌ನಲ್ಲಿ ಬಗರ್ ಹುಕುಂ ಸಾಗುವಳಿ ಯಾರು ಮಾಡುತ್ತಿದ್ದಾರೆ. ಅವರಿಗೆ ಸಾಗುವಳಿ ಚೀಟಿ ಕೊಡವುದು ಸೂಕ್ತ. ಗುಡ್ಡಗಾಡು ಪ್ರದೇಶದ ಜಮೀನು ಏನಿದೆ, ಇನ್ನಿತರೆ ಪ್ರದೇಶದಲ್ಲಿ ಅಫೋರೆಸ್ಟ್ ಸ್ಟೇಷನ್ ತೆಗೆದುಕೊಳ್ಳುತ್ತೇವೆ, ಇದಕ್ಕೆ ಪರ್ಮಿಷನ್ ಕೊಡಬೇಕೆಂದು ಕೇಳಿದಾಗ ಹೆಚ್ಚು ಕಡಿಮೆ ಪರ್ಮಿಷನ್ ಸಿಕ್ಕಿದಹಾಗೆ ಕಾಣುತ್ತದೆ. ನನ್ನ ಸಲಹೆ, ಈ ಸಾಗುವಳಿದಾರರಿಗೆ, ಸಾಗುವಳಿ ಚೀಟಿ ಕೊಟ್ಟು, ಅವರಿಂದ 50 ಪರ್ಸೆಂಟ್ ಹಣವನ್ನು ವಸೂಲ್ಮಾಡಬೇಕು, ಇನ್ನು ಉಳಿದ 50 ಪರ್ಸೆಂಟ್ ಸರ್ಕಾರ ಹಾಕಬೇಕು. ಗುಡ್ಡಗಾಡು ಜಮೀನು, ಕಾಡು ಇತರೆ ಜಮೀನು ಏನಿರುತ್ತದೆಯೋ, ಅಲ್ಲಿ ಅರಣ್ಯದ ಪರ್ಸೆಂಟೇಜ್ ರೇಷಿಯೋ ಕಾಪಾಡುವುದಕ್ಕೆ, ಅರಣ್ಯವನ್ನು ಬೆಳೆಸುವುದಕ್ಕೆ ಪ್ರಯತ್ನ ಪಡಬೇಕು. ಈ ಕೆಲಸವನ್ನು ಮಾಡಿದರೆ, ಬಗರ್‌ಹುಕುಂ ಸಾಗುವಳಿ ಮಾಡಿಕೊಂಡು, ಈ ಮೈನರ್‌ಫಾರೆಸ್ಟ್‌ನಲ್ಲಿ 20 ವರ್ಷಗಳಿಂದ ಏನಿದ್ದಾರೆ,ಅವರಿಗೆ ನಿಜವಾಗಿಯೂ ಜೀವದಾನ ಮಾಡಿದ ಕೀರ್ತಿ ನಮ್ಮ ಸರ್ಕಾರಕ್ಕೆ ಬರುತ್ತದೆ. ಈ ಕೆಲಸವನ್ನು ಕಂದಾಯ ಸಚಿವರಾದ ಮಾನ್ಯ ಜಾಲಪ್ಪನವರು ಹೆಚ್ಚಿನ ಆದ್ಯತೆಯ ಮೇಲೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಪ್ರಮುಖವಾಗಿ ಕೆಲವು ಸಮಸ್ಯೆಗಳನ್ನು ನಾನು ಈಗಾಗಲೇ ಪ್ರಸ್ತಾಪ ಮಾಡಿ, ಸಭೆಯ ಗಮನ ಸೆಳೆದಿದ್ದೇನೆ. ನಾನು ಹೆಚ್ಚಿಗೆ ಕಾಲವನ್ನು ತೆಗೆದುಕೊಳ್ಳುವುದಕ್ಕೆ ಹೋಗುವುದಿಲ್ಲ. ಸನ್ಮಾನ್ಯ ರಾಜ್ಯಪಾಲರು ಉಭಯ ಸದನಗಳನ್ನು ಉದ್ದೇಶಿಸಿ ಮಾಡಿದ ಭಾಷಣ ನಿಜವಾಗಿಯೂ ನಮಗೆಲ್ಲರಿಗೂ ಸಂತೋಷವನ್ನುಂಟುಮಾಡಿದೆ. ಅವರು ಅನೇಕ ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ.

ಶ್ರೀ ಎಸ್.ಆರ್. ಲಕ್ಷ್ಮಯ್ಯ : ಇದು ಬಹಳ ಕಾಲದಿಂದ ಇರತಕ್ಕಂಥದ್ದು. ಈ ಕೆಲಸವನ್ನು ನಮ್ಮ ಸರ್ಕಾರ ಮಾಡಿದರೆ ಸರ್ಕಾರಕ್ಕೂ ಕೀರ್ತಿ ಬರುತ್ತದೆ,

ಮತ್ತು ಕಂದಾಯ ಮಂತ್ರಿಗಳಿಗೂ ಬರುತ್ತದೆ. ಇದು ಬಹಳ ಮಹತ್ತರವಾದ ವಿಷಯ. ತುಂಬಾ ಬಡವರು 25 ವರ್ಷಗಳಿಂದ ಸಾಗುವಳಿ ಮಾಡಿದ್ದಾರೆ. ಅವರನ್ನು ಇವತ್ತು ಒಕ್ಕಲೆಬ್ಬಿಸುವುದಕ್ಕಾಗುವುದಿಲ್ಲ. ಇದುವರೆಗಿನ ಸರ್ಕಾರಗಳು ಬರೀ ಸುಳ್ಳು ಹೇಳಿಕೊಂಡೇ ಬಂದಿದ್ದಾರೆ. ನಮ್ಮ ಸರ್ಕಾರ ಈ ಕೆಲಸ ಮಾಡಿಯೇ ತೀರ ಬೇಕೆಂದು, ತಮ್ಮಮುಖಾಂತರ ಸರ್ಕಾರವನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಜಿ. ಬಸವಣ್ಣಪ್ಪ : ಸನ್ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಭಾಷಣದ ಮೇಲೆ ಅಭಿನಂಧ್ದನೆಯನ್ನು ವ್ಯಕ್ತಮಾಡುತ್ತೇನೆ, ಅವರ ಭಾಷಣವು ತುಂಬಾ ಪರಿಣಾಮಕಾರಿಯಾಗಿ ಇದೆ. ಜೊತೆಗೆ ಮಾನ್ಯ ನಾಗೇಗೌಡರಿಗೆ, ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ. ಅವರ ಭಾಷಣವೂ ಅಷ್ಟೇ ಪರಿಣಾಮಕಾರಿಯಾಗಿತ್ತು. ಇಷ್ಟು ಮಾತನಾಡಲು ಅವಕಾಶವನ್ನು ಕೊಟ್ಟ ತಮಗೆ ವಂದಿಸಿ, ನನ್ನ ಒಂದೆರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ವೈ. ರಾಮಕೃಷ್ಣ (ಆನೇಕಲ್) : ಸನ್ಮಾನ್ಯ ಅಧ್ಯಕ್ಷರೇ, ಈ ಸಭೆಯ ಮುಂದೆ ಮಂಡಿಸಿರತಕ್ಕ ರಾಜ್ಯಪಾಲರ ಭಾಷಣ, ಬಹುಶಃವಿಧಾನ ಸಭೆಯ ಇತಿಹಾಸದಲ್ಲಿಯೇ ಅತ್ಯಂತ ಚಿಕ್ಕ ಭಾಷಣ ಎಂದು ಹೇಳಿದರೆ ತಪ್ಪಾಗಲಾರದು. ಇದು ಕೇವಲ 12 ಪುಟಗಳನ್ನೊಂಳಗೊಂಡಿದೆ. ಕಳೆದ ಸಾರಿ, ಅಂದರೆ 1993-94 ಸುಮಾರು 31 ಪುಟಗಳ ಭಾಷಣ ಇತ್ತು. ಅಂದರೆ, ಭಾಷಣ ಉದ್ದ ಇದ್ದುದಕ್ಕೆ ಮಹತ್ವ ಎಂದಲ್ಲ, ಇಷ್ಟೊಂದು ಚಿಕ್ಕ ಭಾಷಣದಲ್ಲಿ, ಎಲ್ಲಾ ಸಮಸ್ಯೆಗಳನ್ನು ಹೇಳುವುದಕ್ಕೆ ಸಾಧ್ಯವಾಗುತ್ತದೆಯೇ? ಅದಕ್ಕೋಸ್ಕರ ಇನ್ನೂ ವಿಷದವಾಗಿ ಇರತಕ್ಕಂಥ ಸಮಸ್ಯೆಗಳನ್ನು ಮುಂದಿಟ್ಟು, ಅವುಗಳ ಬಗ್ಗೆ ಪರಿಹಾರವನ್ನು ಕಂಡುಹಿಡಿದಿದ್ದರೆ ಚೆನ್ನಾಗಿತ್ತೆಂದು ನನಗನಿಸುತ್ತದೆ. ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ಸನ್ಮಾನ್ಯ ದೇವೇಗೌಡರು ಒಂದು ಪಕ್ಷಕ್ಕೆ ಮಣ್ಣಿನ ಮಗನಲ್ಲ, ನಮ್ಮನ್ನೂ ಸೇರಿಸಿ, ಅವರು ಇಡೀ ರಾಜ್ಯಕ್ಕೇ ಮಣ್ಣಿನಮಗ. ಅವರು ಎಷ್ಟು ಗೌರವಿಸುತ್ತಾರೋ, ಪ್ರೀತಿಸುತ್ತಾರೋ, ಅಷ್ಟೇ ಪ್ರೀತಿ, ಅಷ್ಟೇ ಗೌರವ ನಾವೂ ಕೊಡುತ್ತೇವೆ. ಇದನ್ನು ಮನಸ್ಸಿನಲ್ಲಿಟ್ಟುಕೊಂಡು, ಸಮಗ್ರವಾಗಿರತಕ್ಕ ಕರ್ನಾಟಕದ ನಾಲ್ಕೂವರೆ ಕೋಟಿ ಜನರ ಬಗ್ಗೆ ಹೆಚ್ಚಿನ ಚಿಂತನೆ ಮಾಡಿದರೆ, ಇನ್ನೂ ಹೆಚ್ಚಿನ ಗೌರವ ಸಿಗುತ್ತದೆಂದು ಭಾವಿಸುತ್ತೇವೆ. ಅವರ ಭಾಷಣ, ಬರೀ ಭೂಮಿಯನ್ನು ಹೊಂದಿರುವವರಿಗೆ, ಅವರಿಗೆ ಕೊಡತಕ್ಕ ಸಾಲ, ·ಅವರಿಗೆ ಕೊಡಬೇಕಾದ ರಿಯಾಯಿತಿ, ಅವರ ಹೊಲಕ್ಕೆ ಕೊಡಬೇಕಾದ ಗೊಬ್ಬರ, ಅದಕ್ಕೆ ಕೊಡಬೇಕಾದ ಸಬ್ಸಿಡಿ, ನೀರು ಒದಗಿಸುವುದು- ಇದು ಅತ್ಯಾವಶ್ಯಕವಾಗಿ ಆಗಬೇಕು.

ಇದನ್ನು ನಾನು ಕೂಡ ಹೇಳುತ್ತೇನೆ. ಇದಕ್ಕೆ ಹೆಚ್ಚಿನ ಆದ್ಯತೆ ಕೊಡಬೇಕು. ಅಂದಮಾತ್ರಕ್ಕೆ ಭೂಮಿ ಇಲ್ಲದವರ ಬಗ್ಗೆಯೂ ಚಿಂತನೆ ಮಾಡತಕ್ಕ ಕೆಲಸವನ್ನುಅವರು, ಮಾಡಬೇಕಾಗಿತ್ತು. ಅವರಿಂದ ಇದೂ ಕೂಡ ಆಗಬೇಕಾಗಿತ್ತು ಎಂದು ಭಾವನೆ ಮಾಡಿಕೊಳ್ಳುತ್ತೇನೆ. ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ಕರ್ನಾಟಕ ರಾಜ್ಯದಲ್ಲಿ ಲೆಕ್ಕಾಚಾರದ ಪ್ರಕಾರ, 80 ಲಕ್ಷ ಅಸಂಘಟಿತ ಕಾರ್ಮಿಕರು ಇದ್ದಾರೆ. ಇದರಲ್ಲಿ ವ್ಯವಸಾಯ ಕೂಲಿಕಾರರು ಸೇರಿದ್ದಾರೆ, ತೋಟಗಾರಿಕೆ ಕೂಲಿಕಾರರು ಸೇರಿದ್ದಾರೆ, ಸಿರಿಕಲ್ಚರ್ನವರು ಸೇರಿದ್ದಾರೆ, ಗಾರೆ ಕೆಲಸದವರು ಸೇರಿದ್ದಾರೆ, ಬೀಡಿ ಕಟ್ಟುವವರು ಇದ್ದಾರೆ, ಊದುಬತ್ತಿ ಮಾಡುವವರು ಇದ್ದಾರೆ- ಹೀಗೆ ಅನೇಕ ವಿಧಗಳಲ್ಲಿ, ಅನೇಕ ಕಸಬುಗಳನ್ನು ಮಾಡತಕ್ಕ ಜನರು ಇದ್ದಾರೆ. ಇವರ ಉದ್ಧಾರಕ್ಕೆ ಕೈಗೊಂಡಿರತಕ್ಕ ಕಾರ್ಯಕ್ರಮ ಏನು ಎನ್ನತಕ್ಕಂತಾದ್ದಾರೆ ಬಗ್ಗೆ ಚಿಂತನೆ ಮಾಡುವುದಕ್ಕೆ ವಿಷಯ ಮಾಡುವುದಕ್ಕೆ ವಿಷಯ ನಮ್ಮ ಮುಂದೆ ಇಲ್ಲ. ಈ ಸಮಸ್ಯಗಳು ಬಹಳ ಮುಖ್ಯವಾದ ಸಮಸ್ಯೆಗಳು. ರೈತರನ್ನು ಕಾಡಿಸುತ್ತಿರತಕ್ಕಂಥ ಕಡುಬಡತನ. ನಮ್ಮ ಪುಟ್ಟಣ್ಣಯ್ಯನವರು ಬಹಳ ಸ್ವಾರಸ್ಯವಾಗಿ ಹೇಳುತ್ತಾರೆ. ಎಷ್ಟು ದುಡಿದರೂ ಕೂಡ ಒಂದು ಹೊಸ ಸೀರಿಯನ್ನು ಉಟ್ಟುಕೊಳ್ಳುವುದು ಕಷ್ಟವಾಗುತ್ತದೆ. ಅದರಲ್ಲೂ ಹಬ್ಬಗಳಲ್ಲಿ

ರೈತರು ಹೊಸ ಬಟ್ಟೆ ಉಡುವುದು ಕಷ್ಟ. ಇದು ನಿಜ, ನಾನು ಒಪ್ಪುತ್ತೇನೆ. ಏಕೆಂದರೆ, ಅವರ ಬಡತನ ಅಷ್ಟು ಕಟುವಾಗಿದೆ ಮತ್ತು ಕಡು ಬಡತನವಾಗಿದೆ. ಮತ್ತೆ ಕಾರ್ಮಿಕರಲ್ಲಿ ಮುಷ್ಕರಗಳು, ಲಾರಪ್‌ಗಳು ಅತಿ ಜಾಸ್ತಿಯಾಗಿವೆ.

ಇದನ್ನು ನನ್ನ ಸ್ವಂತ ಅನುಭವದಿಂದ ಹೇಳುತ್ತಿದ್ದೇನೆ. ನನ್ನ ಕ್ಷೇತ್ರದಲ್ಲಿ ಇದು ನಡೆಯುತ್ತಾ ಇದೆ. ಆ ಅನುಭದಿಂದ ಹೇಳುತ್ತಿದ್ದೇನೆ. ನನ್ನ ಕ್ಷೇತ್ರದಲ್ಲಿ ಇದು ಯಾರಿಗೂ ಬಿಡುವುದಿಲ್ಲ. ಮಾನ್ಯ ಅಧ್ಯಕ್ಷರೇ, ತಮಗೂ ಗೊತ್ತಿದೆ. ಎಷ್ಟು ಜನರಿಗೆ ಹುಚ್ಚು ಹಿಡಿದಿದೆ, ಎಷ್ಟು ಜನರು ಆಸ್ಪತ್ರೆ ಸೇರಿದ್ದಾರೆ, ಹೆಂಡತಿ ಮಕ್ಕಳನ್ನು ಸಾಕುವುದಕ್ಕಾಗದೆ, ಕೆಲವು ದಿವಸ ಅಪ್ಪನ ಮನೆಯೊಳಗೆ, ಕೆಲವು ದಿವಸ ಮಾವನ ಮನೆಯೊಳಗೆ ಇರುವುದನ್ನು ಕಾಣುತ್ತೇವೆ. ನಿಜವಾಗಿಯೂ ಕೂಡ ಈ ತಾಂಡವ ನೃತ್ಯವನ್ನು ನೋಡಿದಾಗ ನನಗೆ ಹೃದಯ ಕರಗುತ್ತದೆ.

5.20 ಪಿ.ಎಂ.

ಇದು ದೇಶದ ಮುಂದೆ ಇರತಕ್ಕಂಥ ಸಮಸ್ಯೆ. ಹಾಗೆಯೇ ವರ್ಣಿಸಲು ಅಸಾಧ್ಯವಾದಂಥ ಶಿಕ್ಷಣದ ಸಮಸ್ಯೆ. ವಿದ್ಯೆಯನ್ನು ಮಾರಾಟ ಮಾಡಿಕೊಳ್ಳತಕ್ಕಂಥಾದ್ದು. ಪ್ರೈಮರಿ ನರ್ಸರಿ ಶಾಲೆಗಳಿಗೆ ಮಕ್ಕಳನ್ನು ಸೇರಿಸಬೇಕಾದರೆ 10 ಸಾವಿರ ರೂಪಾಯಿ ಕೊಡಬೇಕು. ಪ್ರತಿ ತಿಂಗಳೂ ನೂರು ರೂಪಾಯಿ ಫೀಸು ಕೊಡಬೇಕು, ಆಟೋರಿಕ್ಷಾ ಚಾರ್ಜು ಕೊಡಬೇಕು. ಅವರು ಎಲ್ಲಿಂದ ತರುತ್ತಾರೆ? ಲಂಚಕೊಡಬೇಕು. ಇಂತಹ ಪರಿಸ್ಥಿತಿ ಇವತ್ತು ಬೆಂಗಳೂರಿನಲ್ಲಿದೆ. ಇದಕ್ಕೆ ಕಾರಣ ಏನೆಂದರೆ ಕಾರ್ಪೋರೇಷನ್ನವರು ಆಗಲಿ ಸರ್ಕಾರದವರು ಆಗಲಿ ಸಾಕಷ್ಟು ವಿದ್ಯಾಲಯಗಳನ್ನು ಕಟ್ಟಿಸುತ್ತಿಲ್ಲ. ಅನಾರೋಗ್ಯ ಕರವಾದಂತಹ ಕೈಗಾರಿಕಾ ನೀತಿ. ನಮ್ಮಲ್ಲಿದೆ ಇದರ ಬಗ್ಗೆ ಡೀಟೈಲ್ ಆಗಿ ಆಮೇಲೆನಾನು ಮಾತನಾಡುತ್ತೇನೆ.

ಇದರ ಜೊತೆಗೆ ಕನ್ನಡ ನಾಡಿನ ನಡೆ ನುಡಿ ಗಡಿಗಳ ಬಗ್ಗೆ ಒಂದು ವಿಧವಾದ ಸಂರಕ್ಷಣೆ ಮಾಡುವಲ್ಲಿ ವಿಫಲವಾಗಿದೆಯೋ ಏನೋ ಎನ್ನತಕ್ಕಂತಹ ಭಾವನೆ ನಮಗೆ ಬರುತ್ತಿದೆ. ಈಗಿನ ಮುಖ್ಯಮಂತ್ರಿಗಳು ನೀರಾವರಿ ಕಾರ್ಯಕ್ರಮಕ್ಕೆ ಏನು ಯೋಜನೆಗಳು ಹಾಕಿಕೊಳ್ಳಬೇಕೋ ಅದನ್ನು ಹಾಕಿಕೊಳ್ಳುತ್ತಾರೆ. ಗಡಿಗಳನ್ನು ಕಾಪಾಡುವುದರಲ್ಲಿ ಮತ್ತು ಭಾಷೆಯನ್ನು ಅಭಿವೃದ್ಧಿ ಮಾಡುವುದರಲ್ಲಿ ಹೆಚ್ಚಿನ ಹೋರಾಟ ನಡೆಸಬೇಕಾಗುತ್ತದೆ. ಇದರ ಜೊತೆಗೆ ಪ್ರತಿನಿತ್ಯ ಭ್ರಷ್ಟಾಚಾರ. ಪ್ರತಿನಿತ್ಯ ಪತ್ರಿಕೆಯಲ್ಲಿ ಯಾವುದೋ ಒಂದು ಇರುತ್ತದೆ. ಇದು ಇಲ್ಲದೆ ಇರತಕ್ಕಂಥ ನ್ಯೂಸ್ಯಾವುದೂ ಇರುವುದಿಲ್ಲ. ಇದರ ಜೊತೆಗೆ ಎಲ್ಲೆ ಮೀರಿದ ಲಂಚಗಳಿತನ. ಇದರ ಬಗ್ಗೆ ನಾವು ಎಷ್ಟೇ ಹೋರಾಟ ಮಾಡಿದರೂ ಕೂಡ ಯಾವುದೋ ಒಂದು ರೀತಿಯಲ್ಲಿ ಎಲ್ಲೋ ಒಂದು ಕಡೆ ಇದು ತಲೆ ಎತ್ತುತ್ತಾ ಇರುತ್ತದೆ. ಇದರ ಬಗ್ಗೆ ತಾವು ಸ್ವಲ್ಪ ಗಮನಹರಿಸಿ ಪರಿಹಾರ ಕಂಡು ಹಿಡಿಯಬೇಕಾಗುತ್ತದೆ. ಅಧಿಕಾರಿಗಳ ಬೇಜವಾಬ್ದಾರಿತನ ಮಾನ್ಯ ಬಸವಣ್ಣಪ್ಪನವರು ತಮ್ಮ ಭಾಷಣದಲ್ಲಿ ಮಾತನಾಡುವಾಗ ಬಹಳ ಚೆನ್ನಾಗಿ ಹೇಳಿದರು. ಎಷ್ಟೋ ಪಂಚವಾರ್ಷಿಕ ಯೋಜನೆಗಳು ಬಂದವು. ಈ ಕೋಟ್ಯಾಂತರ ರೂಪಾಯಿಗಳ ಯೋಜನೆಗಳು ಏನಾಯಿತು? ಏನಾಯಿತು ಎನ್ನುವುದನ್ನು ನಾವು ಪುಸ್ತಕದಲ್ಲಿ ಬರೆದುಕೊಂಡು ಕುಳಿತುಕೊಳ್ಳಬೇಕಾಗುತ್ತದೆ. ಹಳ್ಳಿಗಳು ಅವತ್ತಿನಿಂದ ಇವತ್ತಿನವರೆಗೂ ಹಾಗೆಯೇ ಇವೆ. ಅಲ್ಲಿನ ಬಡತನ ಅಲ್ಲಿನ ಗುಡಿಸಲು ಅವರು ಪ್ರತಿನಿತ್ಯ ಅನುಭವಿಸುತ್ತಿರುವ ಕಷ್ಟ, ಹೊಟ್ಟೆಗೆ ಇಟ್ಟು ಇರುವುದಿಲ್ಲ ಮೈಗೆ ಬಟ್ಟೆ ಇರುವುದಿಲ್ಲ ವ್ಯಾಪಾರಕ್ಕೆ ಬಂಡವಾಳ ಇರುವುದಿಲ್ಲ ಈ ರೀತಿಯ ಜಿಗುಪ್ಸೆಯನ್ನು ನಾವು ಇವತ್ತಿಗೂ ಹಳ್ಳಿಗಳಲ್ಲಿ ನೋಡುತ್ತಿದ್ದೇವೆ. ಇವತ್ತು ನಮ್ಮ ಸಮಾಜದಲ್ಲಿ ನಾಪತ್ತೆಯಾಗಿರತಕ್ಕಂಥದ್ದು ಶಾಂತಿ ಮತ್ತು ಸಮಸ್ಯೆ. ಇದು ಬಹಳ ಮುಖ್ಯವಾದುದು, ಅತಿ ಮುಖ್ಯವಾದುದು. ದಿನಂಪ್ರತಿ ಇದು

ಜಾಸ್ತಿಯಾಗುತ್ತಿದೆಯೋ ವಿನಹ ಕಡಿಮೆ ಆಗುತ್ತಿಲ್ಲ ಮತ್ತು ಕಡಿಮೆ ಆಗುವಂತಹ ಸೂಚನೆಗಳೂಕೂಡ ನಮಗೆ ಕಾಣುತ್ತಿಲ್ಲ, ಇದರ ಕಡೆ ತಾವು ಗಮನ ಹರಿಸಬೇಕಾಗುತ್ತದೆ.

ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಮೇಲೆ ಹಿಂದುಳಿದ ವರ್ಗಗಳ ಮೇಲೆ ಕೊಲೆಗಳು ಹಿಂಸೆಗಳು ಸುಲಿಗೆಗಳು ದರೋಡೆ ದಬ್ಬಾಳಿಕೆ ಭಯ ಇವುಗಳ ಸುರಿಮಳೆ. ಅಂದರೆ ನಾನು ಇದಕ್ಕೆ ಸರ್ಕಾರವನ್ನು ಹೊಣಗಾರರನ್ನಾಗಿ ಮಾಡುತ್ತಿದ್ದೇನೆ. ಆದರೆ ಸಮಾಜವನ್ನು ಹತೋಟಿಯಲ್ಲಿಟ್ಟುಕೊಳ್ಳತಕ್ಕಂಥ ಕಾರ್ಯವನ್ನು ಸರ್ಕಾರ ಮಾಡಬೇಕು. ಇದರ ಕಡೆ ವಿಫಲವಾಗಿದೆ ಅದನ್ನು ತಾವು ರಾಜ್ಯಪಾಲರ ಭಾಷಣದಲ್ಲಿ ಹೇಳಬೇಕಾಗಿತ್ತು ಎಂಬುದು ನನ್ನ ಭಾವನೆ.ಪ್ರತಿನಿತ್ಯ ಅವಶ್ಯಕತೆಗೆ ಬೇಕಾಗುವ ವಸ್ತುಗಳು ಮುಗ್ಧ ಜನತೆಗೆ ಸಿಗುತ್ತಿಲ್ಲ. ಶಾಂತಿ ಸಿಗುತ್ತಿಲ್ಲ, ಗ್ರಾಮಂತರ ಪ್ರದೇಶಗಳಲ್ಲಿ ಕುಡಿಯುವ ನೀರು ಇಲ್ಲ. ನಮಗೆ ಸ್ವರಾಜ್ಯ ಬಂದು 50 ವರ್ಷಗಳಾಗುತ್ತಿದೆ ಇನ್ನು ಎರಡು ವರ್ಷ ಕಳೆದರೆ. ಕುಡಿಯುವುದಕ್ಕೆ ನೀರು ಇಲ್ಲ ವಿದ್ಯುಚ್ಛಕ್ತಿ ಇಲ್ಲ, ರೇಷನ್ಕಾರ್ಡ್ ಇಲ್ಲ, ದುಡಿಯುವುದಕ್ಕೆ ಕೈಗಳಿಗೆ ಕೆಲಸ ಇಲ್ಲ; ಓದಲು ಪಾಠಶಾಲೆಗಳು ಇಲ್ಲ; ಶೌಚಾಲಯಗಳು ಇಲ್ಲ; ಗ್ರಾಮ ನೈರ್ಮಲ್ಯ ಮೊದಲೇ ಇಲ್ಲ. ಇವುಗಳನ್ನೆಲ್ಲಾ ತಾವು ರಾಜ್ಯಪಾಲರ ಭಾಷಣದಲ್ಲಿ ಹೇಳಿ ನಮ್ಮೆಲ್ಲರ ಗಮನವನ್ನು ಸೆಳೆಯಬಹುದಾಗಿತ್ತು. ಇದರ ಜೊತೆಗೆ ಇವತ್ತು ಕಾರಿನಲ್ಲಿ ಹೋಗಿ ಸರ್ಕಾರಿ ವಾಹನಗಳಲ್ಲಿ ಹೋಗಿ ಏರೋಪ್ಲೇನ್‌ನಲ್ಲಿ ಹೋಗಿ ಟ್ರೈನ್‌ನಲ್ಲಿ ಹೋಗಿ, ಅವನು ಹೋಗಿ ವಾಪಸ್ಸುರುವ ತನಕ ಅವನು ಸುರಕ್ಷಿತವಾಗಿ ಇದ್ದಾನೋ ಇಲ್ಲವೋ ಎನ್ನುವ ಮನಸ್ಸಿನ ಕಳವಳ ಪ್ರತಿನಿತ್ಯ ಇದ್ದೇ ಇದೆ.

ಈ ಸುರಕ್ಷಿತ ಎನ್ನುವುದು ಇಲ್ಲದೇ ಇರುವುದಕ್ಕೋಸ್ಕರವಾಗಿ ಕಳ್ಳತನಗಳು ಹಗಲು ದರೋಡೆಗಳು, ಸುಲಿಗೆಗಳು, ಖೂನಿಗಳು ನಡೆಯುತ್ತಿವೆ. ಇವುಗಳ ಬಗ್ಗೆ ಪ್ರಸ್ತಾಪ ಮಾಡಬೇಕಾಗಿತ್ತು ಎಂದು ನಾನು ಭಾವಿಸಿಕೊಂಡಿದ್ದೇನೆ. ಇದರ ಜೊತೆಗೆ ಮಹಿಳೆಯರ ಮೇಲೆ ಹೆಚ್ಚಾಗಿರತಕ್ಕಂಥ ಅತ್ಯಾಚಾರಗಳು ದಬ್ಬಾಳಿಕೆಗಳು, ಸರಗಳ್ಳತನ ಮಾನಭಂಗ ದೌರ್ಜನ್ಯ ಮತ್ತು ಸಾವುಗಳು ಇವುಗಳ ಬಗ್ಗೆ ಕೂಡ ರಾಜ್ಯಪಾಲರ ಭಾಷಣದಲ್ಲಿ ಅಷ್ಟೊಂದು ಬೆಳಕನ್ನು ಚೆಲ್ಲಿಲ್ಲ. ಪ್ರತಿನಿತ್ಯವೂ ಅಪಘಾತಗಳು ಹೆಚ್ಚಾಗುತ್ತಿವೆ ಅಧ್ಯಕ್ಷರೇ, ಯಾವುದಾದರೊಂದು ಪತ್ರಿಕೆ ತೆಗೆದುಕೊಳ್ಳಿ ಆ ಪತ್ರಕೆಗಳಲ್ಲಿ ತಾವೇನು ನೋಡುತ್ತೀರಿ ಅಂದರೆ ಅಲ್ಲಿ ವ್ಯಾನ್ ಬಿತ್ತು, ಕಾರು ಬಿತ್ತು, ಲಾರಿ ಬಿತ್ತು, ಬಸ್ಸು ಡಿಕ್ಕಿ ಹೊಡೆಯಿತು. ಇಷ್ಟು ಜನ ಸತ್ತರು ಇದಕ್ಕೆ ಏನು ಮಾಡಿದರೆ ಸರಿ ಹೋಗುತ್ತದೆ? ಇದಕ್ಕೆ ಏನಾದರೂ ಒಂದು ಸೆಲ್ ಅಥವಾ ಬೇರೆ ರಾಜ್ಯಗಳಲ್ಲಿ ಯಾರಾದರೂ ಉತ್ತಮವಾಗಿ ನಡೆಸುತ್ತಿದ್ದರೆ ಅಲ್ಲಿಗೆ ಯಾರನ್ನಾದರೂ ಕಳುಹಿಸಿ ಅಲ್ಲಿಂದವನಾದರೂ ಸೂಕ್ತಮಾಹಿತಿ ತರಿಸಿಕೊಳ್ಳುವುದಕ್ಕೆ ಸಾಧ್ಯವೇ ಎನ್ನುವುದರ ಬಗ್ಗೆ ತಿಳಿಸಬೇಕಾಗಿತ್ತು. ಅದನ್ನು ಕೂಡ ತಿಳಿಸಿಲ್ಲ. ಇದರ ಜೊತೆಗೆ ಪೋಲೀಸಿನವರಿಂದ ರಕ್ಷಣೆಯ ನಿರಾಕರಣೆ. ಇದು ಬಹಳ ಜಾಸ್ತಿಯೂಗುತ್ತಿದೆ. ನಾನು ಇದರ ಬಗ್ಗೆ ವಿವರವಾಗಿ ನನ್ನ ಮುಂದಿನ ಭಾಷಣದಲ್ಲಿ ತಿಳಿಸುತ್ತೇನೆ. ಇದರ ಜೊತೆಗೆ ಲಾಕಪ್ಡೆತ್ಸ್ಜಾಸ್ತಿಯಾಗುತ್ತಿದೆ. ರಕ್ಷಣೆ ಕೊಡುವುದಿಲ್ಲ, ನಾವು ಹೋಗಿ ಬಾಯಿಬಡಿದುಕೊಂಡರೂ ನಮ್ಮ ಅರ್ಜಿಯನ್ನು ತೆಗೆದುಕೊಳ್ಳುವುದಿಲ್ಲ. ಕೇಸ್ ರಿಜಿಸ್ಟರ್ವರ್ಷಗಳ ಕಾಲ ಕೋರ್ಟ್ಗಳಿಗೆ ಸುತ್ತಾಡಬೇಕಾಗುತ್ತದೆ. ಎಷ್ಟು ಕ್ರಿಮಿನಲ್ಕೇಸಸ್ ಇವೆ. ಎಂಬ ಬಗ್ಗೆ ನಾನು ಪ್ರಶ್ನೆ ಕೇಳಿದಾಗ ಉತ್ತರ ಕೊಟ್ಟಿದ್ದೀರಲ್ಲಾ. ಒಂದೂವರೆ ಲಕ್ಷ ಕೇಸಸ್ ಕೋರ್ಟಿನಲ್ಲಿ ಪೆಂಡಿಂಗ್‌ಇವೆ. ಇದು ಮುಗಿಯಬೇಕಾದರೆ ಎಷ್ಟು ವರ್ಷಗಳಾಗುತ್ತದೆಂದು ತಮಗೆ ಗೊತ್ತಿದೆ. ಅದಕೋಸ್ಕರವೇ ಲೋಕ ಅದಾಲತ್ಗಳನ್ನು ಮಾಡಿದ್ದದ್ದು. ಮಾನ್ಯಮಂತ್ರಿಗಳನ್ನು ನಾನು ಈ ಬಗ್ಗೆ ಅಭಿನಂದಿಸುತ್ತೇನೆ. ಈಗ ಒಂದು ಲಕ್ಷ ಕ್ರಿಮಿನಲ್ಕೇಸಸ್‌ಗಳನ್ನು ಬರಖಾಸ್ತಾಮ್ಡುತ್ತೇನೆಂದು

ಹೇಳಿದ್ದಾರೆ. ಬಹಳ ಸಂತೋಷ. ಜೊತೆಗೆ ಜೀವನದಲ್ಲಿ ಸಂಪೂರ್ಣವಾಗಿ ನಿರಾಸೆ ಹೊಂದಿ ಸಂಸಾರದ ಸಮೇತ ಅವರ ಮಕ್ಕಳನ್ನು ಸೇರಿಸಿಕೊಂಡು ಪ್ರಾಣಾರ್ಪಣೆ ಮಾಡಿಕೊಂಡಿರುವಂಥಾದ್ದು ಬಾವಿಗೆ ಬಿದ್ದು ಸತ್ತಿರತಕ್ಕಂಥಾದ್ದು ರೈಲಿಗೆ ಸಿಕ್ಕಿ ಸತ್ತಿರುವಂಥ ದೃಶ್ಯಗಳನ್ನು ಸಹ ನಾವು ಕಾಣುತ್ತೇವೆ. ನಿರುದ್ಯೋಗಿ ಸಮಸ್ಯೆ ನಿರುದ್ಯೋಗಿಗಳ ಕಣ್ಣೀರು ಇವತ್ತು ಸರ್ಕಾರದ ಕಣ್ಣಿಗೆ ಕಾಣಿಸದೇ ಇರುವುದು ನಿಜವಾಗಿಯಾ ಸಹ ಆಶ್ಚರ್ಯ, ಮೊನ್ನೆ ತಾನೇ ಮಾನ್ಯ ದೇವೇಗೌಡರು ಹೇಳಿದರು. ಎಷ್ಟು ಹುದ್ದೆಗಳು ಖಾಲಿ ಇವೆ. ಅಂದರೆ 84 ಸಾವಿರ ಎಂದು ಇವುಗಳನ್ನು ನಾನು ಯಾವ ರೀತಿಯಲ್ಲಾದರೂ ತುಂಬುತ್ತೇನೆ ಎಂದು ನಾನು ಅವರಲ್ಲಿ ಅರಿಕೆ ಮಾಡಿಕೊಳ್ಳುವುದು ಇಷ್ಟೇ ಇವುಗಳನ್ನು ತಾವು ಎಷ್ಟು ಬೇಗ ತುಂಬುತ್ತೀರೋ ಅಷ್ಟು ಬೇಗ ದೇಶದಲ್ಲಿ ಶಾಂತಿ ಮತ್ತು ಸೌಖ್ಯ ಬರುತ್ತದೆಂದು ನಾನು ಇದರ ಬಗ್ಗೆ ನನ್ನ ಭಾಷಣದಲ್ಲಿ ಮುಂದೆ ಹೇಳುತ್ತೇನೆ.

ಇದಕ್ಕಿಂತ ಮುಖ್ಯವಾಗಿ ರಾಜ್ಯದಲ್ಲಿ ಉಂಟಾಗಿರತಕ್ಕಂಥ ಪ್ರಕೃತಿಯ ವಿಕೋಪದಿಂದ ಅತಿವೃಷ್ಟಿ ಮತ್ತು ಅನಾವೃಷ್ಟಿ ಇದರ ಬಗ್ಗೆ ಕಳೆದ ಸಾರಿ ರಾಜ್ಯಪಾಲರ ಭಾಷಣದಲ್ಲಿ ತಿಳಿಸಿದ್ದಾರೆ. ಅದು ಏನಾಯಿತು ಎನ್ನುವಂತಹ ವಿಚಾರವನ್ನು ಈ ಸಾರಿ ತಿಳಿಸಿದ್ದರೆ ಚೆನ್ನಾಗಿತ್ತು ಎಂಬುದು ನನ್ನ ಭಾವನೆ. ಇಷ್ಟು ವಿಚಾರಗಳನ್ನು ನಾನು ಸಭೆಯ ಮುಂದೆ ಇಟ್ಟಿದ್ದೇನೆ. ಇಷ್ಟು ವಿಚಾರಗಳ ಬಗ್ಗೆ ಸರ್ಕಾರ ಕನಿಷ್ಟ ಒಂದೊಂದು ಲೈನ್ ಇದಿದ್ದರೆ ನಮ್ಮ ಮನಸ್ಸಿಗೆ ಸಮಾಧಾನ ವಾಗುತ್ತಿತ್ತು. ಆ ವಿಷಯಗಳ ಮೇಲೆ ಬೆಳಕು ಚೆಲ್ಲುವುದಕ್ಕೆ ಅವಕಾಶ ಸಿಗುತ್ತಿತ್ತು ಎಂದು ನಾನು ಭಾವಿಸಿಕೊಂಡಿದ್ದೇವೆ. ಈ ಮಧ್ಯೆ ಅನೇಕ ಉತ್ತಮವಾದಂತಹ ಯೋಜನೆಗಳನ್ನು ಸರ್ಕಾರ ಹಾಕಿಕೊಂಡಿದೆ. ನಾವು ಇಲ್ಲ ಎಂದು ಹೇಳುವುದಿಲ್ಲ. ನಾನು ಭಾಷಣ ಮಾಡುವಾಗ ಈ ಸರ್ಕಾರ ತಪ್ಪು ಮಾಡಿದೆ ಇಲ್ಲ ಯಾರೋ ಮಂತ್ರಿಗಳು ತಪ್ಪು ಮಾಡಿದ್ದಾರೆ ಅದಕ್ಕೆ ನಾನು ಈ ಸರ್ಕಾರವನ್ನು ಟೀಕೆ ಮಾಡುತ್ತಿದ್ದೇನೆ ಎನ್ನುವಂತಹ ಅಭಿಪ್ರಾಯ ಬರಬಾರದು, ತಾವು ಮಾಡತಕ್ಕಂಥ ಒಳ್ಳೆಯ ಕೆಲಸಕ್ಕೆ ನಮ್ಮ ಸಪ್ಪೋರ್ಟ್ ಇರುತ್ತದೆ. ತಾವು ಮಾಡತಕ್ಕಂಥ ಕೆಲಸ ಸಮಾಜಿಕ ನ್ಯಾಯವನ್ನು ಎಲ್ಲರಿಗೂ ಕೊಡುವಂತೆ ಇದ್ದರೆ ಅವನ್ನು ನಾವೆಲ್ಲರೂ ಅಭಿನಂದಿಸುತ್ತೇವೆ.

ನಾನು ಎರಡು ಮೂರು ಸಾರಿ ನಿಮ್ಮ ಪಕ್ಷದ ಚುನಾವಣೆ ಪ್ರಣಾಳಿಕೆಯನ್ನು ನಾನು ಓದಿದೆ. ಒಳ್ಳೆಯ ಪಾಯಿಂಟ್ಸ್ ಹಾಕಿಕೊಂಡಿದ್ದೀರಿ. ಅದನ್ನು ಜಾರಿಗೆ ತಂದಿದ್ದೀರಾ ಎನ್ನುವುದೇ ನಮ್ಮ ಮುಂದೆ ಇರತಕ್ಕಂಥ ಪ್ರಶ್ನೆ. ಉತ್ತಮವಾದ ಚುನಾವಣಾ ಪ್ರಣಾಳಿಕೆಯನ್ನು ಬರೆದು ಅದನ್ನು ಜಾರಿಗೆ ತರದಿದ್ದರೆ ಏನು ಪ್ರಯೋಜನ ಬಂತು? ಉದಾಹರಣೆಗೆ ಹೇಳಬೇಕಾದರೆ ಡಿಸೆಂಬರ್ 22ನೇ ತಾರೀಖು ಡೆಕ್ಕನ್ ಹೆರಾಲ್ಡ್‌ನಲ್ಲಿ ಮಾನ್ಯ ಮುಖ್ಯಮಂತ್ರಿಗಳು ಒಂದು ಸ್ಟೇಟ್‌ಮೆಂಟ್ ಕೊಟ್ಟಿದ್ದಾರೆ "Homeless will be identified and within three months they will be given sites and houses,"

ಆದರೆ ಇವತ್ತಿನವರೆಗೂ ಯಾವುದೇ ಕಾರ್ಯಕ್ರಮ ತಾವು ಹಾಕಿಕೊಂಡಿಲ್ಲ. ತಾವು ಜಾಗ್ರತೆಯಾಗಿ ಅದನ್ನು ಮಾಡಬೇಕಾಗಿತ್ತು. ಮುಖ್ಯಮಂತ್ರಿಯಾಗಿ ಏನನ್ ಹೇಳುತ್ತೀರಿ ಅದನ್ನು ಉಳಿಸಿಕೊಳ್ಳಬೇಕಾದರೆ ಅದನ್ನು ಅನುಷ್ಠಾನಕ್ಕೆ ತರಬೇಕು. ಕಾರಣ ನೀವು ಏನು ಹೇಳುತ್ತೀರಿ ಅದು ಪತ್ರಿಕೆಯಲ್ಲಿ ಬಂದಿರುತ್ತದೆ ಜನ ಓದಿರುತ್ತಾರೆ.

ಶ್ರೀ ಹೆಚ್.ಡಿ. ದೇವೇಗೌಡ : ಮಾನ್ಯ ಅಧ್ಯಕ್ಷರೇ, ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿ ಚುನಾವಣೆಗಳು ನಡೆಯುವುದಕ್ಕೆ ಮುಂದೆ ನಾವು ನಿರ್ಣಯ ಮಾಡಿದೆವು. ಆ ನಂತರ ಚುನಾವಣೆಗಳು ಬಂದವು. ಆಗ ಚುನಾವಣಾಧಿಕಾರಿಗಳು ಹೇಳಿದರು ಈ ಕೆಲಸ ಮಾಡಿದರೆ ಇದು ನಿಯಮಾವಳಿಗಳಿಗೆ ವಿರುದ್ಧವಾಗಿರುವುದರಿಂದ

ಈಗ ಬೆನಿಫಿಷರೀಸ್‌ನ್ನು ಗುರುತಿಸುವುದು ಮಾಡಕೂಡದು ಎಂದು ಆದೇಶ ಕೊಟ್ಟಮೇಲೆ ನಾವು ಮುಂದೆ ಹಾಕಿದ್ದೇವೆ. ಆದ್ದರಿಂದ ಮೇ ಒಂದನೇ ತಾರೀಖಿನೊಳಗೆ ಈ ಬೆನಿಫಿಷರೀಸ್‌ನ್ನು ಗುರುತಿಸುವ ಕಾರ್ಯಕ್ರಮ ಮುಗಿಯುತ್ತದೆ.

ಶ್ರೀ ವೈ. ರಾಮಕೃಷ್ಣ : 15-12-94 ಡೆಕ್ಕನ್ ಹೆರಾಲ್ಡ್ "Five MLCs will ve appointed within 5 weeks," ಎಂದು ಹೇಳಿದ್ದಾರೆ. ಏಕೆಂದರೆ ಬೇರೆಯವರು ಆಡುವ ಮಾತಿಗೂ ಮುಖ್ಯಮಂತ್ರಿಗಳು ಆಡುವ ಮಾತಿಗೂ ವ್ಯತ್ಯಾಸ ಇರಬಾರದು. ಹಿಂದಿನ ಸರ್ಕಾರದಲ್ಲಿ ಏನಾಯಿತು ಎಂದು ತಮಗೆ ಗೊತ್ತಿದೆಯಲ್ಲಾ ಅದಕ್ಕೆ ಯಾವ ರೀತಿ ಅಪಾಯ ಒದಗಿತು ಜನಗಳು ಏನು ಮಾತನಾಡಿಕೊಂಡು ರಾಜಕೀಯ ಪಕ್ಷಗಳು ಏನು ಮಾತನಾಡಿಕೊಂಡರು. ಇದನ್ನೆಲ್ಲಾ ನೋಡಿ ನೋಡಿ ನಾವು ನಮ್ಮ ಮಾತನ್ನು ಉಳಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕೆಂದು ನಾನು ಹೇಳುತ್ತೇನೆ.

(ಸಭಾಧ್ಯಕ್ಷರು ಪೀಠವನ್ನಲಂಕರಿಸಿದರು)

ಮಾನ್ಯ ನಾಣಯ್ಯನವರು 2-1-95ರಲ್ಲಿ ಒಂದು ಪ್ರಕಟಣೆ ಹೊರಡಿಸಿ ಮೊಯಿಲಿಯವರ ಕಾಲದಲ್ಲಿ ಸರ್ಕಾರದ ಸಾಧನೆಗಳ ಪ್ರಕಚಣೆ ಮಾಡುವ ಸಲುವಾಗಿ 60 ಲಕ್ಷ ರೂಪಾಯಿಗಳನ್ನು ಕೊಡಲಾರಿದೆ. ಅದರ ಬಗ್ಗೆ ಇನ್ನೂ ಒಂದು ಕೋಟಿ ಚಿಲ್ಲರೆ ಕೊಡಬೇಕಾಗಿದೆ ಎಂದು ಹೇಳಿದ್ದಾರೆ, ಅಷ್ಟು ಖರ್ಚು ಮಾಡಿ ಸರ್ಕಾರದ ಸಾಧನೆಯನ್ನು ತೋರಿಸುವ ಪ್ರಕಟಣೆಗಳ ಕಾಪಿಯನ್ನು ನೋಡಲಿಕ್ಕೂ ನಮಗೆ ಸಿಗುತ್ತಿಲ್ಲವಲ್ಲಾ? ಅದರ ಬಗ್ಗೆ ಕೇಳಿದಾಗ, ಇನ್‌ಫರ್ಮೇಷನ್ ಡಿಪಾರ್ಟ್‌ಮೆಂಟ್ ಕೇಳಿ ಎಂದು ಹೇಳುತ್ತಾರೆ, ಅಲ್ಲಿ ಕೇಳಿದರೆ ಚೀಫ್ ಮಿನಿಸ್ಟರ್ ಸೆಕ್ರೆಟರಿಯೇಟ್ ಕೇಳಿ ಎಂದು ಹೇಳುತ್ತಾರೆ. ಇದರ ಒಂದು ಕಾಪಿ ಕೂಡಾ ನಮಗೆ ಸಿಗುತ್ತಿಲ್ಲ. ಆ ಬುಕ್ಸ್ ಏನಾದವು ಎಲ್ಲಿವೆ? ಆ ಬುಕ್ಸ್ ಸಿಗದಿದ್ದರೆ ಎಕ್ಸ್‌ಚೆಕರ್‌ನಿಂದ ನಾವು ಏಕೆ ದುಡ್ಡು ಕೊಡಬೇಕು ಎಂಬ ಮೂಲಭೂತವಾದ ಪ್ರಶ್ನೆಯನ್ನು ನಾನು ಕೇಳುತ್ತಿದ್ದೇನೆ. ಈ ಹಿಂದೆ ಜನತಾದಳ ಸರ್ಕಾರ ಇದ್ದಾಗ ಮಾನ್ಯ ದೇವೇಗೌಡರೂ ಸಹಾ ಮಂತ್ರಿಗಳಾರಿದ್ದರು. ಆಗ ಅವರು ಒಂದು ಕುಟುಂಬಕ್ಕೆ ಒಂದು ಸರ್ಕಾರಿ ಕೆಲಸವನ್ನು ಕೊಡುತ್ತೇದು ಹೇಳಿದ್ದರು. ಅದರ ಬಗ್ಗೆ ಅವರು ಪ್ರಯತ್ನವನ್ನು ಮಾಡಲೇ ಇಲ್ಲ, ಸನ್ಮಾನ್ಯ ಜೆ ಹೆಚ್ ಪಟೇಲರು ಇಂಡಸ್ಟ್ರೀಸ್ ಮಿನಿಸ್ಟರ್ ಆಗಿದ್ದಾಗ ದಿನಕ್ಕೆ ಒಂದೊಂದು ಕೈಗಾರಿಕೆಯನ್ನು ತೆರೆಯುತ್ತೇವೆಂದು ಹೇಳಿದ್ದರು. ನೀವು ಹೇಳಿರುವುದನ್ನೆಲ್ಲಾ ನಾನು ಇಲ್ಲಿ ತಂದಿದ್ದೇನೆ. ಕಟಿಂಗ್ಸ್ ಇಟ್ಟಿದ್ದೇನೆ. ತಾವು ಹೇಳೀದ್ದೀರಿ, ಅದರೆ ಅದನ್ನು ಕಾರ್ಯಗತ ಮಾಡಲಿಲ್ಲ. ಇವತ್ತೂ ಸಹ ಪೇಪರ್‌ನಲ್ಲಿ ಒಂದು ಸ್ಟೇಟ್ ಬಂದಿದೆ. ಅದರಲ್ಲಿ ಏನಿದೆ ಎಂದರೆ, ಪ್ರತಿಯೊಂದು ಹಳ್ಳಿಯಲ್ಲೂ ಹರಿಜನರನ್ನು ಗುರುತಿಸಿ ಅವರಿಗೆ ಬೇಕಾದಂಥ ಎಲ್ಲಾ ಸೌಲಭ್ಯಗಳನ್ನು ಕೊಟ್ಟಿದ್ದೇವೆಂದು ಹೇಳಿದ್ದಾರೆ. ಅದಕ್ಕಾಗಿಯೇ ನಮ್ಮ ಪಕ್ಷ ಅಧಿಕಾರಕ್ಕೆ ಬಂದಿದೆ ಎಂದು ಹೇಳಿಕೊಂಡಿದ್ದಾರೆ. ಈಗ ಇವರು ಏನು ಮಾಡಿದ್ದಾರೆ ಅವರ ಪಕ್ಷ ಅಧಿಕಾರಕ್ಕೆ ಬಂದ ಕಾರಣಗಳೇ ಬೇರೆ. ಇವರು ಮಾಡಿರತಕ್ಕಂಥ ಕೆಲಸದಿಂದ ಇವರು ಅಧಿಕಾರಕ್ಕೆ ಬರಲಿಲ್ಲ. ಇರರು ಮಾಡಿದ್ದ ಕೆಲಸದಿಂದ ಇಖಕು ಗೆಲ್ಲಲೇಕಾಗಿದೆ. 1989ರ ಚುನಾವಣೆಯಲ್ಲೇ ಗೆಲ್ಲಬೇಕಾಗಿತ್ತು.

ಶ್ರೀ ಎಂ. ನಾರಾಯಣಸ್ವಾಮಿ : ನಮ್ಮ ಪಕ್ಷದ ಮ್ಯಾನೀಫೆಸ್ಟೋ ವಿಚಾರವನ್ನು ಅವರು ಹೇಳುತ್ತಿದ್ದಾರೆ. ಇರತ್ತಿಗೆ ನಾವು ಅಧಿಕಾರಕ್ಕೆ ಬಂದು ನೂರು ದಿವಸಗಳಾಗಿ. ಇನ್ನೂ ಎರಡು ವರ್ಷಗಳು ಹೋದರೆ ನಾವು ಏನು ಮಾಡುತ್ತೇವೆಂದು ಗೊತ್ತಾಗುತ್ತದೆ.

ಶ್ರೀ ಡಿ.ಕೆ. ಶಿವಕುಮಾರ್ : ಒಂದು ವರ್ಷ ಅಸೆಂಬ್ಲಿಯನ್ನೇ ಕಳೆಯಬೇಡಿ.

ಶ್ರೀ ಎಂ. ನಾರಾಯಣಸ್ವಾಮಿ : ನಾವು ಅಸೆಂಬ್ಲಿ ಕರೆಯದೆ ಓಡಿಹೋಗಲಿಲ್ಲ.

SRI Y. Ramakrishna: I am not criticising the activities of the Government ದಯವಿಟ್ಟು ಇದನ್ನು ಅರ್ಥ ಮಾಡಿಕೊಳ್ಳಿ. ಸಮಸ್ಯೆಗಳ ಪರಿಚಯವನ್ನು ನಾನು ಮಾಡುತ್ತಿದ್ದೇನೆ. ಅಂತ್ಯೋದಯ ಸ್ಕೀಮ್‌ನ್ನು ಜಾರಿಗೆ ಮಾಡಿದ್ದೇವೆಂದು ಪೇಪರ್‌ನಲ್ಲಿ ಬಂದಿದೆ. ಬೇಕಾದರೆ ತೆಗೆದು ನೋಡಿ. ನೀವೇ ಹೇಳಿ, ಅವರು ಅಂತ್ಯೋದಯ ಸ್ಕೀಮ್‌ನ್ನು ಜಾರಿಗೆ ತಂದಿದ್ದಾರೋ? ಹಾಗೆಯೇ ಸಿಂಗಲ್ ವಿಂಡೋ ಸಿಸ್ಟಮ್‌ನ್ನು ಕೈಗಾರಿಕೆಗಳ ಬಗ್ಗೆ ಜಾರಿ ಮಾಡುತ್ತೇವೆಂದು ಹೇಳಿದಿರಿ. ಅದನ್ನು ಜಾರಿಗೆ ತಂದಿರಾ? ಈ ತರಹ ಹೇಳಬೇಕಾದರೆ ಬೇಕಾದಷ್ಟು ಇವೆ. ಹೇಳಿಕೊಂಡು ಹೋದರೆ ಅದು ದೊಡ್ಡ ವಿಷಯವಾಗುತ್ತದೆ. ಇವತ್ತು ಆ ಸರ್ಕಾರ ಹೋಯಿತು. ಅದೇ ದಾರಿಯನ್ನು ತಾವೂ ಅನುಸರಿಸಬೇಕು. ಮಣ್ಣಿನ ಮಗ ಎನ್ನುವ ಹೆಸರನ್ನು ಉಳಿಸಿಕೊಳ್ಳುವ ಜವಾಬ್ದಾರಿ ನಮಗೆ ಸೇರಿದ್ದು. ಆಮೇಲೆ 3.20 ರೂಪಾಯಿಗಳಿಗೆ ಒಂದು ಕೆ.ಜಿ. ಅಕ್ಕಿಯನ್ನು ಕೊಡುತ್ತೇವೆಂದು ಹೇಳಿರುವುದಕ್ಕೆ ನಾನು ಅವರನ್ನು ಅಭಿನಂದಿಸುತ್ತೇನೆ. ಇದು ಬಹಳ ಗಾಂಭೀರ್ಯದಿಂದ ತಂದಿರತಕ್ಕಂಥ ದೊಡ್ಡ ಸಾಧನೆಯಾಗಿದೆ. ಅವರ ಕೌಂಟರ್ ಪಾರ್ಟ್ ಎನ್.ಟಿ. ರಾಮರಾಯರು ಆಂಧ್ರ ಪ್ರದೇಶದಲ್ಲಿ ಇಂಥಾದ್ದೇ ಸ್ಕೀಮ್‌ನ್ನು ಜಾರಿಗೆ ತಂದಂಥ ಸಂದರ್ಭದಲ್ಲೇ ತಾವೂ ತಂದಿದ್ದರೆ ಇನ್ನೂ ಹೆಚ್ಚಿನ ಕೀರ್ತಿ ಬರುತ್ತಿತ್ತು. ಈಗಲಾದರೂ ಜಾರಿಗೆ ತಂದಿದ್ದೀರಿ. ಅದನ್ನು ಆದಷ್ಟು ಶೀಘ್ರವಾಗಿ ಕೊಡುವುದಕ್ಕೆ ಪ್ರಾರಂಭ ಮಾಡಿ. ಯಾರೋ ತಿಳಿಸಿದ ಪ್ರಕಾರ ಈ ಸ್ಕೀಮ್ ಮೇ ತಿಂಗಳಲ್ಲಿ ಜಾರಿಗೆ ತರಲಾಗುತ್ತದೆಂದು ಗೊತ್ತಾಯಿತು. ಬಡವರ ಕೈಗೆ ಅಕ್ಕಿ ಸಿಕ್ಕುವುದಕ್ಕೆ ಇನ್ನೂ ಒಂದು ತಿಂಗಳು ಮುಂದೆ ಹೋದರೆ ನೀವು ಅಧಿಕಾರಕ್ಕೆ ಬಂದು ತಿಂಗಳ ನಂತರ ಜಾರಿಗೆ ಕೊಟ್ಟ ಹಾಗಾಗುತ್ತದೆ. ಆದ್ದರಿಂದ, ಇಂಥಹ ಬಡವರ ಸ್ಕೀಮ್‌ಗಳನ್ನು ಆದಷ್ಟು ಶೀಘ್ರವಾಗಿ ಜಾರಿಗೆ ತರಬೇಕೆಂದು ತಮ್ಮ ಮೂಲಕ ಸರ್ಕಾರದಲ್ಲಿ ಬೇಡಿಕೊಳ್ಳುತ್ತಿದ್ದೇನೆ. ನಮ್ಮ ರಾಜ್ಯದಲ್ಲಿ ಅನೇಕ ಐ.ಎ.ಎಸ್ ಆಫೀಸರ್‌ಗಳಿದ್ದಾರೆ, ಪರಿಣಿತರಿದ್ದಾರೆ, ಟೆಕ್ನೋಕ್ರಾಟ್ಸ್ ಇದ್ದಾರೆ.ಇವರೆಲ್ಲಾ ಇದ್ದುಕೊಂಡು ನಮ್ಮ ರಾಜ್ಯ ಏಕೆ ಈ ರೀತಿ ಆಯಿತು? ಇದಕ್ಕೆ ಏನು ಕಾರಣ? ಇವುಗಳ ಬಗ್ಗೆ ನಾವು ಆಲೋಚನೆ ಮಾಡಬೇಕಾಗುತ್ತದೆ. ಸಂಪನ್ಮೂಲಗಳು ಮತ್ತು ಆದಾಯ ಇದರ ಬಗ್ಗೆಯೂ ನಾವು ಆಲೋಚನೆ ಮಾಡಬೇಕು. ಸಂಪನ್ಮೂಲ ಅಂದ ತಕ್ಷಣ ಟ್ಯಾಕ್ಸ್ ಹಾಕುವುದು ಎಂದಲ್ಲ. ಇರತಕ್ಕಂಥ ಸಂಪನ್ಮೂಲದಲ್ಲಿ ಯಾವ ರೀತಿ ಆಡಳಿತ ನಡೆಸಬೇಕು? ಒಂದು ವೇಳೆ ಟ್ಯಾಕ್ಸ್ ಹಾಕಬೇಕಾಗಿ ಬಂದರೂ ಎಷ್ಟರಮಟ್ಟಿಗೆ ಟ್ಯಾಕ್ಸ್ ಹಾಕಬೇಕು? ಮನುಷ್ಯರು ತಡೆಯುವಷ್ಟು ಟ್ಯಾಕ್ಸ್ ಹಾಕಬೇಕೆ ಹೊರತು ಹೆಚ್ಚುಟ್ಯಾಕ್ಸ್ ಹಾಕುವುದು ಸಾಧುವಲ್ಲ. ರಾಜ್ಯಪಾಲರ ಭಾಷಣದ ಮೇಲಿನ ಚರ್ಚೆಯಲ್ಲಿ ಟ್ಯಾಕ್ಸೇಷನ್ ಬಗ್ಗೆ ಮಾತನಾಡುವುದು ಅನುಚಿತವಾದರೂ ಮಾತನಾಡಬೇಕಾಗಿದೆ. ಸಂವಿಧಾನದ ಪ್ರಕಾರ ರಾಜ್ಯಪಾಲರ ಭಾಷಣದ ಮೇಲಿನ ಚರ್ಚೆ ಮೊದಲು ಬರಬೇಕಾಗಿತ್ತು. ಅದರ ಮೇಲೆ ಸದಸ್ಯರು ತಮ್ಮ ಅನಿಸಿಕೆಗಳನ್ನು ಹೇಳಬೇಕಾಗಿತ್ತು. ಅವುಗಳನ್ನೆಲ್ಲಾ ಕ್ರೋಢೀಕರಿಸಿ ಬಜೆಟ್ ಮಂಡಿಸಬೇಕಾಗಿತ್ತು. ಅರ್ಜೆನ್ಸಿಗೋಸ್ಕರ ಹಿಂದೆ ಮುಂದೆ ಮಾಡಿರುವುದರಿಂದ ವಿಧಿ ಇಲ್ಲದೆ ನಾನು ಮಾತನಾಡಬೇಕಾಗಿದೆ. ನಮ್ಮ ರಾಜ್ಯದ ಮಾಜಿ ಮುಖ್ಯ ಮಂತ್ರಿಗಳು ಇರಬಹುದು ಇತರೇ ಮಂತ್ರಿಗಳು ಇರಬಹುದು, ಇವರೇಲ್ಲಾ ಒಳ್ಳೆಯ ಆಡಳಿತಗಾರರಿರುವುದರಿಂದ ಅವರ ಅನುಭವವನ್ನು ಕ್ರೋಢೀಕರಿಸಿ ನಮ್ಮ ರಾಜ್ಯದಲ್ಲಿ ಯಾವ ರೀತಿ ಸಂಪನ್ಮೂಲಗಳನ್ನು ಅಭಿವೃದ್ಧಿ ಪಡಿಸಬಹುದು, ಯಾವ ರೀತಿ ಮಿತವ್ಯಯವನ್ನು ಮಾಡಬಹುದು ಎನ್ನುವುದನ್ನು ತಿಳಿಯುದಕ್ಕಾಗಿ ಅವರಾಗಳನ್ನೆಲ್ಲಾ ಸೇರಿಸಿ ರಿಸೋರ್ಸಸ್ ಅಂಡ್ ಎಕಾನಮಿ ಕಮಿಟಿ ಎಂದು ಒಂದು ಕಮಿಟಿಯನ್ನು ಮಾಡಿ. ಅಧಿಕಾರಿಗಳ ಅನುಭವಕ್ಕೂ ಆಡಳಿತ ನಡೆಸತಕ್ಕಂಥವರ ಅನುಭವಕ್ಕೂ ಬಹಳ ವ್ಯತ್ಯಾಸವಿರುತ್ತದೆ. ಆ ಕಮಿಟಿ ಮೂಲಕ ಸಂಪನ್ಮೂಲ ಸಂಗ್ರಹಣೆ ಮತ್ತು ಎಕಾನಮಿ ಬಗ್ಗೆ ರಿಪೋರ್ಟ್ ತರಿಸಿಕೊಂಡು ಮುಂದುವರಿದರೆ ಒಳ್ಳೆಯದೆಂದು ನಾನು ಭಾವಿಸಿಕೊಳ್ಳುತ್ತೇನೆ. ಆಮೇಲೆ ಅಸಂಘಟಿತ

ಕಾರ್ಮಿಕರ ಬಗ್ಗೆ ಒಂದೆರಡು ಸಲಹೆಗಳನ್ನು ಸರ್ಕಾರಕ್ಕೆ ಕೊಡಬಯಸುತ್ತೇನೆ. ಪಕ್ಕದ ರಾಜ್ಯಗಳಾದ ಆಂಧ್ರಪ್ರದೇಶ, ತಮಿಳುನಾಡು, ಕೇರಳಗಳಲ್ಲಿ ಕಾರ್ಮಿಕರ ಕಲ್ಯಾಣಕ್ಕಾಗಿ ಪ್ರತಿಯೊಂದು ಉದ್ಯಮಕ್ಕೂ ಒಂದೊಂದು ವೆಲ್‌ಫೇರ್ ಬೋರ್ಡ್‌ಗಳನ್ನು ಮಾಡಿದ್ದಾರೆ. ಆ ಬೋರ್ಡ್ ಮೂಲಕ ಕಾರ್ಮಿಕರಿಗೆ ಪೆನ್‌ಷನ್, ಗ್ರಾಚ್ಯುಯಿಟಿ, ಖಾಯಿಲೆ ಬಿದ್ದಾಗ ಅಸಿಸ್ಟೆನ್ಸ್ ಎಲ್ಲಾ ಕೊಡುತ್ತಿದ್ದಾರೆ. ಅದೇ ತರಹದ ಸಿಸ್ಟಮ್‌ನ್ನು ನಮ್ಮ ರಾಜ್ಯದಲ್ಲೂ ಏಕೆ ಮಾಡಬಾರದು? ಇದರ ಬಗ್ಗೆ ತಾವು ಪರಿಶೀಲನೆ ಮಾಡಬೇಕಾಗಿದೆ.

ಶ್ರೀ ಸಿ. ಗುರುನಾಥ್ : ಮಾನ್ಯ ಸದಸ್ಯರು ಏನು ತಿಳಿಸಿದ್ದಾರೋ, ಅದರ ಬಗ್ಗೆ ಪಕ್ಕದ ರಾಜ್ಯಗಳಿಂದ ಸಾಕಷ್ಟು ಮಾಹಿತಿಗಳನ್ನು ತರಿಸಿಕೊಂಡು ಅವುಗಳನ್ನು ನಮ್ಮ ರಾಜ್ಯದಲ್ಲಿ ಕಾರ್ಯರೂಪಕ್ಕೆ ತರಲಿಕ್ಕೆ ಪ್ರಯತ್ನ ಮಾಡುತ್ತಿದ್ದೇನೆ.

ಶ್ರೀ ವೈ. ರಾಮಕೃಷ್ಣ : ಇದರ ಬಗ್ಗೆ ಒಂದು ಸ್ಟಡಿ ಟೀಮ್‌ನ್ನು ಮಾಡಿದರೆ, ಅಲ್ಲಿಗೆ ಹೋಗಿ ಅಧ್ಯಯನ ಮಾಡಿ, ಆ ರಾಜ್ಯಗಳ ಸಂಸ್ಥೆಗಳಲ್ಲಿ ಯಾವ ರೀತಿ ಕಾರ್ಮಿಕರಿಗೆ ಕಲ್ಯಾಣ ಕಾರ್ಯಕ್ರಮಗಳನ್ನು ಮಾಡಿದ್ದಾರೋ ಅದೇ ರೀತಿ ನಮ್ಮ ರಾಜ್ಯದಲ್ಲೂ ಜಾರಿಗೆ ತರುವುದಕ್ಕೆ ಅನುಕೂಲವಾಗುತ್ತದೆ. ಆಮೇಲೆ, ಕಾರ್ಮಿಕ ಕೋರ್ಟ್‌ಗಳ ಬಗ್ಗೆ ಮೊನ್ನೆ ನಾನು ಪ್ರಶ್ನೆ ಕೇಳಿದ್ದೆ, ಆದರೆ ಅದಕ್ಕೆ ಸ್ಪಷ್ಟವಾದ ಉತ್ತರ ಸಿಗಲಿಲ್ಲ, ಇವತ್ತು ನಾನು ಹೇಳುತ್ತೇನೆ, ಇವತ್ತಿನ ದಿವಸಗಳಲ್ಲಿ ಕಾರ್ಮಿಕ ಕೋರ್ಟ್‌ಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲ, ಅವು ಕಾರ್ಮಿಕರ ಹಿತ ರಕ್ಷಣೆ ಮಾಡುತ್ತಿಲ್ಲ. ಕಳೆದ 18 ವರ್ಷಗಳಿಂದ ಸುಮಾರು 18 ಸಾವಿರ ಕೇಸ್‌ಗಳು ಕಾರ್ಮಿಕ ಕೋರ್ಟ್‌ಗಳಲ್ಲಿ ಪೆಂಡಿಂಗ್ ಇದೆ, ಕಾರ್ಮಿಕರು ಕೋರ್ಟ್ ಹತ್ತಿರ ಬಂದು ಕಡಲೆ ಕಾಯಿ ತಿಂದು ನೀರು ಕುಡಿದು ಕೆಲಸ ಅಡ್ಜರ್ನ್ ಆಯಿತೆಂದು ಮನೆಗೆ ಹೋಗುತ್ತಾರೆ. ಇದರಿಂದಾಗಿ ಅವರ ಬಾಳು ಏನಾಗಬೇಕು? ಕಾಂಪನ್‌ಸೇಷನ್ ವಿಚಾರದಲ್ಲಿ 3600 ಕೇಸ್‌ಗಳು ಪೆಂಡಿಂಗ್ ಇವೆ, ಈ ಕೇಸ್‌ಗಳನ್ ನಾವು ಏಕೆ ಲೋಕ ಅದಾಲತ್ ಕೆಳಗೆ ತರಬಾರದೆಂದು ಮಾನ್ಯ ಮಂತ್ರಿಯವರನ್ನು ನಾನು ಕೇಳುತ್ತೇನೆ. ಆಕ್ಸಿಟ್ ಕೇಸ್‌ಗಳನ್ನು ಲೋಕ್ ಅದಾಲತ್‌ಮುಂದೆ ತರುವ ಹಾಗೆ ಕಾರ್ಮಿಕರ ಕಲ್ಯಾಣ ಕೇಸ್‌ಗಳನ್ನೂ ತಂದರೆ ಒಂದು ತಿಂಗಳಲ್ಲಿ ಅವರುಗಳಿಗೆಲ್ಲಾ ಪರಿಹಾರ ಸಿಗುತ್ತದೆ. ತಾವು ಆ ಬಗ್ಗೆ ಗಮನಹರಿಸುತ್ತೀರಿ ಎಂದು ನಾನು ಭಾವಿಸುತ್ತೇನೆ. ಇಲ್ಲಿ ಎರಡು ಬಿಲ್‌ಗಳು ತಯಾರಾಗಿವೆ ಎಂಬ ಒಂದು ವದಂತಿ ಇದೆ. ಒಂದು ಅಗರಬತ್ತಿ ಕೆಲಸಗಾರರಿಗೆ, ಇನ್ನೊಂದು ಕೃಷಿ ಕಾರ್ಮಿಕರಿಗೆ ಸಂಬಂಧಪಟ್ಟಿದ್ದುದು ಆಗಿರುತ್ತದೆ. ಅವುಗಳ ಡಾಟಾ ಕಲೆಕ್ಟ್ ಆಗಿದ್ದರೆ ಅವುಗಳನ್ನು ಆದಷ್ಟು ಶೀಘ್ರವಾಗಿ ಕಾನೂನು ಮಾಡಿಸಿದರೆ, ಅದರಿಂದ ಸಂಬಂಧಪಟ್ಟವರಿಗೆ ಅನುಕೂಲವಾಗುತ್ತದೆ ಎಂದು ನಾನು ಭಾವಿಸುತ್ತೇನೆ. ಇನ್ನೊಂದು ವಿಚಾರ ಅಂದರೆ ಬಹಳ ಮಿಲ್ಲಗಳು ಇವೊತ್ತು ಸಿಕೆ ಆಗಿಬಿಟ್ಟಿವೆ. ಅದರಿಂದ ಕಾರ್ಮಿಕರಿಗೆ ತೊಂದರೆ ಉಂಟಾಗಿದೆ, ಅವುಗಳಿಗೆ ನಾವು ಕೋಟ್ಯಾಂತರ ರೂಪಾಯಿಗಳ ಬಂಡವಾಳವನ್ನು ಹಾಕಿರುತ್ತೇವೆ. ಆದರೆ ಅಂಥವುಗಳ ಬಗ್ಗೆ ನಾವು ವಿಚಾರ ಮಾಡುವುದಿಲ್ಲ, ಇದಕ್ಕೆ ಏನು ಕಾರಣ? ಅಲ್ಲಿ ರಾಜಕೀಯ ತಲೆ ಹಾಕಿರುತ್ತದೆ. ಎಲ್ಲಾ ಪಕ್ಷದವರೂ ಅಲ್ಲಿ ಕಾರ್ಮಿಕ ಸಂಘಗಳ ಚುನಾವಣೆಗಳಲ್ಲಿ ತಲೆ ಹಾಕುವುದು ರೂಢಿಯಾಗಿ ಬಿಟ್ಟಿದೆ,. ಅದಕ್ಕೋಸ್ಕರ ರಾಜಕೀಯವನ್ನು ಅಲ್ಲಿಂದ ದೂರ ಇಡಲು ನಾನು ಸಲಹೇ ಮಾಡುತ್ತೇನೆ, ಆದ್ದರಿಂದ ನಾವು ಟ್ರೇಡ್ ಯೂನಿಯನ್ ಆಕ್ಟ್‌ಗೆ ಒಂದು ಅಮೆಂಡ್‌ಮೆಂಟ್ ತರುವುದಕ್ಕೆ ಸೆಂಟ್ರಲ್ ಗವರ್ನ್‌ಮೆಂಟ್‌ಗೆ ನಾವು ಶಿಫಾರಸ್ಸು ಮಾಡಬೇಕು, in the interest of industry. ಇವೊತ್ತು ಚೈನಾ, ಜಪಾನ್ ಮುಂತಾದ ದೇಶಗಳಲ್ಲಿ ಈ ಕುರಿತು ಏನು ಇದೆ, ಅಲ್ಲಿ ಈ ರೀತಿಯಲ್ಲಿ ಟ್ರೇಡ್ ಯೂನಿಯನ್‌ಗಳು ಇವೆಯೇ ಎಂಬುದನ್ನು ನೋಡಿ.

ಅಧ್ಯಕ್ಷರು : ಶ್ರೀ ರಾಮರೆಡ್ಡಿಯವರೇ, ಮಾನ್ಯ ರಾಮಕೃಷ್ಣರವರು ಬಹಳ ಗಂಭೀರವಾದ ವಿಚಾರವನ್ನು ಪ್ರಸ್ತಾಪ ಮಾಡುತ್ತಿದ್ದಾರೆ, ನೀವು ಹೊರಟು ಹೋಗುತ್ತಿದ್ದೀರಿ.. He is making a very important reference.

ಶ್ರೀ ವೈ. ರಾಮಕೃಷ್ಣ : ಬೇರೆ ದೇಶಗಳಿಗೆ ಹೋಗಿ ಅಲ್ಲಿನ ಸ್ಥಿತಿಗತಿಗಳನ್ನು ನೋಡಿಕೊಂಡು ಬಂದು ನಾನಿಲ್ಲಿ ಹೇಳುತ್ತಿದ್ದೇನೆ, Each factory to have its own Union. ಅದರಲ್ಲಿ ಪಾಲಿಟೀಷಿಯನ್ಸ್‌ಗೆ ಅವಕಾಶವನ್ನು ಕೊಡಬೇಡಿ, ಹಾಗೆ ಕೊಡಬಾರದು. Let them manage their own association; let them manage their own union. Keep them away from politicians, ಖಂಡಿತವಾಗಿಯೂ ನಾನು ಹೇಳುತ್ತೇನೆ, ಇಂಥ ಮುಷ್ಕರಗಳಿಗೆ ನಾವು ತಾಳ ಹಾಕಬೇಕಾಗುತ್ತದೆ. ಇದಕ್ಕೆ ತಾವು ಏನು ಮಾಡಬೇಕಂದರೆ, ರಾಜ್ಯದಲ್ಲಿನ ಎಲ್ಲಾ ಲೇಬರ್ಸ್ ಲೀಡರ್‌ಗಳನ್ನು ಕರೆಯಿಸಿ. ಒಂದು ವಾರಗಟ್ಟಳೆ ಬೇಕಾದರೂ ಕಾನ್‌ಫರೆನ್ಸ್ ಮಾಡಿ. ಮುಚ್ಚಿರತಕ್ಕಂಥ ಸಿಕ್‌ಯುನಿಟ್ಸ್‌ಗಳನ್ನು ಪ್ರಾರಂಭಿಸಬೇಕು, ಅವರಿಗೆ ನಾವು ಅನುದಾನ ಕೊಡಬೇಕೆಂಬ ಬಗ್ಗೆ ಮುಕ್ತವಾಗಿ ಚರ್ಚೆ ಮಾಡಿ. ಹೀಗೆ ಚರ್ಚೆ ಮಾಡುವುದರಿಂದ ಎರಡು ಉದ್ದೇಶ ಸಾಧನೆಯಾಗುತ್ತದೆ. ಮೊದಲನೇಯದು ಈಗ ಇರತಕ್ಕಂಥ ಮಿಲ್‌ಗಳನ್ನು ತೆರೆದ ಹಾಗೆ ಆಗುತ್ತದೆ, ಮುಂದೆ ಅದು ಪುನರಾವರ್ತಿಯಾಗದ ಹಾಗೆ ಆಯಿತು. ಅದಕ್ಕೋಸ್ಕರವಾಗಿ ಆದಷ್ಟು ಶೀಘ್ರವಾಗಿ ಎಷ್ಟು ಅಸೋಸಿಯೇಷನ್ ಇವೆ ಅವರೆಲ್ಲರನ್ನೂ ಕರೆಯಿಸಿ.

ಅಧ್ಯಕ್ಷರು : ಟ್ರೇಡ್ ಯೂನಿಯನ್‌ನಲ್ಲಿ ಪೊಲಿಟಿಸೈಸ್ ಆಗಬಾರದು, ಏನಿದ್ದರೂ ಅವರು ತಮ್ಮ ಎಕಾನಾಮಿಕ್ಸ್ ಡಿಮ್ಯಾಂಡ್ಸ್‌ಗಳನ್ನು ಅಷ್ಟೇ ಮಾಡಿಕೊಳ್ಳಬೇಕು ಎಂಬುದು ನಿಮ್ಮ ವಾದ....

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ, ಲೇಬರ್ಸ್ ಬಗ್ಗೆ ಬಿಜೆಪಿಯವರ ಪಾಲಿಸಿ ಏನು ಎಂಬುದನ್ನು ರಾಮಕೃಷ್ಣರವರು ಹೇಳಬೇಕು.

ಶ್ರೀ ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ, ಲೇಬರ್ಸ್ ಬಗ್ಗೆ ಬಿಜೆಪಿ ಯವರ ಪಾಲಿಸಿ ಏನು ಎಂಬುದನ್ನು ರಾಮಕೃಷ್ಣರವರು ಹೇಳಬೇಕು.

ಶ್ರೀ ವೈ. ರಾಮಕೃಷ್ಣ : ನಮ್ಮದೂ ಇದೆ. ನಮ್ಮದೊಂದು ಇಟ್ಟುಕೊಂಡು ಎಲ್ಲರದ್ದೂ ಸೇರಿದಾಗ ನಮ್ಮದ್ದೂ ಅದರಲ್ಲಿ ಸೇರಬೇಕು ಎಂದು ಹೇಳುತ್ತಿದ್ದೇನೆ.

ಶ್ರೀ ಜಿ.ವಿ. ರಾಮರೆಡ್ಡಿ : ಮಾನ್ಯ ಅಧ್ಯಕ್ಷರೇ, ಕಾರ್ಮಿಕರಿಗೆ ಎಕಾನಾಮಿಕ್ ಡಿಮ್ಯಾಂಡ್ಸ್‌ಗಳ ಮೇಲೆ ಹೋರಾಟ ಮಾಡಲು ಮಾತ್ರ ಅವಕಾಶ ಮಾಡಿಕೊಡಬೇಕು, ರಾಜಕೀಯವು ಟ್ರೇಡ್ಯೂನಿಯನ್ಗೆ ಪ್ರವೇಶ ಮಾಡಬಾರದೆಂದು ಹೇಳುವ ಅವರ ವಾದವು ಸಮತೋಲನವಾಗಿರತಕ್ಕನೌಥ ಕಾರ್ಮಿಕರನ್ನು ದೇಶದ ಮುಖ್ಯವಾಹಿನಿಯಿಂದ ಹೊರಗಡೆ ಇರತಕ್ಕಂಥ ಉದ್ದೇಶವಾಗಿದೆ. ಅವರ ಎಕನಾಮಿಕ್ಡಿಮ್ಯಾಂಡ್ನಿಂದ ಆಗುವುದಿಲ್ಲ ಎಂಬುದನ್ನು ಅವರು ಸಮರ್ಥನೆ ಮಾಡಿಕೊಳ್ಳಲಿ. ಅವರ ಎಕಾನಮಿಕಲ್ ಡಿಮ್ಯಾಂಡಸ್ನು ಅವರು ಹೇಗೆ ರೈಸ್ಮಾಡುವುದು? ಮಿನಿಮಂ ವೇಜಸ್‌ಇಲ್ಲವೆಂದು ಒಬ್ಬ ಕಾರ್ಮಿಕ ಹೋರಾಟ ಮಾಡಬೇಕಾದರೆ ಮಿನಿಮಂ ವೇಜಸ್ಕೊಡಬಾರದು ಎಂದು ತೀರ್ಮಾನ ಮಾಡತಕ್ಕಂಥ ರಾಜಕೀಯ ಶಕ್ತಿಯ ವಿರುದ್ಧ ಹೋರಾಟ ಎಂದಷ್ಟೇ ತಿಳಿದುಕೊಳ್ಳಬೇಕು. ಕರ್ನಾಟಕದಲ್ಲಿ ಮಿನಿಮಂ ವೇಜಸ್ಕೃಷಿಕಾರ್ಮಿಕರಿಗೆ, ಅಸಂಘಟಿತ ಕಾರ್ಮಿಕರಿಗೆ, ಸಣ್ಣ ಸಣ್ಣ ಕಾರ್ಖಾನೆಗಳಲ್ಲಿ ಕೆಲಸ ಮಾಡತಕ್ಕಂಥ ಜನರಿಗೆ ಕನಿಷ್ಟವೇತನವನ್ನು ಇದುವರೆಗೂ ಕೂಡ ನಿಗದಿ ಮಾಡಿಲ್ಲ.ನಿಗದಿಯಾಗಿರುವುದೂ ಕೂಡ ಜಾರಿಯಾಗಿಲ್ಲ ಎಂದು ಹೇಳಿದರೆ, it is a political act of the ruling parties.ಅವರು ಮಿನಿಮಂ ವೇಜಸ್ಗೆ ಸ್ಟಗಲ್ ಮಾಡುತ್ತಾರೆಂದರೆ

it is a struggle against the political act bhind that act. Politicisation of trade unions is necessary and is a must.

ಅಧ್ಯಕ್ಷರು: ಪೊಲಿಟಿಸೈಸ್‌ಆಗಬೇಕೆಂದು ಅವರು ಹೇಳುತ್ತಾರೆ. ನಿಮ್ಮ ಅಭಿಪ್ರಯ ನಿಮ್ಮದು ಅವರ ಅಭಿಪ್ರಾಯ ಅವರದ್ದು.

ಶ್ರೀ ವೈ. ರಾಮಕೃಷ್ಣ : ಇನ್ನೊಂದು ವಿಚಾರ ಇಂಡಸ್ಟ್ರೀಗಳ ಬಗ್ಗೆ. ಅದು ಸೆಂಟ್ರಲ್ಗವರ್ನಮೆಂಟ್ ಅಂಡರ್ಟೇಕಿಂಗ್ಸ್ ಆಗಬಹುದು, ನಮ್ಮ ಸರಕಾರದ ಪಬ್ಲಿಕ್ ಅಂಡರ್ಟೇಕಿಂಗ್ಸ್‌ಆಗಬಹುದು. ಇವುಗಳಲ್ಲಿನ ಮೊದಲ ದೋಷ ಏನೆಂದರೆ ಓವರ್ಟೈಮ್ಕೊಡುತ್ತಿರುವುದು. ನೀವು ಯಾವ ಒಂದು ಫ್ಯಾಕ್ಟರಿಯ ಬ್ಯಾಲನ್ಸ್‌ಶೀಟನ್ನು ನೋಡಿ. ಅವುಗಳಲ್ಲಿ ಓ.ಟಿ. ಎಷ್ಟು ಕೊಡುತ್ತಿದ್ದಾರೆ ಎಂದು ನೋಡಿದರೆ ಅವರ ಸಂಬಳಕ್ಕಿಂತಲೂ ಓ.ಟಿ. ಜಾಸ್ತಿ ಇರುತ್ತದೆ. ಅಂದರೆ ಬೇರೆಯವರಿಗೆ ಆ ಕೆಲಸ ಕೊಡಲು ಅವರಿಗೆ ಇಷ್ಟವಿಲ್ಲ. ಅದಕ್ಕಾಗಿ ಇದ್ದವರಿಗೆ ಓ.ಟಿ. ಯನ್ನು ಕೊಡುತ್ತಾರೆ. ಇದು ನಮ್ಮ ರಾಜ್ಯದಲ್ಲಿ ನಿಲ್ಲಬೇಕು.ಇದಕ್ಕೋಸ್ಕರ ಒಂದು ಕಾನೂನನ್ನು ತಂದರೂ ಪರವಾಗಿಲ್ಲ. unless it is essentially required, with the permission of the Labour Commissioner ಓ.ಟಿ ಮಾಡಬಹುದೇ ಹೊರತು, ದಿನಂಪ್ರತಿ ಕೆಲಸ ಇರಲಿ, ಇಲ್ಲದಿರಲಿ ಓ.ಟಿ.ಯನ್ನು ಕೊಟ್ಟು ಸಂಬಳದ ಮೂರು ಪಟ್ಟು ಓ.ಟಿ.ಯನ್ನು ಕೊಟ್ಟರೆ ಉದ್ದಿಮೆಯ ಬೆಳೆಯುವುದಾದರೂ ಹೇಗೆ? ಅದಕ್ಕಾಗಿ ಒಂದು ಅಮೆಂಡ್ಮೆಂಟ್ಮಾಡಬೇಕೆಂದು ಮಾನ್ಯ ಸಚಿವರಿಗೆ ಸಲಹೆಯನ್ನು ಕೊಡಬಯಸುತ್ತೇನೆ.

ಕೊನೆಯದಾಗಿ ಒಂದು ಮುಖ್ಯವಾದ ವಿಚಾರದಲ್ಲಿ ಹೇಳಬಯಸುತ್ತೇನೆ. ಪುರಾತನ ಕಾಲದಲ್ಲಿ ಲೇಬರ್ ಕಮಿಷನರ್ ಎಂದು ಇದ್ದಿದ್ದು ಇವೊತ್ತು ಲಕ್ಷಾಂತರ ವರ್ಕರ್ಸ್ ಇದ್ದಾರೆ, ಅದಕ್ಕನುಗುಣವಾಗಿ ಸಮಸ್ಯೆಗಳು ಕೂಡ ಉದ್ಭವವಾಗಿದವೆ. ಇಷ್ಟಾದರೂ ಕೂಡ ಕಚೇರಿಗಳಲ್ಲಿನ ಬದಲಾವಣೆಯಾಗಿಲ್ಲ. ಮೊದಲು ಇದ್ದ ವ್ಯವಸ್ಥೆಯು ಈಗಲೂ ಇದೆ. ಅಲ್ಲಿ ಕುಳಿತುಕೊಳ್ಳಲು ಕುರ್ಚಿ ಮೇಜುಗಳಲ್ಲಿ, ಸರಿಯಾದ ಯಾವುದೇ ಸೂಕ್ತ ವ್ಯವಸ್ಥೆಗಳಿಲ್ಲ. ಅಲ್ಲಿ ನೋಡಿದಾಗ ಅದು ಜೈಲ್‌ಗಿಂತಲೂ ಕಡೆ ಮೊದಲು ಕಚೇರಿಯನ್ನು ವ್ಯವಸ್ಥಿತಗೊಳಿಸಿ. ಕೋರ್ಟ್‌ಗಳು ಚೆನ್ನಾಗಿ ಕೆಲಸ ಮಾಡುವ ರೀತಿಯಲ್ಲಿ ಕೆಲಸ ಮಾಡಿ. ಕೋರ್ಟ್‌ಗಳಿಗೆ ಎಲ್ಲಾ ಕಡೆಗಳಲ್ಲಿಯೂ ಜಡ್ಜ್‌ಗಳನ್ನು ನೇಮಕ ಮಾಡಿ. ಆಗ ಮಾತ್ರ ಲೇಬರ್ಸ್ ಸಮಸ್ಯೆಗಳಿಗೆ ಪರಿಹಾರ ಕಂಡುಗಳ್ಳಬಹುದು. ಕೋರ್ಟ್‌ಗಳಿಗೆ ರಿಟೈರ್ಗ್ಗೆ ಬಂದವರನ್ನು ತೆಗೆದುಕೊಂಡು ಹೋಗಿ ಹಾಕಿದರೆ ಅವರೇನು ಮಾಡುತ್ತಾರೆ? ಅವರು ತಮ್ಮ ಸೆಟಲ್ಮೆಂಟ್ನ ಬಗ್ಗೆ ಮಾತ್ರ ಯೋಜನೆ ಮಾಡುತ್ತಿರುತ್ತಾರೆ. ಒಬ್ಬ ಅನುಭವಸ್ಥರು ಅವರ ಕಷ್ಟವನ್ನು ನನ್ನಲ್ಲಿ ಹೇಳಿಕೊಂಡರು. ಲೇಬರ್ ಕೋರ್ಟ್‌ನಲ್ಲಿರ ತಕ್ಕಂಥವರು ಅನಿರೀಕ್ಷಿತವಾಗಿ ರಜೆಯನ್ನು ಹಾಕಿಬಿಡುತ್ತಾರೆ. ಸಂಭದಪಟ್ಟ ಕೇಸ್‌ಗಳಿಗೆ ಅಡ್ಜರ್ನಮೆಂಟ್ ಮಾಡುತ್ತಾರೆ. ಅವರು ತಮ್ಮ ಮೂರು ತಿಂಗಳ ರಜೆ ಮುಗಿಸಿಕೊಂಡು ಬರುವಾಗ ಟೈಪಿಸ್ಟ್ ರಜೆ ಕೊಡುತ್ತಾನಂತೆ. ಅದಕ್ಕಾಗಿ ಮತ್ತೆ ಮೂರು ತಿಂಗಳ ಅರ್ಜೆಜರ್ನಮೆಂಟ್. ಟೈಪರೈಟರ್ನ ರಿಬ್ಬನ್ ಇಲ್ಲ ಎಂದು ಕೋರ್ಟ್ ಅಡ್ಜರ್ನ್ ಮಾಡಿದ್ದಾರೆ ಎಂದು ತಿಳಿದು ಬಂತು. ಆ ರೀತಿಯಲ್ಲಿ ಈ ಡಿಪಾರ್ಟ್‌ಮೆಂಟ್ ಕೊಲಸ ಮಾಡುತ್ತಿದೆ. ರೈತರ ಸಮೂಹ ಬಿಟ್ಟ ಮೇಲೆ ಹೆಚ್ಚು ಕೂಲಿಗಾರರು ಇರುವುದು ಇಂಡಸ್ಟ್ರೀಗಳಲ್ಲಿ ಆದ್ದರಿಂದ ಈ ಬಗ್ಗೆ ಹೆಚ್ಚು ಗಮನಕೊಡಬೇಕು. ನಾನು ಮೊನ್ನೆ ತಾನೇ ಪ್ರಶ್ನೆ ಕೇಳಿದ್ದೆ. ರಾಜ್ಯದ ಕಾರ್ಮಿಕ ಕೋರ್ಟ್ಗಳಲ್ಲಿ ಎಷ್ಟು ನ್ಯಾಯೂದೀಶರುಗಳ ಕೊರತೆ ಇದೆ ಎಂದು. ಒಟ್ಟು 12 ಕೋರ್ಟ್ಗಳಲ್ಲಿ ಲಜನ ಜಡ್ಜಸ್ ಇದ್ದಾರೆಂದು ಉತ್ತರಿಸಿದ್ದಾರೆ. ಈ ನಾಲ್ಕು ಜನರನ್ನು ನೇಮಕ ಮಾಡುತ್ತೇವೆಂದು ಹೇಳಿದ್ದಾರೆ. ಯಾವಾಗ ಎಂದು ಗೊತ್ತಿಲ್ಲ. ಇಲ್ಲಿ ಈ ಕೋರ್ಟ್‌ಗಳಿಗೆಂದೇ ನ್ಯಾಯಾಧೀಶರನ್ನು ನೇಮಕ ಮಾಡಿಬಿಟ್ಟರೆ ಅವರು ಅದರಲ್ಲಿ ಪರಿಣತಿ ಹೊಂದುತ್ತಾರೆ.

ಇವೊತ್ತು ಆ ಪರಿಣತಿಯನ್ನು ರಾಜ್ಯದಲ್ಲಿ ನಾವು ಕಾಣುತ್ತಾ ಇಲ್ಲ. We have no judges wih exert knowledge in labour field. ಸಿವಿಲ್ ಜಡ್ಜ್‌ಸ್, ಕ್ರಿಮಿನಲ್ ಕೋರ್ಟ್ ಜಡ್ಜ್‌ಸ್‌ನ್ನು ಲೇಬರ್ ಕೋರ್ಟ್‌ಗೆ ತೆಗೆದುಕೊಂಡು ಹೋಗಿ ಹಾಕುತ್ತೇವೆ. I don't question their competency.

ಆದರೆ ಅದರಲ್ಲಿ ನಾವು ಸಂಬಂಧಪಟ್ಟವರನ್ನು ಎಕ್ಸ್‌ಪರ್ಟ್ಸ್ ಮಾಡಬೇಕು. ಇನ್ನು ಅನ್ ಎಂಪ್ಲೈಮೆಂಟ್‌ನ ಬಗ್ಗೆ ಮೊನ್ನೆ ಮಾನ್ಯ ಈಶ್ವರಪ್ಪನವರು ಒಂದು ಪ್ರಶ್ನೆಯನ್ನು ಕೇಳಿದರು. ಉತ್ತರದಲ್ಲಿ ಮಾನ್ಯ ಮುಖ್ಯಮಂತ್ರಿಯವರು ಏನು ಹೇಳಿದ್ದಾರೆ ಅಂದರೆ, 6,12,448 ಸರಕಾರಿ ನೌಕರರಿದ್ದಾರೆ, ಅದರಲ್ಲಿ ಖಾಲಿ ಇರತಕ್ಕಂಥ ಹುದ್ದೆಗಳು 84,025 ಎಂದು ಹೇಳಿದ್ದಾರೆ. ಇದನ್ನು ಯಾವ ರೀತಿಯಲ್ಲಿ ನೀವು ಭರ್ತಿ ಮಾಡುತ್ತೀರಿ ಎಂದು ಕೇಳಿದ್ದಕ್ಕೆ, ನೇರ ನೇಮಕಾತಿ ನಿರ್ಬಂಧಗಳನ್ನು ತೆಗೆದುಹಾಕುತ್ತೇವೆ, ಆರ್ಥಿಕ ನಿರ್ಬಂಧನೆಯನ್ನು ಅವಶ್ಯಕತೆ ಇದ್ದಲ್ಲಿ ಸಡಿಲಗೊಳಿಸುತ್ತೇವೆ, ಖಾಲಿ ಹುದ್ದೆಗಳನ್ನು ಭರ್ತಿ ಮೊದಲು ಸರಕಾರವು ಶೀಘ್ರವಾಗಿ ಕಾರ್ಯಕ್ರಮಗಳನ್ನು ಹಾಕಿಕೊಳ್ಳುತ್ತದೆ ಎಂದು ಹೇಳಿದ್ದಾರೆ. ಅವರಲ್ಲಿ ನನ್ನ ಒಂದು ಮನವಿ ಏನೆಂದರೆ, ಕಳೆದ ಸಾರಿ ಇದೇ ಗವರ್ನರ್ಸ್ ಅಡ್ರೆಸ್ ಮಾಡುವಾಗ ರಾಜ್ಯಪಾಲರು ಒಂದು ಮಾತನ್ನು ಹೇಳಿದ್ದಾರೆ. ಮಾನ್ಯ ರಾಜ್ಯಪಾಲರು ಕಳೆದ ಸಾರಿಯ ತಮ್ಮ ಭಾಷಣದಲ್ಲಿ ಏನು ಹೇಳಿದ್ದಾರೆ ಅಂದರೆ "In the field of social welfare it has been the constant endenvour of my Government to ensure fair and adequate representation to the SCs/STs in civil services. Shortfalls in the representation of SCs/STs in various categories of civil services are being made good. A special scheme in this regard is also in operation for the recruitment of SC/ST candidates." Whether it has been done? ಅದನ್ನು ನಾನು ಪ್ರಶ್ನೆ ಮಾಡುತ್ತಿದ್ದೇನೆ. ಈ ಭಾಷಣ ಮಾಡಿದಂಥ ಸರ್ಕಾರ ಹೊರಟು ಹೋಯಿತು. ಆದರೆ ಈ ಸರ್ಕಾರ ಇದನ್ನು ಏತಕ್ಕೆ ಮುಂದುವರಿಸಲಿಲ್ಲ? ಆಮೇಲೆ ಹೇಳುತ್ತಾರೆ:

"After about a decade, for the purpose of filling up the backlog vacancies reserved for them in all departments and further have decided to complete these appointments by 31.3.1994."

5.50 ಪಿ.ಎಂ.

31.4.94ರೊಳಗಾಗಿ 17 ಸಾವಿರ ಹುದ್ದೆಗಳು ಪರಿಶಿಷ್ಟ ಜಾತಿ ಮತ್ತು ಪಂಗಡಗಳಿಗೆ ಏನು ಕೊಡಬೇಕಾಗಿತ್ತು ಅದನ್ನು ಒಂದು ವರ್ಷದ ಹಿಂದೆಯೇ ಕೊಡುತ್ತೇವೆಂದು ರಾಜ್ಯಪಾಲರ ಕೈಲಿ ಭಾಷಣ ಮಾಡಿಸಿದರು. ಈಗ ಚಕಾರ ಕೂಡ ಎತ್ತಿಲ್ಲ. ಈ 17 ಸಾವಿರ ಹುದ್ದೆಗಳ ಬಗ್ಗೆ ಇದರ ಜೊತೆಗೆ 60 ಸಾವಿರ ಹುದ್ದೆಗಳನ್ನು ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ಹಿನ್ನೆಲೆಯಲ್ಲಿ ಖಾಯಂಗೊಳಿಸಲು 23ಪರ್ಸೆಂಟ್ ಎಸ್‌ಸಿಎಸ್‌ಟಿಗೆ ಬರಬೇಕಾದ ಪೋಸ್ಟ್‌ಗಳು 13,800. ಹಾಗೆಯೇ ಟೀಚರ್ಸ್, ಅದರಲ್ಲಿ ಬರಬೇಕಾದ ಕೋರ್ಟ್ ಸುಮಾರು ಲೋಕಲ್ ಕ್ಯಾಂಡಿ ಡೇಟ್ಸ್ 2,46,300 ಹುದ್ದೆಗಳು ಹರಿಜನರ ಮೀಸಲಾತಿಗೆ ರೆಡಿಯಾಗಿವೆ. ಅದಕ್ಕೆ ಕ್ಯಾಂಡಿಡೇಟ್ಸಿದ್ದಾರೆ, ಯಾವ ಅರ್ಹತೆ ಬೇಕೋ ಎಲ್ಲಾ ಇದ್ದಾರೆ. ಎಂಬಿಬಿಎಸ್ ಬೇಕೇ, ಬಿ.ಇ. ಬೇಕಾ, ಎಲೆಕ್ಟ್ರಾನಿಕ್ಸ್ ಬೇಕೇ, ಯಾವುದು ಕೇಳುತ್ತೀರೋ ಅದು ರೆಡಿಯಾಗಿದೆ. ಇಷ್ಟೊಂದು ಪೋಸ್ಟ್ ಖಾಲಿ ಇವೆ. ಇವನ್ನು ನೇಮಕ ಮಾಡಿಕೊಳ್ಳಲು ಏನು ಕಾರ್ಯಕ್ರಮ ಹಾಕಿಕೊಂಡಿದ್ದೀರಿ? ನಾನಾದರೂ ಸರ್ಕಾರವನ್ನು ಪ್ರಾರ್ಥಿಸಿಕೊಳ್ಳುತ್ತಿದ್ದೇನೆ. Special Recruitment is the only remedy.

ಅದನ್ನು ನೀವು ಮಾಡಲಿಲ್ಲ ಎಂದರೆ ಇವರಿಗೆ ನೀವು ಅನ್ಯಾಯ ಮಾಡಿದಂತಾಗುತ್ತದೆ. ಸಾಮಾಜಿಕ ನ್ಯಾಯದಿಂದ ವಂಚಿತರಾಗುತ್ತಾರೆ. ಬಹುಶಃ ಈ ಪಾಪಕ್ಕೆ ಸರ್ಕಾರ ಗುರಿಯಾಗಬೇಕಾಗುತ್ತದೆಂಬ ವಿಚಾರವನ್ನು ನಾನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ. ಸ್ಪೆಷಲ್ ರಿಕ್ರೂಟ್ಮೆಂಟ್ ಮಾಡಬೇಕಾಗುತ್ತದೆ, ಇಷ್ಟು ದೊಡ್ಡ ಸಂಖ್ಯೆಯ 50 ಸಾವಿರ ಜನಕ್ಕೆ ಯಾವಾಗ ಖಾಯಂ ಮಾಡಿದರೋ ಅದಕ್ಕೆ ರಿಸರ್ವೇಷನ್ ಬೇಕಲ್ಲ, ಬ್ಯಾಕ್‌ಲಾಗ್ 17,500 ರಾಜ್ಯಪಾಲರು ಹೋದ ಸಲ ಭಾಷಣ ಮಾಡಿ ಬಿಟ್ಟಿದ್ದಾರೆ. ಮತ್ತು ಟೀಚರ್ಸ್‌ದು ಕನ್‌ಸಿಡರ್ ಮಾಡಬೇಕಾದರೆ ಅದರಲ್ಲೂ ರಿಸರ್ವೇಷನ್ ಬೇಕು ಇದೆಲ್ಲಾ ಸೇರಿ ಸುಮಾರು 46,300 ವೇಕನ್ಸೀಸ್ ಇದೆ. ಅಷ್ಟು ಜನರಿದ್ದಾರೆ. ಏಕೆ ನೀವು ಕಾರ್ಯಕ್ರಮ ಹಾಕಿಕೊಳ್ಳುವುದಿಲ್ಲ? ಸ್ಪೆಷಲ್ ರಿಕ್ರೂಟ್ಮೆಂಟ್ ಮಾಡಿದರೆ ನಿಮ್ಮ ಸರ್ಕಾರಕ್ಕೆ ಒಳ್ಳೆಯ ಹೆಸರು ಬರುತ್ತದೆ ಮತ್ತು ಹರಿಜನ ಗಿರಿಜನರ ಪ್ರಗತಿಗೆ ನೀವು ತಳಪಾಯ ಹಾಕಿದಂತಾಗುತ್ತದೆ. ದಯವಿಟ್ಟು ನೀವು ಇದರ ಕಡೆ ಗಮನಕೊಟ್ಟು ಶೀಘ್ರವಾಗಿ ಆರ್ಡರ್ ಮಾಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಬಹಳ ಮುಖ್ಯವಾದದ್ದು ಬೆಂಗಳೂರು ನಗರ. ಇದರ ವಿಚಾರದಲ್ಲಿ ಇದು ಗಾರ್ಡನ್ ಸಿಟಿ ಎಂದು ಹೆಸರಾಗಿದ್ದುದು ಇವತ್ತು ಗಾರ್ಬೇಜ್‌ಸಿಟಿ ಎಂದು ಹೆಸರಾಗಿದೆ. ಮೊನ್ನೆ ಒಬ್ಬರು ಸೆಂಟ್ರಲ್ ಗವರ್ನ್‌ಮೆಂಟ್ ಮಿನಿಸ್ಟರ್ ಹೇಳುತ್ತಿದ್ದರು. ಇದು ಸ್ಲಂ ಸಿಟಿ; ಇನ್ನು ಕೆಲವರು ಹೇಳುತ್ತಾರೆ ಇದು ಡಸ್ಟ್‌ಬಿನ್‌ಸಿಟಿ ಇದಕ್ಕೆ ಕಾರಣವೇನು?

ಕಾರಣ ಇನ್ನೇನೂ ಇಲ್ಲ. ಈ ಸಿಟಿಯನ್ನು ಚೊಕ್ಕಟವಾಗಿಡುವುದಕ್ಕೆ ಎಷ್ಟು ಜನ ಸ್ವೀಪರ್ಸ್ ಸ್ಕಾವೆಂಜರ್ಸ್ ಬೇಕೋ ಅವರು ಅಷ್ಟು ಸಂಖ್ಯೆಯಲ್ಲಿಲ್ಲ. 15 ವರ್ಷದ ಹಿಂದೆ ಅವರನ್ನು ನೇಮಕ ಮಾಡಿದ್ದುದು 1200 ಜನರನ್ನು, 15 ವರ್ಷದ ಈಚೆಗೆ ಸಿಟಿ ಎಷ್ಟು ಬಡಾವಣೆಯಾಗಿದೆ, ಎಷ್ಟು ಎಕ್ಸ್‌ಟೆನ್‌ಷನ್‌ಗಳಾಗಿದೆ, ಎಷ್ಟು ಮೋರಿ ಚರಂಡಿಗಳನ್ನು ಕಟ್ಟಿದ್ದಾರೆ. ಇವನ್ನು ಯಾರು ಕ್ಲೀನ್ ಮಾಡುವವರು? ಇದನ್ನು ಸಂಬಂಧಪಟ್ಟ ಮಂತ್ರಿಗಳು ಗಂಭೀರವಾಗಿ ಆಲೋಚಿಸುತ್ತೀರೆಂದು ನಾನು ಭಾವನೆ ಮಾಡಿಕೊಳ್ಳುತ್ತೇನೆ. 5 ವರ್ಷಗಳ ಹಿಂದೆ 1200 ಪೌರಕಾರ್ಮಿಕ ಹುದ್ದೆಗಳಿಗೆ ತಾವು ಅಡ್ವರ್ಟೈಸ್‌ಮೆಂಟ್ ಕೊಟ್ಟಿರಿ, ಅರ್ಜಿಗಳನ್ನು ರಿಸೀವ್ ಮಾಡಿದಿರಿ 5 ವರ್ಷವಾದರೂ ಅವರಿಗೆ ಇಂಟರ್‌ವ್ಯೂ ಕೊಡಲಿಲ್ಲ, ಕೆಲಸ ಕೊಡಲಿಲ್ಲ. ಏತಕ್ಕೆ? ಮಧ್ಯಸ್ತಿಕರ ಒಂದು ಕೈವಾಡ? ಏನು ಆ ಕೈವಾಡ? ಸ್ವಾಮಿ, ನಿಮಗೆ ಆಶ್ಚರ್ಯವಾಗುತ್ತದೆ, ಒಂದೊಂದು ಡಿವಿಜನ್‌ನಲ್ಲಿರುವ ಮಂತ್ರಾಲಯಗಳನ್ನು ಕ್ಲೀನ್ ಮಾಡುವುದಕ್ಕೆ ಎಲ್ಲಾದರೂ ಕಾಂಟ್ರಾಕ್ಟ್ ಕೊಡುತ್ತಾರೋ? ಯಾವ ದೇಶದಲ್ಲಿದೆ ಈ ಸಿಸ್ಟಂ? ಮದ್ರಾಸ್‌ನಲ್ಲಿದೆಯೋ? ಹೈದರಾಬಾದ್‌ನಲ್ಲಿದೆಯೋ? ನಾನೊಂದು ಫಿಗರ್ ಕೊಟ್ಟರೆ ನಿಮಗೆ ಆಶ್ಚರ್ಯವಾಗಬಹುದು, ಮಲ್ಲೇಶ್ವರಂನಲ್ಲಿರುವ ಬಾತ್‌ರೂಂ ಕ್ಲೀನ್ ಮಾಡುವುದಕ್ಕೆ ಒಂದು ತಿಂಗಳಿಗೆ 33,500 ರೂ, ರಾಜಾಜಿನಗರದಲ್ಲಿರುವುದನ್ನು ಕ್ಲೀನ್ ಮಾಡುವುದಕ್ಕೆ 27,500, ಗಾಂಧಿನಗರದ್ದು 1,72,599 ರೂ.

ಅಧ್ಯಕ್ಷರು : ವೈ ರಾಮಕೃಷ್ಣ ಅವರೇ, ಇದು ಕಾರ್ಪೊರೇಷನ್‌ಗೆ ಸಂಬಂಧಿಸಿದ್ದುದು.

ಶ್ರೀ ವೈ. ರಾಮಕೃಷ್ಣ : ಕಾರ್ಪೊರೇಷನ್‌ದೇ ನಾನು ಹೇಳುವುದು. Just to deny jobs to Scheduled Castes. ಲಕ್ಷಾಂತರ ರೂ. ಇದರಿಂದ ನಷ್ಟವಾಗುತ್ತಿದೆ ಎಂಬುದನ್ನು ಆಲೋಚನೆ ಮಾಡಿ. ಇಲ್ಲಿ ಲಕ್ಷಾಂತರ ರೂ. ಲೂಟಿಯಾಗುತ್ತಿದೆ. Similarly in cases of contracts, lorries. ಇದರ ಬಗ್ಗೆ ತಾವು ಗಮನಹರಿಸಬೇಕಾಗುತ್ತದೆ. ಈ ಮನೆಯ ಸದಸ್ಯರಾಗಿದ್ದರು ಒಬ್ಬರು ಐಪಿಡಿ ಸಾಲಪ್ಪ ಅವರು ಇವತ್ತು ಆಲ್ ಇಂಡಿಯಾ ಪೌರ ಕಾರ್ಮಿಕ ಕಮೀಷನ್ನಿನ ಉಪಾಧ್ಯಕ್ಷರಾಗಿದ್ದಾರೆ. ಅವರು ನನಗೆ ಹೇಳುತ್ತಿದ್ದರು. ನಮ್ಮ ಸರ್ಕಾರದಿಂದ ದುಡ್ಡು ಕೇಳಿಲ್ಲವಂತೆ; ಕೇಳಿದ್ದರೆ ಅವರು

ಕೊಡುತ್ತಾ ಇದ್ದರು. ಈಗ ನಮ್ಮ ಬಸವಣ್ಣಪ್ಪನವರು ಚೆನ್ನಾಗಿ ಹೇಳಿದರು. ಸಮತೋಲನ ಕಾಪಾಡಲಿಕ್ಕೆ ನಮ್ಮ ಸರ್ಕಾರದಿಂದ ಕೇಂದ್ರಸರ್ಕಾರಕ್ಕೆ ಹಣ ಕೇಳುತ್ತಾ ಇಲ್ಲ. ನಿಮ್ಮ ಜವಾಬ್ದಾರಿ. ಇವತ್ತು ಸ್ಲಂ, ಬೆಂಗಳೂರು ನಗರದಲ್ಲಿ ಎಷ್ಟು ಸ್ಲಮ್ಸಿಡ್, ಸಿಟಿಯಲ್ಲಿ 338 ಇದೆ. ರಾಜ್ಯದಲ್ಲಿ ಎಷ್ಟಿದೆ 1532 ಇವೆ, ಇದರ ಬಗ್ಗೆ ಕೇಂದ್ರಸರ್ಕಾರಕ್ಕೆ ನೀವು ಕೇಳಿದ ಹಣ ಎಷ್ಟು ಅಂದರೆ ಇಲ್ಲ ಎಂದು ಉತ್ತರ ಬರುತ್ತದೆ. ಹಣ ಇದೆ, ಹಣ ಇಟ್ಟಿದ್ದಾರೆ, ಇಲ್ಲ ಎಂದು ಅಲ್ಲಿ ಉತ್ತರ ಕೊಟ್ಟಿದ್ದಾರಿ. ಇಲ್ಲೇ ನನ್ನ ಹತ್ತಿರ ಇದೆ. ಏಕೆ ಕೇಳಲಿಲ್ಲ, ಏಕೆ ಹಣ ತೆಗೆದುಕೊಂಡಿಲ್ಲ?

ಅವರ ಯೋಗಕ್ಷೇಮಕ್ಕಾಗಿ ಇಟ್ಟಂತಹ ಹಣ 3ಕೋಟಿಯನ್ನು ಕಾರ್ಪೋರೇಷನ್‌ನವರು ಡಿಫಾಸಿಟ್‌ನಲ್ಲಿಟ್ಟಿದ್ದಾರೆ. ಬಡ್ಡಿ ತೆಗೆದುಕೊಳ್ಳುವುದಕ್ಕೆ ಡಿಫಾಸಿಟ್‌ನಲ್ಲಿಟ್ಟಿದ್ದಾರೆ, ಇದು ನ್ಯಾಯವ: ಎಂಬುದನ್ನು ದಯವಿಟ್ಟು ತಾವು ಆಲೋಚನೆ ಮಾಡಿ. ನಾನು ಇದನ್ನು ಏತಕ್ಕೆ ಹೇಳುತ್ತೇನೆ ಎಂದರೆ 12 ಡಿವಿಜನದ್ದು ಮಾಹಿತಿಯನ್ನು ನಾನು ಇಟ್ಟುಕೊಂಡಿದ್ದೇನೆ. ಅವರ ಕರೆ ಯಾರೂ ನಿಗಾ ಕೊಡುತ್ತಿಲ್ಲ. ಅವರು ಇವತ್ತು ಫೈನಾನ್ಷಿಯಲೀ ವೀಕಾಗಿದ್ದಾರೆ. ಸಮಾಜದಲ್ಲಿ ಅತ್ಯಂತ ಹಿಂದುಳಿದ ಜನಾಂಗವಾಗಿದ್ದಾರೆ. ಅದಕ್ಕಾಗಿ ಕನಿಷ್ಟ ನಮ್ಮ ಸಿಟಿಗೆ ಒಳ್ಳೆಯ ಹೆಸರು ತರಬೇಕಾದರೆ ಗಾರ್ಡನ್ ಸಿಟಿ ಆಗಬೇಕಾದರೆ 5 ಸಾವಿರ ಜನ ಸ್ವೀಪರ್ಸನ್ನು ನೀವು ಕೂಡಲೇ ಅಪಾಯಿಂಟ್ ಮಾಡಬೇಕು. ಈ ಕಂಟ್ರಾಕ್ಟನಿಸಂ ಅನ್ನು ಕಂಪ್ಲೀಟಾಗಿ ಕೈಬಿಟ್ಟುಬಿಡಿ ದಯವಿಟ್ಟು ಈ 18 ಪರ್ಸೆಂಟ್ ಗ್ರಾಂಟ್ ಎಂದು ಏನು ಹೇಳುತ್ತೀರಿ ಮತ್ತು ಐಪಿಡಿ ಸಾಲಪ್ಪನವರು ಕೊಡುವ ಗ್ರಾಂಟ್ ಮತ್ತು ಸ್ಟೇಟ್ ಗವರ್ನಮೆಂಟ್ ಗ್ರಾಂಟು ಇದನ್ನೆಲ್ಲಾ ಸೇರಿಸಿ ಒಂದು ಫಂಡ್ ಮಾಡಿ. ಆ ಫಂಡನ್ನು ಅವರ ಪುರೋಭಿವೃದ್ಧಿಗೆ ಉಪಯೋಗಿಸಿದರೆ ಈ ಸರ್ಕಾರಕ್ಕೆ ಒಳ್ಳೆಯ ಹೆಸರು ಬರುತ್ತದೆ ಎಂಬುದನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಸ್ವಾಮಿ, ಅತ್ಯಂತ ಮುಖ್ಯವಾದ ವಿಚಾರ. ಲಾ ಅಂಡ್ ಆರ್ಡರ್, ಎರಡನೆಯ ಪೇಜಿನಲ್ಲಿ ಮಾನ್ಯ ರಾಜ್ಯಪಾಲರು ಅಪ್ಪಣೆ ಕೊಡಿಸಿದ್ದಾರೆ. ರಾಜ್ಯದಲ್ಲಿ ಸುಖಶಾಂತಿ ಇದ್ದರೆ ಎಲ್ಲಾ ಯೋಜನೆ ಚೆನ್ನಾಗಿ ನಡೆಯುತ್ತವೆ. ಇಲ್ಲದೆ ಅಂಬೋದೇನಾದರೂ ಹೋಯಿತು ಎಂದರೆ ಎಲ್ಲವೂ ಕೂಡ ನಾಶವಾಗುತ್ತದೆಂದು ಹೇಳಿದ್ದಾರೆ. ಈ ಮಾತುಗಳಿಗಾಗಿ ಅವರನ್ನು ನಿಜವಾಗಿ ನಾನು ಅಭಿನಂದಿಸುತ್ತೇನೆ. ಆದರೆ ಆ ವಾತಾವರಣ ಇಲ್ಲಿದೆಯೇ ಎಂಬುದನ್ನು ಇವತ್ತು ನಾವು ಆಲೋಚನೆ ಮಾಡಬೇಕಾಗಿದೆ. ನನಗೆ ಕೇಳಿದರೆ ಅಂತಹ ವಾತಾವರಣ ಇನ್ನೂ ನಿರ್ಮಾಣವಾಗಿಲ್ಲ? ಏತಕ್ಕೆ ನಿರ್ಮಾಣವಾಗಿಲ್ಲ? ಮೊನ್ನೆ ಇಲ್ಲೊಂದು ಪ್ರಶ್ನೆ ಕೇಳಿದರು, ಅದಕ್ಕೆ ಮಾನ್ಯ ಗೃಹಮಂತ್ರಿಗಳು ಒಂದು ಉತ್ತರ ಕೊಟ್ಟರು, 10 ಜಿಲ್ಲೆಗಳಲ್ಲಿ ನಡೆದಿರುವ ಕೊಲೆ ದರೋಡೆ ಖೂನಿ ಎಷ್ಟು ಎಂದಿದ್ದಕ್ಕೆ ಅವರೊಂದು ಪಟ್ಟಿ ಕೊಡುತ್ತಾರೆ. It is an alarming list. ತಿಳಿದು ತಿಳಿದು ಏಕೆ ಸುಮ್ಮನಿದ್ದಾರೆ? I am not accusing the Government. ನಮ್ಮ ಅಧಿಕಾರಿಗಳಲ್ಲಿ ಎಫಿಷಿಯನ್ಸಿ ಇಲ್ಲವೇ? ಅವರು ಜವಾಬ್ದಾರಿ ಹೊರುವುದಕ್ಕೆ ಸಾಧ್ಯವಿಲ್ಲವೇ? ಅವರಿಗೆ ಅಕೌಂಟಬಿಲಿಟಿ ಇಲ್ಲವೇ? ಮಂತ್ರಿಗಳಾದ ನೀವು you are accountable to the House, including the Chief Minister you are accountable to this House. ಹಾಗಿರುವಾಗ ಅಧಿಕಾರಿಗಳು ಸರ್ಕಾರಕ್ಕೆ ಅಕೌಂಟೆಬಲ್ ಇರಬಾರದೇ? ಲಾಕಪ್ ಡೆತ್‌ಗಳಾಗುತ್ತವೆ. ಉದಾಹರಣೆ, ಏನಾಯಿತು, ಹೇಗಾಯಿತು, ಕೇಸ್ ನಡೆಯುತ್ತಲೇ ಇದೆ, ಸುಪ್ರೀಂಕೋರ್ಟಿನವರು ರೂಲಿಂಗ್ ಕೊಡುತ್ತಲೇ ಇದ್ದಾರೆ. ಆದರೂ ಸಹ ಅವರು ಕೇಳುತ್ತಲೇ ಇಲ್ಲ. ಅದು ನಡೆಯುತ್ತಲೇ ಇದೆ. ಇವನ್ನೆಲ್ಲಾ ತಪ್ಪಿಸಬೇಕಾದರೆ ಆಡಳಿತ ಕ್ರಮ ಅದರಲ್ಲೂ ಪೋಲೀಸ್ ಇಲಾಖೆಯನ್ನು ಹೆಚ್ಚಿನ ರೀತಿಯಲ್ಲಿ ತರಾಟೆಗೆ ತೆಗೆದುಕೊಳ್ಳಬೇಕು.

ಈ ಹೊಸ ಸರ್ಕಾರ ಜಾರಿಗೆ ಬಂದ ಮೇಲೆ ಬೆಂಗಳೂರು ಯೂನಿವರ್ಸಿಟಿಯಲ್ಲಿ 5 ಹುಡುಗರು ಗಲಾಟೆಯಲ್ಲಿ ಸತ್ತಿದ್ದಾರೆ. ಅವರ ಹೆಸರುಗಳೆಲ್ಲ ಇಲ್ಲಿ ಇದೆ, 5 ಜನ ವಿದ್ಯಾರ್ಥಿಗಳು, 21 ವಯಸ್ಸು, 20 ವಯಸ್ಸು 22 ವಯಸ್ಸಿನವರು ಮರ್ಡರ್ ಆಗಿದ್ದಾರೆ, ಏಕೆ? ಕಾರಣವೇನು? ಯಾವ ಊರಿನವರು ಎಲ್ಲಿಂದ ಬಂದರು? ಇವನ್ನೆಲ್ಲಾ ನಾವು ಆಲೋಚನೆ ಮಾಡಬೇಕಲ್ಲಾ? ಈಗ ನಮ್ಮ ಮಕ್ಕಳೇ ಹೋಗುತ್ತಿರುತ್ತಾರೆ. ಸರ ಹಾಕಿಕೊಂಡು ಹೋಗಿರುತ್ತಾರೆ. ಕಿತ್ತುಕೊಂಡು ಹೋಗುತ್ತಾರೆ. ಅದನ್ನೆಲ್ಲಾ ರೆಕಾರ್ಡ್ ಮಾಡಿಕೊಳ್ಳಬೇಕಲ್ಲಾ, ಅವರ ಮೇಲೆ ಆಕ್ಷನ್ ತೆಗೆದುಕೊಳ್ಳಬೇಕಲ್ಲಾ? ಮೊನ್ನೆ ದಿವಸ ಪತ್ರಿಕೆಯಲ್ಲಿ ಒಂದು ಸುದ್ದಿ ಬಂದಿದೆ ಸ್ವಾಮಿ.

ಒಂದು ಹೆಣ್ಣುಮಗಳು ಕೆ.ಜಿ. ರೋಡಿನಲ್ಲಿ ಹೋಗುತ್ತಿದ್ದರೆ ಡಕಾಯಿತಿಗಳ ಗುಂಪು ಆ ಅಮ್ಮನನ್ನು ಎಳೆಯುತ್ತಾರೆ. ಕಾರು ನಂಬರ್ ಕೊಟ್ಟಿದ್ದಾರೆ. ಅಲ್ಲೇ ಪೋಲೀಸಿನವರು ಇದ್ದಾರೆ. ಆ ಪೋಲೀಸ್‌ನವರೇ ಕಾರ್ ನಂಬರನ್ನು ಕೊಟ್ಟಿರುವುದು. ಕೇಸ್ ರಿಜಿಸ್ಟರ್ ಇದುವರೆಗೂ ಕೂಡ ಮಾಡಿಕೊಂಡಿಲ್ಲ, ಇದಕ್ಕೆ ಕಾರಣವೇನು? ಅವರು ಹೋಗಿ ಕಂಟ್ರೋಲ್ ರೂಂಗೆ ಫೋನ್ ಮಾಡಿದಾಗ ಅವರು ಹೇಳುತ್ತಾರೆ, ಇದು ಪೇಪರ್‌ನಲ್ಲಿ ಬಂದಿದೆ. ಇಂಥಹ ಪೆಟ್ಟಿ ಅಫೆನ್ಸ್‌ಗಳನ್ನೆಲ್ಲಾ ನಮ್ಮ ಗಮನಕ್ಕೆ ಏತಕ್ಕೆ ತರುತ್ತೀರಿ ಎಂದು, How could it be a petty offence ಅದಕ್ಕೋಸ್ಕರ ಇದನ್ನು ಕ್ಷಮಿಸುವುದಕ್ಕಾಗುವುದಿಲ್ಲ. ದಯವಿಟ್ಟು ಮಾನ್ಯ ಗೃಹಸಚಿವರು ಇದನ್ನು ಬಹಳ ಎಚ್ಚರಿಕೆಯಿಂದ ಡೀಲ್ ಮಾಡಿದರೆ ಉತ್ತಮ ಎಂದು ನಾನು ಭಾವಿಸಿಕೊಂಡಿದ್ದೇನೆ. ಸ್ವಾಮಿ, ಮತ್ತೊಂದು ವಿಚಾರ ಕಾಂಪೊನೆಂಟ್ ಪ್ಲಾನ್ ಈ ಸರ್ಕಾರಕ್ಕೆ ಅನ್ವಯಿಸುವುದಿಲ್ಲ. ಇದನ್ನು ಮೊದಲೇ ನಾನು ಹೇಳುತ್ತೇನೆ. ಇದನ್ನು ಹಿಂದಿನ ಸರ್ಕಾರಗಳು ನಮ್ಮ ಮೊಯಿಲಿ ಗೌರ್ನಮೆಂಟ್ ಮತ್ತು ಬಂಗಾರಪ್ಪನವರ ಗೌರ್ನಮೆಂಟ್ ಇದನ್ನು ಮ್ಯಾನೇಜ್ ಮಾಡಿರುವಂಥದ್ದು. 1989-90ರಲ್ಲಿ ನಾನು ಪ್ರಶ್ನೆ ಕೇಳಿ ಉತ್ತರ ತೆಗೆದುಕೊಂಡಿರುವವನು. ಅದರಲ್ಲಿ ಈ ಹಣ ಉಳಿಸಿರುವುದು 27ಕೋಟಿ 10 ಲಕ್ಷದ 20 ಸಾವಿರ ರೂಪಾಯಿ, 9091ನೇ ಸಾಲಿನಲ್ಲಿ 1 ಕೋಟಿ 62 ಲಕ್ಷದ ಹತ್ತು ಸಾವಿರ ರೂಪಾಯಿ, 91-92ನೇ ಸಾಲಿನಲ್ಲಿ 28 ಕೋಟಿ 37 ಲಕ್ಷ 54 ಸಾವಿರ ರೂಪಾಯಿಗಳು. 92-93ರಲ್ಲಿ 15 ಕೋಟಿ 58 ಲಕ್ಷದ 93 ಸಾವಿರ ರೂಪಾಯಿ, 93-94ನೇ ಸಾಲಿನಲ್ಲಿ 21 ಕೋಟಿ 75 ಲಕ್ಷದ 54 ಸಾವಿರ ರೂಪಾಯಿ, ಒಟ್ಟು ಎಷ್ಟಾಯಿತು ಎಂದರೆ 94 ಕೋಟಿ 38 ಲಕ್ಷದ 28 ಸಾವಿರ ರೂಪಾಯಿಗಳು ಖರ್ಚು ಮಾಡದೇ ಉಳಿಸಿರುವುದು. ಹಾಗೆಯೇ ನಮ್ಮ ಗಿರಿಜನ ಬಾಂಧವರು ಅದು ಇದ್ದಿದ್ದೂ ಚೆನ್ನಾಗಿದೆ. ಅದೆಷ್ಟು ಉಳಿಸಿದ್ದಾರೆ ಎಂದರೆ 21 ಕೋಟಿ 59 ಲಕ್ಷದ 38 ಸಾವಿರ ರೂಪಾಯಿಗಳು. ಇವೆರಡೂ ಸೇರಿದರೆ ಈ ವರ್ಷದ್ದು ಬಿಟ್ಟು 95-96 ಬಿಟ್ಟು ಎಷ್ಟಾಗುತ್ತದೆ ಎಂದರೆ 115 ಕೋಟಿ 97 ಲಕ್ಷದ ಅರವತ್ತುಮೂರು ಸಾವಿರ ರೂಪಾಯಿಗಳು. ಮಾನ್ಯ ಅಧ್ಯಕ್ಷರೇ, ಯಾವುದಾದರೂ ರಾಜ್ಯ ಈ ರೀತಿ ಹರಿಜನರನ್ನು ಚೀಟ್ ಮಾಡಿರುವುದನ್ನು ನೋಡಿದ್ದೀರಾ? ಯಾವುದಾದರೂ ರಾಜ್ಯದಲ್ಲಿ ಎಂದು ನಾನು ಕೇಳುತ್ತಿದ್ದೇನೆ. ನಮ್ಮ ಇಂಡಿಯಾ ದೇಶದಲ್ಲಿರುವ 28ರಾಜ್ಯಗಳ ಪೈಕಿ ಯಾವುದು ರಾಜ್ಯವಾದರೂ ಇಷ್ಟರಮಟ್ಟಿಗೆ ಹರಿಜನರನ್ನು ಚೀಟ್ ಮಾಡಿರುವುದು ತಾವು ನೋಡಿದ್ದೀರಾ? ಏನು ಕ್ರಮ ತೆಗೆದುಕೊಳ್ಳಬೇಕು ಎನ್ನುತ್ತೀರಿ? ನನಗನ್ನಿಸುತ್ತದೆ, Nothing short than 420. 420 has been played both on Scheduled Caste people as well as on Central Government.

ನಾವು ನೀವು ಕೊಡುವ ಗ್ರಾಂಟ್‌ಗೆ ಸಮಾನವಾಗಿ ನಾವು ಕೊಡುತ್ತೇವೆ ಎಂದು ಹೇಳಿ ಹಣ ತೆಗೆದುಕೊಂಡು ಬಂದು ಅವರು ಕೊಟ್ಟಿರುವುದನ್ನು ಮಾತ್ರ ಖರ್ಚುಮಾಡಿ ನಿಮ್ಮ ಸರ್ಕಾರದ ಹಣವನ್ನು ಏನೂ ಖರ್ಚು ಮಾಡದೆಯೇ ನೀವು ಹರಿಜನರ ಅಭಿವೃದ್ಧಿ ಮಾಡಿದ್ದೀರಿ ಎಂದು ಹೇಳುತ್ತಿದ್ದಾರೆ. ಕನ್ನಡದಲ್ಲಿ ಒಂದು ಗಾದೆ ಹೇಳುತ್ತಾರೆ,

"ಹಿಟ್ಟು ಕೊಡಲಿಲ್ಲ ಬಟ್ಟೆ ಕೊಡಲಿಲ್ಲ, ಹೆಂಡತಿಯನ್ನು ಗಿಣಿ ಸಾಕಿದ ಹಾಗೆ ಸಾಕುತ್ತೇನೆ". ಇದಕ್ಕಿಂತ ದೊಡ್ಡ ಮೋಸ ಇನ್ನೇನು ಇದೆ? ನಾನು ಮಾನ್ಯ ಖರ್ಗೆಯವರಿಗೆ ಕೇಳುತ್ತಿದ್ದೇನೆ. ಏಕೆಂದರೆ ಅವರ ಕಾಲದಲ್ಲಿ ಬಹಳ ಜಾಸ್ತಿ. 92-93ರಲ್ಲಿ, 15 ಕೋಟಿ 52 ಲಕ್ಷ ಉಳಿಸಿದ್ದೀರಿ.

ಶ್ರೀಮತಿ ಪ್ರಮೀಳಾ ನೇಸರ್ಗಿ : ಗಾದೆ ಹಾಗಲ್ಲ, ಗಂಡ ಹೆಂಡತಿಗೆ ಹೇಳುತ್ತಾನೆ, "ನಿನ್ನ ಗಿಣಿ ಸಾಕಿದ ಹಾಗೆ ಸಾಕುತ್ತೇನೆ, ಅನ್ನ ಬಟ್ಟೆ ಕೇಳಬೇಡ ಎಂದು."

ಶ್ರೀ ವೈ. ರಾಮಕೃಷ್ಣ : ಇದನ್ನು ಬಹಳ ಲಘುವಾಗಿ ತೆಗೆದುಕೊಳ್ಳುವುದು ಬೇಡ.

ಶ್ರೀ ಕೆ. ಎಸ್. ನಾಗೇಗೌಡ : ಮಾನ್ಯ ಪ್ರಮೀಳಾ ಅಮ್ಮನವರು ಗಿಣಿ ಸಾಕಿದ ಹಾಗೆ ಸಾಕುತ್ತೇನೆ; ಅನ್ನ, ಬಟ್ಟೆ, ಕೇಳಬೇಡ ಎಂದು ಗಂಡ ಹೇಳುತ್ತಾನೆ ಎಂದು ಹೇಳಿದರು. ನನಗೆ ತಿಳಿದ ಹಾಗೆ ಗಂಡ ಹೆಂಡತಿಗೆ ಅನ್ನ, ಬಟ್ಟೆಗಿಂತ ಪ್ರೀತಿ ಬಹಳ ಮುಖ್ಯ. ಆ ಪ್ರೀತಿ ಇದ್ದರೆ ಅನ್ನ, ಬಟ್ಟೆ ಎಲ್ಲಾ ಸಿಗುತ್ತದೆ. ನಾವು ಪ್ರೀತಿ ಕೊಟ್ಟಿದ್ದೇವೆ.

ಶ್ರೀಮತಿ ಪ್ರಮೀಳಾ ನೇಸರ್ಗಿ : ಯಾರಿಗೆ ಬೇಕು ಸ್ವಾಮಿ ಆ ಪ್ರೀತಿ? ರಾಜ್ಯಪಾಲರ ಭಾಷಣಕ್ಕೆ ನಮಗೆ ಅಧ್ಯಕ್ಷರು ಅವಕಾಶ ಕೊಟ್ಟರೆ ಹೇಳುತ್ತೇನೆ. ನಿಮ್ಮ ಪ್ರೀತಿ, ಪ್ರೇಮ ಎಷ್ಟು ಇದೆ ಎನ್ನುವುದನ್ನು ನಾನು ಹೇಳುವುದಕ್ಕೆ ತಯಾರಾಗಿದ್ದೇನೆ. ಆದರೆ ಅಧ್ಯಕ್ಷರು ಅವಕಾಶ ಕೊಟ್ಟಿಲ್ಲ ಬಜೆಟ್ ಸ್ಪೀಚ್ ಮೇಲೆ. ಇದಕ್ಕೆ ಏನಾದರೂ ಅವಕಾಶ ಕೊಟ್ಟರೆ ನಾನು ಹೇಳುವುದಕ್ಕೆ ತಯಾರಾಗಿದ್ದೇನೆ.

ಶ್ರೀ ಎಂ.ಪಿ. ಪ್ರಕಾಶ : ಮಾನ್ಯ ಅಧ್ಯಕ್ಷರೇ, ಬೇಂದ್ರೆಯವರ ಒಂದು ಕವನ ಇದೆ. "ನಾನು ಬಡವ, ನೀನು ಬಡವಿ ಒಲವೇ ನಮ್ಮ ಬದುಕು" ಎಂದು.

ಶ್ರೀಮತಿ ಪ್ರಮೀಳಾ ನೇಸರ್ಗಿ : "ನಾನು ಬಡವ, ಒಲವೇ ನಮ್ಮ ಜೀವನ" ಅದು ಕವನ.

ಶ್ರೀ ವೈ. ರಾಮಕೃಷ್ಣ : ಈ ಕವನಗಳಾಯಿತು ಸ್ವಾಮಿ. ಈಗ ಏನು ಮಾಡಬೇಕು ಎನ್ನುವುದನ್ನು ತಾವು ತೀರ್ಮಾನ ಮಾಡಬೇಕು.

ಅಧ್ಯಕ್ಷರು : ಶುರುಮಾಡಿ.

ಶ್ರೀ ವೈ. ರಾಮಕೃಷ್ಣ : ನಾನು ಏತಕ್ಕೆ ಹೇಳುತ್ತೇನೆ ಎಂದರೆ ಈ ವಿಷಯವೇನಾದರೂ ಸೆಂಟ್ರಲ್ ಗೌರ್ನಮೆಂಟ್‌ಗೆ ತಿಳಿದರೆ ನಮಗೆ ಮುಂದೆ ಅವರು ಗ್ರಾಂಟ್ ಕೊಡುತ್ತಾರೋ? ತಾವು ಅದನ್ನು ಆಲೋಚನೆ ಮಾಡಿ. ಅವರು ಗ್ರಾಂಟನ್ನು ಕೊಡಬೇಕಾದರೆ ಏನು ಷರತ್ತನ್ನು ಹಾಕುತ್ತಾರೆ, ಇದರಿಂದ ಬಡವರು ಉದ್ಧಾರ ವಾಗುತ್ತಾರೆಯೇ? ಈ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ಪುರೋಭಿವೃದ್ಧಿ ಯಾಗುತ್ತದೆಯೇ? ಆದ್ದರಿಂದ ಈ ಸರ್ಕಾರಕ್ಕೆ ನಾನು ಎಚ್ಚರಿಕೆ ಕೊಡುತ್ತಿದ್ದೇನೆ, ಹಣ ಬಂದಿದೆ, ಅದನ್ನು ಖರ್ಚು ಮಾಡುವುದಕ್ಕೆ ಐಡೆಂಟಿಫಿಕೇಷನ್ ಮಾಡಿ ಬಡವರು ಯಾರು ಏನು? ಅವರಿಗೆ ಏನು ಒದಗಿಸಬೇಕು, ಇದರ ಕಡೆ ಗಮನ ಹರಿಸುವುದಕ್ಕೆ ಈಗಿನಿಂದಲೇ ಪ್ರಾರಂಭ ಮಾಡಬೇಕು. ಇಷ್ಟೊಂದು ಹಣ ಉಳಿಯುವುದಕ್ಕೆ ಏನು ಕಾರಣ ಗೊತ್ತೇ ಸ್ವಾಮಿ? ಐಡೆಂಟಿಫಿಕೇಷನ್ ಮಾಡದೇ ಇರುವಂಥದ್ದು. ಈಗ ಒಂದು ಜಿಲ್ಲೆಯಲ್ಲಿ ನೂರು ಜನ ಬಡವರನ್ನು ಐಡೆಂಟಿಫೈ ಮಾಡಬೇಕು ಎಂದು ಬರುತ್ತದೆ. ನೀವು ಹೇಳಿ 200 ಜನರನ್ನು ಐಡೆಂಟಿ ಫೈ ಮಾಡಿದೆವು ಎಂದು ಹೇಳಿ. ಇನ್ನು ನೂರು ಜನರನ್ನು ವೇಟಿಂಗ್ ಲಿಸ್ಟ್‌ನಲ್ಲಿ ಇಟ್ಟುಕೊಳ್ಳಿ. ಸೆಂಟ್ರಲ್ ಗೌರ್ನಮೆಂಟ್‌ನಿಂದ ಹಣ ಬಂದಾಗ ಅವರಿಗೆ ಕೊಡಿ. ಉಳಿದವರಿಗೆ ನೀವು ಹೇಳಿ, ಮುಂದಿನ ವರ್ಷ

ಕೊಡುತ್ತೇವೆ ಎಂದು, ಸರ್ಕಾರದಿಂದ ಬಂದಾಗ ಕೊಡಿ. ಅದೇನು ಕಷ್ಟವೇ? ಇದನ್ನು ಐಎಎಸ್ ಅಧಿಕಾರಿಗಳಿಗೆ ಹೇಳಿಕೊಡಬೇಕೆ, ನಾವು. ಇದರ ಕಡೆ ಸಂಬಂಧಪಟ್ಟ ಮಂತ್ರಿಗಳು ಗಮನವನ್ನು ಹರಿಸಿದರೆ ಸಾಕು ಎಂದು ನನಗನ್ನಿಸುತ್ತದೆ. ಪೀರಿಯಾಡಿಕಲ್ ಮೀಟಿಂಗ್ ನಡೆಸುವುದಿಲ್ಲ, ಆ ಮೀಟಿಂಗ್‌ನಲ್ಲಿ ಈ ವಿಷಯವನ್ನು ತೆಗೆದುಕೊಳ್ಳುವುದಿಲ್ಲ, ಚರ್ಚೆ ಮಾಡುವುದಿಲ್ಲ. ಹಣ ಎಷ್ಟು ಉಳಿದಿದೆ ಎನ್ನುವುದನ್ನು ನೋಡುವುದಿಲ್ಲ. ಓಟು ಮಾತ್ರ ಬೇಕು ಎನ್ನುತ್ತಾರೆ. ಅವರಿಗೆ ಓಟು ಮಾತ್ರ ಬೇಕು, ಅವರಿಗೆ ಸೌಲಭ್ಯ ಮಾತ್ರ ಬೇಡ. ಅದಕ್ಕಾಗಿಯೇ ಸನ್ಮಾನ್ಯ ಖರ್ಗೆಯವರ ಪಾರ್ಟಿ ಇವತ್ತು ಕಂಪ್ಲೀಟ್‌ಆಗಿ ಮುಳುಗಿಹೋಗಿರುವುದು ಅದಕ್ಕೋಸ್ಕರ. ಇಬ್ಬರೇ ಇಬ್ಬರು ಗೆದ್ದಿದ್ದಾರೆ. ಇದರಿಂದಲೇ ನೀವು ಸೋತಿರುವುದು. ಇನ್ನಾವುದರಿಂದಲೂ ಅಲ್ಲ. ಹಿಂದೆ ಬಂಗಾರಪ್ಪನವರ ಕಾಲದಲ್ಲೂ ಇದೇ ಆಯಿತು. ಖರ್ಗೆಯವರ ಹೆಸರನ್ನು ಏತಕ್ಕೆ ಹೇಳುತ್ತೇನೆ ಎಂದರೆ ಖರ್ಗೆಯವರು ಮುಖ್ಯಮಂತ್ರಿಗಳಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನನಗೆ ಹೇಳಿದರೆ ಅವರಿಗೆ ನಾನು ಹೇಳಬೇಕಾಗುತ್ತದೆ, 83ರಲ್ಲಿ ಮುಳುಗಿಗೋಗಿದ್ದಾಗ ನೀವು ಇದ್ದೀರಿ ಎಂದು.

ಶ್ರೀ ವೈ. ರಾಮಕೃಷ್ಣ : 83ರಲ್ಲಿ ಅಲ್ಲ. ಅದು 80. ಕ್ಷಮಿಸಿ ದಯವಿಟ್ಟು. ಬೇರೆ ರಾಜ್ಯದಲ್ಲಿ ಹಣವನ್ನು ಖರ್ಚು ಮಾಡಿ ಎರಡು ಸಾರಿ ಇನ್‌ಸ್ಟಾಲ್‌ಮೆಂಟನ್ನು ತರಿಸಿಕೊಂಡಿದ್ದರೆ. ಮದ್ರಾಸ್ ತೆಗೆದುಕೊಳ್ಳಿ, ಎನ್.ಟಿ. ರಾಮರಾವ್ ಅವರನ್ನು ಕೇಳಿ. ಅವರಿಗೆ ಗೊತ್ತಿದೆ, ಯಾವ ರೀತಿ ಸೆಂಟ್ರಲ್ ಗೌರ್ನಮೆಂಟ್‌ನಿಂದ ಹಣವನ್ನು ತೆಗೆದುಕೊಳ್ಳಬೇಕು ಎಂದು. ನಿಮಗೆ ಹಣ ತೆಗೆದುಕೊಳ್ಳುವ ಶಕ್ತಿ ಇಲ್ಲ.

ಅಧ್ಯಕ್ಷರು : ಸನ್ಮಾನ್ಯ ಸದಸ್ಯರಾದ ವೈ. ರಾಮಕೃಷ್ಣರವರೇ, ಖರ್ಗೆಯವರು ಏನು ಹೇಳಿದ್ದು ಎಂದರೆ 80 ರಿಂದ 83 ರವರೆಗೆ ನಾವೆಲ್ಲಾ ಇದ್ದೆವು. ಆಗಲೂ ಮುಳುಗಿ ಹೋಗಿತ್ತಲ್ಲ ಎಂದು.

ಶ್ರೀ ವೈ. ರಾಮಕೃಷ್ಣ : ನಾವು ಆ ರೀತಿ ಮಾಡಿಲ್ಲ ಎಂದು ಹೇಳುತ್ತಿದ್ದೇನೆ. ಆ ರೀತಿ ಲ್ಯಾಪ್ಸ್ ಮಾಡಿಲ್ಲ ಎಂದು ಧೈರ್ಯವಾಗಿ ಹೇಳುತ್ತೇನೆ. ಬೇಕಾದರೆ ತೆಗೆದು ನೋಡಲಿ.

ಅಧ್ಯಕ್ಷರು : ಆದರೂ ಮುಳುಗಿತ್ತಲ್ಲಾ ಆಗ.

ಶ್ರೀ ವೈ. ರಾಮಕೃಷ್ಣ : ಇರಬಹುದು. ಅವರ ಪಕ್ಷಕ್ಕೆ, ಇವತ್ತು ಅವರರು ಲೀಡರ್ ಆಗಿದ್ದರಲ್ಲಾ ಸ್ವಾಮಿ. ನೀವು ಹರಿಜನರಾಗಿದ್ದುಕೊಂಡು, ನೀವೇ ಆ ಪಕ್ಷದ ಮುಖಂಡರಾಗಿದ್ದುಕೊಂಡು ಯಾವ ರೀತಿ ಹರಿಜನರಿಗೆ ನೀವು ಕೆಲಸವನ್ನು ಮಾಡಿದ್ದೀರಿ? ಅದಕ್ಕೋಸ್ಕರ ನಿಮ್ಮ ಪಾರ್ಟಿ ಅಧಿಕಾರಕ್ಕೆ ಬರುವುದಕ್ಕೆ ಸಾಧ್ಯವಿಲ್ಲ.

ಶ್ರೀ ಎಂ ಮಲ್ಲಿಕಾರ್ಜಾನ ಖರ್ಗೆ : ನಾನು ಹರಿಜನ-ಗಿರಿಜನ ಅಲ್ಲ, ನಾನೊಬ್ಬ ಕಾಂಗ್ರೆಸ್ ಪಕ್ಷದ ಮುಖಂಡ, ಕಾಂಗ್ರೆಸ್ ಪಾರ್ಟಿಯಲ್ಲಿ ಒಲ್ಲ ವರ್ಕರ್ ಜಾತಿ ಮೇಲೆ ಹೆಸರ ಮೇಲೆ ಪಟ್ಟ ಕಟ್ಟತಕ್ಕಂಥದ್ದಲ್ಲ. ಹಣಕೇಳಿದರೆ ಕೊಡುತ್ತಾರೆ, ಇಲ್ಲದಿದ್ದರೆ ಇಲ್. ಆದರೆ ಒಂದು ಮಾತನ್ನು ತಾವು ನೆನಪಿನಲ್ಲಿಟ್ಟುಕೊಳ್ಳಬೇಕು. ಎಸ್‌ಸಿಪಿಯಲ್ಲಿ ಇವತ್ತೇ ಲ್ಯಾಪ್ಸ್ ಆರಿ ಬಂದಿಲ್ಲ. ಬಂಗಾರಪ್ಪನವರ ಕಾಲದಲ್ಲಾಗಲಿ, ವೀರಪ್ಪಮೊಯಿಲಿ ಅಥವಾ ಕಾಂಗ್ರೆಸ್ ಪಾರ್ಟಿ, ನೀವು ಯಾವಾಗಲಾದರೂ ತೆಗೆದುಕೊಂಡು ಬನ್ನಿ. ಅಥವಾ ಹತ್ತು ವರ್ಷದ ಅಂಕಿಸಂಖ್ಯೆಗಳನ್ನು ತೆಗೆದುಕೊಂಡು ಬಂದರೆ ಯಾವಾಗಲೂ ಇದು ಲ್ಯಾಪ್ಸ್ ಆಗುತ್ತಾ ಬಂದಿದಮ. ಅದಕ್ಕಾಗಿ ಯಾವಾಗಲೂ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಒಂದು ಹೈಪವರ್ ಕಮಿಟಿಯನ್ನು ಕಾನ್ಸ್‌ಟಿಟ್ಯೂಟ್ ಮಾಡಿ ಈ ಹಣವನ್ನು ಚೆನ್ನಾಗಿ ಖರ್ಚು ಮಾಡಲೇಕು ಎಂದು ಹೇಳಿ ಆಗ ಪದೇಪದೇ

ಮೀಟಿಂಗ್‌ನ್ನು ಕರೆಯುತ್ತಿದ್ದರು. ಇತ್ತೀಚೆಗೆ ಏನಾಯಿತು ಎಂದರೆ ಆ ಹೈಪವರ್ ಕಮಿಟಿಯೇ ಕೊಡತಕ್ಕಂಥದ್ದು ಆಗಲೇ ಇಲ್ಲ. ಅದು ಗುಂಡೂರಾಯರ ಕಾಲ ಇರಬಹುದು, ಹೆಗಡೆಯವರ ಕಾಲ ಇರಬಹುದು, ಮಾನ್ಯ ಬೊಮ್ಮಾಯಿಯವರು ಇರಬಹುದು, ತದನಂತರ ವೀರಪ್ಪಮೊಯಿಲಿಯವರು ಇರಬಹುದು, ಈ ಷೆಡ್ಯೂಲ್ ಕಾಸ್ಟ್‌ಗಳ ಸಮಸ್ಯೆ ಎಲ್ಲಾ ಕಾಲದಲ್ಲೂ ಅದೇ ರೀತಿಯಾಗಿ ಬರುತ್ತಿದೆ. ನಾನು ಇದನ್ನು ಒಪ್ಪಿಕೊಳ್ಳುತ್ತೇನೆ. ನನ್ನ ಕಾಲದಲ್ಲಿ ಆದರೂ ಆಗಿರಬಹುದು. ಆದರೆ ನನ್ನ ಇಲಾಖೆಯಲ್ಲಂತೂ ಎಂದೂ ಕೂಡ ಲ್ಯಾಪ್ಸ್ ಮಾಡಿಲ್ಲ, ಮತ್ತೆ ನಾನು ಸ್ಪಷ್ಟವಾಗಿ ಹೇಳುತ್ತೇನೆ, ತಮಗೆ ಗೊತ್ತಿದೆ, ನನ್ನು ಕಾಲದಲ್ಲಿ ಸ್ಪೆಷಲ್‌ರೆಕ್ರೂಟಮೆಂಟ್ ಆದಷ್ಟು ಮತ್ತೆ ಸ್ಪೆಷಲ್ ರೂಲ್ಸ್ ಮಾಡಿದಷ್ಟು ನನಗನಿಸಿದ ಮಟ್ಟಿಗೆ ಯಾರ ಕಾಲದಲ್ಲೂ ಕೂಡ ಮಾಡಿಲ್ಲ.

ಶ್ರೀ. ಡಿ.ಕೆ. ಶಿವಕುಮಾರ್ : ಮಾನ್ಯ ಅಧ್ಯಕ್ಷರೇ, ನಮ್ಮ ಹಿರಿಯ ನಾಯಕರು ವೈ. ರಾಮಕೃಷ್ಣರವರು ಈ ಸೋಷಿಯಲ್ ವೆಲ್‌ಫೇರ್ ಇದರಲ್ಲಿ ಸರಿಯಾಗಿ ಹಣ ಖರ್ಚು ಮಾಡಿಲ್ಲ, ಅದಕ್ಕೆ ಜನರು ನಿಮಗೆ ವೋಟು ಕೊಡಲಿಲ್ಲ ಎಂದು ಹೇಳಿದರು. ಈ ಕಡೆಗೆ ಜನರು ತೀರ್ಮಾನ ಮಾಡಿ ಕಳುಹಿಸಿಬಿಟ್ಟಿದ್ದಾರೆ. ಇದಕ್ಕಿಂತ ಏನು ಶಿಕ್ಷೆ ಕೊಡಬೇಕು ಎಂದು. ಇನ್ನಾವುದಾದರೂ ಬೇರೆ ಶಿಕ್ಷೆ ಇದ್ದರೆ ಹೇಳಿ. ನಮ್ಮನ್ನು ಇತ್ತ ಕಡೆ ಕಳುಹಿಸಿಬಿಟ್ಟಿದ್ದಾರೆ. ಹೊಸ ಶಿಕ್ಷೆ ಕೊಡಿ ಎಂದು ಹೇಳುತ್ತೀರಲ್ಲಾ. ಆಗಿಹೋಗಿದೆಯಲ್ಲಾ. ಹೊಸದು ಏನಾದರೂ ಬದಲಾವಣೆ ಮಾಡಿ. ಅವರು ಸರಿಯಾಗಿ ಮಾಡದಿದ್ದರೆ ಅವರಿಗೆ ಏನಾದರೂ ಶಿಕ್ಷೆ ಕೊಡುವುದಕ್ಕೆ ನೀವು ಪ್ರಯತ್ನಪಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಮಗೇನು ಕಷ್ಟ ಎಂದರೆ ನಾವೇನಾದರೂ ಚೂರುಪಾರು ಮಾಡಿದ್ದೇವೆ. ಏನು ಮಾಡದೇ ಇರುವವರರಿಗೆ ಈ ದೇಶದಲ್ಲಿ ಬೆಂಬಲ ಸಿಕ್ಕಿತಲ್ಲಾ ಎಂಬುದು ನನ್ನ ಕಷ್ಟ.

ಶ್ರೀ ಸಿ.ಹೆಚ್. ವಿಜಯಶಂಕರ್ : ಮಾನ್ಯ ಅಧ್ಯಕ್ಷರೇ, ಈ ಹರಿಜನ ಗಿರಿಜನರಿಗೆ ಇರುವಂಥ ಯಾವುದೇ ಕಾರ್ಯಕ್ರಮವಿರಲಿ, ಆ ಕಾರ್ಯಕ್ರಮದ ಪೂರ್ಣ ಸದುಪಯೋಗವಾಗದೆ ಹಣ ವಾಪಸ್ ಆಗುವುದು, ಅದು ರಾಜ್ಯ ಸರ್ಕಾರದ್ದು ಇರಲಿ, ಕೇಂದ್ರ ಸರ್ಕಾರದ್ದು ಇರಲಿ, ಆ ರೀತಿ ವಾಪಸ್ ಆಗುವಂಥ ಸಂದರ್ಭಗಳು ಸೃಷ್ಟಿಯಾದರೆ ಅದಕ್ಕೆ ನೇರವಾಗಿ ಸಂಬಂಧಪಟ್ಟ ಅಧಿಕಾರಿಗಳನ್ನೇ ಹೊಣೆ ಮಾಡುವಂಥ ಒಂದು ಸುತ್ತೋಲೆಯನ್ನು ಸರ್ಕಾರ ಹೊರಡಿಸುವುದಕ್ಕೆ ಒಂದು ವ್ಯವಸ್ಥೆಯನ್ನು ಮಾಡಬೇಕೆಂದು ಈ ಸರ್ಕಾರದಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ವೈ. ರಾಮಕೃಷ್ಣ : ಮಾನ್ಯ ಖರ್ಗೆಯವರು ಒಂದು ಮಾತು ಹೇಳಿದರು, ಇದು ಹಿಂದಿನ ಕಾಲದಿಂದ ನಡೆದುಕೊಂಡು ಬಂದಿದೆ ಎಂದು. ವೀರೇಂದ್ರ ಪಾಟೀಲ್ ಕಾಲದಲ್ಲಿ 1990-91ರಲ್ಲಿ ಲ್ಯಾಪ್ಸ್ ಆಗಿರುವುದು ಒಂದು ಕೋಟಿ ರೂಪಾಯಿ. ಆಮೇಲೆ ಬಂದಂಥಹವರು...

(ಗೊಂದಲ)

ಶ್ರೀ ವೈ. ರಾಮಕೃಷ್ಣ : ಈ ಸ್ಟ್ಯಾಟಿಸ್ಟಿಕ್ಸ್ ಅನ್ನು ಸರ್ಕಾರದವರೆ ನನಗೆ ಕೊಟ್ಟಿದ್ದುದು.

ಶ್ರೀ ಕೆ.ಎನ್. ನಾಗೇಗೌಡ : ನೀವು ಹೇಳಿದ್ದುದು ಸರಿಯಾಗಿ ಇದೆ, ಮೊನ್ನೆ ಸದನದಲ್ಲಿ ಪ್ರಶ್ನೆ ಬಂತು. ಲ್ಯಾಪ್ಸ್ ಆಗಿದ್ದೇ ಮಾನ್ಯ ಖರ್ಗೆಯವರ ಕಾಲದಲ್ಲಿ. ಮಾನ್ಯ ಬಸವಲಿಂಗಪ್ಪನವರು ಇದ್ದರೆ ಲ್ಯಾಪ್ಸ್ ಆಗುತ್ತಿರಲಿಲ್ಲ. ಆದದ್ದೇ ಖರ್ಗೆಯವರ ಕಾಲದಲ್ಲಿ

ಶ್ರೀ ವೈ. ರಾಮಕೃಷ್ಣ : ನಾನು ಸರ್ಕಾರಕ್ಕೆ ಸಜೆಷನ್ ಕೊಡುತ್ತಾ ಇರುವುದು ಏನು ಎಂದರೆ, ಹಣದ ಕೊರತೆ ಇಲ್ಲ, ಮನಸ್ಸಿನ ಕೊರತೆ, ಹೃದಯದ ಕೊರತೆ. ಈ ಕೊರತೆ ಇಲ್ಲದಿದ್ದರೆ ನಿಜವಾಗಿಯೂ ಕೂಡ ಒಳ್ಳೆಯದಾಗುತ್ತದೆ. ಯೋಚನೆ ಮಾಡಿ, ಹೊಣೆಗಾರಿಕೆ ಮಾಡಿ, ದಯವಿಟ್ಟು ಮಾಡಿ. ಯಾರು ಆಫೀಸರ್ ಈ ರೀತಿ ಮಾಡುತ್ತಾರೆ, ಡೈರೆಕ್ಟರ್ ಇರಬಹುದು ಅಥವಾ ಸೆಕ್ರೆಟರಿ ಇರಬಹುದು, ಅಥವಾ ಅಸಿಸ್ಟಂಟ್‌ಡೈರೆಕ್ಟರ್ ಇರಬಹುದು, ಅಥವಾ ಜಿಲ್ಲಾಧಿಕಾರಿಗಳು ಇರಬಹುದ. ಅವರನ್ನು ಹೊಣೆಗಾರಿಕೆ ಮಾಡಿ. ಪನಿಷ್ ಮಾಡಿ, ಅವಾಗ ಈ ಸ್ಕೀಮ್ ಸಕ್ಸಸ್ ಆಗುತ್ತದೆ. ಕಡೆಯದಾಗಿ ಮತ್ತೊಂದು ವಿಚಾರವನ್ನು ಮಾನ್ಯ ಗೃಹ ಮಂತ್ರಿಗಳ ಗಮನಕ್ಕೆ ತರಲು ಇಷ್ಟಪಡುತ್ತೇನೆ. Atrocities on Scheduled Castes, ಇದು ಬಹಳ ಮುಖ್ಯವಾದುದು. ನಾನು ಅಟ್ರಾಸಿಟೀಸ್. ರಾಷ್ಟ್ರದ ಅನೇಕ ಭಾಗಗಳಲ್ಲಿ ನಾನು ನೋಡಿದ್ದೇನೆ. ಆದರೆ ಕರ್ನಾಟಕದಲ್ಲಿ ಆರತಕ್ಕಂಥ ದೌರ್ಜನ್ಯ ವಿಶೇಷ ತರಹದ್ದು. ಅದು ತಮಗೆ ಗೊತ್ತಿದೆ. ಹಿಂದೆ ತಮ್ಮ ಸರ್ಕಾರದಲ್ಲಿ ಏನು ಆಯಿತು ಸ್ವಾಮಿ. ತಾವು ಇಲ್ಲಿ ಇದ್ದಾಗ ಹೊಡೆಯಲಿ, ಏಟು ತಿನ್ನೋಣ, ಸಾಯಿಸಿ ಬಿಟ್ಟರೆ ಪ್ರಾಣ ಹೋಗುತ್ತದೆ. ಅವರಿಗೆ ಪರಿಹಾರ ಸಿಗಬಹುದು. ಆದರೆ ಮಲ ತಿನ್ನಿಸಿದರೆ ಏನು ಮಾಡಬೇಕು? ಬೆಂಡಿಗೇರಿಯಲ್ಲಿ ನಡೆದಿರತಕ್ಕದ್ದು ನವಲುಗುಂದದಲ್ಲಿ ಆಗಿರತಕ್ಕದ್ದು.ಅಂತಹ ವಿಶೇಷವಾದ ಅಟ್ರಾಸಿಟೀಸ್ ಕರ್ನಾಟಕದಲ್ಲಿ ನಡೆಯುತ್ತವೆ ಅದನ್ನು ಪ್ರಿವೆಂಟ್ ಮಾಡಲೇಕಾದರೆ ಬಹಳ ಜಾಗ್ರತೆ ವಹಿಸಲೇಕು. ಇಲ್ಲಿ ಅರಿಶಿನ ಕುಂಟೆಯ ವಿಚಾರ ನೋಡಿ. ಒಬ್ಬ ಹರಿಜನ ವ್ಯಕ್ತಿ ಗಣಪತಿ ಮಾಡಿದ್ದಕ್ಕೆ ಕೈ ಕತ್ತರಿಸಿದ್ದಾರೆ. ಗಣಪರಿ ಹಬ್ಬದ ದಿವಸ ಆತ ಗಣಪತಿ ಮಾಡಿದ್ದಕ್ಕೆ ಕೈ... ಕತ್ತರಿಸಿದ್ದನ್ನು ನೋಡಿದಿರಾ ಸ್ವಾಮಿ? Anywhere in India? ಅವನೊಬ್ಬ ಆರ್ಟಿಸ್ಟ್. Because he is Scheduled Caste, ನೀನು ಏಕೆ ಗಣಪತಿಯನ್ನು ಮಾಡಿದೆ? ಕೈ ಕತ್ತರಿಸುತ್ತೇನೆ ಎಂದು ಕೈ ಕತ್ತರಿಸಿದರು ಸ್ವಾಮಿ, ಇದು ಬೆಂಗಳೂರು ಸಿಟಿಯೊಳಗೆ ನಡೆದಿರತಕ್ಕ ಘಟನ, ಇವರದೇ ಸರ್ಕಾರ. ನಾನು ಅದಕ್ಕೆ ಇವರಿಗೆ ಎಚ್ಚರಿಕೆಯನ್ನು ಕೊಡುತ್ತಿದ್ದೇನೆ. ಇವರು ನಗುವಷ್ಟು ವಿಷಯ ಸುಲಭದಲ್ಲಿಲ್ಲ. ತುರುವೇಕೆರೆಯಲ್ಲಿ ಹರಿಜನಕೇರಿಗೆ ನಾಲ್ಕು ನೂರು ಜನ ನುಗ್ಗಿ ಅವರನ್ನು ನಾಶನ ಮಾಡಿದ್ದುದು ಅಲ್ಲ, ಹೊಡೆದಿದ್ದು ಅಲ್ಲ, ಅವರನ್ನು ಆಸ್ಪತ್ರೆಗೆ ಹಾಕಿದುದು ಅಲ್ಲ, ಅರರು ಬೆಳೆಸಿದಂತಹ 262 ತೆಂಗಿನ ಮರಗಳನ್ನು ನಾಶ ಮಾಡಿದ್ದಾರೆ. ಇದು ಏತಕ್ಕೆ ಬಂತು? ಮಾನ್ಯ ಗೃಹ ಮಂತ್ರಿಗಳು ಇಲ್ಲಿ ಕುಳಿತಿದ್ದಾರೆ, ನಾನು ಪಟ್ಟಿ ಕೇಳುತ್ತಿದ್ದೆನೆ, ಎಲ್ಲೆಲ್ಲಿ ದರೋಡೆ ನಡೆದಿದೆ, ಖೂನಿ ನಡೆದಿದೆ ಇದರ ಒಂದು ಪಟ್ಟಿ ಕೊಡಿ ಎಂದು ಕೇಳುತ್ತಿದ್ದೇನೆ. ನಾನು ಅವರ ಹತ್ತಿರ ಡಿಸ್ಕಸ್ ಮಾಡಿದ್ದೇನೆ. ಇದರಲ್ಲಿ ಒಂದು ವಿಚಾರ ನಾನು ಹೇಳುವುದಕ್ಕೆ ಇಷ್ಟಪಡುತ್ತಿದ್ದೇನೆ. ಈ ಲಿಸ್ಟನೊಳಗೆ ನಿಮಗೆಲ್ಲಾ ಗೊತ್ತಿರುವ ಹಾಗೆ ಸನ್ಮಾನ್ಯ ಜಾಲಪ್ಪನವರು ದೊಡ್ಡ ದೊಡ್ಡ ಸ್ಟೇಟ್‌ಮೆಂಟ್ ಕೊಟ್ಟಿದ್ದಾರೆ. ಯಾರು ಗುಲ್ಬಾರ್ ಖಾನ್ ವಿಲೇಜ್ ಪಂಚಾಯಿತಿ ಮೆಂಬರ್ ಗಂಡ, ಹೊಡೆದ, ಅದೇ ಬೇಡವೇ ನಮ್ಮ ಲಿಸ್ಟ್‌ಹೊಳಗೆ. ಆ ರಿಚಾರ ಬೇಡವೇ? ಮಾನ್ಯ ರೆವಿನ್ಯೂ ಮಂತ್ರಿಗಳು ಏನು ಸ್ಟೇಟ್‌ಮೆಂಟ್ ಇಲ್ಲದ ಮೇಲೆ ಇನ್ನು ಯಾವ ರೀತಿ ಕೆಲಸ ನಿರ್ವಹಿಸುವುದಕ್ಕೆ ಆಗುತ್ತದೆ? ಅಧಿಕಾರಿಗಳು ಯಾವ ರೀತಿ ನಮ್ಮ ಮಂತ್ರಿಗಳನ್ನು ತಪ್ಪು ದಾರಿಗೆ ಎಳೆಯುತ್ತಾರೆ?

ಶ್ರೀ ಆರ್.ಎಲ್. ಜಾಲಪ್ಪ : ನಾನು ಗುಲ್ಬಾರ್ ಖಾನ್ ಬಗ್ಗೆ ಏನೂ ಸ್ಟೇಟ್‌ಮೆಂಟ್ ಕೊಟ್ಟೇ ಇಲ್ಲ. ಅವರೇ ಅಂದಾಜು ಮಾಡಿಕೊಂಡು ಅದೂ ಇದೂ ಬರೆದುಕೊಂಡಿದ್ದಾರೆ. ಒಂದು ವಿಚಾರ ನಮಗೆ ಕೇಳುತ್ತೇನೆ, ಅಲ್ಲಿ ಒಂದು

ಕೋಆಪರೇಟೀವ್ ಫಾರ್ಮೇಷನ ಎಂದು ಸೈಟ್ ಕೊಟ್ಟರು. ಅಲ್ಲಿ ಗೋಲ್‌ಮಾಲ ಮಾಡಿ ಇವರ ಹೆಸರಿಗೆ ಪಹಣಿ ಬರೆದರು, ಇವರ ಹೆಸರಿಗೆ ಖಾತೆ ಬರೆದರು, ರೆಕಾರ್ಡ್ಸ್ ಸರಿಯಿಲ್ಲ ಆದರೂ ಸೃಷ್ಟಿ ಮಾಡಿ ಕೊಟ್ಟಿದ್ದಾರೆ. ನಮ್ಮ ಸ್ನೇಹಿತರಿಗೆ ಮಂಜೂರು ಮಾಡಿದ್ದು ಏನು? 74 ಎಕರೆ ಈಗಾಗಲೇ ಮಾಡಿಸಿರುವುದು, ಗುಲ್ಜಾರ್ ಖಾನ್‌ಗೆ. ಅವನು ಅಫಿಡವಿಟ್ ಫೈಲ್ ಮಾಡುತ್ತಾನೆ ಕೋರ್ಟ್ ಮುಂದೆ, ನಾನು 74 ಎಕರೆ ಕೊಂಡುಕೊಂಡಿದ್ದೇನೆ ಎಂದು. ಯಾರು ಕೊಟ್ಟಿದ್ದುದು? ನಾನೋ ನಮ್ಮ ಬಂಧುಗಳೋ? ಏಕೆ ಹೀಗೆ ಮಾರಿಕೊಳ್ಳುತ್ತಾರೆ? ಜಮೀನುಗಳನ್ನು. ನನಗೆ ಅದನ್ನು ನೋಡಿ ಹೊಟ್ಟೆ ಉರಿಯುತ್ತದೆ. I went to the spot, Mr. Speaker.

ನಾನು ಸ್ಪಾಟ್‌ನಲ್ಲಿ ಹೋಗಿ ನೋಡಿದ್ದೇನೆ, ನನಗೆ ಹೊಟ್ಟೆ ಉರಿಯುತ್ತಿದೆ, ಒಳ್ಳೆಯ ಫುಟ್‌ಬಾಲ್ ಮೈದಾನ ಇದ್ದ ಹಾಗೆ ಇದೆ. ಎಷ್ಟು ಪ್ರೇಶಿಯಸ್ ಲ್ಯಾಂಡ್ಸ್ ಅದು. Those things are sold for a song to Mr. Gulzar Khan.

ಆಮೇಲೆ ಗುಲ್ಜಾರ್ ಖಾನ್‌ಹತ್ತಿರ ಇವತ್ತು ರೌಡಿಗಳು ಅವರು ಇವರು ಎಂದು ಮಾಡಿಕೊಂಡಿದ್ದಾರಲ್ಲಾ, ಅವರೆಲ್ಲಾ ಯಾರು? ಎಲ್ಲಾ ನಮ್ಮ ಶೆಡ್ಯೂಲ್ ಕಾಸ್ಟ್ ಜನರೇ. ಅವರಿಗೆಲ್ಲಾ ಮೋಟಾರ್ ಸೈಕಲ್ ಕೊಡಿಸಿದ್ದಾರೆ, ಸ್ಕೂಟರ್‌ಕೊಡಿಸಿದ್ದಾರೆ. ಈಗ ಅದೆಲ್ಲಾ ನಾವು ಹೋದಾಗ ಹೇಳುತ್ತಾರೆ. ಅವರವರೇ ಬೇರೆಯವರ ಹೆಸರಿಗೆ ಹೊಸ ಜಮೀನು ಬರೆಸಿಕೊಳ್ಳುವ ಸ್ಥಿತಿ ಬಂದಿದೆ, ಹೀಗೆ "ದರ ಕೊಲ್ಲಲು ಪರ ಕಾಯುವನೇ" ಎಂಬಂತಹ ಸ್ಥಿತಿ ಆಗಿದೆ.

ಶ್ರೀ ವೈ. ರಾಮಕೃಷ್ಣ : ಸಮಾಜ ಆ ಮಟ್ಟದಲ್ಲಿದ್ದರೆ ನಾವೇನು ಮಾಡುವುದಕ್ಕೆ ಆಗುತ್ತದೆ? ಹರಿಜನರಿಗೆ ತಾವು ಜಮೀನು ಕೊಡುತ್ತೀರಿ. 15 ವರ್ಷ ಪರಭಾರೆ ಮಾಡಬಾರದು ಎಂದು ಇರುತ್ತದೆ. ಯಾರು ಸಬ್‌ರಿಜಿಸ್ಟಾರ್ ರಿಜಿಸ್ಟರ್ ಮಾಡಿದ್ದು, ನಮ್ಮ ಅಧಿಕಾರಿಗಳು ತಾನೇ? ಅವರನ್ನು ಏಕೆ ತಾವು ತರಾಟೆಗೆ ತೆಗೆದುಕೊಳ್ಳುವುದಿಲ್ಲ? ಜಾಗವನ್ನು ಕನ್‌ಫಿಸ್‌ಕೇಟ್ ಮಾಡಿಕೊಳ್ಳಿ. ನಾನು ಹೇಳುತ್ತಿದ್ದೇನೆ. ಮುಲಾಜು ನೋಡದೇ ಜಾಗವನ್ನು ಕನ್‌ಫಿಸ್‌ಕೇಟ್ ಮಾಡಿಕೊಳ್ಳಿ. ಈ ವಿಚಾರದಲ್ಲಿ ಒಂದು ದೊಡ್ಡ ತನಿಖೆ ನಡೆಯಬೇಕಾದ್ದು ಅತಿ ಅವಶ್ಯವಾಗಿದೆ. ಜಮೀನಿಗೆ ಜಮೀನು ಕಳೆದುಕೊಂಡರು, ಅವರ ನಾಯಕರನ್ನೂ ಕಳೆದುಕೊಂಡರು. ಇವತ್ತು 47 ಜನ ಯುವಕರು ಇಂದು ಜೈಲಿನಲ್ಲಿ ಕೊಳೆಯುವ ಹಾಗೆ ಆಯಿತು. ಯಾವ ಪುರುಷಾರ್ಥಕ್ಕೆ ಸ್ವಾಮಿ? ಏನು ತಪ್ಪು ಮಾಡಿದ್ದರು ಅವರು? ಎಷ್ಟು ವರ್ಷದಿಂದ ಈ ತರಹ ಎಲ್ಲೆಲ್ಲಿ ನೆಡೆದಿದೆ ಎಂದು ಪತ್ತೆ ಹಚ್ಚುವುದಕ್ಕೆ ಆಗುವುದಿಲ್ಲವೇ? ಎಷ್ಟು ಸಾವಿರಾರು ಎಕರೆಗಳನ್ನು ಈ ರೀತಿ ಬರೆಯಿಸಿಕೊಂಡು ಲಕ್ಷಾಂತರ ರೂಪಾಯಿಗಳ ಲೂಟಿ ಮಾಡಲಾಗಿದೆ. ಬರೆದುಕೊಡದಿದ್ದರೆ ಪ್ರಾಣ ತೆಗೆಯುತ್ತಾರೆ. ತಾವು ಏನು ತಿಳಿದುಕೊಂಡಿದ್ದೀರಿ ಆಶ್ರಯ ಕೊಡುತ್ತಾರೆ ಎಂದು. ಆಶ್ರಯ ಕೊಡುವುದು ಒಂದು ಕಡೆ, ಕೊಡದೇ ಇದ್ದರೆ ಅಂತಹ ಒತ್ತಡ, ಖೂನಿ ಮಾಡತಕ್ಕ ಒತ್ತಡ ತಂದು ಅವರ ಹತ್ತಿರ ಬರೆಯಿಸಿಕೊಳ್ಳುತ್ತಾರೆ. ತಮಗೆ ಅದರ ಅರಿವು ಇದೆ, ತಮಗೆ ಅಪಾರವಾದ ಅರಿವು ಆಗಿದೆ. ಇದನ್ನು ತಡೆಗಟ್ಟುವುದಕ್ಕೆ ಏನು ಮಾಡಬೇಕು ಎಂಬುದರ ಬಗ್ಗೆ ನಾವು ಚಿಂತನೆ ಮಾಡಬೇಕು. ಇದರ ಬಗ್ಗೆ ಸಿ.ಓ.ಡಿ. ರಿಪೋರ್ಟ್ ತರಿಸಬೇಡಿ ನಾನು ಹೇಳುತ್ತೇನೆ. ಇದನ್ನು ಸಿಬಿಐಗೆ ರೆಫರ್ ಮಾಡಿ. ಯಾರು ಇದಕ್ಕೆ ಕಾರಣಕರ್ತರು? ಎಷ್ಟು ಸಾವಿರ ಎಕರೆ ಹೊಡೆದಿದ್ದಾರೆ? ತಾವು ಹೇಳುಹುದು, ಒಂದು ಸಾವಿರ ಕೋಟಿ ರೂಪಾಯಿ ಎಂದು. ನಾನು ಹೇಳುತ್ತೇನೆ ಎರಡು ಸಾವಿರ ಕೋಟಿ ರೂಪಾಯಿ ಈ ಭೂಮಿ ಹಗರಣದಲ್ಲಿ ಹೊಡೆದಿದ್ದಾರೆ, ಏಕೆಂದರೆ ಅವರಿಗೆ 250 ಎಕರೆ ಭೂಮಿ ಕೊಡಿಸಿದ್ದುದು ನಾನೇ. ಕೋಆಪರೇಟೀವ್ ಸೆಕ್ಟಾರ್‌ನಲ್ಲಿ ಕೊಡಿಸಿದ್ದೇನೆ. ಅದಕ್ಕೋಸ್ಕರವಾಗಿ ಸಿಬಿಐಗೆ ಒಪ್ಪಿಸಿ. ಯಾವ್ಯಾವ ಅಧಿಕಾರಿಗಳು ಪೋಲೀಸ್ ಡಿಪಾರ್ಟಮೆಂಟ್‌ನಿಂದ, ರೆವಿನ್ಯೂ ಡಿಪಾರ್ಟ್‌ಮೆಂಟ್

ನಿಂದ, ಮತ್ತು ಯಾರ್ಯಾರು ಹಣವಂತರು ಇದರಲ್ಲಿ ಇನ್‌ವಾಲ್ವ್ ಆಗಿದ್ದಾರೆ ಎಂಬುದು ಗೊತ್ತಾಗುತ್ತದೆ.. ಈಗ ಹರಿಜನರು ಜಮೀನಿಗೆ ಜಮೀನೂ ಕಳೆದುಕೊಂಡರು. ಅವನು ಸತ್ತೂ ಹೋಗಿಬಿಟ್ಟ, ಅವರ ಜೊತೆಯಲ್ಲಿದ್ದವರೆಲ್ಲಾ ಜೈಲಿಗೆ ಹೋಗಿ ಬಿಟ್ಟರು.

ಅಧ್ಯಕ್ಷರು : ನಾನು ಒಂದು ಮಾತು ಹೇಳುತ್ತೇನೆ. You were a Minister and a very senior legislator. Why this extra faith in CBI? ಏಕೆ? ಅವರ ಸ್ಪೆಷಾಲಿಟಿ ಏನು?

ಶ್ರೀ ವೈ. ರಾಮಕೃಷ್ಣ : ಏಕೆ ಎಂದು ಹೇಳುತ್ತೇನೆ. ಈ ವಿಚಾರದಲ್ಲಿ ನಾನು ಕಾರಣ ಕೊಡುತ್ತೇನೆ. ಈ ವಿಚಾರದಲ್ಲಿ ಇನ್‌ವಾಲ್ವ್ ಆಗಿರುವವರು ಡಿಎಸ್‌ಪಿಗಳು, ಡಿವೈಎಸ್‌ಪಿಗಳು ಈ ಕೇಸಿನಲ್ಲಿ ಇನವಾಲ್ವ್ ಆಗಿರುವವರು, ಸೈಟ್‌ಗಳನ್ನು ತೆಗೆದುಕೊಂಡಿವುವವರು, ಮನೆ ಕಟ್ಟಿವುವವರು, ಗೋಡೌನ್ ಕಟ್ಟಿರುವವರು, ಎಲ್ಲಾ ಅವರೇ ಆಗಿರುವುದರಿಂದ ನಮ್ಮಲ್ಲಿ ನಂಬಿಕೆ ಹೊರಟು ಹೋಗುತ್ತದೆ.

ಅಧ್ಯಕ್ಷರು : ಒಂದು ಹೌಸ್ ಕಮಿಟಿ ಕೇಳಿ. ಸಿಬಿಐಗೆ ಏಕೆ ಕೇಳುತ್ತೀರಿ? ಏನು ಸಿಗುತ್ತದೆ ಸಿಬಿಐಗೆ?

ಶ್ರೀ ವೈ. ರಾಮಕೃಷ್ಣ : ಅದೂ ಆಗಬಹುದು. ಅಷ್ಟಾದರೂ ಮಾಡಿ. ಮುಂದೆ ಈ ತರಹ ಪ್ರಸಂಗಗಳು ಆಗದಂತೆ ನೋಡಿಕೊಳ್ಳಬೇಕೆಂದು ನಾನು ಕೇಳಿಕೊಳ್ಳುತ್ತಿದ್ದೇನೆ. ಲಿಸ್ಟ್ ಕಳುಹಿಸಿಕೊಡುತ್ತಿದ್ದೇನೆ. ಈ ಲಿಸ್ಟ್‌ನಲ್ಲಿ ಆರು ಜನರು ಸತ್ತಿದ್ದಾರೆ ಎಂದು ನಮ್ಮ ಮಾನ್ಯ ಸ್ನೇಹಿತರಾದ ಸಿಂಧ್ಯರವರು ಹೇಳಿದ್ದರೆ. 16 ಜನ ಇದ್ದಾರೆ. ನ್ನು ಧೈರ್ಯವಾಗಿ ಹೇಳುತ್ತೇನೆ, ಸರಿ ಇರುವ ಲಿಸ್ಟ್ ಕೊಡುತ್ತೇನೆ, ನನ್ನ ಪಾಕೆಟ್‌ನಲ್ಲಿದೆ, ಕೊಡುತ್ತೇನೆ. ಇದು ಹೇಗೆ ಆಯಿತು, ನಿಮ್ಮನ್ನು ಏಕೆ ಅಧಿಕಾರಿಗಳು ತಮ್ಮ ದಾರಿಗೆ ಎಳೆಯುತ್ತಾರೆ? ತಪ್ಪು ದಾರಿಗೆ ಏಕೆ ಎಳೆಯುತ್ತಾರೆ? ಈಗ ನಾನು ಒಂದು ವಿಚಾರ ಓದುತ್ತೇನೆ, ಸುಳ್ಳು ಆಗಿದ್ದರೆ ತಾವು ಹೇಳಬೇಕು. ಗುಲ್ಜಾರ್ ಖಾನ್ ವಿಚಾರ ಇದರಲ್ಲಿ ಹಾಕಿದ್ದೀರಾ? ನೀವು ಡಿಟೋ ಹಾಕಿ ಬಿಟ್ಟಿದ್ದೀರಿ. ಯಾರೂ ಸತ್ತಿಲ್ಲ ಎಂದು ಹೇಳಿಬಿಟ್ಟಿದ್ದೀರಿ, ಏಕೆ.. ಈ ತರದ ಇನ್‌ಫರ್ಮೇಷನ್ ಕೊಡಬೇಕು? ತರಾಟೆಗೆ ನಿಮ್ಮ ಅಧಿಕಾರಿಗಳನ್ನು ತೆಗೆದುಕೊಳ್ಳಿ. ಅದೇ ರೀತಿ ಹಾಸನ ಜಿಲ್ಲೆಯ ವಿಚಾರ. ಸನ್ಮಾನ್ಯ ದೇವೇಗೌಡರ ಕ್ಷೇತ್ರ. ಹಾಸನ ಜಿಲ್ಲೆ ಒಳಗೆ ಅನಜಾ ಎಂಬ ಗ್ರಾಮದಲ್ಲಿ ದಲಿತ ಯುವಕನ ಜೀವ ದಹನ. ನೀವು ಹಾಕಿದ್ದೀರಾ? ಯಾರೂ ಇಲ್ಲ ಎಂದು ಬರೆದಿದ್ದೀರಿ. 1.3.95ರಂದು ಪೇಪರ್ ಕಟಿಂಗ್ ಇದೆ ಕೊಡುತ್ತೇನೆ. ಅದೇ ರೀತಿ ಚನ್ನಪಟ್ಟಣ ತಾಲ್ಲೂಕು ಶೆಟ್ಟಿಹಳ್ಳಿಯಲ್ಲೇ ದಲಿತನ ಕೊಲೆ-3.2.95. ರಂಗನ ಕೊಪ್ಪಲು, ಬೇಲೂರು ಗ್ರಾಮ ಇಲ್ಲಿ ಬಸವರಾಜು ಎಂಬ ಹರಿಜನ ಯುವಕನ ಕೊಲೆ. ಮೇಲೆ ಸೀಮೆ ಎಣ್ಣೆ ಸುರಿದು ಕೆಳಗೆ ಬೆಂಕಿ ಇಟ್ಟರು. He passed away. Does it find a place in your statement? ನಾನು ನಿಮ್ಮನ್ನು ಹೊಣೆಗಾರರನ್ನಾಗಿ ಮಾಡುವುದಿಲ್ಲ. ಅವರು ಏನು ಮಾಹಿತಿ ಕೊಡುತ್ತಾರೆ ಅದನ್ನು ನೀವು ಓದುತ್ತೀರಿ. ಅರರೇನು ಅಂಕಿ ತರುತ್ತಾರೆ, ಅದನ್ನೇ ನೀವು ಓದುತ್ತೀರಿ. ಆದರೆ ನನ್ನ ಹತ್ತಿರ ರೆಕಾರ್ಡ್ಸ್ ಇಟ್ಟಿದ್ದೇನೆ. ಸತ್ತವರು ಎಷ್ಟು ಜನ ಎಂದರೆ ತಾವು ಕೇವಲ ಬರೇ ಆರು ಜನ ಕೊಟ್ಟಿರುವುದನ್ನು ನೋಡಿದ್ದೇನೆ. ಚಿಕ್ಕಣ್ಣ ಎಂಬ ದಲಿತನ ಕೊಲೆ ಗೋಣಿ ಚೀಲದಲ್ಲಿ ಕಟ್ಟಿ ಬಾವಿಗೆ ಬಿಸಾಡಿದರು. ಬಾದಾಮಿ ತಾಲ್ಲೂಕಿನಲ್ಲಿ ಬಂಡಿ ವಾದ್ಯಾರ್ ಎಂಬುವನ ಕೊಲೆ- 29.2.95 ರಂದು. 2.3.95 ಕೋಲಾರ ತಾಲ್ಲೂಕಿನ ಮಂದನಹಳ್ಳಿ ಗ್ರಾಮದಲ್ಲಿ 10 ವರ್ಷದ ಬಾಲಕಿ, ಆಕೆ

ಏನು ಮಾಡುತ್ತಾಳೆ? ಕಬ್ಬಿನ ತೋಟದಲ್ಲಿ ಕಾಲುವೆಯೊಳಗೆ ಹರಿದು ಹೋಗತಕ್ಕ ನೀರನ್ನು ಕುಡಿಯುವುದಕ್ಕೆ ಹೋದರೆ ಆ ಬಾತಕಿಯನ್ನು ತೆಗೆದುಕೊಂಡು ಹೋಗಿ ಬಾವಿಗೆ ಎತ್ತಿ ಹಾಕಿದರು. ಅದನ್ನೇ ನಾನು ಹೇಳುವುದು. ವಿಶೇಷವಾಗಿ ಈ ದೌರ್ಜನ್ಯಗಳು. ಇವುಗಳ ಕಡೆ ನೀವು ಗಮನ ಕೊಡದೇ ಇದ್ದರೆ ನಮ್ಮ ಸ್ಟೇಟಿಗೆ ಒಳ್ಳೆಯ ಹೇಸರು ಬರುವುದಿಲ್ಲ. ಪೋಲೀಸರು ಹೆಸರು ಕಳೆದುಕೊಂಡಿದ್ದಾರೆ. ನಿಮ್ಮ ಸರ್ಕಾರಕ್ಕೆ ಒಳ್ಳೆಯ ಹೆಸರು ಬರುವುದಿಲ್ಲ. ಬರಬೇಕಾದರೆ deal with them very strictly. ಈಗ ಚನ್ನಪಟ್ಟಣದಲ್ಲಿ ತಾವು ಹೇಳಿದ್ದೀರಿ, ಈ ಲಿಸ್ಟ್‌ನಲ್ಲಿ ಹಾಕಿಲ್ಲ. ರಾಮನಗರದ್ದು ಹಾಕಿಲ್ಲ. ರಾಮನಗರ ಮಾನ್ಯ ಮುಖ್ಯಮಂತ್ರಿಗಳ ಕ್ಷೇತ್ರ. ನನ್ನ ಹತ್ತಿರ ಛಾರ್ಜ್ ಶೀಟ್ ಅದೆ ಕೊಡಲೇ? 302, 303, 301 ಛಾರ್ಜ್ ಶೀಟ್‌ಗಳು ಇವೆ. ಇದರಲ್ಲಿ ಏನೂ ಇಲ್ಲ ಎಂದು ಹೇಳುತ್ತೀರಿ. ಈ ರೀತಿ ಮಿಸ್‌ಲೀಡಿಂಗ್ ಅದರೆ ಯಾವ ರೀತಿ ನಿಮ್ ಸರ್ಕಾರವನ್ನು ಜನ ನಂಬುತ್ತಾರೆ?.

6.20 ಪಿ.ಎಂ.

ಅಧ್ಯಕ್ಷರೇ, ಮತ್ತೊಂದು ವಿಚಾರವೇನೆಂದರೆ, ಎಷ್ಟು ಗುಡಿಸಲುಗಳಿಗೆ ಬೆಂಕಿ ಇಟ್ಟಿದ್ದಾರೆಂದು ನಾನು ಕೇಳಿದ್ದಕ್ಕೆ ನೀವು ಉತ್ತರಿಸಿಲಿಲ್ಲ, ಏಕೆ? ಗುಡಿಸಲು ಸುಟ್ಟು 14 ಜನರು ಸತ್ತರಲ್ಲಾ, ಅವರಿಗೆ ಪರಿಹಾರ ದನ ಕೊಡಬಾರದೇ? ನೀವು ಮಂತ್ರಿಗಳಾಗಿದ್ದೀರಿ. ಭಾರತ ಸರ್ಕಾರ ಇದಕ್ಕೆ ಹಣ ಕೊಡುತ್ತದೆಯಲ್ಲವೇ?ಆ ದುಡ್ಡನ್ನು ಡೆಬಿಟ್ ಮಾಡಬಹುದಲ್ಲಾ.

ಶ್ರೀ ಪಿ.ಜಿ. ಆರ್.ಸಿಂಧ್ಯ : ನಾನು ಕೊಟ್ಟಿರತಕ್ಕ ಉತ್ತರವೇನಿದೆ, ನನಗೆ ಇಲಾಖಾ ಮುಖ್ಯಸ್ಥರಿಂದ ಬಂದಿರತಕ್ಕಂಥ ಅಂಕಿ ಅಂಶಗಳ ಆಧಾರದ ಮೇಲೆ ಉತ್ತರ ಕೊಟ್ಟಿದ್ದೇನೆ. ಉತ್ತರ ಕೊಡುವಾಗ ಈ ಸದನಕ್ಕೆ ತಪ್ಪು ಮಾಹಿತಿಯನ್ನು ಕೊಟ್ಟರೆ ಅದು ಹಕ್ಕುಚ್ಯುತಿಯಾಗುತ್ತದೆ ಎಂಬುದು ನನಗೆ ಗೊತ್ತಿದೆ. ಇದನ್ನು ಗಮನದಲ್ಲಿಟ್ಟುಕೊಂಡೇ ಇನ್ನೊಂದು ಸಾರಿ ನಾನು ಪುನರುಚ್ಚಾರ ಮಾಡುತ್ತಿದ್ದೇನೆ., ನಾನು ಏನು ಮಾಹಿತಿ ಕೊಟ್ಟಿದ್ದೇನೆ, ಅದು ಸತ್ಯವಿದೆ.

ಶ್ರೀ ವೈ. ರಾಮಕೃಷ್ಣ : ನಾನು ಬೇರೆ ಹೇಳುತ್ತಿದ್ದೇನೆಯೇ? ಏಕೆಂದರೆ, I will take a challenge, ನಾನು ಒದಗಿಸಿರುವ ಮಾಹಿತಿಯನ್ನು ನೀವು ಸುಳ್ಳು ಎಂದು ಸಾಬೀತುಪಡಿಸುವುದಾದರೆ ನಾನು ನನ್ನ ಸದಸ್ಯತ್ವಕ್ಕೆ ರಾಜೀನಾಮೆ ಕೊಟ್ಟು ಹೊರಗಡೆ ಹೋಗಲು ತಯಾರಿದ್ದೇನೆ. ತಾವು ಇದನ್ನು ಸುಳ್ಳು ಎಂದು ತಿಳಿದುಕೊಂಡಿದ್ದೀರೋ?

ಶ್ರೀ ಕೆ. ಎನ್. ನಾಗೇಗೌಡ : ಇದಕ್ಕೆ ನನ್ನ ಕ್ರಿಯಾಲೋಪವಿದೆ. ಏನೆಂದರೆ, ಮಾನ್ಯ ಗೃಹ ಸಚಿವರು ಒಂದು ಗಂಭೀರವಾದ ವಿಚಾರವನ್ನು ಪ್ರಸ್ತಾಪಿಸಿದ್ದಾರೆ. ಸರ್ಕಾರದ ವತಿಯಿಂದ ನಾನು ಕೊಟ್ಟಿರತಕ್ಕಂಥ ಮಾಹಿತಿ ತಪ್ಪು ಇದ್ದರೆ ನನ್ನ ಮೇಲೆ ಹಕ್ಕುಚ್ಯುತಿಯಾಗುತ್ತದೆ ಎಂದರು. ವಿರೋಧ ಪಕ್ಷದ ಉಪ ನಾಯಕರು ಹಿರಿಯ ಸದಸ್ಯರಾಗಿದ್ದು ಇಂತಹ ಒಂದು ಸೂಕ್ಷ್ಮವಾದ ವಿಚಾರದ ಬಗ್ಗೆ ಮಾಹಿತಿ ಕೊಡುವಾಗ ತಮ್ಮ ಮೇಲೆ ಪ್ರಿವಿಲೇಜ್ ಆಗುತ್ತದೆಂಬ ಅಂಶವನ್ನು ಗಮನದಲ್ಲಿಟ್ಟುಕೊಂಡು ಸರಿಯಾದ ಮಾಹಿತಿ ಕೊಟ್ಟೇದ್ದೇವೆಂದು ಹೇಳಿದ ಬಳಿಕವೂ ಮತ್ತೆ ಅವರು ಪ್ರೆಸ್ ಮಾಡಿದರೆ ಅದು ಅವರ ಮೇಲೆಯೇ ಪ್ರಿವಿಲೇಜ್ ಆಗುತ್ತದೆ.

ಶ್ರೀ ವಾಟಾಳ್ ನಾಗರಾಜ್ : ಮಾತೆತ್ತಿದರೆ ಹಕ್ಕಚ್ಯುತಿ ತಂದರೆ ಸದನ ನಡೆಯುವುದಕ್ಕಾಗುವುದಿಲ್ಲ. ಅವರು ಹಕ್ಕುಚ್ಯುತಿಯ ಸದಸ್ಯರಾಗಿಯೇ ಬಿಡುತ್ತಾರೆಯೇ ಹೊರತು, ನಾಗೇಗೌಡರ ತರಹ ನಡೆದುಕೊಂಡು ಹೋದರೆ ಪ್ರತಿದಿನವೂ ಹಕ್ಕುಚ್ಯುತಿಗಳ ಸುರಿಮಳೆಯಾಗುತ್ತದೆಯೇ ವಿನಹ ಬೇರೆ ಮಾತೇ ಇಲ್ಲ.

ಶ್ರೀ ಕೆ.ಎನ್. ನಾಗೇಗೌಡ : ವಾಟಾಳ್ ನಾಗರಾಜ್‌ರವರು ಹೇಳಿದರು. ಈ ಸದನದಲ್ಲಿ ನಿಯಮಾವಳಿ ಇದೆ, ಯಾರೂ ಆ ತರಹ ನಡೆದುಕೊಳ್ಳುವಂತಿಲ್ಲ ಎಂದು ನಾವೂ ಸಹ ಇಲ್ಲಿ 12-13 ವರ್ಷಗಳಿಂದ ಕೆಲಸ ಮಾಡಿದ್ದೇವೆ. ತಮ್ಮ ಅನುಮತಿ ಪಡೆಯುವಂಥ ವಿಶೇಷ ಸಂದರ್ಭ ಯಾವುದು ಹಕ್ಕುಚ್ಯುತಿಯಾಗುತ್ತದೆಂದರೆ, ಈ ದೇಶದ ಶಾಂತಿಯನ್ನು ಕೆಣಕಿದರೆ, ಆಡಳಿತವನ್ನು ಕೆಡಿಸಿದರೆ, ಜನರ ಮೇಲೆ ಕೆಟ್ಟ ಪರಿಣಾಮ ಬೀರಿದರೆ ನಿಮ್ಮ ಮೇಲೆ ಹಕ್ಕುಚ್ಯುತಿ ನಿರ್ಣಯ ಮಂಡಿಸುವ ಅವಕಾಶ ನನಗಿದೆ. ನಾವು ಸದನದ ನಿಯಮಾವಳಿಯಂತೆ ಕೆಲಸ ಮಾಡಬೇಕು.

ಶ್ರೀ ವಾಟಾಳ್ ನಾಗರಾಜ್ : ನಿಯಮಾವಳಿ ಬಿಟ್ಟು ಕೆಲಸ ಮಾಡಬೇಕೆಂಬ ಉದ್ದೇಶ ನಮಗ್ಯಾರಿಗೂ ಇಲ್ಲ. ಅದು ಸ್ಪಷ್ಟ. ಆಡಳಿತ ಪಕ್ಷದಲ್ಲಿ ಈಗ ನಾಗೇಗೌಡರಿದ್ದಾರೆ, ಅದರ ಬಗ್ಗೆ ಎರಡನೇ ಅಭಿಪ್ರಾಯವಿಲ್ಲ. ಹಕ್ಕುಚ್ಯುತಿ ಬಗ್ಗೆ ಪ್ರತಿ ಸಾರಿಯೂ ಎದ್ದು ಹೇಳತಕ್ಕಂಥ ಅಧಿಕಾರ ಅವರಿಗೆ ಇದೆ. ಆದರೆ,ನಾವು ಪ್ರತಿ ಸಾರಿಯೂ ಎದ್ದದ್ದು ಮಾತನಾಡುವುದಕ್ಕೆಲ್ಲಾ ಹಕ್ಕುಚ್ಯುತಿ ತರಬೇಡಿ ಎಂದು ಹೇಳುವ ಅಧಿಕಾರ ನಮಗಿಲ್ಲವೇ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಗೃಹ ಸಚಿವರಾದ ಸಿಂಧ್ಯರವರು ಏನು ಹೇಳಿದರೆಂದರೆ, ಅವರಿಗೆ ಕೊಟ್ಟಂಥ ಮಾಹಿತಿ ಪ್ರಕಾರ ಅದು ಸರಿ ಇದೆ. ಆದರೆ ನಾನು ಹೇಳುವುದೇನೆಂದರೆ, ಆ ಮಾಹಿತಿ ಬಿಟ್ಟು ಅವರ ಹತ್ತಿರ ಎಕ್ಸ್‌ಟ್ರಾ ಇನ್‌ಫರ್‌ಮೇಷನ್, ಅಡಿಷನಲ್ ಇನ್‌ಫರ್ಮೇಷನ್ ಇದೆ, ಅದು ನನ್ನ ಹತ್ತಿರವಿದ್ದರೆ ಕೊಟ್ಟು ಕಳುಹಿಸಿಕೊಡುತ್ತೇನೆಂದು ಹೇಳುತ್ತಿದ್ದಾರೆ. ಒಂದೊಂದು ಸಲ ಹೀಗಾಗುತ್ತದೆ. ಅನೇಕ ಸಾರಿ ಅಧಿಕಾರಿಗಳು ನಮಗೆ ಮಾಹಿತಿಯನ್ನು ಎನು ಫೀಡ್ ಮಾಡುತ್ತಾರೆ, ಅದರಲ್ಲಿ ಕೆಲವು ಬಿಟ್ಟುಹೋಗಿರಬಹುದು. ಆಗ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಬಹುದು. ಆದರೆ, ಅವರು ಕೊಟ್ಟಂಥ ಸ್ಟೇಟ್‌ಮೆಂಟ ನಿಮಗೆ ಸರಿ ಕಾಣಬಹುದು, as far as you are concerned, ಅದರಲ್ಲಿರುವ ಹೆಚ್ಚುವರಿ ಮಾಹಿತಿಯನ್ನು ಇಲ್ಲ, ನನ್ನದೆ ಸರಿ, ಎಂದರೆ ಆಗ ಹಕ್ಕುಚ್ಯುತಿಯಾಗುತ್ತದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಸನ್ಮಾನ್ಯ ವೈ. ರಾಮಕೃಷ್ಣರವರು ಯಾವ ಮಾಹಿತಿ ಇಟ್ಟುಕೊಂಡು ಕೆಲವು ವಿಚಾರಗಳನ್ನು ಪ್ರಸ್ತಾಪಿಸಿದ್ದಾರೆ, ಅದನ್ನು ಸುಳ್ಳೆಂದು ನಾನು ಹೇಳಿಲ್ಲ ಅಥವಾ ಅದು ಸತ್ಯಕ್ಕೆ ದೂರವಾದುದೆಂದೂ ಹೇಳಲಿಲ್ಲ. ನನಗೆ ಈಗ ಸರ್ಕಾರದ ವ್ಯವಸ್ಥೆಯಲ್ಲಿ ಮಂತ್ರಿಯಾಗಿರತಕ್ಕವನಿಗೆ ಅದರಲ್ಲೂ ಗೃಹಮಂತ್ರಿಯಾಗಿರತಕ್ಕವರಿಗೆ ಮಾಹಿತಿ ತರಿಸಿಕೊಳ್ಳಲು ಒಂದು ವಿಶೇಷ ವ್ಯವಸ್ಥೆ ಇರುತ್ತದೆ, ಒಂದು ಆಡಳಿತ ಯಂತ್ರವಿರುತ್ತದೆ. ವೈ. ರಾಮಕೃಷ್ಣರವರು ಈ ಕಡೆ ಕುಳಿತುಕೊಂಡಾಗಲೂ ಅದೇ ರೀತಿ ಇರುತ್ತದೆ. ಆ ಯಂತ್ರ ಕೊಡುವ ಮಾಹಿತಿ ಏನಿರುತ್ತದೆ, ಅದರ ಆಧಾರದ ಮೇಲೆ ನಾವು ಇಲ್ಲಿ ಮಾತನಾಡಬೇಕಾಗುತ್ತದೆ. ಆದರೆ, ಇವರು ಕೊಟ್ಟಿರತಕ್ಕಂಥಾದ್ದು ತಪ್ಪು ಎಂದು ಹೇಳುವುದಕ್ಕೆ ಹೋಗುತ್ತಿಲ್ಲ. ಅವರು ಹೇಳಿರತಕ್ಕ ವಿಚಾರ ಬಹಳ ಸೂಕ್ಷ್ಮವಾಗಿರತಕ್ಕಂಥಾದ್ದು, ಇದೊಂದು ಸಾಮಾಜಿಕ ಸಮಸ್ಯೆಯಾಗಿದ್ದು, ಇದನ್ನು ಗಮನದಲ್ಲಿಟ್ಟುಕೊಂಡು ಅವರು ಹೇಳಿರುವ ವಿಚಾರದಲ್ಲಿ ಸತ್ಯವಿದೆಯೆಂದು ಅಧಿಕಾರಿಗಳಷ್ಟೇ ಅಲ್ಲ, ನಾನೇ ಸ್ವತ: ಪರೀಕ್ಷೆ ಮಾಡಿಸುತ್ತೇನೆ. ತಾವು ಹೇಳಿರುವ ಹರಿಜನರ ಮೇಲೆ ಅತ್ಯಾಚಾರವಿರಬಹುದು ಅಥವಾ ಅವರನ್ನು ಕೊಲೆ ಮಾಡಿರುವ ವಿಚಾರವಿರಬಹುದು, ಅವರಿಗೆ ಬರಬೇಕಾಗಿರುವ ಪರಿಹಾರವಿರಬಹುದು, ನಾನು ಯಾವ ರೀತಿ ಕೆಲಸ ಮಾಡುತ್ತೇನೆಂದರೆ ಉತ್ತರಗಳನ್ನು ಕೊಡತಕ್ಕಂಥ ಕಡತಗಳು ನನ್ನ ಬಳಿ ಬರುತ್ತವೆ. ಅದರ ಮೇಲೆ ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳು ಹೀಗೆ ಮಾಡಬೇಕು ಎಂದು ಬರೆಯುತ್ತೇನೆ. ಅಧಿವೇಶನ ಮುಗಿದ ನಂತರ ಆ ಎಲ್ಲಾ ಕಡತಗಳನ್ನು ತರಿಸಿ ಆ ರೀತಿ ಮಾಡಿದ್ದೀರೋ ಇಲ್ಲವೋ ಎಂಬುದನ್ನು ನೋಡುತ್ತೇನೆ. ಅಕಸ್ಮಾತ್

ಅದು ಆಗದೆಹೋದರೆ ತಮ್ಮ ಮೂಲಕ ನಾನು ವೈ. ರಾಮಕೃಷ್ಣರವರಿಗೆ ಭರವಸೆ ಕೊಡುತ್ತಿದ್ದೇನೆ, ತಮಗೂ ಏನು ನೋವಿದೆ, ಅಷ್ಟೇ • ನೋವು ನಮಗೂ ಇದೆ. ಈ ವಿಚಾರದಲ್ಲಿ ನಮಗ್ಯಾರಿಗೂ ಸಂತೋಷವಿಲ್ಲ. ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಮತ್ತು ತಾವು ಹೇಳಿರುವುದರಲ್ಲಿ ಸತ್ಯಾಂಶವಿದ್ದರೆ ಪರಿಶೀಲನೆ ಮಾಡುತ್ತೇನೆ, ಮತ್ತು ಸಂಬಂಧಪಟ್ಟವರಿಗೆ ರಕ್ಷಣೆ ಕೊಡುವುದಕ್ಕೆ ಪ್ರಾಮಾಣಿಕ ಪ್ರಯತ್ನವನ್ನು ನಾನು ಮಾಡುತ್ತೇನೆ.

ಶ್ರೀ. ವೈ. ರಾಮಕೃಷ್ಣ : ಕಾರವಾರದ ಯಲ್ಲಾಪುರದಲ್ಲಿ ರಾಜಮ್ಮ ಎಂಬ ಹರಿಜನ ಮಹಿಳೆಯೊಬ್ಬಳನ್ನು ಎರಡು ತಿಂಗಳ ಹಿಂದೆ ಕೊಲೆ ಮಾಡಿದ್ದಾರೆ, ಈ ವಿಚಾರ ಲಿಸ್ಟ್‌ನಲ್ಲಿ ಇಲ್ಲ. ಇದನ್ನು ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ, ಮಂತ್ರಿಗಳ ಮೇಲೆ ಆಪಾದನೆ ಮಾಡುವುದಕ್ಕಲ್ಲ, ಹರಿಜನರಿಗೆ ಸಂಬಂಧಿಸಿದಂತೆ ಸರ್ಕಾರಿ ಅಧಿಕಾರಿಗಳು ತಮ್ಮ ಕರ್ತವ್ಯಚ್ಯುತಿಯನ್ನು ಯಾವರೀತಿ ಮಾಡುತ್ತಿದ್ದಾರೆಂದು, ಹರಿಜನ ರಕ್ಷಣೆಗೆಂದು ಸ್ಪೆಷಲ್ ಸೆಲ್ ಇಟ್ಟಿದ್ದೀರಿ, ಸ್ಪೆಷಲ್ ಪೋಲೀಸ್ ಇಟ್ಟಿದ್ದೀರಿ, ಅವರಿಗೋಸ್ಕರ ಬಹಳಷ್ಟು ಹಣವನ್ನು ಖರ್ಚು ಮಾಡುತ್ತಿದ್ದೀರಿ. Still they are not taking interest. ಅರರ ಬಗ್ಗೆ ನಾನು ಹೇಳಿದೇನೆ ಹೊರತು, ಬೇರೆ ವಿಚಾರದ ಬಗ್ಗೆ ಅಲ್ಲ. ಇದನ್ನು ಗಂಭೀರವಾಗಿ ತೆಗೆದುಕೊಳ್ಳಬೇಕೆಂದು ಕೇಳುತ್ತಿದ್ದೇನೆ. ಇದುವರೆವಿಗೂ ಎಷ್ಟೊಂದು ಕೋಟಿ ರೂಪಾಯಿಗಳನ್ನು ಕಳೆದುಕೊಂಡರು? ಎಷ್ಟು ಹರಿಜನರ ಜೀವ ಹೋಯಿತು? ಅವರ ಮಾನಭಂಗ, ಕೊಲೆಗಳಾದರೂ ಕೂಡ ಅವರ ಸಮಸ್ಯೆಗಳ ಬಗ್ಗೆ ತಾವು ಸ್ಪಂದಿಸದೆ ಹೋದರೆ ನಾನೇನು ಮಾಡುತ್ತೇನೆ ಎಂದರೆ ನಾನು ತಮ್ಮ ಅಪ್ಪಣೆ ಬೇಡುತ್ತಾ ನಾನು ಒಬ್ಬ ಶಾಸನ ಸಭಾ ಸದಸ್ಯನಾಗಿದ್ದು ಇದರ ಬಗ್ಗೆ ಎಲ್ಲಾ ಲಿಸ್ಟ್ ಮಾಡಿ. ಪೇಪರ್ ಕಟಿಂಗ್‌ಗಳನ್ನೆಲ್ಲಾ ತೆಗೆದುಕೊಂಡು ಹೋಗಿ ರಾಜ್ಯಪಾಲರಿಗೆ ಕೊಟ್ಟು ನಿಮ್ಮ ಆಡಳಿತ ಈ ರೀತಿ ಇದೆ, ದಯವಿಟ್ಟು ಅವರಿಗೆ ಹೇಳಿ ಎನ್ನುತ್ತೇನೆ. ಹೀಗೂ ಸರಿಯಾಗಿಲಿಲ್ಲವೆಂದರೆ ಲೋಕಸಭೆಗೆ ತೆಗೆದುಕೊಂಡು ಹೋಗುತ್ತೇನೆ. ಅಲ್ಲಿ ಪರಿಶಿಷ್ಟರಾದ 121 ಜನ ಎಂ.ಪಿ.ಗಳಿದ್ದರೆ. ಇಡೀ ರಾಷ್ಟ್ರಕ್ಕೆ ಇದನ್ನೆಲ್ಲಾ ಹಂಚಿ ಕರ್ನಾಟಕ ರಾಜ್ಯದಲ್ಲಿ ಈ ರೀತಿಯಾಗುತ್ತಿದ್ದೆ, ಕೋಟ್ಯಾಂತರ ರೂಪಾಯಿಗಳನ್ನು ನಷ್ಟ ಮಾಡುತ್ತಿದ್ದಾರೆ, ಖೂನಿ ಮಾಡುತ್ತಿದ್ದಾರೆ, ದರೋಡೆ ಮಾಡುತ್ತಿದ್ದಾರೆ, ನಮ್ಮನ್ನು ಕೇಳುವವರರು ಯಾರೂ ಇಲ್ಲ, ಇದನ್ನು ತಡೆಯುವುದಕ್ಕೆ ನಿಮಗೆ ಶಕ್ತಿ ಇಲ್ಲವೇ ಎಂದು ಕೇಳುತ್ತೇನೆ. ಒಂದು ವೇಳೆ ಇದೂ ಆಗಲಿಲ್ಲವೆಂದರೆ ತಮಗೆ ಗೊತ್ತಿದೆ, we are also party to the Human Rights Commission.

ಶ್ರೀ ಮಳೀಮಠ್‌ರವರನ್ನು ಭಾರತ ಸರ್ಕಾರ ನೇಮಕ ಮಾಡಿದೆ. I will approach him. National Council for scheduled Castes Welfare ಗೆ ನಾನು ಈ ವಿಚಾರವನ್ನು ತೆಗೆದುಕೊಂಡು ಹೋದರೆ ನಮ್ಮ ರಾಜ್ಯದ ಘನತೆ, ಗೌರವ ಹೋಗುತ್ತದೆ. ಈ ರೀತಿಯಾದ ಆಡಳಿತ ಕರ್ನಾಟಕ ರಾಜ್ಯದಲ್ಲಿದೆಯೇ ಎಂದು ರಾಷ್ಟ್ರದ ಎಲ್ಲಾ ಜನರು ನೋಡುತ್ತಾರೆನ್ನುವ ಭಯದಿಂದ ನಾನು ಸುಮ್ಮನಿರುತ್ತೇನೆಯೇ ಹೊರತು ಇನ್ನು ಮುಂದೆ ನಾನು ಧೈರ್ಯವಾಗಿ ಹೇಳುತ್ತಿದ್ದೇನೆ. ಏತಕ್ಕೆಂದರೆ, this is the last resort, ಇದರ ಬಗ್ಗೆ ತಾವು ಕ್ರಮ ತೆಗೆದುಕೊಳ್ಳದೇ ಹೋದರೆ it will be a national issue, it will be an international issue.

ಇದರಿಂದ ರಾಜ್ಯಕ್ಕೆ ಒಳ್ಳೆಯ ಹೆಸರು ಬರುವುದಿಲ್ಲವೆಂದು ತಿಳಿದುಕೊಂಡು, ತಾವು ತಮ್ಮ ಇಲಾಖಾಧಿಕಾರಿಗಳಿಗೆ ಕಟ್ಟಾಜ್ಞೆ ವಿಧಿಸಿ ಕೆಲಸ ಮಾಡಿಸಬೇಕು, ಕೆಲಸ ಮಾಡಿಸದೆ ಹೋದರೆ ಇದು ನಿಮಗೆ ಕಟ್ಟಿಟ್ಟ ಬುತ್ತಿ ಎಂದು ತಾವು ತಿಳಿದುಕೊಳ್ಳಬೇಕೆಂದು ಹೇಳುತ್ತಾ ಇಷ್ಟು ಹೊತ್ತು ಮಾತನಾಡಲು ನನಗೆ ಅವಕಾಶ ಕೊಟ್ಟ ತಮಗೆ ಧನ್ಯವಾದಗಳನ್ನರ್ಪಿಸಿ ನನ್ನ ಭಾಷಣ ಮುಗಿಸುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಹಿರಿಯ ಸದಸ್ಯರಾದ ರಾಮಕೃಷ್ಣರವರು ಹೇಳಿರುವ ವಿಚಾರಕ್ಕೆ ಒಂದು ವಿಚಾರ ತಿಳಿಸಲು ಅವಕಾಶ ಕೊಟ್ಟರೆ ಹೇಳಬೇಕೆಂದಿದ್ದೇನೆ.

ಅಧ್ಯಕ್ಷರು : ಆಗಬಹುದು.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೇ, ರಾಮಕೃಷ್ಣರವರು ಇವೊತ್ತು ಬಹಳ ಭಾವೋದ್ವೇಗದಿಂದ ಮಾತನಾಡಿದ್ದಾರೆ. ಅವರು ಸಾಮಾನ್ಯವಾಗಿ ಈ ತರಹದ ಉದ್ವೇಗಕ್ಕೆ ಒಳಗಾಗುವುದಿಲ್ಲ. ಏಕೆ ಈ ರೀತಿ ಮಾತನಾಡಿದರೆಂದು ನನಗರ್ಥವಾಗಲಿಲ್ಲ. ಪ್ರಾಮಾಣಿಕವಾಗಿ ಈ ಸದನಕ್ಕೆ ಹೇಳುತ್ತಿದ್ದೇನೆ. ನಮ್ಮ ಸರ್ಕಾರ ಬಂದ ನಂತರ ಇದರ ಬಗ್ಗೆ ನಾವು ಎಚ್ಚರಿಕೆ ಕ್ರಮವನ್ನು ಅತ್ಯಂತ ಕೆಳ ಹಂತದಲ್ಲಿ ಕೊಟ್ಟಿದ್ದೇವೆ. ತಾವು ರಾಜ್ಯಪಾಲರ ಹತ್ತಿರ ಹೋಗುವುದಕ್ಕೆ ತಮಗೆ ಹಕ್ಕಿದೆ. ಮತ್ತು ಲೋಕಸಭೆಯಲ್ಲಿ ತಮ್ಮ ಪಕ್ಷದವರ ಮೂಲಕ ಅಥವಾ ಅಲ್ಲಿರುವ ಸದಸ್ಯರುಗಳ ಮೂಲಕ ಈ ವಿಷಯ ಪ್ರಸ್ತಾಪಿಸುವುದಕ್ಕೂ ಸಹ ತಮಗೆ ಅವಕಾಶವಿದೆ. ತಾವು ಮಾನವ ಹಕ್ಕುಗಳ ಆಯೋಗದ ಬಗ್ಗೆ ಹೇಳಿದ್ದೀರಿ. ನಮ್ಮ ಸರ್ಕಾರ ಈಗಾಗಲೇ ಒಂದು ಹೆಜ್ಜೆ ಮುಂದಕ್ಕೆ ಹೋಗಿ ಕೇಂದ್ರ ಸರ್ಕಾರದವರು ಯಾವ ರೀತಿಯಲ್ಲಿ ಮಾನವ ಹಕ್ಕುಗಳ ಆಯೋಗವನ್ನು ಮಾಡಿದ್ದಾರೆ ಅದೇ ರೀತಿಯಲ್ಲಿ ನಮ್ಮ ರಾಜ್ಯದಲ್ಲೂ ಸಹ ಮಾನವ ಹಕ್ಕುಗಳ ಆಯೋಗವನ್ನು ಮಾಡಬೇಕು ಎನ್ನತಕ್ಕ ವಿಚಾರವನ್ನು ಸರ್ಕಾರ ಪರಿಶೀಲನೆ ಮಾಡುತ್ತದೆ. ಇದರ ಬಗ್ಗೆ ವಿ.ಎಸ್. ಮಳಿಮಠ್ ಜೊತೆಯಲ್ಲೂ ನಾನು ಈಗಾಗಲೇ ಮಾತನಾಡಿದ್ದೇನೆ. ಆದ್ದರಿಂದ ತಮ್ಮಲ್ಲಿ ಏನು ಕಾಳಜಿ ಇದೆ ಅದಕ್ಕೆ ರಾಜಕೀಯವನ್ನು ಬೆರೆಸದೆ ಸಮಾಜ ದೃಷ್ಟಿಯಿಂದ ನಾನು ಮಾತನಾಡುತ್ತಿದ್ದೇನೆ. ಇದಕ್ಕೇ ಇಡೀ ಸದನದ ಸದಸ್ಯರೆಲ್ಲರೂ ಸಹ ಒಪ್ಪಿಕೊಳ್ಳುತ್ತಾರೆ. ಬೇರೆ ಬೇರೆ ರಾಜ್ಯದಲ್ಲಿ ಏನು ಆಗುತ್ತಿದೆ ಅಂಥದನ್ನು ಕರ್ನಾಟಕದಲ್ಲಿ ಆಗುವುದಕ್ಕೆ ಅವಕಾಶ ಮಾಡಿಕೊಡುವುದಿಲ್ಲ. ಹರಿಜನರು, ಗಿರಿಜನರು ಮತ್ತು ದುರ್ಬಲ ವರ್ಗದವರ ರಕ್ಷಣೆಯನ್ನು ಮಾಡುವುದರಲ್ಲಿ ನಾವು ಎಂದೆಂದೂ ಹಿಂದೆ ಬೀಳುವುದಿಲ್ಲ ಎನ್ನತಕ್ಕ ಮಾತನ್ನು ಹೇಳುತ್ತೇನೆ.

ಶ್ರೀ ಕೆ. ವಿಶ್ವೇಶ್ವರಹೆಗಡೆ : ಸನ್ಮಾನ್ಯ ಅಧ್ಯಕ್ಷರೇ, ಮಂತ್ರಿಗಳು ಉತ್ತರವನ್ನು ಕೊಟ್ಟಿರುವುದಕ್ಕೆ ಪೂರಕವಾಗಿ ಧೈರ್ಯ ಬರುವುದಕ್ಕೆ ಒಂದು ಕಾರ್ಯಕ್ರಮ ತೆಗೆದುಕೊಳ್ಳತಕ್ಕ ಅವಶ್ಯಕತೆ ಇದೆ. ಜನವರಿ ಮೊದಲ ವಾರದಲ್ಲಿ ಬೆಳಿಗ್ಗೆ ಹತ್ತು ಗಂಟೆಯ ಸಮಯದಲ್ಲಿ ಹರಿಜನ ಮಹಿಳೆ ರಾಜಮ್ಮನನ್ನು ಚಾಕುವಿನಿಂದ ಇರಿದು ಕೊಲೆ ಮಾಡುತ್ತಾರೆ. ಆದರೆ ಇವತ್ತಿನವರೆಗೆ ಒಬ್ಬರ ಮೇಲೂ ಸಹ ಕ್ರಮ ತೆಗೆದುಕೊಂಡಿರುವುದಿಲ್ಲ. ಇವರು ಯಾವ ರೀತಿಯಲ್ಲಿ ಇಂಥಹ ಬಿಗುವಿನ ಸಂದರ್ಭದಲ್ಲಿ ಕ್ರಮ ತೆಗೆದುಕೊಂಡಿದ್ದಾರೆ ಎಂಬ ಬಗ್ಗೆ ಅನುಮಾನ ಬರುತ್ತದೆ. ಇಂಥ ವಿಷಯವನ್ನು ಗಂಭೀರವಾಗಿ ತೆಗೆದುಕೊಂಡು ತಕ್ಷಣ ಕ್ರಮತೆಗೆದುಕೊಳ್ಳುವಲ್ಲಿ ಸರ್ಕಾರ ಕಾರ್ಯ ಪ್ರವೃತ್ತರಾಗಬೇಕಾಗುತ್ತದೆ. ಅದು ಸರ್ಕಾರದ ಜವಾಬ್ದಾರಿ ಸಹ. ಈ ರೀತಿ ಕ್ರಮ ತೆಗೆದುಕೊಂಡಾಗ ಸಮಾಜಲ್ಲಿ ಶಾಂತಿಯ ವ್ಯವಸ್ಥೆ ಬರುತ್ತದೆ. ಆಡಳಿತ ವ್ಯವಸ್ಥೆಯಲ್ಲಿ ವಿಶ್ವಾಸ ಮೂಡುತ್ತದೆ. ಆದುದರಿಂದ ರಾಜಮ್ಮನ ಕೊಲೆಯ ಪ್ರಕರಣವನ್ನೇ ಆಧಾರವಾಗಿಟ್ಟುಕೊಂಡರೆ ಜನರಲ್ಲಿ ವಿಶ್ವಾಸ ಬರುವುದಕ್ಕೆ, ಸಮಾಜದಲ್ಲಿ ಶಾಂತಿ ವ್ಯವಸ್ಥೆ ಮೂದಲು ಕ್ರಮ ತೆಗೆದುಕೊಳ್ಳುವುದರಿಂದ ಅನುಕೂಲವಾಗುತ್ತದೆ. ಸರ್ಕಾರಕ್ಕೆ ನಿಜವಾಗಿಯೂ ಹರಿಜನರ ಪರವಾಗಿ ಕಾಳಜಿ ಇದ್ದರೆ ಆ ರೀತಿಯಾದ ಕ್ರಮವನ್ನ ತೆಗೆದುಕೊಂಡು ತೋರಿಸಬೇಕೇ ಹೊರತು ಕೇವಲ ಮಾತಿನ ಶಬ್ದಗಳಿಂದ ಇದಕ್ಕೆ ಅರ್ಥ ಭರಿಸತಕ್ಕದಲ್ಲ.

ಡಾ॥ ವಿ. ಚಿತ್ತರಂಜನ್ : ಅದೇ ಕ್ಷೇತ್ರದಲ್ಲಿ ನಡೆದಂಥ ಇನ್ನೊಂದು ಘಟನೆಯ ಬಗ್ಗೆ ಹೇಳುವುದಾದರೆ, ಪರಿಶಿಷ್ಟ ಜನರ ಮೇಲಿನ ದೌರ್ಜನ್ಯದ ಆಕ್ಟ್‌ನ್ನು ದುರುಪಯೋಗ ಮಾಡಿಕೊಂಡು, ಪಕ್ಷ ರಾಜಕಾರಣವನ್ನು ಉಪಯೋಗಿಸಿಕೊಂಡು ಸುಮಾರು 40 ಜನರ

ಮೇಲೆ ಸುಳ್ಳು ಕೇಸನ್ನು ದಾಖಲು ಮಾಡಿ ಇವತ್ತು ಆ 40 ಜನರು 70ಕಿ.ಮೀ. ದೂರ ವಾರಕ್ಕೆ ಒಂದು ಸಲ ಹೋಗಿ ಬರಬೇಕಾಗಿದೆ. ಇಂದು ಹರಿಜನರ ಮೇಲಿನ ದೌರ್ಜನ್ಯದ ಆಕ್ಟ್‌ನ್ನು ದುರುಪಯೋಗ ಪಡಿಸಿಕೊಳ್ಳುತ್ತಿದ್ದಾರೆ.

ಶ್ರೀ ಡಿ.ಕೆ. ಶಿವಕುಮಾರ್ : ಸನ್ಮಾನ್ಯ ಅಧ್ಯಕ್ಷರೆ, ನಮ್ಮ ಬಿಜೆಪಿ ಯವರು ಹರಿಜನ, ಗಿರಿಜನರ ಬಗ್ಗೆ ಇಷ್ಟೊಂದು ಚಿಂತನೆ ಮಾಡುತ್ತಿರುವುದನ್ನು ನೋಡಿ ನನಗೆ ಇಲ್ಲಿ ಅವರ ರೀತಿಯೇ ಗೊತ್ತಾಗುತ್ತಿಲ್ಲ. ಒಂದು ದಿನ ಸಹ ಆ ಜನಗಳ ಬಗ್ಗೆ ಮಾತನಾಡದಿದ್ದವರು ಇಂದು ಆ ಹರಿಜನ ಗಿರಿಜನರ ಬಗ್ಗೆ ಕಣ್ಣೀರನ್ನು ಸುರಿಸುತ್ತಿರುವುದನ್ನು ನೋಡಿ ನನಗೆ ಅರ್ಥವೇ ಆಗುತ್ತಿಲ್ಲ.

(ಗೊಂದಲ)

ಶ್ರೀ ಆಯನೂರು ಮಂಜುನಾಥ್ : ಅವರುಗಳಿಗೆ ಹರಿಜನ, ಗಿರಿಜನರ ಬಗ್ಗೆ ಯಾವರೀತಿ ಕಾಳಜಿ ಇದೆ ಎಂಬುದನ್ನು ಕಳೆದ ನಲವತ್ತು ವರ್ಷಗಳಿಂದಲೂ ಸಹ ನೋಡಿಕೊಂಡು ಬಂದಿದ್ದೇವೆ. ಇವತ್ತು ಹರಿಜನರ ಬಗ್ಗೆ ಇರತಕ್ಕಂಥ ನೀತಿ ಏನಿದೆ ಎಂದರೆ ಅರ್ಧ ಬಟ್ಟೆಯನ್ನು ಹಾಕಿಕೊಂಡಿರುವವರು ಬಾಬೂಜಿ ನಗರದಲ್ಲಿ ಹರಿಜನ ಕೇರಿಯಲ್ಲಿ ವಾಸ ಮಾಡುತ್ತಾರೆ. ಆದರೆ ಅದೇ ಸೂಟು ಬೂಟನ್ನು ಹಾಕಿಕೊಂಡಿರುವವರು.....

ಶ್ರೀ ಕೆ.ಎನ್. ನಾಗೇಗೌಡ : ತಾವು ಮೊದಲು ಮಾತನಾಡಿ. ತಾವು ವಿಚಾರವನ್ನು ಮಾತ್ರ ಮಾತನಾಡಿ.

ಶ್ರೀ ಆಯನೂರು ಮಂಜುನಾಥ್ : ತಾವೇ ಒಬ್ಬರು ಕಾಂಗ್ರೆಸ್ ಪಕ್ಷದಲ್ಲಿ ನಿಮಗಿಂತ ಬೇಕೆ? ಅವರು ಹೊರಗೆ ಹಾಕಿದ್ದರಿಂದ ನೀವು ದಳ ಸೇರಿಕೊಂಡಿರಿ.

(ಗೊಂದಲ)

ಶ್ರೀಕೆ. ಶ್ರೀನಿವಾಸ ಗೌಡ : ತಾವು ನಮ್ಮ ಬಗ್ಗೆ ಏನು ಹೇಳುತ್ತೀರಿ, ಮೊದಲು ನಿಮ್ಮ ಆರ್‌ಎಸ್‌ಎಸ್‌ನಲ್ಲಿ ಯಾರ‍್ಯಾರು ಇದ್ದಾರೆ ಎಂಬುದರ ಬಗ್ಗೆ ಮಾತನಾಡಿ.

ಶ್ರೀ ಆಯನೂರು ಮಂಜುನಾಥ್ : ನಿಮ್ಮ ಪಕ್ಷಕ್ಕೆ ಇವರು ಬಂದು ಒಳ್ಳೆಯವರಾಗಿದ್ದಾರೆ. ಅವರು ಆಗಾಗ್ಗೆ ಪಾಯಿಂಟ್ ಆಫ್ ಆರ್ಡರ್‌ನ್ನು ಎತ್ತುವುದನ್ನು ನೋಡಿದ್ದೇನೆ. ಅವರ ಬಗ್ಗೆ ನಮಗೆ ವಿನಂತಿ ಇದೆ, ದಯಮಾಡಿ ಅವರಿಗೆ ಬೇಗ ಮಂತ್ರಿ ಕುರ್ಚಿ ಕೊಡಿ, ಅವರು ನಿಮ್ಮ ಪಕ್ಷಕ್ಕೆ ಬಂದಿರತಕ್ಕದ್ದು ಅದಕ್ಕೆ, ಇದರ ಬಗ್ಗೆ ನಮ್ಮ ಭಿನ್ನಾಭಿಪ್ರಾಯವಿಲ್ಲ. ಅವರು ಹಗಲೆಲ್ಲಾ ಪಾಯಿಂಟ್ ಆಫ್ ಆರ್ಡರ್‌ನ್ನು ಎತ್ತುವುದನ್ನು ನೋಡಿದರೆ, ಅದಕ್ಕೆ ಏನೋ ಕಾರಣವಿದೆ ಯಾರೇ ಹೊಸಬರು ಎದ್ದು ಮಾತನಾಡಲು ನಿಂತರೆ ಅಡ್ಡ ಬರುವುದು, ಹಳೆಯವರು ಮಾತನಾಡಲು ಎದ್ದು ನಿಂತರೆ ಅಡ್ಡ ಬರುವುದು, ಅವರಿಗೆ ಮೊದಲು ಮಂತ್ರಿಯ ಕುರ್ಚಿಯನ್ನು ಕೊಡಿ. ಅದಕ್ಕೆ ನಮ್ಮ ಬೆಂಬಲವಿದೆ. ಅದಕ್ಕೆ ನಮ್ಮ ಭಿನ್ನಾಭಿಪ್ರಾಯವಿಲ್ಲ.

ಶ್ರೀ ಕೆ.ಎನ್. ನಾಗೇಗೌಡ : ಅಧ್ಯಕ್ಷರೇ, ಪಾಯಿಂಟ್ ಆಫ್ ಆರ್ಡರ್.

ಶ್ರೀ ಆಯನೂರು ಮಂಜುನಾಥ್ : ನಮ್ಮ ವಾಟಾಳ್ ನಾಗರಾಜ್‌ರವರು ಹೇಳಿದಂತೆ ಈ ಪಾಯಿಂಟ್ ಆಫ್ ಆರ್ಡರ್‌ನಿಂದ ನಾವ್ಯಾರು ಮಾತನಾಡಲು ಆಗುವುದಿಲ್ಲ.

ಶ್ರೀ ಕೆ.ಎನ್. ನಾಗೇಗೌಡ : ಪಾಯಿಂಟ್ ಆಫ್ ಆರ್ಡರ್ ಒಂದು ನಿಯಮ. ಅಧ್ಯಕ್ಷರೆ, ಆಯನೂರು ಮಂಜುನಾಥ್‌ರವರಿಗೆ ಏನು ಹೇಳುತ್ತೇನೆಂದರೆ, ನಾನು ಮಂತ್ರಿ ಪದವಿಗೆ ರಾಜೀನಾಮೆಯನ್ನು ಕೊಟ್ಟು ಬಂದಿರತಕ್ಕವನು, ನೀವು ನನ್ನ ಬಗ್ಗೆ ಹೇಳುವುದು ಬೇಡ.

(ಗೊಂದಲ)

ಅಧ್ಯಕ್ಷರು : ಯಾವುದೂ ಸಹ ರೆಕಾರ್ಡ್‌ಗೆ ಹೋಗುವುದಿಲ್ಲ.

ಶ್ರೀ ಕೆ.ಎನ್. ನಾಗೇಗೌಡ : ಇವರು ಜಾತಿ ಮತ್ತು ಧರ್ಮಗಳನ್ನು ಆಟದ ವಸ್ತುವನ್ನಾಗಿ ಮಾಡಿಕೊಂಡು ದೇಶದಲ್ಲಿ...

ಅಧ್ಯಕ್ಷರು : ಯಾವುದೂ ಸಹ ಕಡಿತಕ್ಕೆ ಹೋಗುವುದಿಲ್ಲ.

ಶ್ರೀ ಆಯನೂರು ಮಂಜುನಾಥ್ : ಮಹಾತ್ಮಾ ಗಾಂಧಿಯವರ ಬಗ್ಗೆ ಮಾತನಾಡಲು ನನಗೆ ಎರಡು ನಿಮಿಷ ಅವಕಾಶ ಮಾಡಿಕೊಡಿ.

ಅಧ್ಯಕ್ಷರು : ದಯಮಾಡಿ ಕುಳಿತುಕೊಳ್ಳಿ.

(ಗೊಂದಲ)

ಅಧ್ಯಕ್ಷರು : ನಿಮ್ಮ ವೈಚಾರಿಕ ಭಿನ್ನಾಭಿಪ್ರಾಯಗಳೇನೇ ಇದ್ದರೂ ಇಲ್ಲಿ ತರಬೇಡಿ ಎಂದು ನಾನು ಯಾವಾಗಲೂ ಹೇಳುತ್ತಿರುತ್ತೇನೆ.

ಶ್ರೀ ಹೆಚ್.ಎನ್. ನಂಜೇಗೌಡ : ತಮ್ಮಲ್ಲಿ ಒಂದು ವಿನಂತಿ, ಇದು ಕಡತಕ್ಕೆ ಹೋಗಿದೆ. ಕಾನೂನಿನ ಪ್ರಕಾರ ಏನು ಮಾಡಬೇಕು ಎಂಬುದು ನಮಗೆ ಗೊತ್ತಿದೆ. ಕಡತಕ್ಕೆ ಹೋಗಿಲ್ಲವೆಂದರೆ ಅದನ್ನು ಕೈಬಿಡುತ್ತೇವೆ.

ಶ್ರೀ ಕೆ.ಎನ್. ನಾಗೇಗೌಡ : ಅದು ಕಡತಕ್ಕೆ ಹೋಗಬೇಕು.

ಅಧ್ಯಕ್ಷರು : ಯಾವುದು ಕಡತದಲ್ಲಿರಬೇಕು, ಯಾವುದು ಇರಬಾರದು ಎಂಬುದನ್ನು ನನ್ನ ವಿವೇಚನೆಗೆ ಬಿಡಿ. ತಾವುಗಳೇ ಪರಸ್ಪರ ಮಾತುಗಳನ್ನಾಡಿಕೊಂಡಿದ್ದೀರಿ. ದಯಮಾಡಿ ಆ ರೀತಿ ಮಾಡಿಕೊಳ್ಳುವುದು ಬೇಡ.

ಶ್ರೀ ಹೆಚ್.ಎನ್. ನಂಜೇಗೌಡ : ಇದು ಪತ್ರಿಕೆಯಲ್ಲೇನಾದರೂ ವರದಿಯಾಗಬಹುದು.

ಅಧ್ಯಕ್ಷರು : ಪತ್ರಿಕೆಯವರು ದಯಮಾಡಿ ಈ ಪ್ರಸಂಗವನ್ನು ವರದಿ ಮಾಡಬಾರದೆಂದು ಕೇಳಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಜವಾಬ್ದಾರಿಯುತವಾದ ಸಚಿವರು ಬಂದು ಕುಳಿತು ಕೊಳ್ಳಬೇಕು, ಅಲ್ಲಿ ಕುಳಿತು ಅವರು ಎಷ್ಟೊತ್ತು ನಡೆಸಬೇಕು, ಬಿಡಬೇಕು ಎಂದು ತೀರ್ಮಾನ ಮಾಡಬೇಕು. ನಾವು ಮುಖ್ಯ ಮಂತ್ರಿಗಳು ಬರುವವರೆಗೆ ಕಾಯುತ್ತಾ ಇರುವುದು ಅಲ್ಲಿಯವರೆಗೆ ಒಬ್ಬರು ಮಾತನಾಡುತ್ತಾ ಇರುವುದು ಆ ಭಾವನೆ ಈ ಸದನಕ್ಕೆ ಒಳ್ಳೆಯ ಸಂಪ್ರದಾಯ ಅಲ್ಲ. ತಮ್ಮಲ್ಲಿ ನಾನು ಒಳ್ಳೆಯ ಗೌರವ . ಇಟ್ಟುಕೊಂಡಿದ್ದೇನೆ.

ಅಧ್ಯಕ್ಷರು : ಇವರೆಲ್ಲಾ ಪಟ್ಟಿ ಕೊಟ್ಟಿದ್ದಾರೆ ಮಾತನಾಡುವುದಿಲ್ಲ ಎಂದು. ಅದಕ್ಕೆ ಏನು ಮಾಡಬೇಕು? ಪಟ್ಟಿ ಕೊಟ್ಟ 49 ಜನ ಸದಸ್ಯರು ಮೊದಲು ಅವರು ಸೂಚನೆ ಮಾಡಿದವರು ಮಾತನಾಡಿದರೆ ಒಳ್ಳೆಯದು. ಈಗ ಉಪ ನಾಯಕರು ಮಾತನಾಡಿದ್ದಾರೆ. ಈಗ ಕಾಂಗ್ರೆಸ್‌ನವರಿಗೆ ಕರೆಯಲಿಕ್ಕೆ ಹೇಳಿ ಕಳುಹಿಸಿದರೆ ಅವರು ಯಾರೂ ಒಬ್ಬರೂ ಮಾತನಾಡುವುದಕ್ಕೆ ತಯಾರಿಲ್ಲ, ನಾಳೆ ಮಾತನಾಡುತ್ತೇವೆ ಎಂದು ಹೇಳುತ್ತಾರೆ. ಅವರು ಮಾತನಾಡುವ ತನಕ ನಾನು ಸುಮ್ಮನೆ ಕುಳಿತಿರುವುದಕ್ಕಾಗುವುದಿಲ್ಲ. ಈಗ ಇನ್ನೊಬ್ಬರು ಮಾತನಾಡುತ್ತಾರೆ. ಇವರ ಕಡೆಯವರಿಗೆ ಅವಕಾಶ ಕೊಡುತ್ತಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ : ಮುಖ್ಯ ಮಂತ್ರಿಗಳು ಬರಲಿ ಅವರಿಗೋಸ್ಕರ ಕಾಯುವ ಭಾವನೆ ಬರುವುದು ಬೇಡ ಎಂದು ನಾನು ಹೇಳುತ್ತಿದ್ದೇನೆ ಅಷ್ಟೆ.

ಅಧ್ಯಕ್ಷರು : ತುಂಗ ಭದ್ರಾ ವಿಚಾರಕ್ಕೆ ಅವರು ಹೇಳಿಕೆ ಕೊಡಬೇಕಾಗಿದೆ. ಅವರು ನನ್ನ ಅನುಮತಿ ಪಡೆದುಕೊಂಡು ಹೋದರು. ಈಗಲೇ ಹೇಳಿಕೆ ಕೊಡಬಹುದೇ ಎಂದರು. ವೈ. ರಾಮಕೃಷ್ಣ ಅವರು ಮಾತನಾಡುತ್ತಿದ್ದಾರೆ ಮಧ್ಯ ಪ್ರವೇಶ ಮಾಡುವುದ್ಕಕಾಗುವುದಿಲ್ಲ ಅವರ ಭಾಷಣ ಪೂರ್ತಿಯಾದ ಮೇಲೆ ನೀವು ಬಂದು ಮಾತನಾಡಬೇಕಾಗುತ್ತದೆ ಎಂದು ಹೇಳಿದೆ. ಅದಕ್ಕೆ ಖರ್ಗೆಯವರು ಇವತ್ತು ಅವರ ಕೈಯಲ್ಲಿ ಹೇಳಿಕೆ ಮಾಡಿಸಬೇಕಾಗುತ್ತದೆ ಎಂದು ಕೇಳಿಕೊಂಡರು. ಅವರ ಪಕ್ಷದವರು ಯಾರೂ ಮಾತನಾಡುವುದಕ್ಕೆ ತಯಾರಾಗಿಲ್ಲ. ಅದರಿಂದ ಶ್ರೀಮಾನ್ ಸದಾನಂದ ಗೌಡರು ಮಾತನಾಡುತ್ತಾರೆ. ಆಗಬಹುದೇ? ನಿಮ್ಮ ಭಾವನೆ ನನಗೆ ಗೊತ್ತಾಯಿತು. ಯಾರಿಗೋ ಒಬ್ಬರಿಗೆ ಕಾದು ಕುಳಿತುಕೊಳ್ಳಬಾರದು ಎಂದು ನಾನು ಅದಕ್ಕೆ ಅವಕಾಶ ಕೊಡುವುದಿಲ್ಲ. ನೀವು ನನಗೆ ಮಾರ್ಗದರ್ಶನ ಮಾಡುವಾಗ ನಾನು ಏನು ತಪ್ಪು ಮಾಡುತ್ತೀನೇ?

ಶ್ರೀ ವಾಟಾಳ್ ನಾಗರಾಜ್ : ಮಾರ್ಗದರ್ಶನ ಎಂದು ತಾವು ತಿಳಿಯಬಾರದು. ನಾನು ಯಾವತ್ತೂ ಮಾರ್ಗದರ್ಶನ ಮಾಡುವುದಕ್ಕೆ ಹೋಗುವುದಿಲ್ಲ. ನಾನು ಏನಿದ್ದರೂ ಮನವಿ ಮಾಡುತ್ತೇನೆ ಅಷ್ಟೇ. ಮಾರ್ಗದರ್ಶನ ಅಲ್ಲ.

+ಶ್ರೀ ಡಿ.ವಿ. ಸದಾನಂದ ಗೌಡ (ಸೂಳ್ಯ) : ಮಾನ್ಯ ಸಭಾಧ್ಯಕ್ಷರೆ, ಹೊಸದಾಗಿ ವಿಧಾನ ಸಭೆಗೆ ಪ್ರವೇಶ ಮಾಡಿದ ನಂತರ ಎರಡನೆಯ ಬಾರಿ ರಾಜ್ಯಪಾಲರ ಭಾಷಣವನ್ನು ಕೇಳುವಂತಹ ಸಂದರ್ಭ ನನಗೆ ಬಂದಿದೆ. ಮೊದಲ ಬಾರಿಗೆ ರಾಜ್ಯಪಾಲರ ಭಾಷಣದ ಬಗ್ಗೆ ಚರ್ಚೆಯಲ್ಲಿ ಪಾಲ್ಗೊಳ್ಳುವ ಅವಕಾಶ ಇವತ್ತು ಬಂದಿದೆ. ಕೆಲವು ವಿಶೇಷ ಸಂಗತಿಗಳು ನನ್ನ ಗಮನಕ್ಕೆ ಬಂದಿರುವುದನ್ನು ಈ ಸಂದರ್ಭದಲ್ಲಿ ಪ್ರಸ್ತಾಪ ಮಾಡಬೇಕೆಂದು ನಾನು ಬಯಸುತ್ತಿದ್ದೇನೆ. ತಮಗೆ ಗೊತ್ತಿದ್ದ ಹಾಗೆ ಯಾವುದೇ ರಾಜ್ಯಪಾಲರ ಭಾಷಣ ಅಂದರೆ ಮುಂದಿನ ದಿನಗಳಲ್ಲಿ ಈ ಸರ್ಕಾರದ ನೀತಿಗಳು ಮತ್ತು ಧೋರಣೆಗಳು ಏನು ಎನ್ನುವುದನ್ನು ಹೇಳುವಂಥಹ, ಪ್ರತಿನಿಧಿಸುವಂಥ ಒಂದು ವ್ಯವಸ್ಥೆ ಎಂದು ನಾನು ಭಾವಿಸಿದ್ದೇನೆ. ಇದರ ಬಗ್ಗೆ ಚರ್ಚೆಗಳು ರೀತಿ ನೀತಿಗಳು ಹಲವಾರು ವ್ಯತ್ಯಾಸಗಳನ್ನು ಮಾಡಿಕೊಂಡು ಮುಂದಿನ ದಿನಗಳಲ್ಲಿ ರಾಜ್ಯದ ಸಮಗ್ರ ಅಭಿವೃದ್ಧಿಯ ಕಡೆ ಗಮನ ಹರಿಸುವ ನಿಟ್ಟಿನಲ್ಲಿ ಒಂದು ರೂಪು ರೇಖೆಗಳನ್ನು ತಯಾರು ಮಾಡುವುದು ಎಂದು ನಾನು ತಿಳಿದುಕೊಂಡಿದ್ದೇನೆ. ಆದರೆ ಇವತ್ತು ಏನಾಗಿದೆ ಎನ್ನುವುದನ್ನು ಈ ಸಂದರ್ಭದಲ್ಲಿ ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ಮಾಡುವುದಾಗಲಿ ಅಥವಾ ಬಡ್ಜೆಟ್ ಮಂಡನೆ ಸಂದರ್ಭದಲ್ಲಿ ಬಡ್ಜೆಟ್ ಮೇಲೆ ಚರ್ಚೆ ಮಾಡುವುದಾಗಲಿ ಕೇವಲ ಕೆಲವೇ ವ್ಯಕ್ತಿಗಳ ವೈಯುಕ್ತಿಕ ಪ್ರತಿಷ್ಠೆಯನ್ನು ಪ್ರತಿನಿಧಿಸುವಂತಹ ಪ್ರಯತ್ನಗಳನ್ನು ಇಲ್ಲಿ ಮಾಡುತ್ತಿದ್ದಾರೆಂದು ನಾನು ಭಾವಿಸಿದ್ದೇನೆ. ಬಹುಶಃ ಈಗಾಗಲೇ ನನಗಿಂತ ಮುಂದೆ ಮಾತನಾಡಿದಂತಹ ಸನ್ಮಾನ್ಯ ರಾಮಕೃಷ್ಣರವರು ಒಳ್ಳೆಯ ರೀತಿಯ ವಿಚಾರಗಳನ್ನು ತಿಳಿಸಿದ್ದಾರೆ. ಈ ರಾಜ್ಯದಲ್ಲಿ ಇರುವಂತಹ ವ್ಯವಸ್ಥೆಗಳನ್ನು ರಾಜ್ಯಪಾಲರ ಭಾಷಣ ಯಾವ ರೀತಿಯಿಂದ ಪ್ರತಿಬಿಂಬಿಸಬೇಕೆಂದು ಹೇಳುವುದನ್ನು ಹಲವಾರು ಅಂಶಗಳನ್ನು ತಮ್ಮ ಮುಂದೆ ಇರುವ ಪ್ರಾಮಾಣಿಕ ಪ್ರಯತ್ನವನ್ನು ಅವರು ಮಾಡಿದರು ಎಂದು ನನಗನ್ನಿಸುತ್ತದೆ.

ಪ್ರಾಯಶಃ ಇಂತಹ ಸಂದರ್ಭದಲ್ಲಿ ಕ್ರಿಟಿಸಿಸಮ್ ಅನ್ನುವುದು ಕನ್‌ಸ್ಟ್ರಕ್ಟೀವ್ ಕ್ರಿಟಿಸಿಸಮ್ ಆದರೆ ಮಾತ್ರ ಈ ಸದನದಲ್ಲಿ ನಡೆಯುವಂತಹ ಕಾರ್ಯ ಕಲಾಪಗಳಿಗೆ ತುಂಬಾ ಮಹತ್ವ ಬರುತ್ತದೆ ಎಂದು ನಾನು ಭಾವಿಸುತ್ತೇನೆ. ಇಲ್ಲಿ ಆಡಳಿತ ಪಕ್ಷದ ಪರವಾಗಿ ರಾಜ್ಯಪಾಲರ ಭಾಷಣಕ್ಕೆ ಒಂದು ಅಭಿನಂದನಾ ನಿರ್ಣಯವನ್ನು ಮಾಡುವಂತಹ ಸಂದರ್ಭದಲ್ಲಿಯೂ ಕೂಡ ತಾವು ಮಾಡಿದ್ದೇ ದೊಡ್ಡ ಸಂಗತಿ ಎಂದು ಹೇಳುವುದು ಪ್ರತಿಪಕ್ಷದವರು ಅದನ್ನು ವಿರೋಧ ಮಾಡುವುದನ್ನು ಮಾತ್ರ ಮಾಡುತ್ತಿದ್ದಾರೆ. ಅದು ಸರಿಯಲ್ಲ ಎಂದು ಹೇಳುವ ಭಾವನೆ ನನ್ನದು. ಇವತ್ತಿನ ಈ ಒಂದು ರಾಜ್ಯಪಾಲರ

ಭಾಷಣದಲ್ಲಿ ಪ್ರಾರಂಭಿಕ ಹಂತದಲ್ಲಿ ಹಲವಾರು ವಿಚಾರಗಳನ್ನು ಉಲ್ಲೇಖ ಮಾಡಿದಂತಹ ಸಂದರ್ಭದಲ್ಲಿ ಯಾವುದರ ಬಗ್ಗೆ ಸರ್ಕಾರ ಗಮನ ಹರಿಸಿಲ್ಲ ಎಂದು ಹೇಳುವಂಥದ್ದನ್ನು ನಾವು ನೋಡುವಂತಹ ಕೆಲವು ಪ್ರಾಮಾಣಿಕ ಅಂಶಗಳನ್ನು ತಮ್ಮ ಮುಂದಿಡಲು ಇಚ್ಛೆ ಪಡುತ್ತೇನೆ.

ಇವತ್ತು ಕಾನೂನು ಮತ್ತು ಶಿಸ್ತುಪಾಲನೆ ಬಗ್ಗೆ ಸಾಕಷ್ಟು ಮಾತುಗಳನ್ನು ನಮ್ಮ ರಾಜ್ಯಪಾಲರ ಭಾಷಣದಲ್ಲಿ ಉಲ್ಲೇಖ ಮಾಡಿದರೂ ಕೂಡ ಅದರ ನಂತರದ ವ್ಯವಸ್ಥೆ ಬಗ್ಗೆ ಮಾತನಾಡಬೇಕಾಗಿದೆ. ಇವತ್ತು ಹುಬ್ಬಳ್ಳಿಯಲ್ಲಿ ಧ್ವಜಾರೋಹಣ ಮಾಡಿದಂತಹ ಸಂದರ್ಭದಲ್ಲಿ ಹೊಸದಾಗಿ ಬಂದಂತಹ ಸರ್ಕಾರ ನಾವು ಮಾಡಿದ್ದೇವೆ ಎಂದು ಹೇಳಿ ಬೆನ್ನು ತಟ್ಟಿಕೊಳ್ಳುವಂಥಹ ಪ್ರಯತ್ನವನ್ನು ಇವತ್ತು ಆಡಳಿತ ಮಾಡುವಂತಹ ಸರ್ಕಾರ ಮಾಡಿದೆ. ನಾನು ಹೇಳುತ್ತಿದ್ದೇನೆ ಒಂದು ಕಾಲದಲ್ಲಿ ಇದೇ ಸರ್ಕಾರ ವಿರೋಧ ಪಕ್ಷದ ಸ್ಥಾನದಲ್ಲಿದ್ದಾಗ ಕರ್ನಾಟಕದ ಹುಬ್ಬಳ್ಳಿಯ ಗಲಾಟೆಯ ನಿಮಿತ್ತ ಒಂದು ಈದ್ಗಾ ಮೈದಾನದ ಗಲಾಟೆಯ ವಿಚಾರದಲ್ಲಿ ಒಂದು ಮಾತು ಕೂಡ ಆಡದೆ ಇದರ ಬಗ್ಗೆ ನೈಜ ಜವಾಬ್ದಾರಿ ಹೊತ್ತಿಕೊಳ್ಳಲಿಕ್ಕೆ ಸಾಧ್ಯತೆ ಇಲ್ಲದಂತಹ ಆವತ್ತಿನ ವಿರೋಧ ಪಕ್ಷದ ಸದಸ್ಯರು ಇವತ್ತು ಏನೋ ಗಾಳಿಯಿಂದ ಬಂದು ಇವತ್ತು ನಾವೆಲ್ಲರೂ ಅದನ್ನು ಸಾಧನೆ ಮಾಡಿದ್ದೇವೆ ಎಂದು ಬೆನ್ನು ತಟ್ಟಿಕೊಳ್ಳುವಂತಹ ಕೆಲಸ ಮಾಡುವುದು ಎಷ್ಟರ ಮಟ್ಟಿಗೆ ನ್ಯಾಯ ಎಂಬುದನ್ನು ಯೋಚನೆ ಮಾಡಬೇಕು. ನಾವು ಹೊಸಬರಿದ್ದೇವೆ, ತಾವು ಎರಡನೆಯ ಬಾರಿ ಮೂರನೆಯ ಬಾರಿ ಬಂದವರಿದ್ದೀರಿ. ವಿಚಾರಗಳನ್ನು ಮಂಡನೆ ಮಾಡಲಿಕ್ಕೆ ಅವಕಾಶ ಕೊಡಿ, ಆಮೇಲೆ ಏನು ಹೇಳಬೇಕೋ ಅದನ್ನು ಹೇಳುವಂತಹ ಪ್ರಯತ್ನಗಳನ್ನು ಮಾಡಿ. ಇವತ್ತು ನನ್ನ ಮನಸ್ಸಿನ ಅನಿಸಿಕೆಗಳನ್ನು ಪ್ರಾಮಾಣಿಕವಾಗಿ ರಾಜ್ಯಪಾಲರ ಭಾಷಣದಲ್ಲಿ ನಾನು ಹೇಳಿದ್ದೇನೆ, ಅದು ನಿಜವಾಗಿಯೂ ಯಾವ ರೀತಿಯಲ್ಲಿ ವ್ಯತ್ಯಾಸಗಳು ಇವೆ ಎಂದು ಹೇಳುವುದನ್ನು ಪ್ರತಿಪಾದನೆ ಮಾಡಲಿಕ್ಕೆ ನಾವು ಪ್ರಯತ್ನ ಮಾಡುತ್ತಿದ್ದೇವೆಯೇ ಹೊರತು, ಯಾವುದೇ ನೇರ ಆರೋಪಗಳನ್ನು ಮಾಡತಕ್ಕಂಥಾದ್ದು, ಅದರಿಂದ ಯಾವುದೇ ಶಹಬಸ್‌ಗಿರಿ ಪಡೆದುಕೊಂಡು ನಾಳೆ ಪತ್ರಿಕೆಯಲ್ಲಿ ನಮ್ಮ ಹೆಸರು ಬರುವಂತಹ ಪ್ರಯತ್ನ ಮಾಡುತ್ತಿಲ್ಲ.

ಅಧ್ಯಕ್ಷರು : ಸದಾನಂದ ಗೌಡರೆ, ತಾವು ಹೊಸಬರಿದ್ದೀರಿ, ಆ ರೀತಿ ನಾವು ಮಾತನಾಡಿದಾಗ ಬೇರೆ ಸದಸ್ಯರನ್ನು ಅವಹೇಳನ ಮಾಡಿ ಮಾತನಾಡಿದ ಹಾಗೆ ಆಗುತ್ತದೆ. ಅದರಿಂದ ಹಕ್ಕು ಚ್ಯುತಿ ಬರುತ್ತದೆ, ನಿಮ್ಮ ಉದ್ದೇಶ ಏನೆಂದರೆ ಪಾಪ ಅನುಭವ ಕಡಿಮೆ ಇರುವುದರಿಂದ ತಾವು ಆ ತರಹ ಮಾತನಾಡಿದ್ದೀರಿ, ತಾವು ದಯಮಾಡಿ ಅದನ್ನು ಸೀರಿಯಸ್ಸಾಗಿ ತೆಗೆದುಕೊಳ್ಳಬೇಡಿ. ನೀವು ಮಾತನಾಡತಕ್ಕಂತಹ ಸಂದರ್ಭದಲ್ಲಿ ಪತ್ರಿಕಾ ಪ್ರಚಾರಕ್ಕಾಗಿ ಕೆಲವು ಸದಸ್ಯರು ಮಾತನಾಡುತ್ತಾರೆ ಎಂದು ಹೇಳುವುದು ತಪ್ಪು ಆಗುತ್ತದೆ ದಯಮಾಡಿ ಅದನ್ನು ತಿದ್ದಿಕೊಳ್ಳಿ.

ಶ್ರೀ ಡಿ.ವಿ. ಸದಾನಂದಗೌಡ : ತಪ್ಪಾಗಿದ್ದರೆ ಅದನ್ನು ತಿದ್ದಿಕೊಳ್ಳುವುದಕ್ಕೆ ನಾನು ಸಿದ್ಧನಾಗಿದ್ದೇನೆ. ಹುಬ್ಬಳ್ಳಿಯಲ್ಲಿ ನಡೆದ ಘಟನೆಯ ಬಗ್ಗೆ ಇವತ್ತು ಆಡಳಿತ ಪಕ್ಷದವರು ನಾವೇ ಅದನ್ನು ಮಾಡಿದ್ದುದು ಎಂದು ಹೇಳುವಂತಹ ಕೀರ್ತಿ ತಂದುಕೊಳ್ಳುವಂತಹ ಪ್ರಯತ್ನ ಮಾಡುತ್ತಿದ್ದಾರೆ. ಕಳೆದ ಎರಡು ವರ್ಷಗಳಲ್ಲಿ ಆದಂಥ ಘಟನೆಗಳ ಹಿನ್ನೆಲೆ ಏನಿತ್ತು ಎಂಬುದನ್ನು ಸಮನಿಸಬೇಕು. ಮೊನ್ನೆ ಮೊನ್ನೆ ಆ ಸಂದರ್ಭದಲ್ಲಿ ಅಲ್ಲಿ ಗಲಾಟೆ ಆಗಲಿಲ್ಲ, ಏನೋ ಎಲ್ಲರೂ ಸೇರಿ ಅಲ್ಲಿ ಧ್ವಜಾರೋಹಣ ಮಾಡುವಂತಹ ಕೆಲಸ ಆಯಿತು. ನಂತರದ ದಿನಗಳಲ್ಲಿ ಶಾಂತಿ ಪಾಲನೆ ಮಾಡುವಂತಹ ವ್ಯವಸ್ಥೆ ಮಾಡಲಿಲ್ಲ, ನಂತರದ ದಿನಗಳಲ್ಲಿ ನಡೆದಂತಹ ಗಲಾಟೆಗೆ ಏಕೆ ಇವತ್ತು ಆಡಳಿತ ಪಕ್ಷದವರು ತಮ್ಮ ಜವಾಬ್ದಾರಿಯನ್ನು ಹೊತ್ತುಕೊಳ್ಳುತ್ತಿಲ್ಲ? ಇವತ್ತು ಆಡಳಿತ ಪಕ್ಷದವರು ಶಾಂತಿ ಪಾಲನೆ ಮಾಡುವಂತಹ ದೊಡ್ಡ ಕೆಲಸವನ್ನು ಮಾಡುತ್ತೇವೆಂದು ಹೇಳುತ್ತಾರೆ. ಆದರೆ ಪ್ರಾಯಶಃ ಮೊನ್ನೆಯವರೆಗೆ ಅಂತಹ ಗಲಾಟೆಯಾಗಿರುವುದು ತಮಗೆ ಗೊತ್ತಿರಬಹುದು. ತಾವೆಲ್ಲಾ ಚೆನ್ನಾಗಿ ತಿಳಿದುಕೊಂಡಿದ್ದೀರಿ. ಸುಮಾರು 40 ಚೂರಿ

ಇರಿತಗಳು, ಸುಮಾರು 5 ಸಾವುಗಳು ನಡೆದಂತಹ ಸಂದರ್ಭದಲ್ಲಿ ಅದರ ನೈತಿಕ ಜವಾಬ್ದಾರಿಯನ್ನು ಆಡಳಿತ ಪಕ್ಷ ಇವತ್ತು ಏಕೆ ವಹಿಸುತ್ತಿಲ್ಲ? ಒಂದು ಕಡೆ ಧ್ವಜಾರೋಹಣದ ಮಾಡಿದಂತಹ ಕೀರ್ತಿ ತಮಗೆ ಸೇರಬೇಕೆಂದು ಹೇಳುತ್ತಾ ತದನಂತರ ಆದ ಗಲಾಟೆಗೆ ಯಾರು ಜವಾಬ್ದಾರರು ಎಂದು ಹೇಳುವಂತಹ ನೈತಿಕ ಹೊಣೆಯನ್ನು ಅವರು ಏಕೆ ಹೊತ್ತುಕೊಳ್ಳುತ್ತಿಲ್ಲ? ಇವತ್ತು ಶಾಂತಿ ಪಾಲನೆ ಮತ್ತು ಕಾನೂನಿಗೆ ಆದ್ಯತೆ ಕೊಡಬೇಕೆಂದು ಹೇಳುವಂತಹ ಮಾತುಗಳನ್ನು ಆಡುತ್ತಿದ್ದಾರೆಯೇ ಹೊರತು ಈ ಒಂದು ನೈತಿಕ ಹೊಣೆಯನ್ನು ಹೊತ್ತು ಅವರು ಸದನದಲ್ಲಿ ಈ ಬಗ್ಗೆ ಒಂದು ಸತ್ಯವಾದ ವಿಚಾರಗಳನ್ನು ಹೇಳುವಂತಹ ಪ್ರಯತ್ನವನ್ನು ಮಾಡುತ್ತಿಲ್ಲ.

ಅ ಒಂದು ಸಂದರ್ಭದಲ್ಲಿ ಶಿಸ್ತು ಪಾಲನೆಯಲ್ಲಿ ಹೆಚ್ಚು ಕಡಿಮೆಯಾದ ತಕ್ಷಣ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರೆ. ಅದನ್ನು ನಾನು ಖಂಡಿತ ಸ್ವಾಗತಿಸುತ್ತೇನೆ. ಆದರೆ ಅದರ ನಂತರ ಕೂಡ ತಮ್ಮ ಸರ್ಕಾರದಿಂದ ಮಂತ್ರಿಗಳು ಅಲ್ಲಿಗೆ ಹೋದ ನಂತರ ಕೂಡ ನಿರಂತರವಾಗಿ ಮತ್ತೆ ಕೂಡ ಅಲ್ಲಿ ಶಾಂತಿ ಪಾಲನೆ ಆಗಲಿಲ್ಲ, ಅವ್ಯವಸ್ಥೆ ಆಯಿತು. ಆದ್ದರಿಂದ ಮುಂದಿನ ದಿನಗಳಲ್ಲಿ ಕಾನೂನು ವ್ಯವಸ್ಥೆಗೆ ಹೆಚ್ಚಿನ ಆದ್ಯತೆ ಕೊಡುವಂತಹ ಅವಶ್ಯಕತೆ ಇದೆ ಎಂದು ಹೇಳುತ್ತನೆ. ಮೊನ್ನೆ ತಾಲ್ಲೂಕು ಪಂಚಾಯತ್, ಮತ್ತು ಜಿಲ್ಲಾ ಪಂಚಾಯಿತಿ ಚುನಾವಣೆಗಳಲ್ಲಿ ಅತ್ಯಂತ ಗಂಭೀರವಾದಂಥ ಹಲವಾರು ಪ್ರಕರಣಗಳು ಎಲ್ಲಾ ಕಡೆ ನಡೆದಿರುವುದನ್ನು ನಾವು ನೋಡಿದ್ದೇವೆ. ಕುಂದಾಪುರದಲ್ಲಿ ಪ್ರಾಯಶಃ ತಮಗೆ ಗೊತ್ತಿರಬಹುದು ಅತ್ಯಂದ ದೊಡ್ಡ ಘಟನೆ ನಡೆದಿದೆ ಏನೇನೋ ಗಲಾಟೆಗಳು ಆಗಿ ನಿರಪರಾಧಿಗಳ ಮೇಲೆ ಸುಮ್ಮನೆ ಕೇಸ್ ದಾಖಲಾತಿಸುವ ವ್ಯವಸ್ಥೆಗಳು ಇವತ್ತಿನ ಆ ಒಂದು ಸಂದರ್ಭದಲ್ಲಿ ಆಗಿದೆ.

ಇಂತಹ ಅಧಿಕಾರಿಗಳ ಮೇಲೆ ಕೂಡ ಕಾನೂನಿನ ಯಾವುದೇ ಕ್ರಮ ಕೈಗೊಳ್ಳುವಂತಹ ಪ್ರಯತ್ನ ಮಾಡಿಲ್ಲ. ಅದರಿಂದಾಗಿ ನನ್ನ ವಿನಂತಿ ಇಷ್ಟೆ ಮುಂದಿನ ದಿನಗಳಲ್ಲಿ ಕಾನೂನು ಮತ್ತು ಶಿಸ್ತು ಪಾಲನೆಗೆ ಅತ್ಯಂತ ಮಹತ್ವದ ಒಂದು ಸ್ಥಾನವನ್ನು ಕಲ್ಪಿಸಿಕೊಟ್ಟಾಗ ಮಾತ್ರ ಸಮಾಜದಲ್ಲಿ ಶಾಂತಿ ಬರಲಿಕ್ಕೆ ಸಾಧ್ಯವಾಗುತ್ತದೆ. ಇದಕ್ಕಾಗಿ ಅಮೂಲಾಗ್ರವಾಗಿ ಒಂದು ಪೊಲೀಸ್ ವ್ಯವಸ್ಥೆ ಮೇಲೆ ತುಂಬ ಬಿಗಿ ಹಿಡಿತವನ್ನು ಸರ್ಕಾರ ಇಟ್ಟುಕೊಳ್ಳುವಂತಹ ಅವಶ್ಯಕತೆ ಇದೆ. ಇವತ್ತು ನಾವು ನೋಡುತ್ತಿದ್ದೇವೆ ಪತ್ರಿಕೆಯಲ್ಲಿ ಪ್ರತಿದಿನ ಬರುತ್ತಿದೆ ಅಲ್ಲಿ ಗೂಂಡಾಗಳನ್ನು ಹಿಡಿದಿದ್ದೇವೆ ಅವರನ್ನು ಬಂಧನ ಮಾಡುತ್ತಿದ್ದೇವೆ ಎಂದು ಇದು ಅತ್ಯಂತ ಸ್ವಾಗತಾರ್ಹವಾದ ವಿಚಾರ. ಆದರೆ ದೊಡ್ಡ ಗೂಂಡಾಗಳನ್ನು ಹಿಡಿಯುವ ಪ್ರಯತ್ನವನ್ನೂ ಯಾರೂ ಕೂಡ ಮಾಡಲಿಲ್ಲ ಎಂಬುದು ನಿಮಗೆಲ್ಲಾ ಗೊತ್ತಿದೆ. ಮಂಗಳೂರಿನಲ್ಲಿ ಇತ್ತೀಚೆಗೆ ಟಾಡಾ ಕಾಯಿದೆಯ ಅಡಿಯಲ್ಲಿ ಬಂಧನ ಮಾಡಿದಂತಹ ಒಂದೆರಡು ವ್ಯಕ್ತಿಗಳ ಸಹಚರರ ಬಗ್ಗೆ ಪೇಪರ್‌ನಲ್ಲಿ ಅವರಹೆಸರುಗಳ ಬಂತೇ ವಿನಹ ಅವರನ್ನು ಬಂಧನ ಮಾಡುವಂತಹ ವ್ಯವಸ್ಥೆ ಆಗಲಿಲ್ಲವೆಂದರೆ ಕಾನೂನಿನ ವ್ಯವಸ್ಥೆಯನ್ನು ಎಷ್ಟರ ಮಟ್ಟಿಗೆ ಸರ್ಕಾರ ನಿಭಾಯಿಸುತ್ತಿದೆ ಎಂಬುದು ಗೊತ್ತಾಗುತ್ತದೆ. ಇದರ ಬಗ್ಗೆ ನಾವೆಲ್ಲಾ ಆಲೋಚನೆ ಮಾಡುವಂತಹ ಅವಶ್ಯಕತೆ ಇದೆ. ಈ ರೀತಿ ಕಾನೂನಿನ ವ್ಯವಸ್ಥೆ ಬಗ್ಗೆ ಖಂಡಿತ ಇಂದಿನ ಸರ್ಕಾರ ಯಾವುದೇ ರೀತಿಯ ಮುತವರ್ಜಿ ವಹಿಸಿಲ್ಲ ಎಂದು ಹೇಳುವುದು ನಮಗೆಲ್ಲಾ ಚೆನ್ನಾಗಿ ತಿಳಿದಿದೆ.

6.50 ಪಿ.ಎಂ

ಸ್ಥಳೀಯ ಆಡಳಿತದ ಬಗ್ಗೆ ಹೇಳಿದರು. ಚುನಾವಣೆಗಳನ್ನು ನಡೆಸುತ್ತೇವೆ ಎಂದು ಹೇಳಿದ ಪ್ರಕಾರ ಚುನಾವಣೆ ನಡೆಸಿದ್ದಾರೆ. ಆದರೆ ಚುನಾವಣೆಗಳನ್ನು ನಡೆಸುವ ಸಂದರ್ಭದಲ್ಲಿಯೂ ಕೂಡ ಹಿಂದಿನ ದಿನಗಳಲ್ಲಿ ಅವರ ಘೋಷಣೆಗಳು ಯಾವರೀತಿ

ಇತ್ತು, ಅದರ ಪ್ರಕಾರ ನಡೆಸಲಿಲ್ಲ, ಇವತ್ತು ಅಧಿಕಾರದ ವಿಕೇಂದ್ರಿಕರಣ ಎಷ್ಟರಮಟ್ಟಿಗೆ ಆಗಿದೆ ಪಂಚಾಯಿತ್ ರಾಜ್‌ನಲ್ಲಿ ಎಂಬುದನ್ನು ತಾವು ನೋಡುವಂತಹ ಅವಶ್ಯಕತೆ ಇದೆ. ಒಂದು ಪಂಚಾಯತ್ ಅಧ್ಯಕ್ಷರಿಗೆ ಎಷ್ಟರಮಟ್ಟಿಗೆ ಹಕ್ಕಿದೆ, ಆ ಪಂಚಾಯತ್ ಸಂಪನ್ಮೂಲ ಕ್ರೋಢೀಕರಣ ಮಾಡುವಂತಹ ವ್ಯವಸ್ಥೆ ಎಷ್ಟರಮಟ್ಟಿಗೆ ಇದೆ. ಸರ್ಕಾರ ಆ ಪಂಚಾಯತಿಗೆ ಎಷ್ಟರಮಟ್ಟಿಗೆ ಇವತ್ತು ಸಂಪನ್ಮೂಲಗಳನ್ನು ಕೊಡುತ್ತದೆ ಎನ್ನುವುದನ್ನು ನಾವು ಪರಿಗಣನೆ ಮಾಡುವಂತಹ ಅವಶ್ಯಕತೆ ಇದೆ. ಪಂಚಾಯತ್ ಮಸೂದೆಯಲ್ಲಿ ಅತ್ಯಂತ ಶೀಘ್ರವಾಗಿ ಅಧಿಕಾರದ ವಿಕೇಂದ್ರಿಕರಣಕ್ಕೆ ಹೆಚ್ಚಿನ ಮಹತ್ವ ಕೊಟ್ಟು ಬದಲಾವಣೆ ಮಾಡುವಂತಹ ಅವಶ್ಯಕತೆ ಇದೆ. ಇದು ಅತ್ಯಂತ ಬೇಗ ಆದರೆ ಮಾತ್ರ ಇವತ್ತು ಸ್ಥಳೀಯ ಆಡಳಿತ ಸಂಸ್ಥೆಗಳಿಗೆ ಹೆಚ್ಚಿನ ಜವಾಬ್ದಾರಿ ಕೊಟ್ಟಂತಾಗುತ್ತದೆ ಎನ್ನುವುದನ್ನೂ ಕೂಡ ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಕೈಗಾರೀಕರಣಕ್ಕೆ ಹೆಚ್ಚು ಒತ್ತು ಕೊಡಬೇಕು ಎಂದು ಹೇಳುವಂತಹ ಪ್ರಯತ್ನಗಳನ್ನು ಮಾಡಿದರು. ಆದರೆ ಏನಾಯಿತು? ವಿದೇಶಿ ಮಾಧ್ಯಮಗಳನ್ನು ಇಲ್ಲಿ ಆಹ್ವಾನ ಮಾಡಿದರೆ ಹೊರತು ಸ್ವದೇಶಿ ಮಾಧ್ಯಮಗಳ ಬಗ್ಗೆ ಏನು ಮಾಡಿದ್ದಾರೆ? ಸಣ್ಣ ಸಣ್ಣ ಗುಡಿ ಕೈಗಾರಿಕೆಗಳ ಬಗ್ಗೆ ಹೆಚ್ಚಿನ ಒತ್ತು ಕೊಡದೇ ಕೇವಲ ವಿದೇಶಿ ಸಂಸ್ಥೆಗಳನ್ನು ಇಲ್ಲಿ ಆಹ್ವಾನ ಮಾಡುವುದರ ಮೂಲಕ ಇಲ್ಲಿರುವಂತಹ ನಿರುದ್ಯೋಗಿ ಯುವಕರಿಗೆ ಮತ್ತು ಇಲ್ಲಿ ಇರುವಂತಹ ಎಲ್ಲಾ ಸಣ್ಣ ಮಟ್ಟಿನ ಕೈಗಾರಿಕೆ ಮಾಡುವಂತಹ ಎಲ್ಲಾ ವ್ಯಕ್ತಿಗಳಿಗೆ ದೊಡ್ಡ ಪ್ರಹಾರ ಮಾಡುವಂತಹ ಸಂಗತಿಗಳು ಆಗಿವೆ.

ಉದಾಹರಣೆಗೆ ಇವತ್ತು ನಾವು ನೋಡಬಹುದು. ಇವತ್ತು ಜಪಾನ್ ಮಾದರಿ ರೀತಿಯಲ್ಲಿ ಇಡೀ ಕೈಗಾರಿಕೆಯನ್ನು ದೊಡ್ಡ ರೀತಿಯಲ್ಲಿ ಬೆಳೆಸಿದರೆ ಬಹುಶಃ ಎಲ್ಲಾ ನಿರುದ್ಯೋಗಿಗಳಿಗೆ ಉದ್ಯೋಗವನ್ನು ಕಲ್ಪನೆ ಮಾಡುವಂತಹ ವ್ಯವಸ್ಥೆ ಆಗಬಹುದು. ನಮಗೆ ಗೊತ್ತಿರುವ ಪ್ರಕಾರ ಇವತ್ತು ಜಪಾನ್ ಅಂತಹ ರಾಜ್ಯಗಳಲ್ಲಿ ಯಾವುದಾದರೂ ಒಂದು ಸಣ್ಣ ವಸ್ತು ಆಗಬೇಕು ಎಂದರೆ ಆ ವಸ್ತುಗಳ ಬಿಡಿ ಭಾಗಗಳನ್ನು ಬೇರೆ ಬೇರೆ ಮನೆಗಳಲ್ಲಿ ತಯಾರು ಮಾಡಿ ಅದನ್ನು ಒಂದು ಹಂತಕ್ಕೆ ತಂದು ಆ ಎಲ್ಲಾ ಬಿಡಿ ಭಾಗಗಳನ್ನು ಸೇರಿಸಿ ಒಂದು ವಸ್ತುವನ್ನು ಮಾಡುವಂಥದ್ದನ್ನು ನಾವು ನೋಡಿದ್ದೇವೆ. ನಮ್ಮಲ್ಲಿ ಸಾಕಷ್ಟು ಯುವಕರು ನಿರುದ್ಯೋಗದಿಂದ ಕಣ್ಣೀರಿನಲ್ಲಿ ಕೈ ತೊಳೆಯುತ್ತಿರುವಂತಹ ಸಂದರ್ಭದಲ್ಲಿ ಈ ರೀತಿ ಕೈಗಾರಿಕೆಗಳಿಗೆ ಆದ್ಯತೆ ಕೊಡುತ್ತಾ ಇದ್ದರೆ ತುಂಬಾ ಜನರಿಗೆ ತಮ್ಮ ಕಾಲ ಮೇಲೆ ನಿಲ್ಲುವಂತಹ ವ್ಯವಸ್ಥೆ ಆಗುತ್ತಿತ್ತು. ಸ್ವಂತ ಕಾಲ ಮೇಲೆ ನಿಂತಾಗ ಅವರೆಲ್ಲಾ ಸಮಸ್ಯೆಗಳು ಪರಿಹಾರ ಆಗುವುದಕ್ಕೆ ಸಾಧ್ಯತೆ ಇದೆ. ಅದರ ಬದಲು ದೊಡ್ಡ ದೊಡ್ಡ ವಿದೇಶಿ ಕೈಗಾರಿಕಾ ಸಂಸ್ಥೆಗಳನ್ನು ಆಹ್ವಾನ ಮಾಡುವುದರ ಮೂಲಕ ನಮ್ಮ ಯುವಕರಿಗೆ ಅತ್ಯಂತ ದೊಡ್ಡ ಪ್ರಹಾರ ಮಾಡುವಂತಹ ಸರ್ಕಾರ ಇದಾಗಿದೆ ಎಂದು ಹೇಳುವಂತಹ ಸಂದರ್ಭ ಬಂದಿದೆ. ಈ ರೀತಿ ನಾವು ಕೈಗಾರಿಕಾ ರಂಗಗಳಲ್ಲೂ ಕೂಡ ನಮ್ಮ ನೀತಿಯನ್ನು ಬದಲಾವಣೆ ಮಾಡಿಕೊಂಡು ಮುಂದಿನ ದಿನಗಳಲ್ಲಿ ಆ ಸಣ್ಣ ಕೈಗಾರಿಕೆಗಳಿಗೆ ಹೆಚ್ಚಿನ ಒತ್ತು ಕೊಡುವುದರ ಮೂಲಕ ಯುವಕರಿಗೆ ಹೆಚ್ಚಿನ ಆದ್ಯತೆ ಕೊಡುವಂಥದ್ದು ಅತ್ಯಂತ ಸೂಕ್ತ ಎಂದು ಕಾಣುತ್ತದೆ. ಸಹಕಾರ ಸಂಘಗಳ ಬಗ್ಗೆ ರಾಜ್ಯಪಾಲರ ಭಾಷಣದಲ್ಲಿ ಆಗಲಿ ಅಥವಾ ಇನ್ನಾವುದರಲ್ಲೇ ಆಗಲಿ ಪ್ರಸ್ತಾಪ ಮಾಡಲಿಲ್ಲ. ನಾವು ನೋಡುತ್ತಿದ್ದೇವೆ, ಎಲ್ಲಾ ರಾಜಕೀಯ ಪಕ್ಷಗಳು ಏನು ಮಾಡುತ್ತಿದ್ದಾರೆ ಎಂದರೆ ಸಹಕಾರ ರಂಗಗಳಲ್ಲಿ ರಾಜಕೀಯ ಹಸ್ತಕ್ಷೇಪ ಮಾಡುತ್ತಿದ್ದಾರೆ. ಎಲ್ಲಾ ಹೇಳುತ್ತಿರುವ ಹಾಗೆ ನಾನೂ ಸಹ ಮಾಡಬಾರದು ಎಂದು ಹೇಳುತ್ತೇನೆ. ಆದರೆ ಪ್ರತಿಯೊಂದು ಸರ್ಕಾರ ಕೂಡ ಅಧಿಕಾರಕ್ಕೆ ಬಂದ ತಕ್ಷಣ ಅಲ್ಲಿ ತಮ್ಮ ಪಕ್ಷದವರನ್ನು ನಾವು ನಿರ್ದೇಶನ ಮಾಡುವುದರ ಮೂಲಕ ಅಧಿಕಾರಿಗಳ ಹಸ್ತಕ್ಷೇಪ ಮಾಡುತ್ತಿರುವುದನ್ನು ನೋಡುತ್ತಿದ್ದೇವೆ.

ಇವತ್ತು ಈ ಸರ್ಕಾರ ಗೂಡ ಅದೇ ಕೆಲಸವನ್ನು ಮಾಡುವಂಥದ್ದನ್ನು ನಾವು ನೋಡುತ್ತಿದ್ದೇವೆ. ನನ್ನ ವಿನಂತಿ ಇಷ್ಟೇ, ಇನ್ನು ಮುಂದಕ್ಕಾದರೂ ಸಹಕಾರ ರಂಗದಲ್ಲಿ ಹಸ್ತಕ್ಷೇಪ ನಿಲ್ಲಿಸುವುದರ ಮುಖಾಂತರ ಸಹಕಾರ ರಂಗವನ್ನು ತನ್ನ ಕಾಲ ಮೇಲೆ ನಿಂತುಕೊಳ್ಳುವಂತಹ ವ್ಯವಸ್ಥೆ ಮಾಡಬೇಕು. ಇವತ್ತು ಏನಾಗುತ್ತಿದೆಯೆಂದರೆ ಸಹಕಾರ ರಂಗಗಳ ನಾಮ ನಿರ್ದೇಶನ ಎಷ್ಟರಮಟ್ಟಿಗೆ ಮಾರಕ ಎಂದರೆ ಒಂದು ಸಣ್ಣ ಉದಾಹರಣೆ ಕೊಡುವುದಕ್ಕೆ ಇಚ್ಛೆಪಡುತ್ತೇನೆ. ಮಂಗಳೂರಿನಲ್ಲಿ ಜನತಾ ಬಜಾರ್‌ನ ಬಗ್ಗೆ.......

ಶ್ರೀ ಡಿ.ಕೆ. ಶಿವಕುಮಾರ್ : ಈಗ ರಾಜಸ್ಥಾನದಲ್ಲಿ ಏನು ಮಾಡುತ್ತಿದ್ದಾರೆ?

ಶ್ರೀ ಡಿ.ವಿ. ಸದಾನಂದ ಗೌಡ : ನಾನು ನಮ್ಮ ಸರ್ಕಾರದ ರೀತಿ ನೀತಿಗಳ ಬಗ್ಗೆ ತಮ್ಮ ಗಮನವನ್ನು ಸೆಳೆಯುವುದಕ್ಕೆ ಇಚ್ಚೆಪಡುತ್ತೇನೆ.

ಶ್ರೀ ಡಿ.ಕೆ. ಶಿವಕುಮಾರ್ : ಈಗ ನಾಮಿನೇಷನ್ ವಿಚಾರದ ಬಗ್ಗೆ ನಮ್ಮ ಜಾಲಪ್ಪನವರು ಅಥಾರಿಟಿ ಎಂದು ಕಾಣುತ್ತದೆ. ಈ ಸೊಸೈಟಿ ನಾಮಿನೇಷನ್ ವಿಚಾರದಲ್ಲಿ ಮತ್ತೊಂದರಲ್ಲಿ ಅವರು ಅಥಾರಿಟಿ. ಸದಾನಂದ ಗೌಡರು ಹೇಳಬೇಕು.

ಈಗ ಎಲ್ಲೆಲ್ಲಿ ಉತ್ತರ ಭಾರತದಲ್ಲಿ ಬಿಜೆಪಿ ಸರ್ಕಾರ ಇದೆ ಅಲ್ಲಿ ಎಲ್ಲಾ ಕಡೆಯೂ ಕೋ-ಆಪರೇಟೀವ್‌ನಲ್ಲಿ ನಾಮಿನೇಷನ್ ನಿಲ್ಲಿಸಿಬಿಟ್ಟಿದ್ದಾರೆ, ಅದರ ಬಗ್ಗೆ ಮಾತನಾಡಿ.

(ಗೊಂದಲ)

ಶ್ರೀ. ಬಿ.ಕೆ ಶಿವಕಾಮಾರ್ : ನಾನು ಒಬ್ಬ ಇಂಡಿಪೆಂಡೆಂಟ್ ಸದಸ್ಯ, ನಿಮ್ಮ ಪರವಾಗಿ ಮಾತನಾಡಬಹುದು, ಒಳ್ಳೆಯ ವಿಚಾರ ಇತ್ತು ಎಂದರೆ ಅವರ ಪರವಾಗಿ ಮಾತನಾಡಬಹುದು, ಕೆಸಿಪಿ ಪರವಾಗಿ ಮಾತನಾಡಬಹುದು, ಕಾಂಗ್ರೆಸ್ ಪರವಾಗಿ ಮಾತನಾಡಬಹುದು, ಇಧು ನನ್ನ ಸ್ಟಾಂಡ್.

ಶ್ರೀ ಕೆ.ಎನ್. ನಾಗೇಗೌಡ : ನಮ್ಮ ಸದಾನಂದಗೌಡರು ಟ್ರೂ ಬಿಜೆಪಿ ಪರ್ಸನ್. ಬೇರೆ ರಾಜ್ಯಗಳು ಇದೆಯಲ್ಲಾ ಅವರು ಆಡಳಿತ ಮಾಡತಕ್ಕಂಥ ರಾಜ್ಯಗಳಲ್ಲಿ ಯಾವ ರೀತಿ ಮಾಡುತ್ತಿದ್ದಾರೆ ಎಂಬುದನ್ನು ತಿಳಿದುಕೊಳ್ಳಲೇಬೇಕು. ಮಾನ್ಯ ವೈ. ರಾಮಕೃಷ್ಣರವರು ಬೇಸಿಕಲಿ ಟ್ರೂ ಕಾಂಗ್ರೆಸ್ ಅವರು. ಅನ್‌ಫಾರ್ಚ್ಯುನೇಟಲಿ ಅವರು, ನಂಜೆಗೌಡರು ಜಿವರಾಜ್‌ಆಳ್ವರವರು ಎಲ್ಲಾ ಅಲ್ಲಿ ಹೋಗಿ ಕುಳಿತಿದ್ದಾರೆ.

(ಗೊಂದಲ)

ಶ್ರೀ ಕೆ,ಎನ್. ನಾಗೇಗೌಡ : ನಾನು ವಿಧಾನ ಪರಿಷತ್ತಿನಲ್ಲಿ ಒಂದು ಮಾತು ಹೇಳಿದ್ದೆ. ಈ ದೇಶದ ಕಲ್ಯಾಣಕ್ಕೋಸ್ಕರ, ಈ ದೇಶದ ಪ್ರಜಾಪ್ರಭುತ್ವವನ್ನು ಉಳಿಸಿಕೊಳ್ಳುವುದಕ್ಕೋಸ್ಕರ ಆಲ್ ಸೆಕ್ಯೂಲರ ಫೋರ್ಸಸ್ ಎಕ್ಸೆಪ್ಟ್ ಬಿಜೆಪಿ, ಎಲ್ಲಾ ಪೊಲಿಟಿಕಲ್ ಪಾರ್ಟೀಸ್ ಒಂದಾಗಬೇಕಂದು ಹೇಳಿದ್ದೆನೆ.

(ಗೊಂದಲ)

ಶ್ರೀ ಕೆ.ಎನ್. ನಾಗೇಗೌಡ : ನಾನು ಈ ಮಾತು ಇವತ್ತು ಹೇಳಿದ್ದಲ್ಲ.

ಶ್ರೀ ವೈ. ರಾಮಕೃಷ್ಣ : ಎಲ್ಲಾ ಒಂದಾಗಬೇಕು ಎಂದು ಏಕೆ ಹೇಳುತ್ತಾರೆ ಎಂದರೆ ಎಲ್ಲರಿಗೂ ಗೊತ್ತು. ಈ ಪಾರ್ಟಿ ಬರುತ್ತದೆ ಎಂದು. ಇವತ್ತು ಉದಾಹರಣೆಗೆ ತೆಗೆದುಕೊಳ್ಳಿ. ಬಿಹಾರ್ ಎಲೆಕ್ಷನ ಆಗಿದೆ. ಬಿಹಾರ್ ಎಲೆಕ್ಷನ್ ನೋಡಿದರೆ ನಮ್ಮ ಪಾರ್ಟಿಗೆ 38 ಸೀಟುಗಳಲ್ಲಿ 22 ಸೀಟು ಹರಿಜನ ಗಿರಿಜನ ಗೆದ್ದಿದ್ದಾರೆ. ಡೆಲ್ಲಿಯಲ್ಲಿ ಎರಡು ಬಿಟ್ಟು ಉಳಿದೆಲ್ಲಾ ನಮ್ಮದೇನೆ. ಷೆಡ್ಯೂಲ್ ಕ್ಯಾಸ್ಟ್‌ಗಳ ಬಗ್ಗೆ ನಾನು ಹೇಳುತ್ತಿರುವುದು, ಕಾರಣ ಏನು? ಲೆಟ್ ಮೈ ವರ್ಡ್ಸ್ ಗೋ ಇನ್‌ಟು ರೆಕಾರ್ಡ್.

ಕಾಂಗ್ರೆಸ್‌ನವರು ಯಾವಾಗ ನಮಗೆ ಮೋಸ ಮಾಡಿದರು, ಆಗ ಬಿಜೆಪಿಯವರು ತಬ್ಬಿಕೊಂಡರು. ಅದು ಅಷ್ಟೇ ಹೊರತು ಅದು ಬಿಟ್ಟು ಬೇರೆ ಇಲ್ಲ.

(ಗೊಂದಲ)

ಶ್ರೀ ಬಿ. ರಮಾನಾಥ್ ರೈ : ವೈ. ರಾಮಕೃಷ್ಣರವರನ್ನು ನೋಡುವಾಗ ನನಗೆ ದುಃಖವಾಗುತ್ತದೆ. ಏಕೆಂದರೆ ಅವರು ಅಧಿಕಾರಕ್ಕೆ ಬರುತ್ತೇವೆ ಎಂದು ಅಂದುಕೊಂಡಿದ್ದಾರೆ. ಇನ್ನು ಮೇಲೆ ಅವರು ಅಧಿಕಾರಕ್ಕೆ ಬರುವುದಿಲ್ಲ.

(ಗೊಂದಲ)

ಶ್ರೀ ರಮಾನಾಥ್ ರೈ : ನೀವು ಅಧಿಕಾರಕ್ಕೆ ಬರುತ್ತೇವೆ ಎಂದು ಅಲ್ಲಿ ಸೇರಿಕೊಂಡಿದ್ದೀರಿ. ಅಧಿಕಾರಕ್ಕೆ ಬರುವುದಿಲ್ಲ. ನೀವು ಇನ್ನೊಂದು ಪಕ್ಷ ಸೇರತಕ್ಕಂಥ ತಪ್ಪು ಕೆಲಸವನ್ನು ಮಾಡಬೇಡಿ.

(ಗೊಂದಲ)

ಶ್ರೀ ವೈ. ರಾಮಕೃಷ್ಣ : ಮುಂದೆ ಪಾರ್ಲಿಮೆಂಟ್‌ನಲ್ಲಿ ನಾವು ಅಧಿಕಾರಕ್ಕೆ ಬರುತ್ತೇವೆ.

(ಗೊಂದಲ)

ಅಧ್ಯಕ್ಷರು : ಅಲ್ಲ ಸಿದ್ಧರಾಮಯ್ಯನವರು ಟ್ಯಾಕ್ಸ್ ಹಾಕಿ ಹೋದಮೇಲೆ ಬಂದೆ ಇಲ್ಲ. ಅವರು ಬಂದು ಏನೋ ಮಾತನಾಡುತ್ತಾರೆ ಎಂದರೆ ಏಕೆ ಗಲಾಟೆ ಮಾಡುತ್ತೀರಿ?

ಶ್ರೀ ಸಿದ್ಧರಾಮಯ್ಯ : ಮಾನ್ಯ ರಾಮಕೃಷ್ಣರವರು ಹೇಳುತ್ತಿದ್ದರಲ್ಲಾ ಅಲ್ಲಿ ಹೆಚ್ಚು ಜನ ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗದವರು ಗೆದ್ದು ಬಂದಿದ್ದಾರೆ ಎಂದು. ಅದರೆ ಅಲ್ಲಿ ಪ್ರಸಾದ್ ಯಾದವ್ ಅವರು ಅಲ್ಲಿ ಜನರ ಮುಂದೆ ಹೇಳಿದಂತಹ ವಿಚಾರ ಸಾಮಾಜಿಕ ನ್ಯಾಯ. ಪರಿಶಿಷ್ಟ ವರ್ಗದವರು ಇವರ ಪಕ್ಷಕ್ಕೆ ಬಿಹಾರದಲ್ಲಿ ಓಟು ಕೊಟ್ಟಿದ್ದರೆ, ಇವರ ಪಕ್ಷದವರೇ ಅಧಿಕಾರಕ್ಕೆ ಬರುತ್ತಿದ್ದರು. ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗದವರು, ಹಿಂದುಳಿದವರು, ಅಲ್ಪಸಂಖ್ಯಾತರು ಜನತಾ ಧಳವನ್ನು ಬೆಂಬಲಿಸಿದ್ದರಿಂದ ಸಾಮಾಜಿಕ ನ್ಯಾಯದ ಪರವಾಗಿ ನಿಂತಿದ್ದರಿಂದ ಅಲ್ಲಿ ಪ್ರಸಾದ್ ಯಾದವ್ ಅವರು ಕಳೆದ ಸಾರಿಗಿಂತ ಹೆಚ್ಚು ಸ್ಥಾನಗಳನ್ನು ಗೆದ್ದು ಅಧಿಕಾರಕ್ಕೆ ಬಂದಿದ್ದಾರೆ. ನಿಮ್ಮ ಪಕ್ಷಕ್ಕೆ ಮುಖಭಂಗ ಅಗಿದೆ. ಪರಿಶಿಷ್ಟ ಜಾತಿಯವರು, ಪರಿಶಿಷ್ ವರ್ಗದವರು ಬಿಜೆಪಿ ಅವರ ಜೊತೆ ನಿಲ್ಲುವುದಕ್ಕೇ ಸಾಧ್ಯವೇ ಇಲ್ಲ. ನಿಮ್ಮ ಪರವಾಗಿಅವರು ಹೋಗುವುದಕ್ಕೆ ಸಾಧ್ಯವೇ ಇಲ್ಲ, ನೀವು ಕನಸನ್ನು ಕಾಣಬೇಡಿ.

(ಗೊಂದಲ)

ಶ್ರೀ ವೈ. ರಾಮಕೃಷ್ಣ : ಜನತೆಯ ನಾಡಿ ಹೇಗಿದೆ ಎಂದು ತಮಗೆ ಗೊತ್ತಿಲ್ಲ.

(ಗೊಂದಲ)

ಶ್ರೀ ಸಿದ್ಧರಾಮಯ್ಯ : ಮತ್ತೆ ರಾಮಕೃಷ್ಣರವರು ಭ್ರಮಾಲೋಕದಲ್ಲಿ ವಿಹರಿಸುವಂತೆ ಕಾಣುತ್ತಿದ್ದಾರೆ. ಕರ್ನಾಟಕದಲ್ಲಿ ಒಮ್ಮೆ ನೀವು ವಿಹರಿಸಿ ಅದರಿಂದ ನಿಮ್ಮ ಭ್ರಮೆ ಭಗ್ನವಾಗಿದೆ. ಮತ್ತೆ ದೇಶದಲ್ಲಿ ಅದನ್ನು ಮಾಡುವುದಕ್ಕೆ ಹೋಗಬೇಡಿ. ಮತ್ತೆ ನೀವು ಭ್ರಮೆ ನಿರಸನವಾಗುತ್ತೀರಿ. ಹಿಂದುಳಿದವರು ನಿಮ್ಮ ಜೊತೆ ಇಲ್ಲ. ಪರಿಶಿಷ್ಟ ಜಾತಿ, ಅಲ್ಪ ಸಂಖ್ಯಾತರು, ದುರ್ಬಲ ವರ್ಗದವರು ಯಾವತ್ತೂ ಕೂಡ ನಿಮ್ಮ ಜೊತೆ

ನಿಲ್ಲುವುದಿಲ್ಲ. ಆದರೆ ನಿಮ್ಮ ಪಕ್ಷ ಎಂದೆಂದೂ ಕೂಡ ಈ ದೇಶದಲ್ಲಿ ಅಧಿಕಾರಕ್ಕೆ ಬರುವುದಕ್ಕೆ ಸಾಧ್ಯವೇ ಇಲ್ಲ. ಅದನ್ನು ತಿಳಿದುಕೊಂಡು ಬಿಡಿ.

(ಗೊಂದಲ)

ಶ್ರೀ ವೈ. ರಾಮಕೃಷ್ಣ : ಗುಜರಾತ್, ಮಹಾರಾಷ್ಟ್ರ ಎಲಲೆಕ್ಷನ್‌ನ್ನು ನೋಡಿ. ಬಿಹಾರದಲ್ಲಿ ನೋಡಿ.

(ಗೊಂದಲ)

ಶ್ರೀ ಸಿದ್ಧರಾಮಯ್ಯ : ಮಹಾರಾಷ್ಟ್ರದಲ್ಲಿ ಯಾರು ಓಟು ಕೊಟ್ಟಿದ್ದರೆ ಎನ್ನುವುದು ಇದೆ. ಅಲ್ಲೂ ಪ್ರಸಾದ್ ಯಾದವ್‌ಗೆ ಯಾರು ಓಟು ಕೊಟ್ಟಿದ್ದಾರೆ ಎನ್ನುವುದು ಇದೆ. ಆದುದರಿಂದ ನಿಮ್ಮ ಜೊತೆ ಹಿಂದುಳಿದವರು, ಷೆಡ್ಯೂಲ್‌ಕ್ಯಾಸ್ಟ್‌ನವರು ನಿಲ್ಲುವುದಿಲ್ಲ.

ಶ್ರೀ ವೈ. ರಾಮಕೃಷ್ಣ : ಇಂಡಿಯಾದೇಶದಲ್ಲಿ ಎಲ್ಲೋ ಒಂದು ರಾಜ್ಯದಲ್ಲಿ ಅಂದರೆ ಅದನ್ನು ಇಂಡಿಯಾದಲ್ಲೇ ಏಕೆ ಅಂತು ಎಂದು ಕಲ್ಪನೆ ಮಾಡಿಕೊಳ್ಳತಕ್ಕಂಥದ್ದು ಸರಿಯಲ್ಲ. ಅದನ್ನು ಮಹಾರಾಷ್ಟ್ರದಲ್ಲಿ ಏಕೆ ಹೇಳುವುದಿಲ್ಲ, ದೆಹಲಿ, ಮಧ್ಯಪ್ರದೇಶದ ಬಗ್ಗೆ ಏಕೆ ಹೇಳುವುದಿಲ್ಲ.

ಶ್ರೀ ಸಿದ್ಧರಾಮಯ್ಯ : ಪರಿಶಿಷ್ಟ ಜಾತಿಯ ಜನರು ನಿಮಗೆ ಬೆಂಬಲ ಕೊಟ್ಟಿದ್ದಾರೆಂದು ತಿಳಿದುಕೊಳ್ಳಬೇಡಿ. ಎಲ್ಲಿ ನೀವು ಗೆದ್ದಿದ್ದೀರಿ ಅಲ್ಲಿ ಕೊಟ್ಟಿಲ್ಲ. ಕರ್ನಾಟಕದಲ್ಲಿ ಆನೇಕಲ್‌ನಲ್ಲಿ ನೀವು ನೋಡಿದ್ದೀರಲ್ಲಾ..

SRI. Y. RAMAKRISHNA: You are not a political saint, politically you are immature .

ಶ್ರೀ ಸಿದ್ಧರಾಮಯ್ಯ : ಮಾನ್ಯ ವೈ. ರಾಮಕೃಷ್ಣರವರ ಬಗ್ಗೆ ನನಗೆ ಗೌರವವಿದೆ. ಅವರು ಮಾತನಾಡುವಾಗ ವಿಧಾನಸಭಾ ಚುನಾವಣೆಗಳಲ್ಲಿ ಬಿ, ಜೆ.ಪಿ ಕ್ಷೇತ್ರದಲ್ಲಿ ಎಷ್ಟು ಜನರು ಗೆದ್ದು ಬಂದಿದ್ದಾರೆಂದು ಪರಶೀಲನೆ ಮಾಡಬೇಕು.

ಅಧ್ಯಕ್ಷರು : ಅವರು ಆ ರೀತಿ ಹೇಳಲಿಲ್ಲ. ನಾವು ಬಾರಿ ಮತದಲ್ಲಿ ಗೆಲ್ಲುತ್ತೇವೆಂದು ಹೇಳಿದ್ದುದು.

(ಗೊಂದಲ)

ನೀವು ವೈ. ರಾಮಕೃಷ್ಣರವರು, ನಂಜೇಗೌಡರು ಎಲ್ಲಾ ಹೊಸದಾಗಿ ಬಂದವರು. ಮೊದಲಿನಿಂದ ಇರುವವರು ಮಾತನಾಡುತ್ತಾರೆ. ಸ್ವಲ್ಪ ನೀವು..

ಶ್ರೀ ಸಿ.ಎಂ. ಉದಾಸಿ : ಶ್ರೀ ವೈ. ರಾಮಕೃಷ್ಣರವರು ಪೊಲಿಟಿಕಲಿ ಮೆಚ್ಯೂರಿಟಿ ಇಲ್ಲವೆಂದು ಹೇಳಿದರು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ವೈ. ರಾಮಕೃಷ್ಣರವರು ಬಾಲ್ಯಾವಸ್ಥೆ ಯೌವನಾವಸ್ಥೆಯನ್ನು ಮತ್ತು ವಾನಪ್ರಸ್ಥಾಶ್ರಮವನ್ನು ನಮ್ಮಲ್ಲಿ ಕಳೆದರು. ಈಗ ಸನ್ಯಾಸ ಆಶ್ರಮವನ್ನು ಕಳೆಯಲು ಬಿ.ಜೆ.ಪಿಗೆ ಹೋಗಿದ್ದಾರೆ. ಈಗ ಅಲ್ಲಿ ಚೆನ್ನಾಗಿದೆ, ನಮ್ಮನ್ನು ಅಪ್ಪಿಕೊಂಡಿದ್ದಾರೆ ಎನ್ನುತ್ತಾರೆ.

ಅಧ್ಯಕ್ಷರು : ಸನ್ಯಾಸಾಶ್ರಮಕ್ಕೆ ಹೋಗಬೇಕಾದರೆ ಪವಿತ್ರವಾದ ಸ್ಥಳವೇ ಬೇಕು. ಈಗ ನಾನು ಹೇಳುವುದೇನೆಂದರೆ ಮಾನ್ಯ ನಂಜೇಗೌಡರು ಸನ್ಯಾಶ್ರಮಕ್ಕೆ ಹೋಗುವುದಕ್ಕೆ ನಾನು ಅನುಮತಿ ಕೊಡುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅವರು ವಾನಪ್ರಸ್ಥಾಶ್ರಮದಲ್ಲೇ ಇದ್ದರು. ಈಗ ಅವರು ಬಿ.ಜೆ.ಪಿ.ಯನ್ನು ಹುಡುಕಿಕೊಂಡು ಸನ್ಯಾಸ್ರಮಕ್ಕೆ ಹೋಗಿದ್ದಾರೆ. ಅವರು ಕಾಂಗ್ರೆಸ್ ಪಕ್ಷದಲ್ಲೇ ಇದ್ದು ಅನುಭವವಾಗಿ ಶಾಸಕರಾಗಿ, ಎಂ.ಪಿ.ಯಾಗಿ, ಮಂತ್ರಿಗಳಾಗಿ, ಎಲ್ಲವನ್ನು ಅನುಭವಿಸಿದ್ದಾರೆ. ಈಗ ಅವರಿಗೆ ಕಾಂಗ್ರೆಸ್ ಸರಿಯಿಲ್ಲವೆನಿಸಿತು. ಈಗ ಬಿ.ಜೆಪಿ. ಚೆನ್ನಾಗಿದೆ. ಒಂದು ಏನೆಂದರೆ ಅದು ಈಗಾಗಲೇ ಕಡತದಲ್ಲಿ ಬಂದಿತ್ತು. ಅದನ್ನು ಬೇಡವೆಂದು ಹೇಳಿದರು. ಅವರು ಚಿಕ್ಕಂದಿನಿಂದಲೇ ಯಾವ ತತ್ವಕ್ಕೆ ಅಂಟಿಕೊಂಡು ಬಂದಿದ್ದಾರೆ ಎಂದರೆ ಮಹಾತ್ಮ ಗಾಂಧಿಯವರ, ನೆಹರುರವರ ತತ್ವಕ್ಕೆ ಅಂಟಿಕೊಂಡು ಬಂದಿದ್ದು. ಈಗ ಆ ತತ್ವಕ್ಕೆ ವಿರೋಧವಾದಂತಹ ಜನರ ಜೊತೆಯಲ್ಲಿ ಹೋಗಿದ್ದಾರಲ್ಲಾ.

ಶ್ರೀ. ಎಂ. ನಾರಾಯಣಸ್ವಾಮಿ : ಅವರೆಲ್ಲಾ ಹೋದ ಮೇಲೆ ಅಂತಹ ಜನರೇ ಇಲ್ಲ, ಡಾ. ರಾಜೇಂದ್ರಪ್ರಸಾದ್, ವಲ್ಲಭಬಾಯಿ ಪಟೇಲ್...

ಅಧ್ಯಕ್ಷರು : ಚರಿತ್ರೆಯಲ್ಲಿ ಇನ್ನೂ ಹೆಸರುಗಳು ಇವೆಯಲ್ಲಾ...

ಶ್ರೀ ಎಂ. ನಾರಾಯಣಸ್ವಾಮಿ : ಶವಾಸನ ಹಾಕಿದ್ದಿರಲ್ಲಾ, ಪದ್ಮಾಸನವನ್ನು ಹಾಕಿ ನಂತರ ಶವಾಸನವನ್ನು ಹಾಕಬೇಕು

ಅಧ್ಯಕ್ಷರು : ಜಾಲಪ್ಪನವರೇ, ನೀವು ನಾರಾಯಣಸ್ವಾಮಿಯವರಿಗೆ ಏನಾದರೂ ಹೇಳಿ, ಹೀಗಾದರೆ ಹೇಗೆ?

ಶ್ರೀ ಆರ್.ಎಲ್. ಜಾಲಪ್ಪ : ನೀವು ನಾರಾಯಣಸ್ವಾಮಿಯವರು ಬೀಗರಾದ ಮೇಲೆ ಬಹಳ ಅಲರ್ಟ್ ಆಗಿದ್ದಾರೆ, ನೀವೇ ಕಂಟ್ರೋಲ್ ಮಾಡಬೇಕು. ನನ್ನ ಕೈಯಲ್ಲಿ ಆಗುವುದಿಲ್ಲ ಸ್ವಾಮಿ.

ಶ್ರೀ. ಕೆ.ಎನ್. ನಾಗೇಗೌಡ : ಮಾನ್ಯ ಖರ್ಗೆಯವರು ಒಂದು ವಿಚಾರವನ್ನು ಪ್ರಸ್ತಾಪ ಮಾಡುತ್ತಾ ನಮ್ಮ ಹಿರಿಯರಾದಂತಹ ಮಾನ್ಯ ರಾಮಕೃಷ್ಣರವರಿಗೆ ಒಂದು ವಿಷಯವನ್ನು ಬಹಳ ಚೆನ್ನಾಗಿ ಹೇಳಿದರಿ. ಈ ದೇಶದಲ್ಲಿ ಈ ಪಕ್ಷಗಳ ಬದಲಾವಣೆ ಆಗುವಂಥಾದ್ದು ಇವತ್ತಿನದಲ್ಲ, 20 ವರ್ಷಗಳಿಂದ ಬಂದಿದ್ದುದು. ಇದಕ್ಕೆ ಮಹಾತ್ಮ ಗಾಂಧಿಯವರು ಮೂಲ ಕಾರಣ, ಹೇಗೆಂದರೆ ಮಾನ್ಯ ನಂಜೇಗೌಡರಂತಹ ಅತ್ಯಂತ ನೋವಿನಿಂದ ಸಂಕಷ್ಟದಿಂದ ಬಡತನದಿಂದ, ಆರ್ಥಿಕ ಸಮಸ್ಯೆಗಳಿಂದ ನರಳಿದಂತಹ, ಬಳಲಿದಂತವರು ಮತ್ತು ಮುದ್ದೇನಸಳ್ಳಿ ಶಿವಪ್ಪ ಇವರೆಲ್ಲಾ ಸ್ವತಂತ್ರ ಪಕ್ಷ. ಅತ್ಯಂತ ಶ್ರೀಮಂತ ಶ್ರೀ ಎಸ್.ಎಂ. ಕೃಷ್ಣ, ಅಶೋಕ್ ಮೆಹ್ತಾ ಮತ್ತು ಮೊನ್ನೆ ತೀರಿಕೊಂಡಂತಹ ಶಿವಪ್ಪನವರು ಶ್ರೀಮಂತರಾಗಿ ಬೆಳೆದವರು, ಸಮಾಜವಾದಿ ಪಾರ್ಟಿಯಲ್ಲಿದ್ದವರು. ಹಾಗೆಯೇ ಮಾನ್ಯ ರಾಮಕೃಷ್ಣರವರು ಬಿ.ಜೆ.ಪಿ.ಗೆ ಹೋದರು. ಅದಕ್ಕಾಗಿ ನಾನು ಹೇಳುವುದೇನೆಂದರೆ ದೇಶದಲ್ಲಿ ಹೊಸ ರಾಜಕೀಯ ಧೃಢಿಕರಣ ಬೇಕು. ಆ ಹೊಸ ಧೃಢೀಕರಣ ಕಾಂಗ್ರೆಸ್ ಅಲ್ಲ, ಮಾನ್ಯ ಖರ್ಗೆಯವರೇ, ನಿಮಗೆ ಇನ್ನು ಬುದ್ಧಿ ಬಂದಿಲ್ಲ, ಬಿಹಾರದಲ್ಲಿ 3-4 ಬಾರಿ ಸೋತರೂ ಬುದ್ಧಿ ಬಂದಿಲ್ಲ. ಇನ್ನು ಮೊಯಿಲಿಯವರ ಕರೆ ಮಾನ್ಯ ನರಸಿಂಹರಾಯರು ಎಲ್ಲಿ ನೋಡುತ್ತಾರೆ, ನೋಡುವುದಿಲ್ಲ. ಅದಕ್ಕೆ ದೇಶಕ್ಕೆ ಏನು ಮಾರ್ಗವಿದೆ ಎಂದರೆ ಎಲ್ಲರೂ ಸೇರಿ ಚಿಂತನೆ ಮಾಡಬೇಕು. ನಾನು ಇದನ್ನು ಸುಮಾರು 10 ವರ್ಷಗಳಿಂದಲೂ ಹೇಳುತ್ತಾ ಇದ್ದೇನೆ. ಈ ಸದನದಲ್ಲಿ ಸೆಕ್ಯೂಲರ್ ಫೋರ್ಸಸ್ ಎಲ್ಲಿಯವರೆಗೂ ಒಂದಾಗುವುದಿಲ್ಲ ಅಲ್ಲಿಯವರೆಗೆ ಈ ದೇಶದ ಪ್ರಜಾಪ್ರಭುತ್ವಕ್ಕೆ ಒಂದು ದೊಡ್ಡ ಆಪತ್ತು. ಶ್ರೀಯುತರಾದ ನಂಜೇಗೌಡರು, ವೈ. ರಾಮಕೃಷ್ಣರವರು, ಜೀವರಾಜ ಆಳ್ವರವರು ಬಿ.ಜೆ.ಪಿ.ಯಲ್ಲಿರುವುದಕ್ಕೆ ಸರಿಯಾದವರಲ್ಲ.

ಇವರು ಸೆಕ್ಯೂಲರ್ ಫೋರ್ಸಸ್ ಕಡೆ ತಿರುಗಿ ನೋಡಬೇಕು. ಆಗಲೇ ದೇಶಕ್ಕೆ ಒಳ್ಳೆಯದಾಗುವದು. ಶ್ರೀ ಬಣಕಾರ್‌ರವರೇ, ನಿಮ್ಮ ತಂದೆಯವರು ಸ್ಪೀಕರ್ ಆಗಿದ್ದಾಗ ಹೇಳಿದೆ, ಜನತಾದಳವನ್ನು ವಿರೋಧ ಮಾಡುವಾಗ ಹೇಳಿದೆ. ಮಾನ್ಯ ನಾಣಯ್ಯನವರನ್ನು ಕೇಳಿ, ರೆಕಾರ್ಡ್‌ನಲ್ಲೂ ಇದೆ.

ಈ ದೇಶಕ್ಕೋಸ್ಕರ ಸೆಕ್ಯೂಲರ್ ಫೋರ್ಸಸ್ ಒಂದಾಗಬೇಕು ಎಂದು ಹೇಳಿದ್ದೆ. ಈ ಮೂರು ವರ್ಷದಲ್ಲಿ ಅಲ್ಲ. ಒಂದೂವರೆ ವರ್ಷದ ಕೆಳಗೂ ಹೇಳಿದ್ದೆ. ಕಾಂಗ್ರೆಸ್ ಪಕ್ಷವನ್ನು ಬಿಡುವಾಗಲೂ ಹೇಳಿದ್ದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅಂತೂ ಒಪ್ಪಿಕೊಂಡಿದ್ದೀರಿ. ಒಪ್ಪಿಕೊಂಡ ಮೇಲೆ ನೀವು ಎಲ್ಲಿಗೆ ಹೋಗಿದ್ದೀರಿ. ಯಾವ ಪಾರ್ಟಿಗೆ ಹೋಗಿದ್ದೀರಿ?

ಅಧ್ಯಕ್ಷರು : ನೀವು ಎಲ್ಲಾ ಸೇರಿ ಒಂದೇ ಪಾರ್ಟಿ ಎಂದು ಅವರು ಹೇಳುವರು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಮಗೆ ಕಷ್ಟವೇನೆಂದರೆ ಈ ಆಲ್ ರೌಂಡರ್ಸ್‌ನವರದ್ದೇ ಬಹಳ ಕಷ್ಟ.

ಶ್ರೀ ಹೆಚ್.ಎನ್. ನಾಗೇಗೌಡ : ಜಾತಿವಾದಿಗಳು ಇರತಕ್ಕಂಥ ಜಾತ್ಯಾತೀತ ಪಕ್ಷಕ್ಕಿಂತ ವಾದಿಗಳು ಇರತಕ್ಕಂಥ ಜಾತಿವಾದಿ ಪಕ್ಷಗಳನ್ನೂ ಕೂಡ ನಾವು ಮೆಚ್ಚಿಕೊಳ್ಳಬೇಕು. ಇವತ್ತು ಪಕ್ಷದ ಲೇಬಲ್‌ಗಳನ್ನು ನೋಡಿ. ಅದರಲ್ಲಿರುವ ವ್ಯಕ್ತಿಗಳು ಹೀಗೆಂದು ಹೇಳುವಂತಹ ವಾತಾವರಣ ರಾಜಕೀಯದಲ್ಲಿ ಉಳಿದುಕೊಂಡಿಲ್ಲ. ಈ ಭಾರತ ರಾಷ್ಟ್ರದಲ್ಲಿ, ವ್ಯಕ್ತಿಗೆ ಬಾರಿ ಪ್ರಾಮುಖ್ಯ, ಪಕ್ಷದ ಲೇಬಲ್ ನೆಪ ಮಾತ್ರ. ಈ ಲೇಬಲ್‌ಗೆ ಸರಿಯಾಗಿ ಯಾರೂ ನಡೆದುಕೊಳ್ಳುತ್ತಿಲ್ಲ ಎಂಬುದು ನಮಗೆ ಬಂದಿರತಕ್ಕ ಅನುಭವ.

ಅಧ್ಯಕ್ಷರು : ಮಾನ್ಯ ಸದಾನಂದ ಗೌಡರೇ, ತಾವು ಸ್ವಲ್ಪ ಬೇಗ ಮುಕ್ತಾಯ ಮಾಡಿದರೆ ಮಾನ್ಯ ಮುಖ್ಯಮಂತ್ರಿಯವರಿಗೆ ಹೇಳಿಕೆ ನೀಡುವುದಕ್ಕೆ ಅನುಕೂಲವಾಗುತ್ತದೆ. ತಾವು ಐದು ನಿಮಿಷಗಳಲ್ಲಿ ಮುಗಿಸಿ.

ಶ್ರೀ ಡಿ.ವಿ. ಸದಾನಂದಗೌಡ : ನಾಮಿನೇಷನ್ ಬಗ್ಗೆ ಮಾತನಾಡುವಾಗ ನಮ್ಮ ಆಡಳಿತ ಪಕ್ಷದ ಸದಸ್ಯರು ಆರಿಸಿ ಬಂದಾಗ ನೀವು ರಾಜ್ಯದಲ್ಲಿ ಏನು ಮಾಡಿದ್ದೀರಿ ಎಂಬ ಪ್ರಶ್ನೆಯನ್ನು ಕೇಳಿದರು. ನಾನು ಪ್ರಾಯಶ: ತಿಳಿದುಕೊಂಡಿದ್ದೇನೆ. ನಾವು ಇವತ್ತು ಈ ರಾಜ್ಯದ ಆಡಳಿತವನ್ನು ಯಾವ ರೀತಿಯಲ್ಲಿ ಆಗಬೇಕೆಂಬುದರ ಬಗ್ಗೆ ಚರ್ಚೆ ಮಾಡುತ್ತಿದ್ದೇವೆಯೇ ಹೊರತು ಗುಜರಾತ್ ಅಥವಾ ರಾಜಸ್ಥಾನದ ಬಗ್ಗೆ ಆಲೋಚನೆ ಮಾಡುತ್ತಾ ಇಲ್ಲ. ನಮ್ಮ ರಾಜ್ಯದಲ್ಲಿ ಮುಂದಿನ ವರ್ಷದಲ್ಲಿ ಸಹಕಾರಿ ರಂಗದಲ್ಲಿ ಯಾವ ರೀತಿಯಾಗಿ ವ್ಯವಸ್ಥೆಯಾಗಬೇಕು ಎಂಬ ವಿಚಾರದಲ್ಲಿ ಹೊಸ ರೀತಿಯ ಬದಲಾವಣೆಗಳನ್ನು ನಿಶ್ಚಯ ಮಾಡಿದ್ದೇವೆ. ಇದಕ್ಕೆ ತಾವು ನಮ್ಮ ಪಕ್ಷ ಮಾಡಿದ್ದು ಮತ್ತೊಂದು ಪಕ್ಷ ಮಾಡಿದ್ದು ಎಂದು ತಾವು ಕೂಡ ಅದನ್ನೇ ಮಾಡಿದರೆ ಬಾಕಿ ಪಕ್ಷಕ್ಕೂ ನಿಮಗೂ ಇರುವಂತಹ ವ್ಯತ್ಯಾಸವೇನು? ನೀವು ಒಳ್ಳೆಯ ಆಡಳಿತ ಮಾಡುವಂತಹ ರಾಜಕೀಯ ಪಕ್ಷವಾಗಿದ್ದರೆ ಮುಂದಿನ ದಿನಗಳಲ್ಲಿ ಸಹಕಾರಿ ರಂಗದಲ್ಲಿ ರಾಜಕೀಯ ಹಸ್ತ ಕ್ಷೇಪ ನಿಲ್ಲಿಸುವಂತಹ ಪ್ರಯತ್ನವನ್ನು ಮಾಡಿವಾಗ ಅಲ್ಲಿ ನಾಮಿನೇಷನ್ ಮಾಡದೇ ಯಾರು ಅಲ್ಲಿ ಚುನಾಯಿತರಾಗಿ ಪ್ರತಿನಿಧಿಗಳು ಇದ್ದಾರೋ ಅವರಿಂದ ಆಡಳಿತವನ್ನು ಬಯಸಿದಾಗ ಮಾತ್ರ ಈ ಸಹಕಾರಿ ರಂಗಗಳು ಸ್ವಲ್ಪ ಕಾಲ ಇರಲು ಸಾಧ್ಯವಾಗುತ್ತದೆ. ನೀವು ಆಡಳಿತಕ್ಕೆ ಬಂದ ನಂತರ ಕೆಲವು ಸಹಕಾರಿ ರಂಗಗಳಲ್ಲಿ ಈಗಾಗಲೇ ನಾಮಿನೇಷನ್ಸ್ ಮಾಡಿರುವುದು ಗಮನಕ್ಕೆ ಬಂದಿದೆ. ದಯಮಾಡಿ ಈ

ರೀತಿ ರಾಜಕೀಯ ಹಸ್ತಕ್ಷೇಪ ಮಾಡುವುದರಿಂದ ಸಹಕಾರಿ ರಂಗಕ್ಕೆ ಅತ್ಯಂತ ದೊಡ್ಡ ಪೆಟ್ಟು ಬೀಳುವಂತಹ ಸಾಧ್ಯತೆ ಇದೆ ಎಂದು ನಾನು ಭಾವಿಸುತ್ತೇನೆ. ಖಂಡಿತವಾಗಿ ಇದರಲ್ಲಿ ನನ್ನ ಕಳಕಳಿಯ ವಿನಂತಿ ಇದೆ. ಯಾವುದೇ ತಂಡದಲ್ಲಾದರೂ ಕೂಡ ಹೊಸ ಮಾರ್ಗದಲ್ಲಿ ಜನರನ್ನು ನಾವು ತೆಗೆದುಕೊಳ್ಳುಂಥಾದ್ದು. ಈ ಹೊಸ ಮಾರ್ಗವನ್ನು ಅನಾಷ್ಠಾನಕ್ಕೆ ತಂದಲ್ಲಿ ಮುಂದಿನ ದಿವಸಗಳಲ್ಲಿ ಸರಕಾರಿ ಢಂಗದಲ್ಲಿ ಖಂಡಿತವಾಗಿ ಉತ್ತಮವಾದಂತಹ ಕೆಲಸವನ್ನು ಮಾಡುವುದಕ್ಕೆ ಸಾಧ್ಯವಾಗುತ್ತದೆ. ಯಾರನ್ನಾದರೂ ಇದರಲ್ಲಿ ನಾಮಿನೇಷನ್ ಮಾಡಿದ್ದರೆ ಅದನ್ನು ವಿಥ್‌ಡ್ರಾ ಮಾಡಬೇಕು. ಇನ್ನು ಮುಂದೆ ಈ ರೀತಿ ನಾಮಿನೇಷನ್ ಮಾಡಬಾರದು ಎಂಬುದು ನನ್ನ ವಿನಂತಿ. ನಾನು ಸಹಕಾರಿ ರಂಗದಲ್ಲಿ ಇರುವಂತಹ ವ್ಯಕ್ತಿ ಮತ್ತು ನಂಬಿಕೆ ಇರುವಂತಹ ವ್ಯಕ್ತಿ. ಆದುದರಿಂದ ನಾನು ತಮ್ಮಲ್ಲಿ ಕಳಕಳಿಯಿಂದ ಪ್ರಾರ್ಥಿಸುತ್ತೇನೆ. ಯಾವ ರೀತಿ ಈ ನಾಮಿನೇಷನ್ ಆಗುತ್ತದೆ ಎಂಬುದಕ್ಕೆ ಒಂದು ಸಣ್ಣ ಉದಾಹರಣೆ ಕೊಡುತ್ತೇನೆ. ಮಂಗಳೂರಿನಲ್ಲಿ ಜನತಾಬಜಾರ್ ಇದೆ. ಬಹುಶ: ಚುನಾವಣೆ 1987ರಲ್ಲಿ ಆಯಿತು. ಸುಮಾರು ನಾಲ್ಕು ಜನರು ಅಧಿಕಾರ. ವರ್ಗದವರು ಇದ್ದರು. 10 ಜನರು ಬಿ.ಜೆ.ಪಿ.ಯವರು ಆರಿಸಿ ಬಂದರು. ಅಲ್ಲಿ 7 ಜನರನ್ನು ನಾಮಕರಣ ಮಾಡುವಂತಹ ದೊಡ್ಡ ಪರಿಸ್ಥಿತಿಯಾಗಿ ಅಲ್ಲಿ ಚುನಾಯಿತರಾದವರಿಗೆ ಅಧಿಕಾರವಿಲ್ಲದೇ ಈ ಒಂದು ವ್ಯವಸ್ಥೆ ರಾಜ್ಯದಲ್ಲಿ ಆಗಿದೆ. ಏಕೆ ನಾನು ಇದನ್ನು ಹೇಳುತ್ತಿದ್ದೇನೆಂದರೆ ಈಗಾಗಲೇ ಮೊದಲಿನ ಸರ್ಕಾರ ಪುನಃ ಹೈಕೋರ್ಟಿಗೆ ಹೋಗಿ ಈ ಒಂದು ನಾಮಿನೇಟ್‌ಡ್ ಜನರನ್ನು ನಾಮಿನೇಷನ್ ಮಾಡಿದ್ದು ಸರಿಯಲ್ಲ ಎಂದು ಹೇಳಿ ಹೈಕೋರ್ಟ್ ಆದೇಶ ಆದ ತಕ್ಷಣ ಈ ಒಂದು ಜನತಾ ಬಜಾರನ್ನು ಸೂಪರ್ ಸೀದ್ ಮಾಡಿ ಇವತ್ತು ಅಧಿಕಾರಗಳ ಕೈಗೆ ಕೊಟ್ಟು ಇವತ್ತು ಸಹಕಾರ ತತ್ವದಲ್ಲಿ ನಂಬಿಕೆ ಇಲ್ಲದಂತೆ ಕೆಲಸ ಮಾಡಿದ್ದಾರೆ. ಆದ್ದರಿಂದ ನಾನು ಈ ಸದನದಲ್ಲಿ ವಿನಂತಿ ಮಾಡುತ್ತಿದ್ದೇನೆ. ಈಗಲಾದರೂ ಹಿಂದೆ ಚುನಾಯಿತರಾದಂಥ ಜನರನ್ನು ಆ ಜನತಾ ಬಜಾರದಲ್ಲಿ ಮತ್ತೆ ಅಧಿಕಾರಕ್ಕೆ ತರುವುದರ ಮೂಲಕ ಜನಪ್ರತಿನಿಧಿಗಳಿಗೆ ಸಹಕಾರಿ ತತ್ವದಲ್ಲಿ ನಂಬಿಕೆ ಇಟ್ಟಂಥ ಜನತೆಗೆ ಮತ್ತೊಮ್ಮೆ ತಾವು ಅವಕಾಶ ಕಲ್ಪಿಸಿ ಮಾಡಿಕೊಡಬೇಕು ಏಕೆಂದರೆ ಈಗಾಗಲೇ ಅಲ್ಲಿಯ ಚುನಾಯಿತ ಪ್ರತಿನಿಧಿಗಳನ್ನು ಅದನ್ನು ಸೂಪರ್‌ಸೀದ್ ಮಾಡಿದ ಜನರಗೆ ಸರಿಯಾಗಿ ವ್ಯವಸ್ಥೆಯನ್ನು ಮಾಡದೆ ತೊಂದರೆಗೀಡಾಗುವಂಥ ಪರಿಸ್ಥಿತಿಗೆ ಸಿಕ್ಕಿದೆ, ಆದಕಾರಣ ಸೂಪರ್ ಸೀದ್ ಮಾಡುವಂಥ ಸಂದರ್ಭದಲ್ಲಿ ಕೂಡ ಅಂತಹ ನಿರ್ದಿಷ್ಟ ಕಾರಣಗಳಿದ್ದಾಗ ಮಾತ್ರ ಮಾಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. ಉದಾಸಿಯವರ ಸಕ್ಕರೆ ಕಾರ್ಖಾನೆ ಇದೇರೀತಿ ಆಗಿದೆ ಎಂಬುದು ನನಗೆ ತಿಳಿದುಬಂದಿದೆ, ಈಗಾಗಲೇ ಹೇಳಿದರು, ಅಲ್ಲಲ್ಲಿ ನೀವು ಏನು ಮಾಡಿದಿರಿ, ನಿಮ್ಮ ನಿಮ್ಮ ಕ್ಷೇತ್ರದಲ್ಲಿ ಜನ ಪ್ರತಿನಿಧಿಗಳು ತಾಲ್ಲೂಕು ಪಂಚಾಯಿತಿ ಚುನಾವಣೆಯಲ್ಲಿ ಏನು ಮಾಡಿದರು ಎಂದು ಕೇಳಿದರೆ ನಾನು ಒಂದು ವಿಚಾರವನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ನಾನು ಭಾರತೀಯ ಜನತಾಪಕ್ಷದ ಶಾಸಕನಾಗಿ ನನ್ನ ಕ್ಷೇತ್ರದಲ್ಲಿ ಇದು ಯಾವುದೇ ದಳದವರು ಅಧಿಕಾರಕ್ಕೆ ಬರಲಿಲ್ಲ. ನೂರಕ್ಕೆ ನೂರರಷ್ಟು ಜಿಲ್ಲಾಪಂಚಾಯತ್ ಸದಸ್ಯರನ್ನು ತಾಲ್ಲೂಕು ಪಂಚಾಯತ್ ಸದಸ್ಯರನ್ನು ಭಾರತೀಯ ಜನತಾಪಾರ್ಟಿಯ ಮೂಲಕ ಆರಿಸಿ ತಿಳಿಸುವುದಕ್ಕೆ ಇಚ್ಛೆಪಡುತ್ತಿದ್ದೇನೆ. ಈ ರೀತಿಯ ಸಹಕಾರಿರಂಗದಲ್ಲಿ ರಾಜಕೀಯ ಹಸ್ತಕ್ಷೇಪ ನಿಲುಗಡೆ ಮಾಡುವಂಥದ್ದು ಅತ್ಯಂತ ಅವಶ್ಯಕತೆ ಇದೆ. ಈಗಾಗಲೇ ಸಾಲ ಮನ್ನಾದ ವಿಚಾರವನ್ನು ನಮ್ಮ ಮುಖ್ಯಮಂತ್ರಿಯವರು ಮುಂದುವರೆಸಿದ್ದಾರೆ ಎಂದು ಹೇಳುವಂಥದ್ದು ನಮ್ಮ ತಿಳುವಳಿಕೆಗೆ ಬಂದಿದೆ. ಖಂಡಿತವಾಗಿ ಇದನ್ನು ಅತ್ಯಂತ ವಿನಯಪೂರ್ವಕವಾಗಿ ಸ್ವಾಗತ ಮಾಡುತ್ತಿದ್ದೇವೆ. ಇದೇರೀತಿ ನಬಾರ್ಡ್‌ನಿಂದ ನಮಗೆ ಇವತ್ತು ಏನು ಬಂದಿದೆ ಎಂಬುದೂ ಕೂಡ ಇಲ್ಲಿ ಪ್ರಸ್ತಾಪವಾಯಿತು. ಆದರೆ ಪ್ರಾಯಶಃ ಅದರಲ್ಲಿ ಒಂದು ತಪ್ಪುಕಲ್ಪನೆ ತಮ್ಮ ಸರ್ಕಾರಕ್ಕೆ

ಬಂದಿದೆ ಎಂದು ನಾನು ತಿಳಿದುಕೊಳ್ಳುತ್ತಿದ್ದೇನೆ. ಏಕೆಂದರೆ ನಬಾರ್ಡ್ ಯಾವತ್ತೂ ಕೂಡ ಸಾಲ ಮನ್ನಾದ ಈ ಸರ್ಕಾರದ ಧೋರಣೆಯನ್ನು ಪ್ರತಿಭಟಿಸಿಕೊಂಡು ಬರುತ್ತದೆ. ನಬಾರ್ಡ್‌ನವರು ಸ್ಪಷ್ಟವಾಗಿ ಹೇಳಿದರು ರೈತರಿಗೆ ನೇರವಾಗಿ ಹಣವನ್ನು ಪಾವತಿ ಮಾಡಿಯಾವುದೇ ಸಹಕಾರಿರಂಗಕ್ಕೆ ಪಾವತಿ ಮಾಡುತ್ತೇವೆ ಎಂದು ಹೇಳಿದಾಗ ಅದಕ್ಕೆ ನಿರ್ದಿಷ್ಟ ಸಮಜಾಯಿಷಿ ಬೇಕು. ಅದು ಪಾವತಿಯಾಗದಾಗ ಮಾತ್ರ ಈ ಸಹಕಾರಿರಂಗಗಳು ಕೂಡ ನಷ್ಟಕ್ಕೆ ಬರುವುದರ ಕಾರಣ ನಮಗೆ ಪುನಃ ರೀಫೈನಾನ್ಸ್ ಮಾಡಲಿಕ್ಕೆ ಕಷ್ಟ ಆಗುತ್ತದೆ ಎಂದು ಹೇಳುವಂಥ ಮಾತನ್ನು ಹೇಳಿದರು. ಆದರೆ ಆ ರೀತಿ ಮಾಡದ ಕಾರಣ ನಬಾರ್ಡ್ ಅಥವಾ ಯಾವುದೇ ಒಂದು ಸಂಸ್ಥೆಗಳು ಇವತ್ತು ಪಿಎಲ್‌ಡಿ ಬ್ಯಾಂಕುಗಳಿಗೆ ಸಾಲವನ್ನು ಕೊಡದಾಥ ಸಂದರ್ಭ ನಿರ್ಮಾಣವಾದವು, ಅಂತಹವು ಈಗಾಗಲೇ ಸ್ವಲ್ಪಮಟ್ಟಿಗೆ ಸರಿಯಾಗದೆ ಎಂದು ಹೇಳುವಂಥ ವಿಚಾರವನ್ನು ಕೂಡ ನಾವು ತಿಳಿದುಕೊಂಡಿದ್ದೇವೆ. ಹೀಗೆ ಒಟ್ಟಾರೆ......

ಅಧ್ಯಕ್ಷರು : ತಾವು ಮುಗಿಸಿ.

ಶ್ರೀ ಸದಾನಂದಗೌಡ : ದಯವಿಟ್ಟು ನಾಳೆ ಒಂದು ಅವಕಾಶ ಕೊಟ್ಟರೆ ಅನೇಕ ಸಂಗತಿಗಳನ್ನು ಹೇಳುವುದು ಇದೆ.

ಅಧ್ಯಕ್ಷರು : ಆಯಿತು, ನಾಳೆ ಒಂದೈದು ನಿಮಿಷ ಮಾತನಾಡಲಿಕ್ಕೆ ಅವಕಾಶ ಮಾಡಿಕೊಡುತ್ತೇನೆ. ಈಗ ಸನ್ಮಾನ್ಯ ಸಭಾನಾಯಕರು ತುಂಗಭದ್ರ ವಿಷಯಕ್ಕೆ ಸಂಬಂಧಪಟ್ಟಂತೆ ಹೇಳಿಕೆಯನ್ನು ಕೊಡಬಹುದು.

ಮಂತ್ರಿಗಳ ಹೇಳಿಕೆ

ತುಂಗಾಭದ್ರಾ ಎಡದಂಡೆ ನಾಲೆಯನ್ನು ಏಪ್ರಿಲ್ 8ಕ್ಕೆ ಮುಚ್ಚುವಂತೆ ನೀರಾವರಿ ಸಲಹಾ ಸಮಿತಿ ಸಭೆಯಲ್ಲಿ ನಿರ್ಣಯವಾಗಿದ್ದು ಪ್ರಸಕ್ತ ಪರಿಸ್ಥಿಯಲ್ಲಿ ಆ ರೀತಿ ನೀರನ್ನು ನಿಲ್ಲಿಸಿದಲ್ಲಿ ರಾಯಚೂರು ಜಿಲ್ಲೆಯಲ್ಲಿ ನೀರಾವರಿಗೆ ಒಳಪಟ್ಟಿರುವ ಎಲ್ಲಾ ತಾಲ್ಲೂಕುಗಳಲ್ಲಿಯೂ ಸುಮಾರು ಎರಡು ಲಕ್ಷ ಜಮಿನಿಗೆ ನೀರು ಇಲ್ಲದೆ ಬೆಳೆ ಒಣಗಿ ಹೋಗುವ ಸಂಭವ ಇರುವ ಪ್ರಯುಕ್ತ ಏಪ್ರಿಲ್ 8ಕ್ಕೆ ಬದಲಾಗಿ 20 ನೇ ತಾರೀಖಿನವರೆಗೆ ಮುಂದುವರಿಸುವ ಬಗ್ಗೆ.

ಶ್ರೀ ಎಚ್.ಡಿ. ದೇವೇಗೌಡರು : ತುಂಗಭದ್ರಾ ಎಡದಂಡೆ ಕಾಲುವೆ ಆಗಿದ್ದು ಏರಿಗಳಲ್ಲಿ ಹಾಗೂ ಅಡ್ಡಮೋರಿಗಳ ಹತ್ತಿರ ನೀರು ಜಿನುಗುವುದು ಹಾಗೂ ಬಿರುಕು ಬಿಡುವುದು ಆಗಾಗ್ಗೆ ಭಾಗದ ರೈತ ಮುಖಂಡರು ಹಾಗೂ ಶಾಸಕರುಗಳ ಕೋರಿಕೆಯ ಮೇರೆಗೆ 1995ರ ಕ್ಲೋಷರ್ ಅವಧಿಯಲ್ಲಿ ಈ ಕಾಲುವೆಯ ಒಳಮೈ ಭದ್ರತಾ ಕಾಮಗಾರಿಗಳನ್ನು (Inner Stangthaning Works) ಕೈಗೆತ್ತಿಕೊಳ್ಳಲು ಸರ್ಕಾರವು ದಿನಾಂಕ 29.11.1994ರ ಸಭೆಯಲ್ಲಿ ತುಂಗಭದ್ರಾ ಎಡದಂಡೆ ಮುಖ್ಯ ಕಾಲುವೆಯಲ್ಲಿ ದಿನಾಂಕ 8.4.1995ರವರೆಗೆ ನೀರನ್ನು ಒದಗಿಸಿಲು ತೀರ್ಮಾನಿಸಿರುತ್ತದೆ. ಈ ನಿರ್ಣಯವನ್ನು ಪತ್ರಿಕಾ ಪ್ರಕಟಣೆಯ ಮೂಲಕ ಸದರಿ ನಾಲೆಯ ಅಚ್ಚುಕಟ್ಟಿನ ಎಲ್ಲಾ ರೈತ ಬಾಂಧವರಿಗೆ ತಿಳಿಸಲಾಗಿರುತ್ತದೆ.

ದಿನಾಂಕ 5.3.1995 ರಂದು ನಡೆದ ತುಂಗಭದ್ರಾ ಮಂಡಳಿಯ ಸಭೆಯಲ್ಲಿ ತುಂಗಭದ್ರಾ ಜಲಾಶಯದಲ್ಲಿನ ಅಂದಿನ ನೀರಿನ ಪ್ರಮಾಣದದ ಲಭ್ಯತೆ ಅನುಸಾರ ಸದರಿ ಕಾಲುವೆಗೆ 9.408 ಟಿ.ಎಂ.ಸಿ. ನೀರನ್ನು ದಿನಾಂಕ 7.3.1995 ರಿಂದ 8.4.1995 ರವರೆಗೆ ಪ್ರತಿ ದಿನ 3,300 ಕ್ಯೂಸೆಕ್ಸ್‌ನಂತೆ ಸರಬರಾಜು ಮಾಡಲು ನಿರ್ಧರಿಸಿದ್ದು